ಸಂವಾದ

ಫೆಬ್ರವರಿ ೨೦೦೬ ರೂ. ೨೦



ಸಿ.ಜಿ.ಕೆ ನೆನಪು

ಅಹಿಂದ ಚರ್ಚೆ

ಬೀಜ ವ್ಯಾಜ್ಯ

ಕನ್ನಡ ಶಾಸ್ತ್ರೀಯ ಭಾಷೆ

ಸಿಟ್ಟನೋ? ಬಿಟ್ಟನೋ?

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೪
ಫೆಬ್ರವರಿ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಸಂಪಾದಕರೊಂದಿಗೆ ಸಂವಾದ ೪
- ಅಂತರಂಗ ೫
- ಅಭಿವ್ಯಕ್ತಿ ಸ್ವಾತಂತ್ರ್ಯ ಕುಂಠಿತಗೊಳ್ಳುತ್ತಿದೆಯೆ? ೬
  - ಮ. ಶ್ರೀ. ಮುರುಳಿ ಕೃಷ್ಣ
- ಸಿಜಿಕೆ ಎಂಬ 'ಮಾಯ್ಕಾರ' ೮
  - ನಟರಾಜ್ ಹುಳಿಯಾರ್
- ಬೀಜ ವ್ಯಾಜ್ಯ ೧೦
  - ಶ್ಯಾಮ್‌ಸುಂದರಕೀರ್ತಿ



- ಕನ್ನಡ ಶಾಸ್ತ್ರೀಯ ಭಾಷೆ ಪಟ್ಟವೋ? ಚಟ್ಟವೋ? ೧೪
  - ಶಿವಸುಂದರ್
- ಅಹಿಂದ ಚರ್ಚೆ ೨೨
  - ಡಾ॥ ಕೆ. ವೈ. ನಾರಾಯಣ ಸ್ವಾಮಿ
  - ಕೆ. ರಾಮಣ್ಣ
  - ಪ್ರೊ. ಗೋವಿಂದಯ್ಯ
  - ಶ್ರೀ. ಉಮಾಶಂಕರ್
  - ಡಾ॥ ಶಿವಪ್ಪ
  - ಡಾ॥ ಕೆ. ಪುಟ್ಟಸ್ವಾಮಿ
- ಜಾನಪದ ಮಹಿಳೆ ಮತ್ತು ನೋವಿನ ನೆಲೆಗಳು ೨೮
  - ಡಾ॥ ಶೈಲಜಾ ಹಿರೇಮಠ
- ದೇವರಾಯ ೩೧
  - ಡಾ॥ ಸರಜೂ ಕಾಟ್ಕರ್



- ಖಾಸಗೀಕರಣದ ಅಪಾಯಗಳು ೩೪
  - ಜಯ
- ಒರಿಸ್ಸಾ : ಜಾತಿ ಸಂಘರ್ಷ ೩೬
  - ಪಿ.ವಿ.ಎನ್. ಮೂರ್ತಿ
- ದಲಿತ್ ಡೈರಿ ೩೮
  - ಚಂದ್ರಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ.ಎಚ್.ರಾಜಶೇಖರ್

ಕವನಗಳು : ಹೆಪ್ಪು ೧೨ ಸುಮಬ್ಯಾಲೆ ೧೮ ಸೊಲ್ಲು ಫಲವಾಗಿ ೨೭

ಮುಖಪುಟ ಕಲೆ – ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಾಗಾರ

'ಹಿರಿಯಣ್ಣ'ನ ಹಾದಿ ಹಿಡಿದ ಕಮ್ಯೂನಿಸ್ಟರು

ಪ್ರೀತಿಯ ಹೊನ್ನಾಪುರ,

'ಮಧ್ಯಮ ಮಾರ್ಗವೆಂಬ ೀವನ ಕ್ರಮ' (ಅಕ್ಟೋಬರ್-05) ಂಪಾದಕೀಯ ಓದಿ ಸಂತೋಷವಾ ಯಿತು 'ಅಭಿವೃದ್ಧಿ ಪರ ನಿಲುವನ್ನು' ್ಯಕ್ತಪಡಿಸುವ ಮೂಲಕ ಕಮ್ಯೂನಿಸ್ಟ್ ಪಕ್ಷ ಳು ತಾವು ಜಾಗತಿಕ ಮುಖ್ಯವಾಹಿನಿ ಯಿಂದ ಬೇರೆಯಾಗಿ ಉಳಿಯಲಾರೆವು ಎಂದು ಘೋಷಿಸಿಕೊಂಡಿವೆ. ಅಂದರೆ ಂಡವಾಳಶಾಹಿ ರಾಷ್ಟ್ರಗಳ 'ಹಿರಿಯಣ್ಣ' ನವನ್ನು ಅವು ಪರೋಕ್ಷವಾಗಿ ಒಪ್ಪಿ ಕೊಂಡಂತೆಯೇ ಆಗಿದೆ.

ಸಿ.ಪಿ.ಐ-ಸಿ.ಪಿ.ಎಂ ವಿಭಜನೆ ಯಾದಾಗ ಈ ಎರಡೂ ಪಕ್ಷಗಳು ಭಾರ ತೀಯ ಚಿಂತನೆಯನ್ನು ಮೈಗೂಡಿಸಿಕೊ ಳ್ಳದೆ ಒಂದು ರಷ್ಯಾ ಮತ್ತು ಇನ್ನೊಂದು ಚೀನಾದತ್ತ ಮುಖ ಮಾಡಿದ್ದವು. ಆದರೆ ಅವರಿಗೆ ಗೊತ್ತಿಲ್ಲದ ಸಂಗತಿ ಎಂದರೆ ರಷ್ಯಾ-ಚೀನಾ ಎರಡೂ ದೇಶಗಳ ಕಮ್ಯೂ ನಿಸಂ ಆಯಾ ದೇಶಗಳ ಜನರ ಬದುಕಿ ನಲ್ಲಿ ಸರಿ ಹೋಗಿತ್ತು. ಭಾರತೀಯ ಕಮ್ಯೂನಿಸ್ಟರು ಇಲ್ಲಿನ ಸ್ಥಳೀಯ ಬದುಕು- ಸಮಸ್ಯೆಗಳಿಗೆ ಸ್ಪಂದಿಸುವ ಕಮ್ಯೂನಿಸಂ ಸಿದ್ಧಾಂತವನ್ನು ರೂಪಿಸಿಕೊಳ್ಳುವ ಬದ ಲಾಗಿ ವಿದೇಶಗಳತ್ತ ನೋಡುತ್ತಿದ್ದರು.

ಭಾರತದ ಜಾತಿ ವ್ಯವಸ್ಥೆ ಯನ್ನು ಇನ್ನೂ ಅರ್ಥ ಮಾಡಿಕೊಳ್ಳಲು ಕಮ್ಯೂನಿಸ್ಟರು ಸಿದ್ಧರಿಲ್ಲ. ಅವರಿನ್ನೂ 'ವರ್ಗ ಭಜನೆ'ಯನ್ನೇ ಮಾಡುತ್ತಿದ್ದಾರೆ. ಆದರೆ ಈ 'ವರ್ಗ ಭಜನೆ' ತನ್ನ ಅಸ್ತಿತ್ವ ವನ್ನೇ ಕಳೆದುಕೊಂಡು ನಗೆ ಪಾಟಲಿಗೆ ಈಡಾಗಿದೆ.

ಅದೇನೇ ಇದ್ದರೂ ಈಗ ಕಮ್ಯುನಿಸ್ಟರು ಬದಲಾಗುತ್ತಿದ್ದಾರೆ. ಅಂದರೆ ಕಮ್ಯೂನಿಸ್ಟರು ದೇಶಿಯತೆಗೆ ಒಗ್ಗಿಕೊಳ್ಳಲು ಆರಂಭಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಅದು ಈಗ ಪುರೋ ಹಿತರ ಹಿಡಿತದಿಂದ ಶೂದ್ರ ಭೂಮಾಲೀಕ ಜಾತಿಗಳ ಕೈಗೆ ಹಸ್ತಾಂತರಗೊಳ್ಳುತ್ತಿದೆ. ಇದು ಸ್ವಾಗತಾರ್ಹವಾದುದಾದರೂ, ದಲಿತ ಹಾಗೂ ಅಲಕ್ಷಿತ ಜನಾಂಗಗಳು ನೇರ ವಾಗಿ ಕಮ್ಯೂನಿಸ್ಟ್ ಚಳವಳಿಯಲ್ಲಿ ಭಾಗವ ಹಿಸುವಂತಾದಾಗ ಮಾತ್ರ ಅದಕ್ಕೆ ನಿಜ ವಾದ ಅರ್ಥಬರುತ್ತದೆ,

ಮಾರ್ಕ್ಸ್ ಹೇಳಿದ 'ದುಡಿ ಯುವ ವರ್ಗದ ಅಧಿಕಾರ' ಇಂಥ ಸ್ಥಿತಿ ಯಲ್ಲಿ ಮಾತ್ರ ಬರಬಹುದು. ಆ ದಿನ ಗಳಿಗಾಗಿ ಕಾದು ನೋಡೋಣ.

-ಕೆ.ಎಸ್. ಗೋಪಾಲ ಕೃಷ್ಣಯ್ಯ,
ಬೆಂಗಳೂರು.



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಓದಲೇಬೇಕಾದ ಪತ್ರಿಕೆ

ಗೌರವಾನ್ವಿತ ಇಂದೂಧರ ಹೊನ್ನಾಪುರ ಅವರಿಗೆ,

ಡಿಸೆಂಬರ್ ತಿಂಗಳ 'ಸಂವಾದ' ಮಾಸ ಪತ್ರಿಕೆಯನ್ನು ಗೆಳೆಯ ರೊಬ್ಬರು ಪರಿಚಯಿಸಿದರು. ಇಂಥ ಪತ್ರಿಕೆ ಯನ್ನು ಇಷ್ಟು ದಿನ ನೋಡದೇ ಹೋದೆ ನಲ್ಲ ಎಂದು ವ್ಯಥೆಯಾಯಿತು. ನಿಮ್ಮ ಪತ್ರಿಕೆ ಅದ್ಭುತವಾಗಿದೆ. ವಿಷಯಗಳಂತೂ ಅತ್ಯಂತ ಗಂಭೀರವೂ-ಚಿಂತನ ಶೀಲವೂ ಆಗಿ ಪ್ರತಿಯೊಬ್ಬ ವಿದ್ಯಾವಂತರೂ ಓದಲೇ ಬೇಕಾದ ಪತ್ರಿಕೆ ಆಗಿದೆ. ಪ್ರತಿಯೊಂದು ಲೇಖನವೂ ಸಂಗ್ರಹ ಯೊಗ್ಯವಾಗಿದೆ. ಡಾ॥ ಶೈಲಜ ಹಿರೇಮಠ ಅವರ ಜಾನ ಪದ ಮಹಿಳೆ ಮತ್ತು ಡಾ॥ ಮೊಗಳ್ಳಿ ಗಣೇಶ್ ಅವರ ದಲಿತತ್ವ ಬುದ್ಧತ್ವ ನನಗೆ ಅತೀ ಮೆಚ್ಚಿಗೆಯಾದವು. ಅಹಿಂದ ಚರ್ಚೆ ಯಲ್ಲಿ ಡಿ.ಎಸ್ ನಾಗಭೂಷಣ ಅವರು ವ್ಯಕ್ತ ಪಡಿಸಿರುವ ಅಭಿಪ್ರಾಯಗಳು ನೂರಕ್ಕೆ ನೂರು ಸರಿಯಾಗಿವೆ. ಸಂವಾದಕ್ಕೆ ನಾನು ಈ ದಿನವೇ ಚಂದಾ ಕಳುಹಿಸುತ್ತಿರುವೆ. ಕನಿಷ್ಟ ಹತ್ತು ಜನ ಗೆಳೆಯರನ್ನು ನಾನು ಚಂದಾದಾರರನ್ನಾಗಿ ಮಾಡಿಸುತ್ತೇನೆ. ನಿಮಗೆ ಧನ್ಯವಾದಗಳು.

-ಆರ್. ಶಿವಶಂಕರ್
ದಾವಣಗೆರೆ.

ಕಥೆಗಳೂ ಇರಲಿ

ಾನ್ಯರೆ,

ಅಪರೂಪಕ್ಕೆಂಬಂತೆ ಪ್ರಕಟವಾದ ಕಥೆ ಾಲ' (ಡಿಸೆಂಬರ್-೦೫) ಓದಿ ಸಂತೋಷ ಪಟ್ಟೆ, ಂತೋಷ ಪಟ್ಟೆ ಅನ್ನುವುದಕ್ಕಿಂತ ಕಣ್ಣೀರಿಟ್ಟೆ ಂದರೇ ಸರಿಯಾಗಬಹುದೇನೊ? ಜಾತಿ ಎಷ್ಟು ್ರೂರಿ ಹಾಗೂ ಮನುಷ್ಯ ಸಂಬಂಧಗಳನ್ನು ಅದು ೀಗೆ ಚಿವುಟಿ ಹಾಕುತ್ತದೆ ಅನ್ನುವುದಕ್ಕೆ 'ಕಾಲ' ತ್ಯುತ್ತಮ ಉದಾಹರಣೆ. ಕೀಳು ಜಾತಿಯವರ ುಖವನ್ನು ಫೋಟೋದಲ್ಲಿ ಕೂಡ ನೋಡಲಾರದ ನಸ್ಸು ಅದೆಷ್ಟು ಅಮಾನವೀಯವಾಗಿರಬಹುದು. ೂಹಿಸಿಕೊಳ್ಳುವುದೂ ಕಷ್ಟ. ಆದರೆ ವಾಸ್ತವ. ಥೆಗಾರ ನಾ. ಡಿಸೋಜ ಅವರಿಗೆ ಅಭಿನಂದನೆಗಳು. ಗಳಿಗೊಂದಾದರೂ ಕಥೆ ಇದ್ದರೆ 'ಸಂವಾದ' ನ್ನೂ ಕಳೆ ಕಟ್ಟುತ್ತದೆ. ದಯವಿಟ್ಟು ಪ್ರಯತ್ನಿಸಿ. ಾಗಲೇ ಪ್ರಸಿದ್ಧರಾದವರ ಕಥೆಗಳೊಂದಿಗೆ ಯುವ ಥೆಗಾರರಿಗೂ ಪ್ರೋತ್ಸಾಹ ಲಭಿಸಬಹುದು.

-ಮಾರುತಿ ಕೋಲಕಾರ
ಬೆಳಗಾವಿ

ಅನಂತಮೂರ್ತಿ ಸರಿ-ತಪ್ಪು

ಪ್ರೀತಿಯ ಇಂದೂಧರ್,

ಚಳವಳಿಗಳ ಆದ್ಯತೆಗಳು ಮತ್ತೆ ನಮ್ಮ ಪ್ರಜ್ಞಾವಂತ ಸಾಹಿತಿಗಳ ನಡುವಿನ ತಿಕ್ಕಾಟಗಳನ್ನು ಸರಿಯಾಗಿ ವಿಶ್ಲೇಷಿಸಿದ್ದೀರಿ. ಆದರೆ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ನೋಡಬಾರದಿತ್ತು ಅನ್ನಿಸುತ್ತದೆ. ಇಡೀ ಪ್ರಕರಣದಲ್ಲಿ ದೇಜಗೌ ಅವರ ವರ್ತನೆ ತೀರಾ ಕೆಳ ಮಟ್ಟದ್ದಾಗಿತ್ತು. ಇನ್ನು ಚಂಪಾ ಬಿಡಿ. ಅವರಿಗೆ ಯಾವ ತತ್ವ ಸಿದ್ಧಾಂತಗಳೂ ಇಲ್ಲ. ಇತ್ತೀಚೆಗಂತೂ ಅವರು ಚಿಕ್ಕ ಪೇಟೆ-ಬಳೇ ಪೇಟೆ ಚಿಲ್ಲರೆ ಚಳವಳಿಗಾರರ ಮಟ್ಟಕ್ಕೆ ಇಳಿದಿದ್ದಾರೆ. ಅನಂತಮೂರ್ತಿ ಅವರು ನೀವು ಹೇಳಿದಂತೆ ಕುವೆಂಪು ಹೆಸರನ್ನು ಎಳೆದು ತರಬಾರದಿತ್ತು ನಿಜ. ಆದರೆ ಬೆಳಗಾವಿ ಮೇಯರ್‌ಗೆ ಮಸಿ ಬಳಿದ ಘಟನೆಯನ್ನು ಅವರು ಖಂಡಿಸಿದ್ದು ಸರಿಯಾಗಿಯೇ ಇದೆ. ಅದನ್ನು ತಪ್ಪು ಎನ್ನುವ ರೀತಿಯಲ್ಲಿ ನೀವು ಭಾವಿಸಬಾರದಾಗಿತ್ತು. ಈ ಘಟನೆ ಅವಿವೇಕದ ಸಹಜ ಪ್ರತಿಕ್ರಿಯೆ ಎಂಬ ನಿಮ್ಮ ಅಭಿಪ್ರಾಯ ಸರಿಯಾದುದಲ್ಲ. ತಪ್ಪನ್ನು ತಪ್ಪೆಂದು ಗಟ್ಟಿಯಾಗಿ ಹೇಳಲು ನೀವು ಹಿಂಜರಿದಿದ್ದೀರಿ ಎಂದೇ ಅನಿಸುತ್ತಿದೆ.

-ಕೆ.ಎಸ್. ಪಾರ್ಥಸಾರಥಿ
ಬೆಂಗಳೂರು.

'ಅಹಿಂದ' ಚರ್ಚೆ ಸಕಾಲಿಕ

ಮಾನ್ಯ ಇಂದೂಧರ ಹೊನ್ನಾಪುರ ಅವರೆ,

ಸಂವಾದ ಆರಂಭಿಸಿರುವ 'ಅಹಿಂದ' ಚರ್ಚೆ ಸಕಾಲಿಕವಾಗಿದೆ. ಇಂಥದ್ದೊಂದು ಚರ್ಚೆ ಈಗ ಖಂಡಿತಾ ಬೇಕಿತ್ತು. ಈ ಬಾರಿ DSN, HSD, JHN, ಹರೀಶ್, ಅವರು ಮಂಡಿಸಿರುವ ಅಭಿಪ್ರಾಯಗಳನ್ನು ಓದಿ ನಿರಾಳವೆನ್ನಿಸಿತು. ಇವರ್‍ಯಾರೂ ಅವಾಸ್ತವ-ನೆಲೆಯಲ್ಲಿ ನಿಂತು ಗಾಳಿಯಲ್ಲಿ ಮಾತಾಡಿಲ್ಲ! ಅಹಿಂದದ ಪ್ರಸ್ತುತತೆಯ ಬಗ್ಗೆ ಗಟ್ಟಿ ನಿಲುವನ್ನು ತಳೆದಿರುವ ಈ ಚರ್ಚೆ ಮುಂದುವರೆದು 'ಅಹಿಂದ' ತತ್ಕಾಲದ ವೇದಿಕೆಯಾಗಿ ಬಿಡದೆ ದೂರದೃಷ್ಟಿಯ ತಳಪಾಯವಾಗಲಿ.

-ಲಲಿತಾ ಸಿದ್ಧ ಬಸವಯ್ಯ
ತುಮಕೂರು.

ಒಳ ಮೀಸಲಾತಿ ಮತ್ತು ಸಬಲೀಕರಣ

ಸಂಪಾದಕರೊಡನೆ ಸಂವಾದ

ಒಳಮೀಸಲಾತಿಯ ಪರವಾಗಿ ಮತ್ತು ವಿರೋಧವಾಗಿ ಅಸ್ಪೃಶ್ಯರಲ್ಲೇ ಎರಡು ಬಣಗಳಾಗಿ ಪರಸ್ಪರರು ಸಂಶಯದಿಂದ ನೋಡುವಂತಾಗಿದೆ. ಈ ಅನುಮಾನ ಎನ್ನುವ ರೋಗ, ಹೇಗೆ ಬಂತು? ಎಲ್ಲಿಂದ ಬಂತು ಎನ್ನುವುದಕ್ಕಿಂತಲೂ, ಅದನ್ನು ಮತ್ತಷ್ಟು ಅಪಾಯಕಾರಿಯಾಗಿ ಬೆಳೆಯಲು ಬಿಡದೆ ಬೇರು ಸಮೇತ ನಿರ್ನಾಮ ಮಾಡುವುದು ಜಾಣತನವಾಗಿ ಕಾಣುತ್ತದೆ. ಪರಿಶಿಷ್ಟ ಜಾತಿ ಎಂದರೆ ಕೇವಲ ಒಂದು ಜಾತಿ ಅಥವಾ ಪಂಗಡ ಅಲ್ಲ. ಅದರಲ್ಲಿ ೧೦೮ ಜಾತಿ/ಪಂಗಡಗಳಿವೆ. ಈ ಎಲ್ಲಾ ಜಾತಿ/ಪಂಗಡಗಳ ಜನಸಂಖ್ಯೆಗನುಗುಣವಾಗಿ ಒಳಮೀಸಲಾತಿಯನ್ನು ಕಲ್ಪಿಸುವುದರಿಂದ ಸರ್ವರಿಗೂ ಸಮಪಾಲು ಹಾಗೂ ಸುಮಬಾಳು ದೊರಕಿದಂತಾಗುತ್ತದೆ.

೦ವೈ.ಮರಿಸ್ವಾಮಿ

'ಹಿಂದೂ ನಾವೆಲ್ಲಾ ಒಂದು' ಎನ್ನುವ ಮಂಕುಬೂದಿ ಎರಚಿ ವೈದಿಕರು ಬಹುಜನರ ಪಾಲಿನ ಅವಕಾಶಗಳನ್ನು ಸೂರೆಹೊಡೆಯುತ್ತಿರುವಂತೆ, 'ದಲಿತರೆಲ್ಲಾ ಒಂದೇ' ಎನ್ನುವ ಸ್ಲೋಗನ್ ಬಗೆದು ಪರಿಶಿಷ್ಟ ಜಾತಿಯ ಸವಲತ್ತುಗಳನ್ನು ಒಂದೇ ಪಂಗಡದವರು ಕಬಳಿಸುತ್ತಿದ್ದಾರೆಂಬ ಆರೋಪವನ್ನು ಮತ್ತೊಂದು ಪಂಗಡದ ಕೆಲವರು ಮಾಡುತ್ತಿದ್ದಾರೆ.

"ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆ ೨೧% ಇದೆ. ಆದರೆ ಮೀಸಲಾತಿಯ ಪ್ರಮಾಣ ಕೇವಲ ೧೮% ಇದೆ. ಸಾಲದ್ದಕ್ಕೆ ಅಸ್ಪೃಶ್ಯರಲ್ಲದ–ಸಾಮಾಜಿಕವಾಗಿ ಮುಂದುವರೆದಿರುವ ಜಾತಿಯವರೂ ಕೂಡ ಎಸ್.ಸಿ.ಪಟ್ಟಿಯಲ್ಲಿ ತೂರಿಕೊಂಡು ಬಿಟ್ಟಿದ್ದಾರೆ. ದಲಿತರು ಒಳ ಮೀಸಲಾತಿಗಾಗಿ ಕಚ್ಚಾಡುವುದನ್ನು ಬಿಟ್ಟು, ಮೊದಲು ಈ ಅನ್ಯಾಯದ ವಿರುದ್ಧ ಹೋರಾಡಬೇಕು". ಇದು ಒಳ ಮೀಸಲಾತಿಯನ್ನು ಒಲ್ಲದ ಹಲವರ ಅಭಿಪ್ರಾಯ.

ಹೀಗೆ ಒಳಮೀಸಲಾತಿಯ ಪರವಾಗಿ ಮತ್ತು ವಿರೋಧವಾಗಿ ಅಸ್ಪೃಶ್ಯರಲ್ಲೇ ಎರಡು ಬಣಗಳಾಗಿ ಪರಸ್ಪರರು ಸಂಶಯದಿಂದ ನೋಡುವಂತಾಗಿದೆ. ಈ ಅನುಮಾನ ಎನ್ನುವ 'ಪೆದ್ದರೋಗ, ಹೇಗೆ ಬಂತು? ಎಲ್ಲಿಂದ ಬಂತು ಎನ್ನುವುದಕ್ಕಿಂತಲೂ, ಅದನ್ನು ಮತ್ತಷ್ಟು ಅಪಾಯಕಾರಿಯಾಗಿ ಬೆಳೆಯಲು ಬಿಡದೆ ಬೇರು ಸಮೇತ ನಿರ್ನಾಮ ಮಾಡುವುದು ಜಾಣತನವಾಗಿ ಕಾಣುತ್ತದೆ.

ಪರಿಶಿಷ್ಟ ಜಾತಿ ಎಂದರೆ ಕೇವಲ ಒಂದು ಜಾತಿ ಅಥವಾ ಪಂಗಡ ಅಲ್ಲ. ಅದರಲ್ಲಿ ಸ್ಪೃಶ್ಯರೂ ಸೇರಿದಂತೆ ೧೦೮ ಜಾತಿ/ಪಂಗಡಗಳಿವೆ. ಈ ಎಲ್ಲಾ ಜಾತಿ/ಪಂಗಡಗಳ ಜನಸಂಖ್ಯೆಗನುಗುಣವಾಗಿ ವಿದ್ಯೆ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಒಳಮೀಸಲಾತಿಯನ್ನು ಕಲ್ಪಿಸುವುದರಿಂದ ಸರ್ವರಿಗೂ ಸಮಪಾಲು ಹಾಗೂ ಸುಮಬಾಳು ದೊರಕಿದಂತಾಗುತ್ತದೆ.

ಒಳ ಮೀಸಲಾತಿ ಜಾರಿಗೆ ತರುವುದರಿಂದ ದಲಿತರ ಐಕ್ಯತೆ ಮುರಿದು ಬೀಳುತ್ತದೆ ಎಂಬುದು ಕೆಲವರ ಆತಂಕ. ಹಾಗಾದರೆ ದಲಿತರಲ್ಲಿ ಒಗ್ಗಟ್ಟನ್ನು ತರುವ ದಾರಿ ಯಾವುದು? ಲಭ್ಯವಿರುವ ಸಂಪನ್ಮೂಲಗಳ ಸಮರ್ಪಕ ಹಂಚಿಕೆ ಮಾತ್ರ ಸಿಡಿದು ಹೋಗುತ್ತಿರುವ, ಛಿದ್ರವಾಗಿರುವ ಮನಸ್ಸುಗಳನ್ನು ಒಂದೆಡೆ ತರಲು ಸಾಧ್ಯ!

ಸಂಪಾದಕರೊಡನೆ ಸಂವಾದ

ದಲಿತ ಸಮಾಜ ಒಂದು ಸೈಕಲ್ ಚೈನಿನಂತಿದ್ದರೆ, ಆ ಚೈನಿನ ಪ್ರತಿಯೊಂದು ಕೊಂಡಿಗಳೂ ಒಂದೊಂದು ಜಾತಿ/ಪಂಗಡವಿದ್ದಂತೆ. ದಲಿತ ಸಮಾಜ ಎನ್ನುವ ಸೈಕಲ್ ಪ್ರಗತಿ ಪಥದತ್ತ ಮುನ್ನಡೆಯಬೇಕಾದರೆ, ಅದರ ಚೈನಿನ ಕೊಂಡಿಗಳು (ಜಾತಿ/ಪಂಗಡಗಳು) ಗಟ್ಟಿಯಾಗಿರಬೇಕು. ಇಲ್ಲದಿದ್ದರೆ ದುರ್ಬಲವಾಗಿರುವ ಕೊಂಡಿ ಕಿತ್ತು ಹೋಗಿ ಸೈಕಲ್ ಅಲ್ಲೇ ನಿಲ್ಲಬೇಕಾಗುತ್ತದೆ. ಒಳಮೀಸಲಾತಿ ಚೈನಿನ ಪ್ರತಿಯೊಂದು ಕೊಂಡಿಯನ್ನು ಬಲ ಪಡಿಸುವ ಕೀಲೆಣ್ಣೆಯಿದ್ದಂತೆ.

ಒಳ ಮೀಸಲಾತಿಯ ತರ್ಕ ಕಾವೇರುತ್ತಿರುವಂತೆಯೇ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಬಾಬುಜಗಜೀವನ್ ರಾಮ್‌ರವರನ್ನು ಅವರು ಹುಟ್ಟಿದ ಜಾತಿಗೆ ಸೀಮಿತಗೊಳಿಸುವ

> ಒಳ ಮೀಸಲಾತಿ ಜಾರಿಗೆ ತರುವುದರಿಂದ ದಲಿತ[ರ] ಐಕ್ಯತೆ ಮುರಿದು ಬೀಳುತ್ತದೆ ಎಂಬುದು ಕೆಲವರ[] ಆತಂಕ. ಹಾಗಾದರೆ ದಲಿತರಲ್ಲಿ ಒಗ್ಗಟ್ಟನ್ನು ತರು[ವ] ದಾರಿ ಯಾವುದು? ಲಭ್ಯವಿರುವ ಸಂಪನ್ಮೂಲಗಳ[] ಸಮರ್ಪಕ ಹಂಚಿಕೆ ಮಾತ್ರ ಸಿಡಿದು ಹೋಗುತ್ತಿರು[ವ] ಛಿದ್ರವಾಗಿರುವ ಮನಸ್ಸುಗಳನ್ನು ಒಂದೆಡೆ ತರಲು[] ಸಾಧ್ಯ! ದಲಿತ ಸಮಾಜ ಒಂದು ಸೈಕಲ್ ಚೈನಿನಂತಿದ್ದರೆ, ಆ ಚೈನಿನ ಪ್ರತಿಯೊಂದು ಕೊಂಡಿ[] ಗಳೂ ಒಂದೊಂದು ಜಾತಿ/ಪಂಗಡವಿದ್ದಂತೆ. ದಲಿ[ತ] ಸಮಾಜ ಎನ್ನುವ ಸೈಕಲ್ ಪ್ರಗತಿ ಪಥದತ್ತ ಮುನ್[ನ] ಡೆಯಬೇಕಾದರೆ, ಅದರ ಚೈನಿನ ಕೊಂಡಿಗಳು (ಜಾತಿ/ಪಂಗಡಗಳು) ಗಟ್ಟಿಯಾಗಿರಬೇಕು. ಇಲ್ಲದಿದ್[ದರೆ] ದುರ್ಬಲವಾಗಿರುವ ಕೊಂಡಿ ಕಿತ್ತು ಹೋಗಿ ಸೈಕಲ[್] ಅಲ್ಲೇ ನಿಲ್ಲಬೇಕಾಗುತ್ತದೆ. ಒಳ ಮೀಸಲಾತಿ ಚೈನಿನ[] ಪ್ರತಿಯೊಂದು ಕೊಂಡಿಯನ್ನು ಬಲಪಡಿಸುವ ಕೀಲೆಣ್ಣೆಯಿದ್ದಂತೆ.

ಅನಾರೋಗ್ಯಕರ ಬೆಳವಣಿಗೆ ನಡೆಯುತ್ತಿದೆ. ಇದು ಅವಿವೇಕತನ[ದ] ಪರಮಾವಧಿಯಲ್ಲದೆ ಬೇರೇನೂ ಅಲ್ಲ. ಇವರಿಬ್ಬರೂ ಸಮ[] ಶೋಷಿತ ಜನಾಂಗಗಳ ಕಣ್ಣುಗಳಂತಿದ್ದು, ತಮ್ಮದೇ ಆದ ವಿಭಿ[ನ್ನ] ವ್ಯಕ್ತಿತ್ವ ಮತ್ತು ಸಂಘರ್ಷದಿಂದ ಸಾಮಾ[ಜಿಕ] ನ್ಯಾಯಕ್ಕಾಗಿ ಜೀವ ಸವೆಸಿದವರು. ಅಂಥ[] ಮಹಾನ್ ವ್ಯಕ್ತಿಗಳ ಆದರ್ಶ, ವಿಚಾರ ಗ[ಳು] ದಲಿತರಿಗೆ ದಾರಿದೀಪವಾಗಬೇಕೇ ಹೊರ[ತು] ಪರಸ್ಪರ ತೆಗಳಲು ಕಚ್ಚಾ ಸಾಮ[] ಆಗಬಾರದು.

ಜಾಗತೀಕರಣ, ಖಾಸಗೀಕರಣ ಮ[ತ್ತು] ಧಾರ್ಮಿಕ ಮೂಲಭೂತವಾದ ರಭಸದಿಂದ ಬ[] ಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಮೀಸಲಾ[ತಿ] ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದೆ. ರಾಷ್ಟ್ರ[] ಜನಸಂಖ್ಯೆಯ ಶೇ.೧೦ ರಷ್ಟು ಜನರಿಗೆ ಕೂಡ ಸರ್ಕಾರಿ ಹುದ್ದೆಗ[ಳು] ಸಿಗುತ್ತಿಲ್ಲ. ಮೀಸಲಾತಿ ಯನ್ನು ತಳ್ಳಿ ಹಾಕಲಾಗುವುದಿಲ್ಲ. ಏಕೆಂದ[ರೆ] ಅನೇಕ ಶತಮಾನಗ ಳಿಂದ ಕದಲದೇ ಇದ್ದ ಸಾಮಾಜಿಕ ವ್ಯವಸ್ಥೆ[ಯ] ಬುಡವನ್ನೇ ಅದು ಅಲುಗಾಡಿಸಿದೆ. ಅದು ಭವಿಷ್ಯದ ದಮನ[ಿತ] ಜನಾಂಗದ ಹಾಗೂ ದೇಶದ ಭವಿಷ್ಯವನ್ನೇ ಬದಲಾಯಿಸು[ವ] ತಾಖತ್ತನ್ನು ಹೊಂದಿದೆ. ಹಾಗಾಗಿ, ಒಳ ಮೀಸಲಾತಿಯ ಜೊತೆ[] ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಯನ್ನು ಜಾರಿಗೆ ತರುವಂತೆ ಕೇಂ[ದ್ರ] ಮತ್ತು ರಾಜ್ಯ ಸರ್ಕಾರಗಳನ್ನು ಆಗ್ರಹಿಸುವುದು ಈ ಕ್ಷಣ[] ಅಗತ್ಯವಾಗಿದೆ.

ಸಂಪಾದಕೀಯ

ಅಂತರಂಗ



ನೈತಿಕತೆ, ಪಾವಿತ್ರ್ಯ ಇತ್ಯಾದಿ...

ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ನೈತಿಕತೆ ಮತ್ತು ಪಾವಿತ್ರ್ಯದ ಮಾತುಗಳು ಆಗಾಗ ಕೇಳಿಬರುತ್ತವೆ. ಕಳೆದ ಒಂದೆರಡು ತಿಂಗಳಿನಿಂದಂತೂ ಈ ಪದಗಳ ಬಳಕೆ ಮತ್ತೆ ಮತ್ತೆ ರಾಜಕೀಯ ವಲಯಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಪ್ರಸ್ತಾಪವಾಗುತ್ತಿವೆ. ಶೀಲ-ನೀತಿ-ಪಾವಿತ್ರ್ಯ-ನೈತಿಕತೆ ಈ ಎಲ್ಲವುಗಳ ಗುತ್ತಿಗೆ ಹಿಡಿದಂತಿದ್ದ ಬಿ.ಜೆ.ಪಿ ಆ ಪದಗಳಿಗಿದ್ದ ಅರ್ಥ-ವ್ಯಾಖ್ಯಾನಗಳನ್ನು ಬದಲಿಸಿಬಿಟ್ಟಿದೆ. ಈಗ ಆ ಸರದಿ ಜಾತ್ಯತೀತ ಜನತಾದಳದ್ದು! ಕಾಂಗ್ರೆಸ್ ಈ ವಿಚಾರದಲ್ಲಿ ತಲೆಯನ್ನೇ ಹಾಕುವುದಿಲ್ಲ ಬಿಡಿ. ಅಷ್ಟರ ಮಟ್ಟಿಗೆ ಅದು ಪ್ರಾಮಾಣಿಕ!

ಭಾರತೀಯ ಜನತಾ ಪಕ್ಷದ ವರ್ಚಸ್ಸು ಈಗ ಹಿಂದಿನಂತೆ ಇಲ್ಲ. ಹಿಂದೆ ಅದು ತೋರಿಕೆಗಾದರೂ ರಾಷ್ಟ್ರ ಭಕ್ತರ ಪಕ್ಷವಾಗಿತ್ತು. ಶಿಸ್ತು-ಪ್ರಾಮಾಣಿಕತೆ ಅದರ ಆಕರ್ಷಣೆಗಳಲ್ಲಿ ಪ್ರಮುಖವಾಗಿದ್ದವು. ವಾಜಪೇಯಿ-ಅಡ್ವಾಣಿಗಳು ಅದರ ನಿರ್ಮಲ ನಕ್ಷತ್ರಗಳಾಗಿದ್ದರು. '೧೩ ತಿಂಗಳುಗಳ ೧೩ ನೇ ಪ್ರಧಾನಿ' ಇದ್ದಾಗಲಂತೂ ಇಡೀ ದೇಶವೇ ಪ್ರಕಾಶಿಸುತ್ತಿತ್ತು! ರಾಮರಾಜ್ಯದ ಕನಸುಗಳನ್ನು ಬಿತ್ತಿ ತ್ರಿಶೂಲಗಳನ್ನು ಬೆಳೆಯಲಾಗುತ್ತಿತ್ತು!! ಸ್ವಧರ್ಮೋದ್ಧಾರಕ್ಕಾಗಿ ಅನ್ಯ ಧರ್ಮೀಯರನ್ನು ಸಂಹಾರ ಮಾಡುಲಾಗುತ್ತಿತ್ತು!!! ಎಂಥ ಭವ್ಯ ಕಾಲವದು!!!!

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಹೊಳೆಯುತ್ತಿದ್ದ 'ನಿರ್ಮಲ ನಕ್ಷತ್ರಗಳು' ಉದುರತೊಡಗಿವೆ. ರಾಮರಾಜ್ಯದ ಕನಸುಗಳಲ್ಲಿ ಲೈಂಗಿಕ ಸ್ಖಲನ ಆರಂಭವಾಗಿದೆ. ಧರ್ಮೋದ್ಧಾರಕರೆಲ್ಲ ಸ್ವಜನಸಂಹಾರದಲ್ಲಿ ನಿರತರಾಗಿದ್ದಾರೆ. ಅದಕ್ಕೇ ಸರಣಿ-ಸರಣಿ ಕರ್ಮಕಾಂಡಗಳಲ್ಲಿ ಸಿಕ್ಕಿದ ನಕ್ಷತ್ರಗಳೆಲ್ಲ ಸೀಮೆ ಎಣ್ಣೆ ಬುಡ್ಡಿಗಳೊಂದಿಗೂ ಸ್ಪರ್ಧಿಸಲಾಗದೆ 'ನಿವೃತ್ತ'ರಾಗುತ್ತಿವೆ. ಕಳೆದ ತಿಂಗಳು ನಡೆದ ರಜತ ಮಹೋತ್ಸವವಂತೂ, ಅತ್ಯಂತ ಕಳಾಹೀನ ಸ್ಥಿತಿಗೆ ಮುಟ್ಟಿತ್ತು. ಸಂಘ ಪರಿವಾರದ ಏಕಮೇವಾ ದ್ವಿತೀಯರಂತಿದ್ದ ಅಡ್ವಾಣಿ ತನ್ನೆಲ್ಲ ವೈಭವಗಳನ್ನು ಕಳೆದುಕೊಂಡ ಹಾಳು ಮುದುಕನಂತೆ ಪರಿತಪಿಸುತ್ತಿದ್ದರು. ವಾಜಪೇಯಿ ಮತ್ತೊಂದು ಬಾರಿ ನಿವೃತ್ತಿ ಘೋಷಿಸಿದರು. ಸಂಘ ಪರಿವಾರದ ಆಯಸ್ಕಾಂತ ಸಂಜಯ್ ಜೋಷಿ ಅನೈತಿಕ ಸಂಬಂಧ ಬಯಲಾಗಿ ರಾಜಿನಾಮೆ ನೀಡಿದರು.

ಇಡೀ ದೇಶದ ನೈತಿಕ ಪ್ರಜ್ಞೆಯ ವಾರಸುದಾರನಂತೆ ಬೀಗುತ್ತಿದ್ದ ಬಿಜೆಪಿಗೆ ಇಂಥ ದುರ್ಗತಿ ಏಕೆ ಬಂತು ಅನ್ನುವುದೀಗ ವ್ಯಾಪಕ ಚರ್ಚೆಗೆ ಒಳಗಾಗಿದೆ. ಹಿಂದೂ ಧರ್ಮ, ರಕ್ಷಣೆ, ರಾಮ ಮಂದಿರ ನಿರ್ಮಾಣ ಹಾಗೂ ಅನ್ಯಧರ್ಮೀಯರ ವಿರೋಧ-ಈ ಮೂರು ಭಾವನಾತ್ಮಕ ಅಂಶಗಳ ಕಾರ್ಯಕ್ರಮದ ಮೇಲೆ ಅಧಿಕಾರ ಹಿಡಿದ ಬಿಜೆಪಿ ಇಡೀ ದೇಶವನ್ನೇ ಶತಮಾನಗಳಷ್ಟು ಹಿಂದಕ್ಕೊಯ್ದು ಬಿಟ್ಟಿತು. ಓದುವ ಮಕ್ಕಳ ಕೈಗೆ ಪುಸ್ತಕ-ಪೆನ್ನಿನ ಬದಲಾಗಿ ತ್ರಿಶೂಲಗಳನ್ನು ನೀಡಿತು. ನಿರುದ್ಯೋಗಿ ಯುವಕರಿಗೆ, ಉದ್ಯೋಗ ನೀಡುವ ಬದಲು ಧರ್ಮರಕ್ಷಣೆಯ ವಿಷ ಉಣ್ಣಿಸಿ ಲಾಠಿ ಹಿಡಿದು ಬೀದಿಗಿಳಿಯುವಂತೆ ಮಾಡಿತು. ಹಳ್ಳಿ ಹಳ್ಳಿಗಳಲ್ಲಿ ಧರ್ಮಾಂಧ ಭಜರಂಗಿಗಳನ್ನು ಸೃಷ್ಟಿಸಿ ಇಡೀ ದೇಶದ ನೆಮ್ಮದಿಗೆ ಬೆಂಕಿ ಹಚ್ಚಿತು. ದೀನ-ದಲಿತರು, ಅಸಹಾಯಕರು, ಅಲಕ್ಷಿತರು ತಮ್ಮ ಬದುಕಿಗೆ ತಾವೇ ಬೆಂಕಿ ಹಚ್ಚಿಕೊಳ್ಳುವಂತೆ ಪ್ರೇರೇಪಿಸಿತು.

ಅಭಿವೃದ್ಧಿಯ ಕಡೆ ಅಪ್ಪಿ ತಪ್ಪಿಯೂ ಅಧಿಕಾರದಲ್ಲಿದ್ದಾಗ ಬಿಜೆಪಿ ಮುಖ ಮಾಡಲಿಲ್ಲ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಲೂಟಿ ದಂಧೆಯನ್ನು ಬಿಟ್ಟರೆ ಬಡವರ ಪರವಾಗಿ-ದುರ್ಬಲರ ಪರವಾಗಿ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಒಂದು ಹೊಸ ನೀರಾವರಿ ಯೋಜನೆ, ವಿದ್ಯುತ್ ಯೋಜನೆ, ನಿರುದ್ಯೋಗ ನಿವಾರಣೆ ಕಾರ್ಯಕ್ರಮ, ಕೃಷಿಕ ಸಮುದಾಯದ ಕಷ್ಟಗಳನ್ನು ನಿವಾರಿಸುವ ಹೆಜ್ಜೆ, ಯಾವುದಕ್ಕೂ ಬಿಜೆಪಿಗೆ ಸಮಯವೇ ಇರಲಿಲ್ಲ.

ಜಾತ್ಯತೀತ ಜನತಾದಳ ಬಿಜೆಪಿ ಜತೆ ಸೇರಿ ಕರ್ನಾಟಕದಲ್ಲಿ ಅಭಿವೃದ್ಧಿ ಪರ-ಪ್ರಾಮಾಣಿಕ ಸರ್ಕಾರ ನಡೆಸಲು ಹೊರಟಿರುವ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾಗಿ ಬಂದದ್ದರಿಂದ ಇದನ್ನೆಲ್ಲ ಈಗ ಬರೆಯ ಬೇಕಾಯಿತು. ವಿಚಿತ್ರವೆಂದರೆ ಕರ್ನಾಟಕದಲ್ಲಿ ೨೦ ತಿಂಗಳುಗಳ ಕಾಲ ಅಧಿಕಾರ ನಡೆಸಿದ ಮೈತ್ರಿ ಪಕ್ಷಗಳಾದ ಕಾಂಗ್ರೆಸ್ ಆಗಲಿ, ಜಾತ್ಯತೀತ ಜನತಾದಳವಾಗಲಿ, ಎಂದೂ ಅಭಿವೃದ್ಧಿ ಕೆಲಸಗಳಿಗಾಗಿ ಹೋರಾಡಲಿಲ್ಲ. ಬಡವರ-ರೈತರ, ಅಸಹಾಯಕರ, ಅಲಕ್ಷಿತರ ಬದುಕು ಹಸನಾಗಿಸುವ ಯಾವುದೇ ಯೋಜನೆ ಜಾರಿಗಾಗಿ ಕಿತ್ತಾಡಲಿಲ್ಲ. ಅವರ ನಡುವಿನ ಕಿತ್ತಾಟ 'ಹಂಚಿಕೆ'ಗಾಗಿ ಮಾತ್ರ, ಕೊಳ್ಳೆಯ ಪಾಲು ಪಡೆಯವಲ್ಲಿ ಆದ 'ಅನ್ಯಾಯ' ಅವರುಗಳ ಭಿನ್ನಾಭಿಪ್ರಾಯಕ್ಕೆ ಮೂಲವಾಯಿತು.

ದೇವೇಗೌಡರ ಪ್ರತಿ ಹೋರಾಟವೂ ಹಿಂದಿನ ಮುಖ್ಯ ಮಂತ್ರಿ ಕೃಷ್ಣ ಹಾಗೂ ಅವರ ಶಿಷ್ಯ ಕೋಟಿಯ ವಿರುದ್ಧವಾಗಿರುತ್ತಿತ್ತು. ಅದು ಇನ್ಫೋಸಿಸ್‌ನ ನಾರಾಯಣಮೂರ್ತಿ ಇರಲಿ, ಮೈಸೂರು-ಬೆಂಗಳೂರು ನಡುವಿನ ಕಾರಿಡಾರ್ ಯೋಜನೆಯಾಗಲಿ ಎಲ್ಲವೂ ಕೃಷ್ಣರ ಭೂತದ ಬೆನ್ನು ಹತ್ತಿದವೇ ಆಗಿದ್ದವು. ಅಷ್ಟೇ ಮಟ್ಟಿಗೆ ಕೃಷ್ಣ ಕೂಡ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದುಕೊಂಡೇ ಕರ್ನಾಟಕದಲ್ಲಿ 'ಚಿಟುಗುಮುಳ್ಳು' ಆಡಿಸುತ್ತಿದ್ದರು. ಸಿದ್ಧರಾಮಯ್ಯನವರ 'ಅಹಿಂದ' ಚಳುವಳಿಯ ಹಿಂದಾಗಲಿ, ಕೆಪಿಸಿಸಿ ಅಧ್ಯಕ್ಷ ಖರ್ಗೆಯವರ ನೇಮಕಾತಿ ಹಿಂದಾಗಲಿ ಈ 'ಚಿಟಗು ಮುಳ್ಳೇ' ಆಡುತ್ತಿದ್ದುದು ಉತ್ಪ್ರೇಕ್ಷೆಯಲ್ಲ, ಈ ಇಬ್ಬರು ನಾಯಕರ ಅಹಂಕಾರಕ್ಕೆ ಇಡೀ ನಾಡಿನ ಅಭಿವೃದ್ಧಿ ಕೆಲಸಗಳನ್ನು ಬಲಿಕೊಟ್ಟು ಧರ್ಮಸಿಂಗ್ ಎಂಬ ಉದ್ದೇಶವೇ ಇಲ್ಲದ ಮನುಷ್ಯ, ಮುಖ್ಯಮಂತ್ರಿಯಾಗಿ ಕಾಲ ತಳ್ಳಿದರು.

ಪರಿಸ್ಥಿತಿ ಈಗ ಸದ್ಯದ ಕ್ಲೈಮ್ಯಾಕ್ಸ್‌ಗೆ ಬಂದಿದೆ. ಜೆಡಿಎಸ್‌ಗೆ ಕಾಂಗ್ರೆಸ್‌ನಲ್ಲಿ ಕಾಣದ ಔದಾರ್ಯ, ಅಭಿವೃದ್ಧಿ ಪರತೆ, ಸಹಕಾರ ಬಿಜೆಪಿಯಲ್ಲಿ ಕಾಣಿಸತೊಡಗಿದೆ. ಅಧಿಕಾರ ಲಾಲಸೆ-ಅವಕಾಶವಾದಿತ್ವದ ಪರಮ ನೀಚತನಕ್ಕೆ ಬಹುಷಃ ಇದು ತೀರ ಈಚಿನ ಉದಾಹರಣೆ ಆಗಬಹುದು. ಸಿದ್ಧಾಂತಗಳಿಗಿಂತ ಪಕ್ಷದ ಅಸ್ತಿತ್ವ, ವಿಚಾರಗಳಿಗಿಂತ ಶಾಸಕರ ಹಿತ ಮುಖ್ಯ ಎಂದು ಹೇಳುವ ವ್ಯಕ್ತಿಯೊಬ್ಬ ಈ ನಾಡನ್ನು ಮುನ್ನಡೆಸುವ ನಾಯಕನಾಗುವುದು ನಮ್ಮ ಕಾಲ ಮಾನದ ಘೋರ ವ್ಯಂಗ್ಯ. ದೇಶದ ಹಲವು ರಾಜ್ಯಗಳಲ್ಲಿ ಹಾಗೂ ಎರಡು ಬಾರಿ ದೇಶದಲ್ಲಿ ಅಧಿಕಾರ ಹಿಡಿದ ಬಿಜೆಪಿ ಆಗ ಮಾಡದ ಒಳಿತನ್ನು ಈಗ ಮಾಡಬಹುದೆಂದು ಅದರ ಸಖ್ಯ ಬಯಸುವುದು ಜಾತ್ಯತೀತ ಪಕ್ಷವೆಂದು ಹೇಳಿಕೊಳ್ಳುವ ಜನತಾದಳದ ಉದ್ದೇಶವಾದರೆ, ಅದರ ಹಿಂದೆ ನಾಡಿನ ಒಳಿತಿನ ಆಶಯವಿದೆಯೇ ಅಥವಾ ಕೆಲವೇ ವ್ಯಕ್ತಿಗಳ ಸ್ವಾರ್ಥವಿದೆಯೇ ಅನ್ನುವುದನ್ನು ಜನತೆ ಮುಂದೆ ನಿರ್ಧರಿಸಲಿದ್ದಾರೆ.

ಸದ್ಯಕ್ಕೆ ಇವರಿಗೆಲ್ಲ ಒಳ್ಳೆಯ ಮನಸ್ಸು ಆಲೋಚನೆ, ತಮಗಿಂತ ಜನತೆಯ-ನಾಡಿನ ಹಿತ ಮುಖ್ಯ ಎಂಬ ಭಾವನೆಗಳು ಬರಲೆಂದು ಹಾರೈಸಬಹುದು.

○ ಇಂದೂಧರ ಹೊನ್ನಾಪುರ

ವರ್ತಮಾನ

ಪ್ರಪಂಚಾದ್ಯಂತ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯದಲ್ಲಿ ಇತ್ಯಾತ್ಮಕ ಬದಲಾವಣೆಗಳು ಕಳೆದ ಒಂದು ಶತಮಾನದಲ್ಲಿ ಜಾರುಗಿವೆ. ೨೦ ನೇ ಶತಮಾನದ ಆದಿಭಾಗದಲ್ಲಿ ಮಾರ್ಗರೇಟ್ ಸಿಂಗರ್ ಬರೆದ ಜನನ ನಿಯಂತ್ರಣ ಕುರಿತ ಲೇಖನ ಅಶ್ಲೀಲತೆ ಹಾಗೂ ಅಸಭ್ಯತೆಯ ದ್ಯೋತಕವೆಂದು ಅಮೆರಿಕದಲ್ಲಿ ಅದರ ವಿರುದ್ಧ ಕಾನೂನಿನ ಕ್ರಮವನ್ನು ಜರುಗಿಸಲಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯದಲ್ಲಿ ವಿವಿಧ ರೀತಿಯ ಕಟ್ಟುಪಾಡು, ನಿರ್ಬಂಧಗಳನ್ನು ಸಾಮಾನ್ಯ ಜನರ ಮೇಲೆ ಹೇರುವಲ್ಲಿ ಆಳುವ ವರ್ಗಗಳು, ಧಾರ್ಮಿಕ ಸಂಸ್ಥೆಗಳು ವಹಿಸಿರುವ ಕರಾಳ ಪಾತ್ರವನ್ನು ಮರೆಯುವ ಹಾಗಿಲ್ಲ.

○ಮ.ಶ್ರೀ. ಮುರಳಿ ಕೃಷ್ಣ

ಅಭಿವ್ಯಕ್ತಿ ಸ್ವಾತಂತ್ರ್ಯ ಕುಂಠಿತಗೊಳ್ಳುತ್ತಿದೆಯೆ?

'ಸ್ವಾತಂತ್ರ್ಯ ಎಂಬುದರ ಅರ್ಥ ವ್ಯಾಪ್ತಿ ವಿಸ್ತಾರವಾದದ್ದು. ಬ್ರಿಟಿಷ್ ಅಧೀನ ಗುಲಾಮಿತನದಿಂದ ನಮಗೆ ವಿಮೋಚನೆ ದೊರೆತು ೫೮ ವರ್ಷಗಳಾಗಿವೆ. ಈಗಲೂ, ನಮ್ಮ ರಾಷ್ಟ್ರದಲ್ಲಿ ಎಲ್ಲರಿಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಇತರ ಬಗೆಯ ಸ್ವಾತಂತ್ರ್ಯ ದೊರಕಿವೆಯೇ ಎಂಬ ಪ್ರಶ್ನೆಗೆ ಉತ್ತರ ನಕಾರಾತ್ಮಕವಾಗಿಯೇ ಇರುತ್ತದೆ. ಇದು ಕಟುವಾಸ್ತವ. ಪ್ರಸ್ತುತ ಜರಗುತ್ತಿರುವ ಹಲವು ವಿದ್ಯಮಾನಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದಾಗ, ಕಂಡುಬರುವ ಅಂಶಗಳು ವಿಚಾರಯೋಗ್ಯ.

ನಮ್ಮ ರಾಷ್ಟ್ರದ ಸಂವಿಧಾನದ ಪರಿಚ್ಛೇದ ೧೯(೧)(ಎ) ಯಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪವಿದೆ. ಆದರೆ ಅಮೆರಿಕದ ಸಂವಿಧಾನದಲ್ಲಿರುವಂತೆ ಈ ಹಕ್ಕು ಒಂದು ನಿರ್ದಿಷ್ಟ, ಸಂಪೂರ್ಣ ರೂಪದಲ್ಲಿಲ್ಲ ಎಂಬುದು ಗಮನೀಯ ಅಂಶ. ಅಮೆರಿಕದಲ್ಲಿ ಪ್ರಭುತ್ವಕ್ಕೆ ಮಾರಕವಾಗದಂಥ ಯಾವುದೇ ಕಾರ್ಯಾಚರಣೆ ಮೂಲಕ ಪ್ರತಿಭಟನೆ ವ್ಯಕ್ತಪಡಿಸಬಹುದು ಆ ರಾಷ್ಟ್ರದ ಧ್ವಜವನ್ನು ಸುಡಬಹುದು; ಜನಾಂಗೀಯ, ದ್ವೇಷಭರಿತ ಭಾಷಣವನ್ನು ಮಾಡಬಹುದು. ಆದರೆ ನಮ್ಮ ಸಂವಿಧಾನದಲ್ಲಿ ರಾಷ್ಟ್ರದ ಸಮಗ್ರತೆ ಮತ್ತು ಸಾರ್ವಭೌಮಾಧಿಕಾರವನ್ನು ಗಣನೆಗೆ ತೆಗೆದುಕೊಂಡು, ಕೆಲವು ಯುಕ್ತ ಮಿತಿಗಳನ್ನು (Reasonable Restrictions) ಹಾಕಲಾಗಿದೆ.

ಪ್ರಪಂಚಾದ್ಯಂತ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯದಲ್ಲಿ ಇತ್ಯಾತ್ಮಕ ಬದಲಾವಣೆಗಳು ಕಳೆದ ಒಂದು ಶತಮಾನದಲ್ಲಿ ಜಾರುಗಿವೆ. ೨೦ ನೇ ಶತಮಾನದ ಆದಿಭಾಗದಲ್ಲಿ ಮಾರ್ಗರೇಟ್ ಸಿಂಗರ್ ಬರೆದ ಜನನ ನಿಯಂತ್ರಣ ಕುರಿತ ಲೇಖನ ಅಶ್ಲೀಲತೆ ಹಾಗೂ ಅಸಭ್ಯತೆಯ ದ್ಯೋತಕವೆಂದು ಅಮೆರಿಕದಲ್ಲಿ ಅದರ ವಿರುದ್ಧ ಕಾನೂನಿನ ಕ್ರಮವನ್ನು ಜರುಗಿಸಲಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯದಲ್ಲಿ ವಿವಿಧ ರೀತಿಯ ಕಟ್ಟುಪಾಡು, ನಿರ್ಬಂಧಗಳನ್ನು ಸಾಮಾನ್ಯ ಜನರ ಮೇಲೆ ಹೇರುವಲ್ಲಿ ಆಳುವ ವರ್ಗಗಳು, ಧಾರ್ಮಿಕ ಸಂಸ್ಥೆಗಳು ವಹಿಸಿರುವ ಕರಾಳ ಪಾತ್ರವನ್ನು ಮರೆಯುವ ಹಾಗಿಲ್ಲ.

ಇತ್ತೀಚೆಗೆ 'ಇಂಡಿಯಾ ಟುಡೆ' ಪತ್ರಿಕೆಯ ತಮಿಳು ಆವೃತ್ತಿ 'ಸೆಕ್ಸ್ ಮತ್ತು ಸಿಂಗಲ್ ವುಮನ್' ವಿಷಯ ಕೈಗೆತ್ತಿಕೊಂಡು ಸಮೀಕ್ಷೆ ನಡೆಸಿತು. ಇತ್ತೀಚಿನ ವರ್ಷಗಳಲ್ಲಿ ಮುಖ್ಯವಾಹಿನಿಯಲ್ಲಿರುವ ಕೆಲವು ಆಂಗ್ಲ ಪತ್ರಿಕೆಗಳು ಹಾಗೂ ಪ್ರಾಂತೀಯ ಭಾಷೆಗಳ ಪತ್ರಿಕೆಗಳು ಈ ರೀತಿಯ ಸಮೀಕ್ಷೆಗಳನ್ನು ನಡೆಸುತ್ತಾ ಬಂದಿರುವುದನ್ನು ಗಮನಿಸಬಹುದು. ಅವು ಸಮೀಕ್ಷೆಗಳ ಫಲಿತಾಂಶವನ್ನು ರಂಜನೀಯವಾಗಿ ಪ್ರಕಟಿಸುತ್ತಾ ಬಂದಿವೆ. ತಮಿಳು ಚಲನಚಿತ್ರರಂಗದ ಖ್ಯಾತ ನಟಿ ಖುಷ್ಬೂರನ್ನು ಮೇಲಿನ ವಿಷಯದ ಬಗ್ಗೆ ಸಂದರ್ಶಿಸುವ ಸಂದರ್ಭದಲ್ಲಿ ವಿವಾಹ ಪೂರ್ವ ಲೈಂಗಿಕತೆ ಬಗ್ಗೆ ಪ್ರಶ್ನಿಸಲಾಯಿತು. ಆಕೆ – "ಬಸಿರು ಹಾಗೂ ಲೈಂಗಿಕ ಕಾಯಿಲೆಗಳಿಂದ ಹುಡುಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವವರೆಗೆ ವಿವಾಹಪೂರ್ವ ಸೆಕ್ಸ್ ತಪ್ಪೆನ್ನಿಸದು. ತಾನು ಕೈ ಹಿಡಿಯುವಾಕೆ, ಕನ್ಯೆಯೇ ಆಗಿರಬೇಕೆಂಬ ನಿರೀಕ್ಷೆಗಳಿಂದ ನಮ್ಮ ಸುಶಿಕ್ಷಿತ ಪುರುಷರು ಮುಕ್ತವಾಗಬೇಕು ಎಂದು ಉತ್ತರಿಸಿದರು.

ವಿವಾದದ ಕೇಂದ್ರಬಿಂದು ಖುಷ್ಬೂ

ಈ ಹೇಳಿಕೆ ತಮಿಳು ನಾಡಿನಲ್ಲಿ ಕೋಲಾಹಲ ಕಾರಣವಾಯಿತು. ಪಾಟಾಳಿ ಮಕ್ಕಳ ಕಚ್ಚಿ (ಪಿ.ಎಂ.ಕೆ) ಹಾಗ ದಲಿತ್ ಪ್ಯಾಂಥರ್ಸ್ ಆಫ್ ಇಂಡಿಯಾ ಪಕ್ಷಗಳ ಮಹಿಳಾ ಕಾಯ ಕರ್ತರು ಪೊರಕೆ, ಚಪ್ಪಲಿಗಳನ್ನು ಪ್ರದರ್ಶಿಸಿ ಖುಷ್ಬೂ ವಿರು ಪ್ರತಿಭಟನೆ ಮಾಡಿದರು. ಮೊದಲು ತನ್ನ ಹೇಳಿಕೆಯನ್ನು ಸಮರ್ಥಿ ಕೊಂಡ ಆಕೆ ನಂತರ ಕ್ಷಮೆಯಾಚಿಸಿದರು. ಆದರೂ ಅವರ ವಿರು ೨೫ ಮೊಕದ್ದಮೆಗಳನ್ನು ನ್ಯಾಯಾಲಯಗಳಲ್ಲಿ ದಾಖಲಿಸಲಾಯಿತು. ಖುಷ್ಬೂ ಹೇಳಿಕೆಯನ್ನು ಬೆಂಬಲಿಸಿದ ಸುಹಾಸಿನಿ ಮಣಿರತ್ನಂ ಸ ಪ್ರತಿಭಟನಾಕಾರರ ಕೋಪಕ್ಕೆ ಗುರಿಯಾಗಬೇಕಾಯಿತು. ಅಂತಿ ವಾಗಿ ಅವರೂ ತಮ್ಮ ನಿಲುವನ್ನು ಸಡಿಲಿಸಿಕೊಳ್ಳಬೇಕಾಯಿತು. ಅವ ವಿರುದ್ಧವೂ ಸುಮಾರು ೭ ಮೊಕದ್ದಮೆಗಳು ಹೂಡಲ್ಪಟ್ಟವು. ಖುಷ ಹೇಳಿಕೆ ತಮಿಳು ಮಹಿಳೆ ಹಾಗೂ ತಮಿಳು ಸಂಸ್ಕೃತಿಯನ್ನು ಅ ಮಾನಗೊಳಿಸುವಂಥದ್ದು ಎಂಬುದು ಪ್ರತಿಭಟನಾಕಾರರ ಹಾಗ ಅವರ ಹಿಂದಿರುವ ರಾಜಕೀಯ ಪಕ್ಷಗಳ ಆರೋಪ. ಬರೀ ಇ ಅಂಶವೇ ಪ್ರತಿಭಟನೆಗಳಿಗೆ ಕಾರಣವಾಗಿದೆಯ ಅಥವಾ ಬೇ ಕಾರಣಗಳು ಇವೆಯೆ? ಎಂಬುದನ್ನು ಕೆದಕಿದಾಗ ಇನ್ನೂ ಕೆಲ ಸೂಕ್ಷ್ಮ ಸಂಗತಿಗಳು ಸ್ಪಷ್ಟಗೊಳ್ಳುತ್ತವೆ.

ತಮಿಳು ಚಲನ ಚಿತ್ರರಂಗದಲ್ಲಿ ತಂಕರ್ ಬಚನ್ ಛ ಛಾಯಾಚಿತ್ರಗ್ರಾಹ ಹಾಗೂ ನಿರ್ದೇಶಕ. ಈತ ಪಿ.ಎಂ.ಕೆ ಹಾಗ ದಲಿತ ಪ್ಯಾಂಥರ್ಸ್ ಪಕ್ಷಗಳು ನಡೆಸುತ್ತಿರುವ ತಮಿಳು ರಕ್ಷ ಆಂದೋಲನದ ಜೊತೆ ಗುರುತಿಸಿಕೊಂಡಿರುವ ವ್ಯಕ್ತಿ. ಕೆಲವು ತಿಂ ಹಿಂದೆ ಬಚನ್ ತಮಿಳು ಚಲನಚಿತ್ರರಂಗದಲ್ಲಿ ಕೆಲಸ ಮಾಡುತ್ತಿರು ನಟಿಯರ ಬಗ್ಗೆ ಲಘುವಾಗಿ ಮಾತಾಡಿದ್ದರು. ಅವರ ನೈತಿಕತೆ ಬಗ್ಗೆ ಹಗುರವಾದ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಇದನ್ನು ಖುಷ ನೇತೃತ್ವದಲ್ಲಿ ಹಿರಿಯ ನಟಿಯರು ತೀವ್ರವಾಗಿ ಖಂಡಿಸಿದರು. ಕೊ ನಟ ವಿಜಯಕಾಂತ್ ಮುಂದಾಳತ್ವದ ದಕ್ಷಿಣ ಭಾರತ ಕಲಾವಿ ಸಂಘ ಮಧ್ಯ ಪ್ರವೇಶಿಸಿ ಬಚನ್ ಕ್ಷಮೆ ಕೇಳುವಂತೆ ಮಾಡಿತು.

ಇತ್ತೀಚೆಗೆ, ವಿಜಯಕಾಂತ ದೇಶೀಯ ಮುರ್ಪೋರ್ಕು ದ್ರಾವಿಡ ಕಳಗಂ ಎಂಬ ರಾಜಕೀಯ ಪಕ್ಷ ಹುಟ್ಟು ಹಾಕಿ ದರು. ಯಾವುದೋ ಒಂದು ಸಂದರ್ಭದಲ್ಲಿ ಪಿ.ಎಂ.ಕೆ ಪಕ್ಷದ ಕೇಂದ್ರ ಮಂತ್ರಿ ಆರ್. ಅಣ್ಬುಮಣಿಯವರನ್ನು ಟೀಕಿಸಿದರು. ಪಿ.ಎಂ.ಕೆ ಪಕ್ಷದ ಕಾರ್ಯಕರ್ತರ ಕೋಪಕ್ಕೆ ತುತ್ತಾದರು.

ತಮಿಳುನಾಡಿನಲ್ಲಿ ರಾಜಕಾರಣಕ್ಕೂ ಚಲನಚಿತ್ರ ರಂಗಕ್ಕೂ ಹತ್ತಿರದ ನಂಟು. ಸಿನಿಮಾರಂಗಕ್ಕೆ ಸೇರಿದ ಅನೇಕರು ರಾಜಕೀಯ ವಲಯದಲ್ಲಿ ಮಿಂಚಿದ್ದಾರೆ. ಉನ್ನತ ಸ್ಥಾನಮಾನಗಳಿಸಿದ್ದಾರೆ. ಪಿ.ಎಂ.ಕೆ ಹಾಗೂ ದಲಿತ ಪ್ಯಾಂಥರ್ಸ್ ಪಕ್ಷಗಳು ಕೂಡ ಜಾತಿವಾದಿ ಪಕ್ಷಗಳೆನ್ನಿಸಿವೆ. ಈ ಎರಡು ಪಕ್ಷಗಳಿಗೂ ಸಿನಿಮಾದವರು ರಾಜಕೀಯ ರಂಗದಲ್ಲಿರುವುದರ ಬಗ್ಗೆ ಅಸಮಾಧಾನವಿದೆ. ಸಿನಿಮಾ ನಟರು ತಮ್ಮ ಜನಪ್ರಿಯತೆಯನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿ, ಪ್ರಾತಿನಿಧಿಕ ರಾಜಕಾರಣವನ್ನು ಬುಡಮೇಲು ಮಾಡುತ್ತಾರೆಂದು ಅವುಗಳ, ತಕರಾರು. ವಿದ್ಯಾ ಸಂಸ್ಥೆಗಳಲ್ಲಿರುವ 'ಫಿಲ್ಮಿ ಸಂಸ್ಕೃತಿ'ಯ ವಿರುದ್ಧ ಪಿ.ಎಂ.ಕೆ ಆಂದೋಳನ ಮಾಡುತ್ತಾ ಬಂದಿದೆ. ಹಾಗೆಯೇ ಈ ಉಭಯ ಪಕ್ಷಗಳ ತಮಿಳು ರಕ್ಷಣ ವೇದಿಕೆಗಳು ತಮಿಳು ಚಲನಚಿತ್ರಗಳ ಆಂಗ್ಲ ಹೆಸರುಗಳ ವಿರುದ್ಧ ಚಳುವಳಿ ಮಾಡುತ್ತಿದೆ. ಚಲನಚಿತ್ರ ಉದ್ಯಮದ ವಿರುದ್ಧ ಕತ್ತಿ ಮಸೆಯಲು ವಿವಾಹ ಪೂರ್ವ ಲೈಂಗಿಕತೆಯ ವಿವಾದ ವರವಾಗಿ ಪರಿಣಮಿಸಿತು ಎಂಬುದು ಕೆಲವು ರಾಜಕೀಯ ವಿಶ್ಲೇಷಕರ ಅಂಬೋಣ.

ಆದರೆ ಈ ಎರಡು ಪಕ್ಷಗಳೂ ದ್ರಾವಿಡ ಕಳಗಂ ಸ್ಥಾಪಕ ರಾಮಸ್ವಾಮಿ ನಾಯ್ಕರ್(ಪೆರಿಯಾರ್)ರ ತತ್ವಗಳಿಗೆ ಬದ್ಧವಾಗಿರುವುದಾಗಿ ಸಾರುತ್ತವೆ. ಆದರೆ ಪೆರಿಯಾರ್ ಮಹಿಳೆಯ ಶೀಲ ಮುಂತಾದ ವಿಷಯಗಳ ಬಗ್ಗೆ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿದ ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದರು. ಆ ಕಾಲದಲ್ಲಿ ಅಂತಹ ನಿಲುವು ಕ್ರಾಂತಿಕಾರಕವಾಗಿತ್ತು. ಪೆರಿಯಾರ್ ನಾಮ ಜಪಿಸುವ ಪಕ್ಷಗಳಿಗೆ ಅವರು ಪ್ರತಿಪಾದಿಸಿದ ಜಾತಿ ಆಧಾರಿತ ಮೀಸಲಾತಿ ಮುಖ್ಯವೇ ಹೊರತು, ಅವರ ಇತರ ವಿಚಾರಗಳಲ್ಲ ಎಂಬುದು ಕೆಲವು ರಾಜಕೀಯ ವಿಶ್ಲೇಷಕರ ಅಭಿಮತ.

ತಮಿಳರು ತಮ್ಮ ಸಂಸ್ಕೃತಿ, ಭಾಷೆಗಳ ಬಗ್ಗೆ ತುಂಬ ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ. ರಾಜಕೀಯ ಲಾಭಗಳಿಸಲು ಈ ಪಕ್ಷಗಳು ಈ ವಿವಾದವನ್ನು ಹುಟ್ಟು ಹಾಕಿದವು ಎಂಬುದು ಕೆಲವರ ಗುಮಾನಿ. ರಾಜಕೀಯವಾಗಿ ವಿಜಯಕಾಂತರನ್ನು ಸದೆಬಡಿಯುವ ಹುನ್ನಾರ ಈ ಪ್ರಕರಣದ ಹಿಂದೆ ಇರಬಹುದು ಎನ್ನುವುದು ಒಂದು ವಾದ. ಹೇಳಿಕೆಯಿಂದ ತಮಿಳು ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎನ್ನುವುದು ಅರ್ಥಹೀನ ಎನ್ನುವುದು ಕೆಲವರ ಅಭಿಪ್ರಾಯ. ಭಾರತದ್ದು ಪಿತೃಪ್ರಧಾನ ಸಮಾಜ. ಇಲ್ಲಿ ಗಂಡು ಹೆಣ್ಣಿಗಿಂತ ಮೇಲು ಎಂಬ ಭಾವನೆ ಶತಮಾನಗಳಿಂದಲೂ ಬೇರೂರಿದೆ. ಈ ೨೧ನೇ ಶತಮಾನದಲ್ಲೂ ಅದು ಬದಲಾಗಿಲ್ಲ. ಹಲವು ಸ್ತ್ರೀಯರಿಗೆ ಮರೀಚಿಕೆಯಾಗಿಯೇ ಉಳಿದಿದೆ.

ಮಹಿಳಾ ಸ್ವಾತಂತ್ರ್ಯ ಇಂದಿಗೂ ರಾಷ್ಟ್ರದ ಹಲವೆಡೆಗಳಲ್ಲಿ ಸ್ತ್ರೀ, ಧರ್ಮ, ಮತ, ಕಂದಾಚಾರಗಳ ಉರುಳಿನಲ್ಲಿ ಸಿಲುಕಿ ನಲುಗುತ್ತಿದೆ. ಖುಷ್ಬೂ ವ್ಯಕ್ತಪಡಿಸಿದ ಅಭಿಪ್ರಾಯ ಒಬ್ಬ ನಟನಿಂದ ಬಂದಿದ್ದರೆ, ಅದು ಸುದ್ದಿಯಾಗುತ್ತಿರಲಿಲ್ಲ. ಆದರೆ ಒಬ್ಬ ನಟಿ ಮುಕ್ತವಾಗಿ ತನ್ನ ಅನಿಸಿಕೆಗಳನ್ನು

ತಮಿಳುನಾಡಿನಲ್ಲಿ ರಾಜಕಾರಣಕ್ಕೂ ಚಲನ ಚಿತ್ರ ರಂಗಕ್ಕೂ ಹತ್ತಿರದ ನಂಟು. ಸಿನಿಮಾ ರಂಗಕ್ಕೆ ಸೇರಿದ ಅನೇಕರು ರಾಜಕೀಯ ವಲಯದಲ್ಲಿ ಮಿಂಚಿದ್ದಾರೆ. ಉನ್ನತ ಸ್ಥಾನ ಮಾನಗಳಿಸಿದ್ದಾರೆ. ಪಿ.ಎಂ.ಕೆ ಹಾಗೂ ದಲಿತ ಪ್ಯಾಂಥರ್ಸ್ ಪಕ್ಷಗಳು ಕೂಡ ಜಾತಿವಾದಿ ಪಕ್ಷಗಳೆ ನ್ನಿಸಿವೆ. ಈ ಎರಡು ಪಕ್ಷಗಳಿಗೂ ಸಿನಿಮಾದವರು ರಾಜಕೀಯ ರಂಗದಲ್ಲಿರುವುದರ ಬಗ್ಗೆ ಅಸಮಾಧಾನವಿದೆ. ಸಿನಿಮಾ ನಟರು ತಮ್ಮ ಜನಪ್ರಿಯತೆಯನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿ, ಪ್ರಾತಿನಿಧಿಕ ರಾಜಕಾರಣವನ್ನು ಬುಡಮೇಲು ಮಾಡುತ್ತಾರೆಂದು ಅವುಗಳ, ತಕರಾರು. ವಿದ್ಯಾ ಸಂಸ್ಥೆಗಳಲ್ಲಿರುವ 'ಫಿಲ್ಮಿ ಸಂಸ್ಕೃತಿ'ಯ ವಿರುದ್ಧ ಪಿ.ಎಂ.ಕೆ ಆಂದೋಳನ ಮಾಡುತ್ತಾ ಬಂದಿದೆ.

ಬಹಿರಂಗಗೊಳಿಸಿದ್ದರಿಂದ ಅದು ರಾದ್ಧಾಂತಕ್ಕೆ ಕಾರಣವಾಯಿತು. ಈ ವಿಷಯದಲ್ಲಿ ಮಾಧ್ಯಮದ ಪಾತ್ರವೂ ಇದೆ. ಇಂತಹ ಪ್ರಕರಣಗಳನ್ನು ರಂಜನೀಯವಾಗಿ ಬಿಂಬಿಸುವುದರಲ್ಲಿ ಪತ್ರಿಕೆಗಳು ಹಾಗೂ ಟಿ.ವಿ. ಚಾನೆಲ್‌ಗಳು ಸದಾ ಪೈಪೋಟಿ ನಡೆಸುತ್ತ ಬಂದಿವೆ. ಅವುಗಳ ಪ್ರಕಾರ ಇಂತಹ ಪ್ರಕರಣಗಳು 'ಸುದ್ದಿ ಮೌಲ್ಯ'ದ ಪರಿದಿಯಲ್ಲಿ ಬರುತ್ತವೆ.

ಕೆಲವರು ಖುಷ್ಬೂ ಹೇಳಿಕೆಯನ್ನು ಖಂಡತುಂಡವಾಗಿ ಟೀಕಿಸಿದ್ದಾರೆ. ಆಕೆ ನೀಡಿದ ಹೇಳಿಕೆ ನಮ್ಮ ಸಂಸ್ಕೃತಿಗೆ ತಕ್ಕದ್ದಲ್ಲ. ಮೇಲ್ವರ್ಗದ ಜೀವನ ಶೈಲಿಯನ್ನು ಪ್ರತಿಪಾದಿಸುವ ಇಂತಹ ವ್ಯಕ್ತಿಗಳ ಈ ತರಹದ ಹೇಳಿಕೆ ನಮ್ಮ ಪುರಾತನ, ಅಪೂರ್ವ ಸಂಸ್ಕೃತಿಗೆ ಕಳಂಕ ತರುತ್ತದೆ. ಇದು ಇಂದು ವ್ಯಾಪಕವಾಗಿ ಹಬ್ಬಿರುವ ನಾಚ್, ಪಬ್ ಸಂಸ್ಕೃತಿಯ ಪ್ರತೀಕ. ಭಾರತದ ಸಂಸ್ಕೃತಿ ವಿಶಿಷ್ಟವಾದದ್ದು ಹಾಗೂ ಇಡೀ ವಿಶ್ವಕ್ಕೇ ಮಾದರಿಯಾಗಿದೆ. ಅನೇಕ ಪಾಶ್ಚಾತ್ಯ ವಿದ್ವಾಂಸರು ನಮ್ಮ ಸಂಸ್ಕೃತಿಯನ್ನು ಕೊಂಡಾಡಿ

ತಮಿಳರು ತಮ್ಮ ಸಂಸ್ಕೃತಿ, ಭಾಷೆಗಳ ಬಗ್ಗೆ ತುಂಬ ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ. ರಾಜಕೀಯ ಲಾಭಗಳಿಸಲು ಈ ಪಕ್ಷಗಳು ಈ ವಿವಾದವನ್ನು ಹುಟ್ಟು ಹಾಕಿದವು ಎಂಬುದು ಕೆಲವರ ಗುಮಾನಿ. ರಾಜಕೀಯವಾಗಿ ವಿಜಯಕಾಂತರನ್ನು ಸದೆಬಡಿಯುವ ಹುನ್ನಾರ ಈ ಪ್ರಕರಣದ ಹಿಂದೆ ಇರಬಹುದು ಎನ್ನುವುದು ಒಂದು ವಾದ. ಹೇಳಿಕೆಯಿಂದ ತಮಿಳು ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎನ್ನುವುದು ಅರ್ಥಹೀನ ಎನ್ನುವುದು ಕೆಲವರ ಅಭಿಪ್ರಾಯ. ಭಾರತದ್ದು ಪಿತೃಪ್ರಧಾನ ಸಮಾಜ. ಇಲ್ಲಿ ಗಂಡು ಹೆಣ್ಣಿಗಿಂತ ಮೇಲು ಎಂಬ ಭಾವನೆ ಶತಮಾನಗಳಿಂದಲೂ ಬೇರೂರಿದೆ.

ದ್ದಾರೆ. ಈ ರೀತಿಯ ಹೇಳಿಕೆಗಳು ಯುವಜನತೆಯನ್ನು ದಾರಿತಪ್ಪಿಸುತ್ತವೆ ಎಂಬುದು ಅವರ ಆರೋಪ. ಅಂದರೆ, ನಮ್ಮ ಸಂಸ್ಕೃತಿಯಲ್ಲಿ ಇರುವುದೆಲ್ಲಾ ಉತ್ಕೃಷ್ಟವೇ? ಅದರಲ್ಲಿ ಕುಂದು ಕೊರತೆಗಳೇ ಇಲ್ಲವೇ? ನಮ್ಮ ಸಮಾಜ ದಲ್ಲಿರುವ ಜಾತಿಯತೆ, ದಲಿತರ ಮೇಲಾಗುತ್ತಿರುವ ದೌರ್ಜನ್ಯ, ಸ್ತ್ರೀ ಸ್ವಾತಂತ್ರ್ಯ ಹರಣ, ಅಸ್ಪೃಶ್ಯತೆ ಬಹು ಮುಖಿ ಸಂಸ್ಕೃತಿಯ ವಿರುದ್ಧದ ಕಾರ್ಯಾಚರಣೆಗಳು ಮುಂತಾದವು ನಮ್ಮ ಸಂಸ್ಕೃತಿಯ ಹುಳುಕುಗಳಲ್ಲದೆ ಮತ್ತೇನು? ಎಂಬುದು ಕೆಲವರು ಮುಂದಿಡುವ ವಾದ.

ಆದರೆ ತಮಿಳುನಾಡಿನಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕೆಲವು ಬೆಳವಣಿಗೆಗಳು ಆತಂಕಕಾರಿಯಾಗಿದೆ ಎಂಬುದು ವಾಸ್ತವ. ಆ ರಾಜ್ಯದ ಧರ್ಮಪುರಿ ಹಾಗೂ ಸೇಲಂ ಜಿಲ್ಲೆಗಳಲ್ಲಿ ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಜಾಸ್ತಿ. ಏಡ್ಸ್ ಕಾಯಿಲೆ ಪೀಡಿತರು ಹೆಚ್ಚಾಗಿರುವ ರಾಜ್ಯಗಳಲ್ಲಿ ತಮಿಳುನಾಡು ಸಹ ಒಂದಾಗಿದೆ. ಇಂತಹ ಗಹನ ವಿಚಾರಗಳ ಬಗ್ಗೆ ಗಮನ ಹರಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದರ ಬದಲು ಖುಷ್ಬೂ ಪ್ರಕರಣವನ್ನು ದೊಡ್ಡದು ಮಾಡುವುದು ಸರಿಯಲ್ಲ ಎಂದು ಕೆಲವು ಸಾಮಾಜಿಕ ಕಾರ್ಯಕರ್ತರು ದನಿ ಎತ್ತಿದ್ದಾರೆ. ಒಟ್ಟಿನಲ್ಲಿ, ಈ ಪ್ರಸಂಗ ಹತ್ತು ಹಲವು ಬಗೆಯ ಅಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿರುವುದಂತೂ ನಿಜ.

ನಮ್ಮ ರಾಷ್ಟ್ರದಲ್ಲಿ, ಇತ್ತೀಚಿನ ದಶಕಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂಥ ಅನೇಕ ಘಟನೆಗಳು ಜರುಗಿವೆ. ಅಂಥವುಗಳ ಪ್ರಮುಖ ಪಟ್ಟಿ ಇಲ್ಲಿದೆ. ಆದರೆ ವರ್ಷಗಳು ಉರುಳುತ್ತಿರುವಂತೆ, ಈ ಪಟ್ಟಿ ಉದ್ದವಾಗುತ್ತಾ ಹೋಗುತ್ತಿರುವುದು ಆತಂಕಕಾರಿ ವಿಷಯ.

೧. ರಾಷ್ಟ್ರದ ಕೆಲವು ಸ್ಥಳಗಳಲ್ಲಿ ಖ್ಯಾತ ಚಿತ್ರಕಲಾವಿದ ಎಂ.ಎಫ್. ಹಸೇನ್‌ರ ಕಲಾ ಪ್ರದರ್ಶನಗಳ ಮೇಲಿನ ದಾಳಿ.

೨. ಸುಮಾರು ಐದು ವರ್ಷಗಳ ಹಿಂದೆ ವಾರಾಣಾಸಿಯಲ್ಲಿ ಚಲನಚಿತ್ರ ನಿರ್ದೇಶಕ ದೀಪಾ ಮೆಹ್ತಾರ 'ವಾಟರ್' ಚಲನಚಿತ್ರ ಶೂಟಿಂಗ್‌ಗೆ ಅಡ್ಡಿ. ಈ ಚಲನಚಿತ್ರದಲ್ಲಿ ವಾರಾಣಸಿಯಲ್ಲಿ ಬದುಕುತ್ತಿರುವ ವಿಧವೆಯರನ್ನು ವಿಕೃತವಾಗಿ ಬಿಂಬಿಸಲಾಗಿದೆ ಎಂದು ಆರೋಪಿಸಿ ಕೇಸರಿ ಪಡೆ ಶೂಟಿಂಗ್‌ಗೆ ಅಡ್ಡಿಪಡಿಸಿತು. ಚಿತ್ರೀಕರಣ ನಿಲ್ಲಿಸಿ ನಂತರ ಶ್ರೀಲಂಕಾದಲ್ಲಿ ಶೂಟಿಂಗ್ ಪೂರೈಸಲಾಯಿತು.

2. ವ್ಯಾಲೆಂಟೈನ್ (ಪ್ರೇಮಿಗಳ ದಿನ) ದಿನಾಚರಣೆ ನಮ್ಮ ಸಂಸ್ಕೃತಿಗೆ ಒಗ್ಗದ ವಿಚಾರ ಎಂದು ಶಿವಸೇನೆ ವ್ಯಾಪಕ ಪ್ರತಿಭಟನಾ ಮತ್ತು ದಾಂಧಲೆ ನಡೆಸಿಕೊಂಡು ಬರುತ್ತಿದೆ.

೪) ಮರಾಠ ವೀರ ಛತ್ರಪತಿ ಶಿವಾಜಿಯನ್ನು ಅವಹೇಳನ ಮಾಡುವುದಕ್ಕೆ ಪುಣೆಯ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಸಂಸ್ಥೆ ಆಕರ ಗ್ರಂಥಗಳನ್ನು ಒದಗಿಸಿತು ಎಂದು ನೆಪ ಹೇಳಿ, ಸಾಂಭಾಜಿ ಬ್ರಿಗೇಡ್ ಎಂಬ ಪಡೆ ಆ ಸಂಸ್ಥೆಯಲ್ಲಿದ್ದ ಹಲವು ಅನನ್ಯ ಗ್ರಂಥಗಳನ್ನು ನಾಶಪಡಿಸಿತು.

೫) ಪ್ರತಿಭಟನಾಕಾರರ ದಾಂಧಲೆಯಿಂದ 'ಫೈರ್', 'ಹೇ ರಾಮ್' ಹಾಗೂ 'ಗರ್ಲ್ ಫ್ರೆಂಡ್' ಚಲನಚಿತ್ರಗಳ ಪ್ರದರ್ಶನವನ್ನು ಕೆಲವು ಪಟ್ಟಣಗಳಲ್ಲಿ ರದ್ದುಪಡಿಸ ಲಾಯಿತು.

೬) ಭಾರತೀಯ ಜನತಾ ಪಾರ್ಟಿ ಅಧ್ಯಕ್ಷರಾಗಿದ್ದ ಎಲ್.ಕೆ. ಅಡ್ವಾಣಿ ಪಾಕಿಸ್ತಾನ ಪ್ರವಾಸ ವೇಳೆ ಜಿನ್ನಾರನ್ನು ಧರ್ಮನಿರಪೇಕ್ಷತವಾದಿಯೆಂದು ಕರೆದರು. ಅದರಿಂದ ಕೇಸರಿ ಪಡೆಯವರಿಗೆ ತೀವ್ರ ಅಸಮಾಧಾನವಾಯಿತು. ಪ್ರವೀಣ್

(೧೩ ನೇ ಪುಟಕ್ಕೆ)

ಸಿಜಿಕೆ ಎಂಬ 'ಮಾಯ್ಕಾರ'

ನೆನಪು

ಸಿಜಿಕೆಯವರ ಆಯ್ಕೆ, ಹಟ, ನಿಲುವುಗಳು ಕೇವಲ ಆ ಕ್ಷಣದ, ಪೂರ್ವಗ್ರಹದ, ವ್ಯಕ್ತಿಗತ ಭಾವಗಳಿಂದ ಮಾತ್ರ ಹುಟ್ಟಿದಂತಿರಲಿಲ್ಲ. ಅದಕ್ಕೆ ಸಾಂಸ್ಕೃತಿಕ, ತಾತ್ವಿಕ ಆಯಾಮಗಳಿರುತ್ತಿದ್ದವು. ಉದಾಹರಣೆಗೆ, ಅವರು ಅತಿ ಬೌದ್ಧಿಕತೆಯ, ನಾಜೂಕಿನ ಬ್ರಾಹ್ಮಣೀಯತೆಯ ಕಾರಣಕ್ಕಾಗಿ 'ನೀನಾಸಂ'ಥರದ ಸಂಸ್ಥೆಗಳನ್ನು ಇಷ್ಟಪಡುತ್ತಿರಲಿಲ್ಲ. ವಿದೇಶೀ ಮಾರುಕಟ್ಟೆಗೆ ಸರಕು ತಯಾರು ಮಾಡುತ್ತಾರೆಂಬ ಕಾರಣದಿಂದಾಗಿ ಕಾರ್ನಾಡ್ ಥರದ ನಾಟಕಕಾರರನ್ನು ಇಷ್ಟಪಡುತ್ತಿರಲಿಲ್ಲ. ಇದಕ್ಕೆ ಬದಲಾಗಿ, ಸಣ್ಣ ಪುಟ್ಟ ಲೇಖಕರಿಂದ ನಾಟಕ ಬರೆಸುವುದು, ಸಣ್ಣ ಸಣ್ಣ ತಂಡಗಳಿಗೆ ನೆರವಾಗಿ ನಿಲ್ಲುವುದು ಅವರಿಗೆ ಪ್ರಿಯವಾದ ಕೆಲಸವಾಗಿತ್ತು.

○ನಟರಾಜ್ ಹುಳಿಯಾರ್

ಕನ್ನಡ ನಾಡಿನ ಎಲ್ಲ ಜನಪರ ಚಳುವಳಿಗಳ ಹಾಗೂ ರಂಗಯೋಧರ ಕಾಯಂ ಸಖನಂತಿದ್ದ ಸಿಜಿಕೆ ತಮ್ಮ ಕೊನೆಯ ಅಂಕ ಮುಗಿಸಿದ್ದಾರೆ. ಮೂರು ತಿಂಗಳ ಕೆಳಗಷ್ಟೇ ಹೃದಯಕ್ಕೆ ಚಿಕಿತ್ಸೆ ಮಾಡಿಸಿಕೊಂಡು ಬಂದು, ಅದಾದ ಒಂದೇ ವಾರಕ್ಕೆ ಮತ್ತೆ ರವೀಂದ್ರ ಕಲಾಕ್ಷೇತ್ರ ಗಾಂಧಿಭವನಗಳಲ್ಲಿ ಅಡ್ಡಾಡುತ್ತಿದ್ದ ಸಿಜಿಕೆ ಹಲವರಲ್ಲಿ ಹಲ ಬಗೆಯ ಖಾಲಿತನವನ್ನು ಬಿಟ್ಟು ಹೋಗಿದ್ದಾರೆ, ತಮ್ಮನ್ನು 'ಚಾಟಿಯಿಲ್ಲದ ಬುಗುರಿ' ಎಂದು ಬಣ್ಣಿಸಿಕೊಂಡಿದ್ದ ಸಿಜಿಕೆ ಎಡೆಬಿಡದೆ ತಿರುತಿರುಗಿ ಮರೆಯಾಗಿದ್ದಾರೆ.

ಕಷ್ಟದ ಗಳಿಗೆಯಲ್ಲಿ ಸುಲಭವಾಗಿ ಕುಸಿಯದ, ಮೊಂಡು ಧೈರ್ಯದ, ಯಾವುದನ್ನೇ ಆಗಲಿ ಮಾಡಿಯೇ ಬಿಡಬಲ್ಲೆ ಎಂಬ ಆತ್ಮವಿಶ್ವಾಸದ ಸಿಜಿಕೆಯಂಥ ಇನ್ನೊಬ್ಬರನ್ನು ಕನ್ನಡ ರಂಗಭೂಮಿಯಲ್ಲಿ ಕಾಣುವುದು ಕಷ್ಟ, ತಲೆಯಲ್ಲಿದ್ದುದನ್ನು ಕೃತಿಗಿಳಿಸುವ ಅವರ ಶೈಲಿ ಅತ್ಯಂತ ದಕ್ಷವಾದದ್ದಾಗಿತ್ತು. ನಾಟಕ ಬರೆಸುವ, ಬರೆಸಿ ಪ್ರಯೋಗಿಸುವ, ಹಣ ಕೂಡಿಸುವ, ಜನ ಸೇರಿಸುವ – ಎಲ್ಲ ಛಾತಿಗಳೂ ಒಬ್ಬ ನಿರ್ದೇಶಕನಲ್ಲೇ ಒಟ್ಟಾಗಿ ಸೇರುವುದು ಕಷ್ಟ. ಈ ಕೆಲಸಗಳನ್ನು ಮಾಡಮಾಡುತ್ತಲೇ ಅಪಾರ ನಿಷ್ಠಾವಂತ ಅನುಯಾಯಿಗಳನ್ನು ಗೆದ್ದು ಬಿಡುತ್ತಿದ್ದ ಸಿಜಿಕೆ ಸ್ನೇಹ ಮತ್ತು ನಿಷ್ಠುರ ನಿಲುವುಗಳ ಎರಡೂ ಜಾಡಿನಲ್ಲಿ ಸಾಗಬಲ್ಲವರಾಗಿದ್ದರು.



ಕತ್ತಲೆಯೊಳಗಿನ ಬೆಳದಿಂಗಳು ಸಿಜಿಕೆ

ಸಿಜಿಕೆಯವರ ಆಯ್ಕೆ, ಹಟ, ನಿಲುವುಗಳು ಕೇವಲ ಆ ಕ್ಷಣದ, ಪೂರ್ವಗ್ರಹದ, ವ್ಯಕ್ತಿಗತ ಭಾವಗಳಿಂದ ಮಾತ್ರ ಹುಟ್ಟಿದಂತಿರಲಿಲ್ಲ. ಅದಕ್ಕೆ ಸಾಂಸ್ಕೃತಿಕ, ತಾತ್ವಿಕ ಆಯಾಮಗಳಿರುತ್ತಿದ್ದವು. ಉದಾಹರಣೆಗೆ, ಅವರು ಅತಿ ಬೌದ್ಧಿಕತೆಯ, ನಾಜೂಕಿನ ಬ್ರಾಹ್ಮಣೀಯತೆಯ ಕಾರಣಕ್ಕಾಗಿ 'ನೀನಾಸಂ'ಥರದ ಸಂಸ್ಥೆಗಳನ್ನು ಇಷ್ಟಪಡುತ್ತಿರಲಿಲ್ಲ. ವಿದೇಶೀ ಮಾರುಕಟ್ಟೆಗೆ ಸರಕು ತಯಾರು ಮಾಡುತ್ತಾರೆಂಬ ಕಾರಣದಿಂದಾಗಿ ಕಾರ್ನಾಡ್ ಥರದ ನಾಟಕಕಾರರನ್ನು ಇಷ್ಟಪಡುತ್ತಿರಲಿಲ್ಲ. ಇದಕ್ಕೆ ಬದಲಾಗಿ, ಸಣ್ಣ ಪುಟ್ಟ ಲೇಖಕರಿಂದ ನಾಟಕ ಬರೆಸುವುದು, ಸಣ್ಣ ಸಣ್ಣ ತಂಡಗಳಿಗೆ ನೆರವಾಗಿ ನಿಲ್ಲುವುದು ಅವರಿಗೆ ಪ್ರಿಯವಾದ ಕೆಲಸವಾಗಿತ್ತು. ಶೂದ್ರ, ದಲಿತ ಪ್ರತಿಭೆಗಳನ್ನು ಅವರು ಹುಡುಕಿ ಹುಡುಕಿ ಪೊರೆಯುತ್ತಿದ್ದುದು ಕೂಡ ಈ ಹಿನ್ನೆಲೆಯಲ್ಲಿಯೇ. ಸಿಜಿಕೆಯವರ ಸರಳ ಮಾರ್ಕ್ಸ್ ವಾದಕ್ಕೆ ಜಾತಿಪದ್ಧತಿಯ ಸೂಕ್ಷ್ಮ ಗ್ರಹಿಕೆಯೂ ಸೇರಿಕೊಂಡದ್ದರಿಂದ ಅವರು ಸಮಾಜವನ್ನು ಹಾಗೂ ಬಹುಜನ ಸಂಸ್ಕೃತಿಯನ್ನು ತಮ್ಮ ನಾಟಕಗಳಲ್ಲಿ ಮಂಡಿಸಿರುವ ಕ್ರಮ ವಿಶಿಷ್ಟವಾಗಿರುತ್ತಿತ್ತು.

ಸಿಜಿಕೆಯವರ ಶೂದ್ರವಾದಿ ನಿಲುವುಗಳು ಎಲ್ಲರಿಗೂ ಚಿರಪರಿಚಿತವಾಗಿದ್ದರೂ, ಅವರ ಮಿತ್ರ ಬಳಗದಲ್ಲಿ ಬ್ರಾಹ್ಮಣರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂಬುದು ಅವರ ವ್ಯಕ್ತಿತ್ವದಲ್ಲಿದ್ದ ಜಾತ್ಯತೀತ ಗುಣವನ್ನೂ ಮಾರ್ದವತೆಯನ್ನೂ ತೋರುತ್ತದೆ. ಸಿಜಿಕೆಯವರ ಸಾವಿನ ಸುದ್ದಿ ಕೇಳಿದ ಮೇಲೆ, ಇದ್ದಕ್ಕಿದ್ದ ಹಾಗೆ 'ಸಿಜಿಕೆ ತಾಯಿಯಂತಿದ್ದ ಮನುಷ್ಯ' ಎನ್ನಿಸತೊಡಗಿತು. ನಾನೇ ಖುದ್ದು ನೋಡಿದ ಹಾಗೆ ಅವರು ಕಷ್ಟದಲ್ಲಿದ್ದ ನೂರಾರು ಜನರ ಕೈಹಿಡಿದಿದ್ದಾರೆ. ಬಡ ಹುಡುಗಿಯೊಬ್ಬಳ ತಾಯಿ ಕ್ಯಾನ್ಸರಿನಿಂದ ಬಳಲುತ್ತಿದ್ದ ವಿಷಯ ಕೇಳಿದ ತಕ್ಷಣ, ಅವರು ಆ ಹುಡುಗಿಗೆ ಸರ್ಕಾರಿ ಕೆಲಸ ಕೊಡಿಸಿದ ದಿನ ನನಗಿನ್ನೂ ನೆನಪಿದೆ. ಹಾಗೆಯೇ ವಿಚಿತ್ರ ಕೇಸೊಂದರಲ್ಲಿ ಸಿಕ್ಕಿಕೊಂಡಿದ್ದ ಮಿತ್ರನೊಬ್ಬನ ಜೀವನದ ಸಿಕ್ಕನ್ನು ಸಿಜಿಕೆ ಸಂಸ ರಂಗಮಂದಿರದ ಕಟ್ಟೆಯ ಮೇಲೆ ಕೂತು ಬಿಡಿಸಿದ್ದು ಹಾಗೂ ಅಲ್ಲೇ ಮಿತ್ರರಿಂದ ಹಣ ಎತ್ತಿ ಅವನಿಗೆ ಬಿಡುಗಡೆಯ ದಾರಿ ತೋರಿದ್ದು ಕೂಡ ಪವಾಡದಂತಿದೆ. ಇಂಥ ಹತ್ತಾರು ಕತೆಗಳನ್ನು ಅವರ ಮಿತ್ರರು ಕೂಡ ಹೇಳಬಲ್ಲರು. ಈ ಕತೆಗಳಲ್ಲೆಲ್ಲ ಸಿಜಿಕೆ ಇತರರ ಕಷ್ಟಕ್ಕೆ ಮಿಡಿಯುತ್ತಿದ್ದ ರೀತಿ ಹಾಗೂ ಎಲ್ಲ ಲೆಕ್ಕಾಚಾರಗಳನ್ನೂ ಮೀರಿದ ಅವರ ವ್ಯಕ್ತಿತ್ವ ನಮ್ಮ ಕಣ್ಣೆದುರು ಮೂಡತೊಡಗುತ್ತದೆ.

ಈಚೆಗೆ ಸಿಜಿಕೆಯವರ ಶಿಷ್ಯರು ಮತ್ತೆ 'ಕುಸುಮಬಾಲೆ' ನಾಟಕ ಆಡಿಸಿದ್ದರು. ಅದನ್ನು ನೋಡನೋಡುತ್ತಾ ಸಿಜಿಕೆ ಆಡಿಸಿದ 'ಒಡಲಾಳ' ನೆನಪಾಯಿತು. ಸಿಜಿಕೆ ರೂಪಿಸಿದ 'ಒಡಲಾಳ' ಕನ್ನಡ ರಂಗಭೂಮಿಯ ಅತ್ಯಂತ ಶ್ರೇಷ್ಠ ಪ್ರಯೋಗವೆಂಬ ನನ್ನ ಹಳೆಯ ಅನಿಸಿಕೆ ಕದಲುವಂಥ ಮತ್ತೊಂದು ಪ್ರಯೋಗವನ್ನು ನಾನು ಈವರೆಗೆ ಕನ್ನಡದಲ್ಲಿ ನೋಡಿಲ್ಲ. ಸಿಜಿಕೆ ತಾವು ಕಂಡ ಭಾರತದ ಹಳ್ಳಿಗಳು, ದಲಿತ ಜಗತ್ತು ಹಾಗೂ ರಂಗಕೌಶಲ ಎಲ್ಲವನ್ನೂ ಅಲ್ಲಿ ಅದ್ಭುತವಾಗಿ ಬಳಸಿದ್ದರು. ಸ್ವತಃ ಸಿಜಿಕೆಯವರ ಉಳಿದ ನಾಟಕಗಳಲ್ಲಿ ಎಲ್ಲವೂ ದಕ್ಷವಾಗಿದ್ದಾಗ ಕೂಡ 'ಒಡಲಾಳ'ದ ಸ್ಪರ್ಶ ಮತ್ತೆ ಕಾಣಲಿಲ್ಲ. ಸಿಜಿಕೆ ಈಚೆಗೆ ಶಿಶುನಾಳ ಷರೀಫರ ಮೇಲೆ ನಾಟಕ ಮಾಡಿಸಿದಾಗಲೂ ಹಾಗೇ ಅನ್ನಿಸಿತ್ತು. ಅದಾದ ಮೇಲೆ, ಸುಮ್ಮನೆ ತಿರುಗುವ ನಾಗಲಿಂಗಯೋಗಿಯ ಬಗ್ಗೆ ವಿವರಗಳಿಗಾಗಿ ಅವರು ಹುಡುಕಾಡುತ್ತಿದ್ದರು. ಬೈಬಲ್ಲಿಗೆ ಮೊಳೆಹೊಡೆದ ನಾಗಲಿಂಗಯೋಗಿಯ ಬಗ್ಗೆ ವಿಸ್ಮಯಪಡುತ್ತಿದ್ದ ಸಿಜಿಕೆ ಅವನ ಕತೆಯ ಮೂಲಕ ಏನನ್ನು ಹೇಳಲು ಹೊರಟಿದ್ದರು ಎಂಬುದು ಕೊನೆಗೂ ಅವರಲ್ಲೇ ಉಳಿದುಬಿಟ್ಟಿತು. ಹಾಗೆಯೇ ಮಂಡ್ಯದ ಅನಾಥ ಮುದುಕರ ಸ್ಥಿತಿಯನ್ನು 'ಕಿಂಗ ಲಿಯರ್' ಕತೆಯ ಮೂಲಕ ಹೇಳಬೇಕೆಂದುಕೊಂಡಿದ್ದ ಹೊಸ ಐಡಿಯಾ ಕೂಡ ಅವರೊಡನೇ ಮರೆಯಾಯಿತು.

ನಮ್ಮಂಥ ಅನೇಕರಿಗೆ ಈಚೆಗೆ ದೊಡ್ಡ ರೀತಿಯಲ್ಲಿ ಸಂಘಟನ ಮಾಡುವ ವಿಚಾರ ಸುಳಿದಾಗಲೆಲ್ಲ ಸಿಜಿಕೆ ನಮ್ಮೊಡನೆ ಇದ್ದಾರೆಂಬುದೇ ಒಂದು ದೊಡ್ಡ ಧೈರ್ಯವಾಗಿತ್ತು. ಕಳೆದ ಮೂವತ್ತು ವರ್ಷಗಳಲ್ಲಿ ಸಿಜಿಕೆ ಬೀದಿ ನಾಟಕ, ಧರಣಿ ಸತ್ಯಾಗ್ರಹಗಳಿಂದ ಹಿಡಿದು ಸಾವಿರಾರು ಜನರಿಗೆ ಸಾವಿರಾರು ರೀತಿಯ ಕಾರ್ಯಕ್ರಮಗಳನ್ನು ರೂಪಿಸಿ ಕೊಟ್ಟಿದ್ದಾರೆ. ಈ ಕಾರ್ಯಕ್ರಮಗಳನ್ನು ರೂಪಿಸುವಾಗ

ಯಾರೊಡನೆ ಬೆರೆಯಬೇಕು, ಯಾರೊಡನೆ ಬೆರೆಯಬಾರದು ಎಂಬ ಬಗ್ಗೆ ಸಿಜಿಕೆ ಅಷ್ಟು ತಲೆಕೆಡಿಸಿಕೊಂಡವರಲ್ಲ. ಎಂಥ ಕಲ್ಮಶದ ನಡುವೆಯೂ ಆತ್ಮವನ್ನು ಮಾತ್ರ ಶುದ್ಧವಾಗಿಟ್ಟುಕೊಳ್ಳಬೇಕೆಂಬ ಹಟವೂ ಅವರಿಗಿರಲಿಲ್ಲ. ಗುರಿ ತಲುಪುವುದಷ್ಟೇ ಮುಖ್ಯವೆಂದುಕೊಂಡಿದ್ದ ಅವರು ಆ ಗುರಿ ಸಾಧಿಸುವ ದಾರಿಯ ನೀತಿ, ಅನೀತಿಗಳ ಪ್ರಶ್ನೆಯನ್ನು ಸುಮ್ಮನೆ ತೇಲಿಸಿ ಮುಂದೆ ಸಾಗಬಲ್ಲವರಾಗಿದ್ದರು. ವೃತ್ತಿ ರಾಜಕಾರಣಿಗಳು, ಸಂತರು, ನಟರು, ಕಾರ್ಮಿಕರು, ಬುದ್ಧಿಜೀವಿಗಳವರೆಗೂ ಅವರ ಮಿತ್ರರಿದ್ದರು. ಆದರೆ ತಮ್ಮೆಲ್ಲ ಸಂಪರ್ಕಗಳನ್ನು ಬಳಸಿ ಅವರು ಹಲವರ ಬದುಕಿಗೆ ಅನೇಕ ಬಗೆಯ ಆಸರೆ ಕಾಣಿಸಿದ್ದಾರೆ ಎಂಬುವುದು ನಮಗೆ ಅತ್ಯಂತ ಮುಖ್ಯವಾದುದು. ಹುಡುಗರಲ್ಲಿ ಕರ್ನಾಟಕದ ಸುಮಾರು ನಾಲ್ಕು ತಲೆಮಾರುಗಳ ಎಡಪಂಥೀಯ, ದಲಿತ, ಶೂದ್ರ ಪರ ಕಾಳಜಿಗಳನ್ನು ನಿರಂತರವಾಗಿ ಬಿತ್ತಿ ಬೆಳೆಸಿದ ಸಿಜಿಕೆ ಟಿ. ವಿ. ಗೆ ಜಗಿಯಲೊಲ್ಲದೆ ರಂಗಭೂಮಿಯನ್ನೇ ಸಾಮೂಹಿಕ ಸೃಷ್ಟಿಯ ನಿಜವಾದ ತಾಣವೆಂದು ಕೊನೆತನಕ ಅಪ್ಪಿಕೊಂಡವರು ಎಂಬುದು ಕೂಡ ಅಷ್ಟೇ ಮಹತ್ವದು.

ಅವರು ಪಟ್ಟು ಹಿಡಿದು ಬರೆಸಿದ ನಾಟಕಕಾರರಲ್ಲಿ ಹಿರಿಯರಾದ ಶಿವಪ್ರಕಾಶ್‌ರಿಂದ ಹಿಡಿದು, ಎಳೆಯರಾದ ಸುಬ್ಬು ಹೊಲೆಯಾರ್‌ವರೆಗಿನ ಲೇಖಕರಿದ್ದಾರೆ. ಸುಲಭವಾಗಿ ಬರೆಯಲು ಒಪ್ಪದ ಕೀರಂ ನಾಗರಾಜರ ಕೈಯಲ್ಲೂ ಅವರು ಎರಡು ನಾಟಕಗಳನ್ನು ಬರೆಸಿದ್ದಾರೆ. ಹಳ್ಳಿಯ ಹುಡುಗರ ಸಹಜ ಕೌಶಲವನ್ನು ಹೊರಗೆಳೆದು, ಸಂಕೋಚ ತೊರೆದು ನಟಿಸುವಂತೆ ಮಾಡಿದ್ದಾರೆ. ಸಿಜಿಕೆಯವರ ನಿರ್ದೇಶನದಲ್ಲಿ ಉಮಾಶ್ರೀ ತಮ್ಮ ಜೀವಮಾನದ ಅಭಿನಯವನ್ನು ಸಾಕವ್ವನ ಪಾತ್ರದಲ್ಲಿ ನೀಡಿದ್ದಾರೆ. ಸಿಜಿಕೆ ಹೀಗೆ ಕಾಲಕಾಲಕ್ಕೆ ತಮ್ಮ ಶಕ್ತಿ, ಸಮಯ, ಆರೋಗ್ಯ, ಹಣ ಎಲ್ಲವನ್ನೂ ನೀರಿನಂತೆ ಇನ್ನೊಬ್ಬರಿಗಾಗಿ ಧಾರೆಯೆರೆಯುವ ವ್ಯಕ್ತಿಯಾದದ್ದರಿಂದಲೇ ಅವರ ಬಗ್ಗೆ ಸಾವಿರಾರು ಜನರಲ್ಲಿ ನಿಷ್ಠೆ ಸಹಜವಾಗಿ ಉಕ್ಕಿಬರುತ್ತಿತ್ತು. ಅವರು ಹೇಳಿದ್ದನ್ನು ಮಾಡಬಲ್ಲ ಪಡೆ ಅವರ ಜೊತೆ ಇರುತ್ತಿತ್ತು. ಸಂಸ ರಂಗಮಂದಿರದ ಕಟ್ಟೆಯ ಮೇಲೆ ಅವರು ಕೂತರೆ ಯಾರೋ ಬರುತ್ತಿದ್ದರು, ಯಾರೋ ಹೋಗುತ್ತಿದ್ದರು. ಮಾತೃದೇವತಾ ಬೈಗುಳಗಳು ಹಾಗೂ ಲೇಟೆಸ್ಟ್ ಜೋಕುಗಳು ವಿನಿಮಯವಾಗುತ್ತಿರುತ್ತಿದ್ದವು. ರಂಗಭೂಮಿ ಎನ್ನುವುದು ಒಂದು ಅದ್ಭುತ ಸಂಬಂಧ ಎನ್ನುವುದು ಸಿಜಿಕೆಯವರನ್ನು ನೋಡಿದಾಗ ಮಾತ್ರ ನನಗೆ ಸರಿಯಾಗಿ ಮನವರಿಕೆಯಾಗುತ್ತಿತ್ತು. ಈ ಸಂಬಂಧಗಳ ಮೂಲಕವೇ ಸಿಜಿಕೆ ಸಾಮಾನ್ಯ ಪ್ರತಿಭಾವಂತರು ಇನ್ನೂರು ವರ್ಷಗಳಲ್ಲಿ ಮಾಡುಬಹುದಾದಷ್ಟು ಪ್ರಯೋಗಗಳನ್ನು, ಕಾರ್ಯಕ್ರಮಗಳನ್ನು ಇಪ್ಪತ್ತು, ಮೂವತ್ತು ವರ್ಷಗಳಲ್ಲಿ ಮಾಡಿ ಸವೆದರು;

ಸಿಜಿಕೆ ಕಾಲಕಾಲಕ್ಕೆ ತಮ್ಮ ಶಕ್ತಿ, ಸಮಯ, ಆರೋಗ್ಯ, ಹಣ ಎಲ್ಲವನ್ನೂ ನೀರಿನಂತೆ ಇನ್ನೊಬ್ಬರಿಗಾಗಿ ಧಾರೆಯೆರೆಯುವ ವ್ಯಕ್ತಿಯಾದದ್ದರಿಂದಲೇ ಅವರ ಬಗ್ಗೆ ಸಾವಿರಾರು ಜನರಲ್ಲಿ ನಿಷ್ಠೆ ಸಹಜವಾಗಿ ಉಕ್ಕಿಬರುತ್ತಿತ್ತು. ಅವರು ಹೇಳಿದ್ದನ್ನು ಮಾಡಬಲ್ಲ ಪಡೆ ಅವರ ಜೊತೆ ಇರುತ್ತಿತ್ತು. ಸಂಸ ರಂಗಮಂದಿರದ ಕಟ್ಟೆಯ ಮೇಲೆ ಅವರು ಕೂತರೆ ಯಾರೋ ಬರುತ್ತಿದ್ದರು, ಯಾರೋ ಹೋಗುತ್ತಿದ್ದರು. ಮಾತೃದೇವತಾ ಬೈಗುಳಗಳು ಹಾಗೂ ಲೇಟೆಸ್ಟ್ ಜೋಕುಗಳು ವಿನಿಮಯವಾಗುತ್ತಿರುತ್ತಿದ್ದವು. ರಂಗಭೂಮಿ ಎನ್ನುವುದು ಒಂದು ಅದ್ಭುತ ಸಂಬಂಧ ಎನ್ನುವುದು ಸಿಜಿಕೆಯವರನ್ನು ನೋಡಿದಾಗ ಮಾತ್ರ ನನಗೆ ಸರಿಯಾಗಿ ಮನವರಿಕೆಯಾಗುತ್ತಿತ್ತು.

ಅದರ ಜೊತೆಗೇ ಸಾರ್ಥಕತೆಯ ಅನುಭವವನ್ನೂ ಪಡೆದರು.

ಸಿಜಿಕೆಯವರ ಚಿತ್ರಗಳು ಕಣ್ಣೆದುರು ಬಂದಂತೆಲ್ಲ ದುಗುಡ ಹೆಚ್ಚಾಗಿ, ಅವರು ರಾಜರಾಜೇಶ್ವರಿ ನಗರದಲ್ಲಿ ಈಚೆಗೆ ಕಟ್ಟಿಸುತ್ತಿದ್ದ ಮನೆಯೆದುರು ಸುಳಿದಾಡಿದೆ. ಬಿದಿರು ಬೊಂಬುಗಳು ಹಾಗೇ ನಿಂತಿದ್ದು ಅರ್ಧ ಮುಗಿದ ಆ ಮನೆಯ ಕಟ್ಟಡ ನಾಳಿನ ಸಂಜೆಯ ಪ್ರಯೋಗಕ್ಕೆ ಸಿಜಿಕೆ ರೂಪಿಸುತ್ತಿದ್ದ ಸೆಟ್ಟಿನಂತೆ ಕಾಣುತ್ತಿತ್ತು. ಕಳೆದವಾರ ಎಂದಿನ ಹಾಗೆ ಫೋನಿನಲ್ಲಿ 'ಯಾವಾಗ ತಮ್ಮ ದರ್ಶನಭಾಗ್ಯ?' ಎಂದು ಸಿಜಿಕೆ ಕೇಳಿದ್ದರು. ಅದೇ ಧಾಟಿಯಲ್ಲೇ ನಾನು 'ಮುಂದಿನ ಜನ್ಮದಲ್ಲಿ' ಎಂದಿದ್ದರ ಪ್ರತಿಧ್ವನಿ ಇವತ್ತು ಭಯಂಕರವಾಗಿ ನನಗೆ ಅಪ್ಪಳಿಸುತ್ತಿದೆ. ಅದರ ಹಿಂದೆಯೇ ಈ ಮಾತಿಗೆ ಪ್ರತಿಯಾಗಿ ಸಿಜಿಕೆ ಹೇಳಿದ್ದು ಕೂಡ ಕೇಳಿಸುತ್ತಿದೆ: 'ಅಯ್ಯೋ ರೀ, ನಾವ್ ಯಾವಾಗ ಸಾಯ್ತೀವೋ, ಆ ಗಾಂಧೀ ಮೆಟೀರಿಯಲ್ ಮೊದಲು ಜೋಡಿಸಿ ಕೊಡ್ರೀ.'

ಮಾಡಬೇಕಾದ ಕೆಲಸಗಳ ಬಗ್ಗೆ ಸಾಮಾನ್ಯವಾಗಿ ಸ್ಪಷ್ಟ ನಕಾಶೆಯಿಟ್ಟುಕೊಂಡು ಹೊರಡುತ್ತಿದ್ದ ಸಿಜಿಕೆಯವರ ಅನೇಕ ಕೆಲಸಗಳು ಅರ್ಧಕ್ಕೆ ನಿಂತಿವೆ. ಅವರ ತಲೆಯಲ್ಲಿದ್ದ ನಾಟಕಗಳ ದೃಶ್ಯಗಳು, ಪ್ರಕಟಿಸಬೇಕೆಂದಿದ್ದ 'ನಮ್ಮ ನಡುವಿನ ಗಾಂಧಿ' ಮಾಲಿಕೆಯ ಪುಸ್ತಕಗಳು, ಅವರು ಮಾಡುತ್ತಿದ್ದ ಎರಡು ಡಾಕ್ಟರೇಟುಗಳು, ಸಾಣೇಹಳ್ಳಿಯಲ್ಲಿ ಅವರು ರೂಪಿಸಬೇಕೆಂದುಕೊಂಡಿದ್ದ ರಂಗವಾತಾವರಣ.... ಹೀಗೆ ಎಲ್ಲವೂ ನಡುಹಾದಿಯಲ್ಲಿ ನಿಂತಿವೆ. ನಿಜವಾದ ಜಂಗಮರಾಗಿದ್ದ ಸಿಜಿಕೆ ಕಳೆದ ಏಳೆಂಟು ವರ್ಷಗಳಲ್ಲಿ ತೀವ್ರವಾಗಿ ಹಚ್ಚಿಕೊಂಡಿದ್ದ ಸಾಣೇಹಳ್ಳಿಯ ಮಠದ ಬಳಿ ಅವರಿಗೆ ಪ್ರಿಯವಾಗಿದ್ದ ರಂಗಮಂಟಪದ ಬಳಿಯೇ ಮಣ್ಣಿನ ಭಾಗವಾಗುತ್ತಿದ್ದಾರೆ. ಆ ಮಣ್ಣು ಸಿಜಿಕೆಯ ನಿರಂತರ ಚಡಪಡಿಕೆಯಿಂದ ಸಮೃದ್ಧವಾಗಲಿ. ಕನ್ನಡ ರಂಗಭೂಮಿಯಲ್ಲಿ ಸಿಜಿಕೆ ಮಾರ್ಗ ಸದಾ ಜೀವಂತವಾಗಿರಲಿ. □

ಸಾವಿನ ಅಂಚಿನಲ್ಲಿ ಕ್ಷಣಗಣನೆ

ಆಸ್ಪತ್ರೆಯಲ್ಲಿ ನನ್ನ ಕಣ್ಣು ಮುಂದೆಯೇ ಇದ್ದ ಟಿವಿಯಲ್ಲಿ ನನ್ನ ಹೃದಯವನ್ನು ನಾನೇ ನೋಡತೊಡಗಿದೆ. ಅಲ್ಲಿ ಕಂಡಿದ್ದು ಎಲ್ಲವೂ ನನ್ನ ಹಳೆಯ ಬದುಕಿನ್ನ ಘಟನೆಗಳೇ. ಕ್ಷಣ ಯೋಚಿಸಿದೆ ಏನಾಗಬಹುದು ಎಂದು . ಸಾವನ್ನು ಸಮೀಪಿಸುತ್ತಿದ್ದೇನೆ ಎಂದುಕೊಳ್ಳುವಷ್ಟರಲ್ಲಿ ಪ್ರೊ. ಮಂಜುನಾಥ್ ತಮ್ಮ ಕೆಲಸ ಮುಗಿಸಿ 'ಎಲ್ಲವೂ ಸರಿಯಾಗಿದೆ ರಿಲ್ಯಾಕ್ಸ್' ಎಂದಿದ್ದರು...

ಎಲ್ಲಿ ನಾನು ಅವರಿಗೆ ಗುಡ್ ಬೈ ಹೇಳಿಯೇಬಿಡುತೇನೋ ಎಂಬ ತವಕದಿಂದ ಓಡಾಡುತ್ತಿದ್ದರು. ಕ್ಯಾಮೆರಾ ಭಾಷೆಯಲ್ಲಿ ಹೇಳುವುದಾದರೆ pan ಮಾಡುತ್ತಾ ಹೋದಂತೆ ಕಂಡಿದ್ದು ನನ್ನ ಹೆಂಡತಿಯ ಕಣ್ಣೀರು. ಹಾಗೆಯೇ ದಿಟ್ಟಿಸಿ ನೋಡುತ್ತಾ ಹೋದರೆ ಡಾಕ್ಟರುಗಳ ಕಣ್ಣಲ್ಲಿ ಜಿನುಗುತ್ತಿದ್ದ ಕಣ್ಣೀರು. ಹಾಗೆಯೇ ನೋಡಿದರೆ ಚೆನ್ನಪ್ಪ ಹಾಗೂ ಅವರ ಹೆಂಡತಿ, ನಂಜುಂಡಸ್ವಾಮಿ ಹಾಗೂ ಹೊಸೂರು ಮುನಿಶಾಮಪ್ಪನವರ ಕಣ್ಣಲ್ಲೂ ನೀರು. ಇಷ್ಟೊತ್ತಿಗೆ ನನ್ನನ್ನು ನೋಡಲು ಬಂದು ವಾಪಸ್ ಆದವರು ಕೆ.ವಿ.ನಾಗರಾಜಮೂರ್ತಿ ಮತ್ತು ಸಿಂಬ್ರಾ ಹೊನ್ನಲಿಂಗಯ್ಯ. ನನ್ನ ಉಸಿರಾಟ ಮತ್ತೆ ತೀರಾ ಬಿಕ್ಕಟ್ಟಿಗೆ ಸಿಲುಕಿದಾಗ ಪ್ರೊ. ಮಂಜುನಾಥ್ ತಮ್ಮ ಟೀಮ್‌ನೊಟ್ಟಿಗೆ ಏನೋ ಮಾತು ಬೆಳೆಸಿದ್ದರು. ಡಾ॥ ಅನಿಲ್ ನನ್ನ ನಾಲಿಗೆ ತೆಗೆದು ನೋಡಿದ್ದರು. ನಾನು ಕೊಂಚವೂ ತಾಳ್ಮೆ ಕಳೆದುಕೊಂಡಿರಲಿಲ್ಲ. ಸಾಮಾನ್ಯವಾಗಿ ಚಿಕ್ಕಪುಟ್ಟ ವಿಷಯಗಳಿಗೆ ತಾಳ್ಮೆ ಕಳೆದುಕೊಳ್ಳುತ್ತಿದ್ದ ನಾನು ಅಂದೇಕೋ ಒಂದು ಕ್ಷಣವೂ ಧೃತಿಗೆಡಲಿಲ್ಲ. 'ಬಂದರೆ death ತಾನೇ? ಅಂದು ಸಂಸನ death will ಅನ್ನೊ ನಾಟಕದ ತಾಲೀಮಿನಲ್ಲಿ ಅಭಿನಯಿಸಿದ್ದೆ. 'ಸಾವಿಗೆ ಅಂಜದ ರಣಧೀರ ನಾನು' ಎಂಬ ಸಂಸನ ಮಾತನ್ನು ಹತ್ತುಸಲ ಅಭಿನಯಿಸಿ ತೋರಿಸಿದ್ದೆ ನಾಗಾಭರಣನಿಗೆ. ಇಂದು ಮನಸ್ಸಿನಲ್ಲೇ ನನ್ನ ಇಲ್ಲದ ಆಸ್ತಿಗೆ ವಿಲ್ ಬರೆಯತೊಡಗಿದೆ.

I have no regrets for my death....
reasons may be.... Rum, Whisky, Cigrattes....
dedication to theatre.... reacting to the living spirits...
Let me leave for a new dreamer....
I have created dreamer's nursery... for my cremation...
my theatre friends are there....
yes let me countdown in my life for my death, 10 9,8,7,6,5,4,3,.....'

(ಅವತ್ತು ಆ ಕೌಂಟ್‌ಡೌನ್ ಅಲ್ಲಿಗೇ ಮುಗಿಯಿತು. ಅಂದು ಸಿಜಿಕೆ ಒಂದರತನಕ ಎಣಿಸಿದೆ ಬಚಾವಾದರು. ಆದರೆ ೨೦೦೬ ನೇ ಇಸವಿಯ ಜನವರಿ ೧೦-೧೧ ರ ನಡುವಿನ ಮಧ್ಯರಾತ್ರಿ ಹಾಗೆ ಎಣಿಸುವ ಅವಕಾಶ ಅವರಿಗೆ ದಕ್ಕಲಿಲ್ಲ.)

ಕಳೆದ ವರ್ಷದಲ್ಲಿ ಚಾಮರಾಜನಗರದ ಗ್ರಾಹಕರ ವೇದಿಕೆಯಲ್ಲಿ ಸುಮಾರು ೨೫೦ ರೈತರ ಕೇಸ್ ದಾಖಲಾಗಿತ್ತು. ಕರ್ನಾಟಕ ರಾಜ್ಯ ಬೀಜ ನಿಗಮ ಕಳಪೆ ಹತ್ತಿ ಬೀಜ ವಿತರಿಸಿದ್ದರಿಂದ ನಷ್ಟ ಹೊಂದಿದ್ದ ರೈತರ ಯಾವುದೇ ರಾಜಕಾರಣಿಯನ್ನು ನೆಚ್ಚಿಕೊಳ್ಳದೆ ನೇರವಾಗಿ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಿತ್ತು. ಒಟ್ಟಾಗಿ ೨೫೦ ಜನ ರೈತರು ಗ್ರಾಹಕರ ವೇದಿಕೆಯ ಮೊರೆ ಹೋಗಿದ್ದು ಕರ್ನಾಟಕದಲ್ಲಿ ಇದೇ ಪ್ರಥಮ. ಮತ್ತು ಐತಿಹಾಸಿಕವಾದ ನಿರ್ಣಯವಾಗಿದೆ. ಚಾಮರಾಜನಗರದ ಸಮಾಜವಾದಿ ಅಧ್ಯಯನ ಕೇಂದ್ರ ಹಾಗೂ ಹಸಿರು ಸೇನೆಯ ಕೆಲವು ಯುವಕರು ಸೇರಿ ಉತ್ಸಾಹದಿಂದ ಕೇಸಿಗೆ ಸಂಬಂಧ ಪಟ್ಟ ದಾಖಲಾತಿಯನ್ನು ಕ್ರೋಢಿಕರಿಸಿದರು. ರೈತರು ಪಾರ್ಟಿ ಮಾಡಿದ್ದ ಬೀಜ ನಿಗಮ, ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರ ಸರ್ಕಾರದ ಅಧೀನ ಇದ್ದರಿಂದ ಲಕ್ಷಾಂತರ ರೂಪಾಯಿ ಖರ್ಚುಮಾಡಿ ವಿಜ್ಞಾನಿಗಳನ್ನು, ದೊಡ್ಡ ದೊಡ್ಡ ವಕೀಲರನ್ನು ಕರೆಸಿ ಸತ್ಯವನ್ನೇ ತಿರುಚಿದರು. ಸರ್ಕಾರಿ ಸ್ವಾಮ್ಯದ ಯಾವ ಬೀಜದ ವೈಜ್ಞಾನಿಕ ಕೇಂದ್ರವೂ ರೈತರ ನೆರವಿಗೆ ಬರಲಿಲ್ಲ. ಯಾವ ವಿಜ್ಞಾನಿಯೂ ಕೋರ್ಟಿನಲ್ಲಿ ಕೇಸ್ ಇದ್ದರಿಂದ ಬೆಂಬಲಕ್ಕೆ ನಿಲ್ಲಲಿಲ್ಲ. ಈ ಕಳಪೆ ಹತ್ತಿ ಬೀಜವಾದ **D.CN 32** (ಧಾರವಾಡ್ ಕಾಟನ್ ಹೈಬ್ರಿಡ್ ಸೀಡ್) ವಿಚಾರಕ್ಕೆ ಸಂಬಂಧಿಸಿದಂತೆ ೧೯೯೬ ನೇ ಇಸವಿಯಲ್ಲೇ ಬೀಜದ ತಳಿ ಶುದ್ಧತೆ ಸರಿಯಿಲ್ಲವೆಂದು ವರದಿಯಾಗಿದೆ. ಇದನ್ನು ಧಾರವಾಡ ವಿಶ್ವವಿದ್ಯಾಲಯ ನೀಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದೆ. ಸತತವಾಗಿ ಒಂದು ವರ್ಷ ಕೇಸ್ ನಡೆದು ಈಗ ವಾದ ವಿವಾದದ ಹಂತಕ್ಕೆ ಬಂದು ತಲುಪಿದೆ. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರಿನ ರೈತ ಸಂಘದ ಶ್ಯಾಮಸುಂದರ ಕೀರ್ತಿ ಬೆಂಬಲಕ್ಕೆ ಬಂದಿದ್ದಾರೆ. ಅವರು ಈ ಸಮಯದಲ್ಲಿ ಬೀಜದ ಮೋಸದ ಬಗ್ಗೆ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದ್ದಾರೆ. ಸಂವಾದ ಓದುಗರಿಗಾಗಿ ಅದನ್ನು ಇಲ್ಲಿ ನೀಡುತ್ತಿದ್ದೇವೆ.

ಗ್ರಾಹಕರ ವೇದಿಕೆಯಲ್ಲೊಂದು ಬೀಜ ವ್ಯಾಜ್ಯ

ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
ವ್ಯಾಜ್ಯ ಸಂಖ್ಯೆ: ೩೧/೨೦೦೪
ಅರ್ಜಿದಾರರು : ಮಹದೇವೇಗೌಡ ಬಿನ್ ಬಸವೇಗೌಡ
ವಿರುದ್ಧ
ಎದುರು ಅರ್ಜಿದಾರರು ೧.ಬೀಜ ಅಧಿಕಾರಿಗಳು ಹಾಗೂ ಇತರರು
ಅರ್ಜಿದಾರರ ಪರ ಸಲ್ಲಿಸಲಾದ ಪ್ರಮಾಣ ಪತ್ರ

ಹೆಸರು	: ಶ್ಯಾಮ್ ಸುಂದರ್ ಕೀರ್ತಿ
ತಂದೆಯ ಹೆಸರು	: ಗುರುಬಸಪ್ಪ
ವಯಸ್ಸು	: ೫೮ ವರ್ಷ
ವೃತ್ತಿ	: ಕರ್ನಾಟಕ ರಾಜ್ಯ ಬೀಜ ಬಳಗದ ಸಂಚಾಲಕರು
ವಾಸ	: ಸಿಂಧನೂರು, ರಾಯಚೂರು ಜಿಲ್ಲೆ,

ರಾಯಚೂರು ಜಿಲ್ಲೆ, ಸಿಂಧನೂರು ತಾಲೂಕು ಸಿಂಧನೂರು ಪಟ್ಟಣ ನಿವಾಸಿ ಲೇಟ್. ಗುರುಬಸಪ್ಪರವರ ಮಗನಾದ ಸುಮಾರು ೫೮ ವರ್ಷ ವಯಸ್ಸಿನ ಶ್ಯಾಮ್ ಸುಂದರ್ ಕೀರ್ತಿ ಆದ ನಾನು ಚಾಮರಾಜನಗರಕ್ಕೇ ಬಂದು ಈ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸುವುದೇನೆಂದರೆ.

ಈ ವ್ಯಾಜ್ಯಕ್ಕೇ ಸಂಬಂಧ ಪಟ್ಟ ವಸ್ತು ವಿಷಯವು ಬಹಳ ಕ್ಲಿಷ್ಟಕರವಾಗಿದ್ದು ವೈಜ್ಞಾನಿಕ ಮತ್ತು ವ್ಯವಹಾರಿಕ ಸವಿರವರ ಚರ್ಚೆಯ ಅವಶ್ಯಕತೆಯಿರುವುದರಿಂದ ನಾನು ೧೯೬೩ ರಿಂದ ಕೇಂದ್ರ ಶಾಲಾ ಮುಖ್ಯ ಗುರುವಾಗಿ ಸುತ್ತಲಿನ ೧೧ ಶಾಲೆಗಳನ್ನು ಒಳಗೊಂಡು ಎಲ್ಲಾ ಆರ್ಥಿಕ ಮತ್ತು ಆಡಳಿತ್ಮಾಕ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸಿದ್ದೇನೆ. ೧೯೭೩ ರಿಂದ ಪ್ರಗತಿಪರ ರೈತ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾ ಎಲ್ಲ ರೀತಿಯ ಬೀಜಗಳ ಉತ್ಪಾದನೆಯಲ್ಲಿ ತೊಡಗಿದ್ದೇನೆ. ಅನೇಕ ಕಂಪನಿಯ ಬೀಜೋತ್ಪಾನೆ ಮಾಡುವುದರ ಜೊತೆಗೆ ನೂರಾರು ರೈತರನ್ನು ಆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದ್ದೇನೆ. ಕೆಲ ವರ್ಷಗಳ ನಂತರ ಆ ವ್ಯವಹಾರಗಳ ಮೋಸದ ಒಳ ವ್ಯವಹಾರಗಳನ್ನು ಅರಿತು ಕಂಪನಿಗಳ ವಿರುದ್ಧ ಪ್ರತಿಭಟನೆಗೆ ಇಳಿದಾಗ ಕರ್ನಾಟಕ ರಾಜ್ಯ ರೈತ ಸಂಘದೊಂದಿಗೆ ಕೈ ಜೋಡಿಸುವ ಪರಿಸ್ಥಿತಿ ನಿರ್ಮಾಣವಾಗಿ ೧೯೮೬ ರಲ್ಲಿ ಸರ್ಕಾರಿ ಹುದ್ದೆಯಿಂದ ನಿವೃತ್ತಿಯಾದೆ. ಈಗಾಗಲೇ ದೊಡ್ಡ ಪ್ರಮಾಣದ ಬೀಜೋತ್ಪನೆ ತೊಡಗದ್ದ ನಾನು ಸ್ವತಃ ಬೀಜ ಸಂಸ್ಕರಣ ಘಟಕವನ್ನು ಹಾಕಿಕೊಂಡಿದ್ದೆ. ಮುಂದೆ ಅದನ್ನೇ ನಡೆಸಿಕೊಂಡು ರೈತರ ಒಡಗೂಡಿ ರೈತರಿಗಾಗಿ ಕೆಲಸ ಮಾಡುವ ನಿರ್ಣಯ ಮಾಡಿದೆ.

ಅದಕ್ಕಾಗಿ ಅನೇಕ ಅಧಿಕಾರಿಗಳ ವಿಜ್ಞಾನಿಗಳ ಬಾಗಿಲು ತಟ್ಟಿದೆ. ಆದರೆ ಅದರಲ್ಲಿ ಒಬ್ಬರು ಸಹ ನನ್ನೊಂದಿಗೆ ಸಹಕರಿಸಲ್ಲಿಲ್ಲ. ಮೂಲ ಬೀಜಗಳ ಹುಟ್ಟುನ್ನು ಹೇಳಲಿಲ್ಲ. ನನ್ನ ಹರ ಸಾಹಸಗಳು ಕಿಚಿಂತ್ತೂ ಮುನ್ನಡೆಯದಂತೆ ಮಾಡಿದರು. ಆಗ ನನ್ನಲ್ಲಿ ಹುಚ್ಚು ಹಟ ಗರಿಗೆದರಿತು. ನಾನು ಬೀಜಗಳ ಒಳಗುಟ್ಟನ್ನು ಅರಿತು ರೈತ ಕುಲದ ಮುಂದೆ ಬಿಚ್ಚಿಡಲೇಬೇಕೆಂದು ದೃಢ ನಿರ್ಧಾರದೊಡನೆ ಸತತ ಐದಾರು ಸಂಶೋಧನಾ ಕೇಂದ್ರಗಳಿಗೆ ಹೋಗಿ ಹಲವಾರು ಪುಸ್ತಕಗಳನ್ನು ಓದಿ ಸಾವಿರಾರು ರೈತರ ಬೀಜೋತ್ಪಾದನಾ ತಾಣಗಳಿಗೆ ಭೇಟಿಯಾಗಿ ಎಲ್ಲಾ ಮರ್ಮಗಳನ್ನು ಅರಿತಿದ್ದೇನೆ.

ಇದುವರೆಗೂ ಅನೇಕ ಬೀಜದ ಅವಘಡಗಳ ಪ್ರದೇಶಗಳಿಗೆ ಭೇಟಿ ನೀಡಿ ಚರ್ಚಿಸಿದ್ದೇನೆ. ಇಂದು ರೈತ ಸಂಘದ ಬೀಜ ಬಳಗದ ಪ್ರಮುಖನಾಗಿ ಎರಡು ದಶಕಗಳಿಂದಲೂ ಕೆಲಸ ಮಾಡಿದ್ದೇನೆ. ನೂರಾರು ವಿಜ್ಞಾನಿಗಳು ಕಂಡುಹಿಡಿದಿರುವ ಎಲ್ಲಾ ಬೀಜಗಳ ಬಗ್ಗೆ ತಿಳಿದವನಾಗಿದ್ದು ಮೂಲ ಬೀಜಗಳು ಮತ್ತು ವೈಜ್ಞಾನಿಕ ಬದಲಾವಣೆಗಳನ್ನು ಶಾಸ್ತ್ರೀಯ ಕಾರಣಗಳನ್ನು ಅರಿತ ನಂತರವೇ ಈ ಕಾರ್ಯಕ್ರಮವನ್ನು ಇಡೀ ರೈತ ಕುಲಕ್ಕೇ ಹಂಚುತ್ತಾ ಒಳಗುಟ್ಟನ್ನು ಬಯಲು ಮಾಡುತ್ತಾ ಈ ಬೀಜಗಳ ಮಹತ್ವದ ಬಗ್ಗೆ ಮತ್ತು ವ್ಯವಹಾರದಲ್ಲಿ ನಡೆಯುತ್ತಿರುವ ವಂಚನೆಯ ಬಗ್ಗೆ ಚರ್ಚಿಸುತ್ತಾ ಅನೇಕ ಅಧ್ಯಯನ ಶಿಬಿರಗಳನ್ನು ನಡೆಸಿದ್ದೇನೆ.

ಈ ರೀತಿ ರಾಜ್ಯಾದ್ಯಂತ ರೈತರನ್ನು ಎಚ್ಚರಿಸುತ್ತಾ ಈ ಸೂಕ್ಷ್ಮ ವ್ಯವಹಾರದಲ್ಲಿ ಅನ್ಯರನ್ನು ಅವಲಂಬಿಸದೆ ಸ್ವತಃ ನೀವೇ ತೋಡಿಗಿಸಿಕೊಂಡು ನೀವೇ ಬೀಜೋತ್ಪಾದನಾ ಸರ್ವ ವಿಧಾನಗಳನ್ನು ಅನುಸರಿಸಲೆಂದು ಪ್ರೇರೇಪಿಸಲು ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದೇನೆ. ಈ ಕಾರ್ಯ ಸಾಧನೆಯೇ ನನ್ನ ಜೀವನದ ಮುಖ್ಯ ಗುರಿಯೆಂದು ನಾನು ಭಾವಿಸಿದೇನೆ. ಇಷ್ಟೇಲ್ಲ ಹೇಳಿಕೊಳ್ಳಲು ನನಗೂ ಮುಜಗರ

ಜಾಗೃತಿ

ಇಂದು ವಿಜ್ಞಾನಿಗಳು ಕೊಡುತ್ತಿರುವ ಬೀಜಗಳು ನಾಲ್ಕಾರು ಹಂತಗಳಲ್ಲಿ ಜೋಪಾನವಾಗಿ ಉತ್ಪಾದಿಸಿ ಸಂಸ್ಕರಣ ಗೊಳಿಸಿ ತಯಾರಿಸಲಾಗುತ್ತಿದೆ. ಇಲ್ಲಿ ಗುರು-ಶಿಷ್ಯ ಸಂಬಂಧಗಳು ಆಯುರ್ವೇದ ಪಂಡಿತರ ಪದ್ಧತಿಯಲ್ಲಿ ಮುಂದುವರೆಯಲ್ಪಟಿದೆ. ಬೀಜ ವಿಜ್ಞಾನಿಗಳು ತಮ್ಮ ಬೀಜದ ಗುಟ್ಟನ್ನು ತಾವು ಮಾತ್ರ ಅರಿತವರಾಗಿದ್ದು ಉತ್ಪಾದನೆಗೆ ಮಾರ್ಗ ದರ್ಶನ ನೀಡುತ್ತಿದ್ದಾರೆ. ಈ ರೀತಿ ರೈತರ ಬದುಕನ್ನು ಮೊದಲು ಸರಕಾರವೇ ಕಸಿದು ಬಿಟ್ಟಿತು. ಬೀಜ ತಯಾರಿಕಾ ವಿಧಾನಗಳು ನಿಗೂಢಗೊಂಡವು. ಇವುಗಳನ್ನು ಬೆರಗು ಗಣ್ಣಿನಿಂದ ನೋಡುವ ಪರಿಸ್ಥಿತಿ ಮಾತ್ರ ರೈತನದ್ದಾಗಿದೆ.

ಶ್ಯಾಮಸುಂದರಕೀರ್ತಿ

ವೇನಿಸುತ್ತದೆ. ಆದರೆ ರೈತನೊಬ್ಬ ವಿಜ್ಞಾನಿಗಳನ್ನು ವಿಮರ್ಶಿಸಿವುದು ಸಮಂಜಸವೇ ಎನ್ನುವ ಸಂಶಯವನ್ನು ನಿವಾರಿಸಲು ನನ್ನ ಸಂಶೋ ಧನೆ ಸಂಪೂರ್ಣ ಅನುಭವಗಳ ಬಗ್ಗೆ ಅನಿವಾರ್ಯವಾಗಿ ಹೇಳಿದ್ದೇನೆ ಕ್ಷಮಿಸಿ.

ಬೀಜ ಮತ್ತು ಸಂಕರಣ ಬೀಜಗಳ ಅಂತರವನ್ನು ಮೊದಲು ವಿವರಿಸ ಬಯಸುತ್ತೇನೆ. ಸಾವಿರಾರು ವರ್ಷಗಳಿಂದ ನಮ್ಮ ರೈತ ಕುಲ ಅನುಸರಿಸಿದ ವಿಧಾನ ಸರಳ ಮತ್ತು ನೇರವಾದದ್ದು ತನ್ನ ಹಾಗೂ ತನ್ನ ನೆರೆಯವರ ಅನುಭವದಿಂದ ಸಿದ್ಧವಾದದ್ದು. ಅಂದರೆ ನಮ್ಮ ಕಣ್ಣಿಗೆ ಉತ್ತಮವಾಗಿ ಕಂಡಿದ್ದನ್ನು ಬಾಯಿಗೆ ರುಚಿಸಿದ್ದನ್ನು ಆರಿಸಿ ಹಿಡಿದಿಟ್ಟು ಕೊಂಡು ಪರಸ್ಪರರು ಹಂಚಿ ಕೊಳ್ಳುವ ಸರಳ ವಿಧಾನವಿತ್ತು. ಆಗ ಬಿತ್ತುವ ಬೀಜಕ್ಕೆ ವಿಶೇಷ ಅರ್ಥವಿರಲ್ಲಿಲ್ಲ. ಬಿತ್ತುವ ಕಾಲದಲ್ಲಿ ಮಾತ್ರ ಬೀಜವೆಂದು ಪರಿಗಣಿಸಿ ಬಿತ್ತುವ ಕಾಲ ಮುಗಿದ ನಂತರ ಉಳಿದೆಲ್ಲವನ್ನು ಆಹಾರವಾಗಿ ಉಪ ಯೋಗಿಸಿ ಬಿಡುತ್ತಿದ್ದೆವು. ಆಗ ಯಾವುದೇ ಆಸೆ ಹಾನಿಗಳ ಭಯವೇ ಇರಲ್ಲಿಲ್ಲ.

ಆದರೆ ಇಂದು ವಿಜ್ಞಾನಿಗಳು ಕೊಡುತ್ತಿರುವ ಬೀಜಗಳು ನಾಲ್ಕಾರು ಹಂತಗಳಲ್ಲಿ ಜೋಪಾನವಾಗಿ ಉತ್ಪಾದಿಸಿ ಸಂಸ್ಕರಣಗೊಳಿಸಿ ತಯಾರಿಸಲಾಗುತ್ತಿದೆ. ಇಲ್ಲಿ ಗುರು–ಶಿಷ್ಯ ಸಂಬಂಧಗಳು ಆಯುರ್ವೇದ ಪಂಡಿತರ ಪದ್ಧತಿಯಲ್ಲಿ ಮುಂದುವರೆಯಲ್ಪಟಿದೆ. ಎಲ್ಲಾ ಬೀಜ ಜ್ಞಾನಿಗಳು ತಮ್ಮ ಬೀಜದ ಗುಟ್ಟನ್ನು ಮುಚ್ಚಿಟ್ಟು ನ್ಯೂಕ್ಲಿಯರ್ ಹೆಸರನ್ನು ಕೊಟ್ಟು ತಮ್ಮ ತಮ್ಮಲ್ಲೆ ಮುಚ್ಚಿಟ್ಟುಕೊಂಡಿದ್ದಾರೆ. ತಮ್ಮ ಬೀಜದ ಗುಟ್ಟನ್ನು ಅವರು ಮಾತ್ರ ಅರಿತವರಾಗಿದ್ದು ಮುಂದೆ ಬ್ರೀಡರ್ ಸೀಡ್ಸ್, ಫೌಂಡೇಷನ್ ಸೀಡ್ಸ್, ಸರ್ಟಿಫೈಡ್ ಸೀಡ್ಸ್ ಈ ಮೂರು ಹಂತಗಳನ್ನು ಹೊರಗಿಟ್ಟು ಉತ್ಪಾದನೆಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ರೀತಿ ರೈತರ ಬದುಕನ್ನು ಮೊದಲು ಸರಕಾರವೇ ಕಸಿದು ಬಿಟ್ಟಿತು. ಬೀಜ ತಯಾರಿಕಾ ವಿಧಾನಗಳು ನಿಗೂಢಗೊಂಡವು.

ಉತ್ಪಾದನೆಗೆ ಎಲ್ಲಿಲ್ಲದ ಸುರಸುಂದರ ಹೆಸರುಗಳನ್ನಿಟ್ಟು ಮಾರುಕಟ್ಟೆಗೆ ಬಿಡಲಾಗುತ್ತಿದೆ. ಅವುಗಳನ್ನು ಮುಚ್ಚಿಟ್ಟ ಬಣ್ಣದ ಚೀಲಗಳನ್ನು ಬೆರಗುಗಣ್ಣಿನಿಂದ ನೋಡುವ ಪರಿಸ್ಥಿತಿ ನಮ್ಮ ರೈತನದ್ದಾಗಿದೆ. ಈ ರೀತಿ ವಿಶ್ವದ ತುಂಬೆಲ್ಲ ನಡೆಯುತ್ತಿದ್ದ ಬೀಜ ಕೈ ಬದಲಾವಣೆಯ ಪವಿತ್ರ ಪದ್ಧತಿಯು ಕೆಲವೇ ವಿಜ್ಞಾನಿಗಳ ಮತ್ತು ಕೃಷಿ ಭೂಮಿಯನ್ನು ಅವಲಂಬಿಸಿ ಅತಿ ಸಂಕುಚಿತ ಕ್ಷೇತ್ರದಲ್ಲಿ ಸೇರಿಕೊಂಡುಬಿಟ್ಟವು. ನೂರಾರು ಮೈಲಿಗಳ ದೂರದ ದೊಡ್ಡ ಊರಲ್ಲಿಯ ಬಹುದೊಡ್ಡ ಪ್ರಯೋಗಶಾಲೆಗಳಲ್ಲಿ ಮುಚ್ಚಿಟ್ಟ ಬಳಿಕ ರೈತ ಇವುಗಳನ್ನು ಪಡೆಯಲು ಹರಸಾಹಸ ಮಾಡುವಂತಹ ದುಸ್ಥಪರಿಸ್ಥಿತಿ ನಿರ್ಮಾಣವಾಯಿತು.

ಇಲ್ಲಿ ಸ್ವಲ್ಪ ಆರ್ಥಿಕ ಚಿಂತನೆಯ ಅವಶ್ಯಕತೆಯತ್ತ ಕಣ್ಣುಹಾಯಿಸೋಣ. ಈ ಎಲ್ಲಾ ವಿಜ್ಞಾನಿಗಳು ತಾವು ಆಯ್ದುಕೊಂಡ ವ್ಯವಸ್ಥೆಯ ವಿಸ್ತಾರವನ್ನು ಅರಿತಿಲ್ಲವೆಂದಲ್ಲ. ಈ ಸತ್ಯ ಗಮನಿಸಿಯೇ ಈ ಗಹನ ವ್ಯವಹಾರವನ್ನು ಪೇಟೆ ಬೀದಿಗೆ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ. ಈ ದೇಶದಲ್ಲಿ ಇದುವರೆಗೂ ನಡೆದ ಪ್ರಚಾರದ ಪದ್ಧತಿಗಳನ್ನು ಅನುಸರಿಸಿ ಹತ್ತಾರು ರೈತರನ್ನು ಪ್ರಚೋದಿಸಿರುವುದರಿಂದ ಇಂದು ಈ ಬೀಜಗಳ ಬೇಡಿಕೆಯು ತುತ್ತ ತುದಿಗೇರಿದೆ. ಕೆಲವರಂತು ಈ ಪ್ರಭಾವದಿಂದ ಗರಬಡಿದು ಹೋಗಿ

> ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಈ ಘಟನೆ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ವಿಜ್ಞಾನಿಗಳು ಮೊಳಕೆ, ಮಳೆ, ವಾತಾವರಣ, ಹುಳುಗಳ ಬಗ್ಗೆ ಹೇಳಿದ್ದಾರೆ. ಈ ಅವಾಂತರವನ್ನು ಈ ನಾಲ್ಕು ಕಾರಣಗಳಿಗೆ ಸೀಮಿತಗೊಳಿಸಿದ್ದಾರೆ. ಮೊಳಕೆಯಾಗಿದೆ, ತೇವಾಂಶ ಕಡಿಮೆ ಎಂಬ ಸುಳ್ಳುವಾದವನ್ನು ಮಂಡಿಸಿದ್ದಾರೆ. ೧೮–೨೦ ದಿವಸಗಳ ಅಂತರದಲ್ಲಿ ಮಳೆಯಾಗಿದೆ. ಈ ಪರಿಸ್ಥಿತಿಯು ಹತ್ತಿಯ ಬೆಳೆಗೆ ಆರೋಗ್ಯಕರವೆಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ "ಪ್ಯಾಕೇಜ್ ಆಫ್ ಪ್ರಾಕ್ಟಿಸ್" ಪುಸ್ತಕದಲ್ಲಿ ಪ್ರಕಟಿಸಲಾಗಿದೆ. ಅದರಂತೆ ಕೊಯಮತ್ತೂರು ವಿಜ್ಞಾನಿಗಳು ಆ ವರ್ಷದ ವಾತಾವರಣವು ಅದೇ ರೀತಿ ಇರುವುದರಿಂದ ಡಿ.ಸಿಚ್. ೩೨ ಹತ್ತಿ ಬೆಳೆಯಲು ಸರಿಯೆಂದು ಬೀಜವನ್ನು ಸಬ್ಸಿಡಿ ಕೊಟ್ಟು ವಿತರಿಸಿದ್ದಾರೆ. ಆದರೆ ಮುಂದಿನ ವರ್ಷದಿಂದ ಡಿ.ಸಿ.ಎಚ್. ೩೨ ಹತ್ತಿಯನ್ನು ಬೆಳೆಯಲೇಬಾರದು ಎಂದು ಪ್ರಕಟಿಸಿದ್ದಾರೆ. ಅದಲ್ಲದೆ ವಿಜ್ಞಾನಿಗಳು ಗುಲಾಬಿ ಬಾಲ್ ವರ್ಮ್ ಬಗ್ಗೆ ಹೇಳಿ ಔಷಧಿ ಸಿಂಪಡಿಸಿಲಿಲ್ಲ ಎಂದು ಹೇಳಿದ್ದಾರೆ. ಯಾವ ರೈತನು ಬೆಳೆ ಕಳೆದು ಕೊಳ್ಳಲು ಇಷ್ಟಪಡುವುದಿಲ್ಲ. ಹತ್ತಾರು ಸಾರಿ ಔಷಧ ಸಿಂಪಡಿಸುತ್ತಾನೆ.

ದ್ದಾರೆ. ಅಂದರೆ ಸಾರ್ವತ್ರಿಕ ಬೇಡಿಕೆ ಇರುವುದು ಸತ್ಯ. ಆದರೆ ಇನ್ನೊಂದು ಮಗ್ಗಲಲ್ಲಿ ಪೂರೈಕೆಯ ಪರಿಸ್ಥಿತಿ ಹೇಗಿದೆ ಎಂದು ನೋಡೋಣ. ಇಂದು ಈ ದೇಶದಲ್ಲಿ ಕನಿಷ್ಟ ೨೦ ಕೋಟಿ ಎಕರೆ ಮಹಾನೀರಾವರಿ, ಅಲ್ಪಾ ನೀರಾವರಿ ಮತ್ತು ಕೆರೆಕಟ್ಟೆನೀರಾವರಿ ವ್ಯವಸ್ಥೆ ಹೊಂದಿದ್ದು ಇದರೊಂದಿಗೆ ಚೆನ್ನಾಗಿ ಮಳೆ ಬೀಳುವ ನೈರ್ಸಗಿಕ ಪ್ರದೇಶವು ಇದೆ. ಈಗ ಇವರೆಲ್ಲರೂ ಪ್ರಚೋದನೆಗೆ ಒಳಗಾಗಿದ್ದು ನಿಜ. ವರ್ಷಕ್ಕೆ ಎರಡು ಬೆಳೆ ಎಂದಾದರೆ ೪೦ ಕೋಟಿ ರೂ. ಗಳಿಗೆ ಬೀಜ ಬೇಕಾಗುತ್ತದೆ. ಕೇವಲ ಹತ್ತಿ ಒಂದೇ ಅಲ್ಲ, ಸೂರ್ಯಕಾಂತಿ, ಮುಸುಕಿನ ಜೋಳ, ಹೈಬ್ರಿಡ್ ಜೋಳ, ಹತ್ತಾರು ತರಕಾರಿ ಬೀಜಗಳು ಮತ್ತು ಹೈಬ್ರಿಡ್ ಭತ್ತವು ಸಹ ಬೇಕಾಗುತ್ತದೆ. ಇವುಗಳಲ್ಲಿ ಕೆಲವು, ಎಕರೆಗೆ ೩೦೦ ರೂಪಾಯಿ ಬೆಲೆಯಾಗುತ್ತದೆ. ಇನ್ನೂ ಕೆಲವೊಂದು ಎಕರೆ ಬೀಜಕ್ಕೆ ೧೦೦೦ ದಿಂದ ೨೦೦೦ ರೂ. ಆಗುತ್ತದೆ. ಸರಾಸರಿ ಸಾವಿರ ರೂಪಾಯಿ ಆದರೂ ಮುಂಗಾರಿಗೆ ೨೦,೦೦೦ ಕೋಟಿ ರೂ. ಬೀಜ ಮತ್ತು ಹಿಂಗಾರಿಗೆ ೨೦,೦೦೦ ಕೋಟಿ ರೂ. ಬೀಜ ಬೇಕೆಂದಾಯಿತು. ಆದರೆ ಈ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ವ್ಯವಸ್ಥೆಗಳನ್ನು ಸೇರಿಸಿದರೂ ೧೦೦೦ ಕೋಟಿ ರೂ. ಗಳನ್ನು ತೊಡಗಿಸಿಲ್ಲ. ಹಣವಿಲ್ಲದೆ ಬಣಗುಡುತ್ತಿರುವ ಈ ಪ್ರಚಾರ ಪ್ರಿಯ ಬುಡುಬುಡಿಕೆ ಕಂಪನಿಗಳೇ ತುಂಬಿರುವ ನಾಡಿನಲ್ಲಿ ರೈತರ ಈ ಬೇಡಿಕೆಯ ಗತಿಯೇನು?

ಬೀಜ ತಯಾರಿಕೆಯೂ ವರ್ಷ ಮೊದಲೆ ನಡೆಯಬೇಕಾಗಿದೆ. ಇದಕ್ಕಾಗಿ ನೂರಾರು ಕೋಟಿ ದುಡ್ಡು ಬೇಕು. ಆದರೆ ಕನಿಷ್ಠ ೩ ಕೋಟಿ ರೂ. ಆದರೂ ತೊಡಗಿಸಿದ್ದಾರೆಯೇ? ಹೀಗಾದರೆ ಮುಂದೇನು ಗತಿ? ಆ ಬೀಜವನ್ನು ಅವರಲ್ಲದೆ ಬೇರೆಯವರು ಯಾರು ಬೆಳೆಯನ್ನು ಬೆಳೆಯುವಂತಿಲ್ಲ, ಇದು ವಸ್ತುಸ್ಥಿತಿ.

ಮುಂದಿನ ಹಂತದಲ್ಲಿ ಹೇಗೋ ಮೂಲ ಬೀಜ ದೊರೆತ ನಂತರ ಉತ್ಪಾದನಾ ಪ್ರದೇಶ ಬೇಕಲ್ಲ, ಅದಕ್ಕಿರುವ ನಿಯಮಾವಳಿಗಳು ಹಲವು ಪ್ರತಿಜಾತಿಯ ಬೀಜೋತ್ಪಾದನಾ ತಾಕುಗಳಿಗೆ ವೈಜ್ಞಾನಿಕ ಅಂತರವಿರಬೇಕು. ಇಲ್ಲಿ ಪರಕೀಯ ಪರಾಗ ಸ್ಪರ್ಶದಿಂದ ಸಂಕರಣ ಬೀಜವಾಗುತ್ತದೆ. ನಿರ್ಧರಿಸಿದ ಗಂಡಿನ ಹೊರತು ಬೇರೆ ಗಂಡು ಅಂಶ ಸೇರಿದರೆ ಬೇರೆ ಹೈಬ್ರಿಡ್ ಆಗುತ್ತದೆ. ಇದನ್ನು ಇಷ್ಟೆಲ್ಲಾ ಕೋಟಿ ಎಕರೆಗೆ ಬೇಕಾಗುವ ಬೀಜ ತಯಾರಿಸುವ ಮೂಲ ಬೀಜಗಳು ದೊರೆಯದೆ ಏರುಪೇರಾದಾಗ ಅವಧಿ ಮೀರಿ ಬಂದಾಗ ಅನೇಕ ಅಚಾತುರ್ಯಗಳು ನಡೆದು ಹೋಗುತ್ತವೆ. ಈ ವ್ಯವಸ್ಥೆಯ ಮೊದಲ ಹಂತದ ಕಾರ್ಯಕ್ರಮಗಳೇ ಎಡವಟ್ಟಾಗಿ ಉತ್ಪಾದನೆಗಳು ಏರುಪೇರಾಗಿ ಬೇಡಿಕೆಗಳು ಭುಗಿಲೆದ್ದಾಗ ಅವಧಿ ಮೀರಿದ ಬೀಜಗಳು ಮಾರುಕಟ್ಟೆಗೆ ಬಂದು ಇಂತ ಅವಘಡಗಳೂ ಘಟಿಸಿ ಹೋಗುತ್ತವೆ.

ಈ ಪರಿಸ್ಥಿತಿಯ ದುರುಪಯೋಗ ಪಡೆದುಕೊಳ್ಳುವ ದುಷ್ಟ ಶಕ್ತಿಗಳು ನಕಲಿ ಪ್ಯಾಕಿಂಗ್ ಮಾಡಿ ಮಾರಿ ವಂಚನೆ ಎಸಗುತ್ತಾವೆ. ಉತ್ಪಾದನೆಗೂ ಬೇಡಿಕೆಗೂ ತುಂಬಾ ಅಂತರವಿರುವುದರಿಂದ ಪ್ರತಿ ವರ್ಷ ದೇಶದ ಹತ್ತಾರು ಭಾಗಗಳಲ್ಲಿ ಈ ದುಷ್ಟ ವ್ಯವಹಾರ ನಡೆಯುತ್ತಲೇ ಇದೆ. ಗಡಿಗೆಗಳಿಂದ ಹೊರ ಬಂದು ಬಣ್ಣದ ಚೀಲ ಸೇರಿದ ಈ ಬೀಜದ ಬದುಕು ಬಂಡಾಟಕ್ಕಿಟ್ಟುಕೊಂಡಿದೆ. ನೂರಾರು ಅಂಗಡಿಗಳು ಇಂತಹ ನೂರಾರು ಮೋಸಗಾರರು ತಯಾರಿಸಿದ ದುಷ್ಟ ಬೀಜಗಳನ್ನೇ ತಿಳಿದೋ ತಿಳಿಯದೆಯೋ ಮಾರುಹೋಗುತ್ತವೆ. ತಮ್ಮ ಮುಷ್ಟಿಯಲ್ಲಿ ಬೀಜಗಳನ್ನು ಹಿಡಿದ್ದಿಟ್ಟುಕೊಳ್ಳಬೇಕೆನ್ನುವ ವಿಜ್ಞಾನಿಗಳ ದುರಾಶೆಯ ಕುದುರೆ ಲಂಗುಲಗಾಮಿಲ್ಲದೆ ಹೂಂಕರಿಸುತ್ತಾ ಹುಚ್ಚೆದ್ದು

ಕುಣಿತ್ತಿದೆ. ಹೈಬ್ರಿಡ್ ಅವಾಂತರದಿಂದ ಉಂಟಾಗುವ ಹುಳು. ಅದರ ನಿವಾರಣೆಗೆ ಬೇಕಾಗುವ ನೂರಾರು ತರಹದ ಪರಿಕರಗಳಲ್ಲಿ ಮೋಸ ನಡೆಯುತ್ತಿದೆ. ಇದರಿಂದ ರೈತರ ಬದುಕು ಆತ್ಮಹತ್ಯೆಗೆ ಶರಣಾಗುತ್ತಿದೆ.

ಈಗಿನ ಸಮಸ್ಯೆಗೆ ಬರೋಣ. ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಈ ಘಟನೆ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ವಿಜ್ಞಾನಿಗಳು ಮೊಳಕೆ, ಮಳೆ, ವಾತಾವರಣ, ಹುಳುಗಳ ಬಗ್ಗೆ ಹೇಳಿದ್ದಾರೆ. ಈ ಅವಾಂತರವನ್ನು ಈ ನಾಲ್ಕು ಕಾರಣಗಳಿಗೆ ಸೀಮಿತಗೊಳಿಸಿದ್ದಾರೆ. ಮೊಳಕೆಯಾಗಿದೆ, ಹಸಿ (ತೇವಾಂಶ) ಕಡಿಮೆ ಎಂಬ ಸುಳ್ಳುವಾದವನ್ನು ಮಂಡಿಸಿದ್ದಾರೆ. ೧೮–೨೦ ದಿವಸಗಳ ಅಂತರದಲ್ಲಿ ಮಳೆಯಾಗಿದೆ. ಈ ಪರಿಸ್ಥಿತಿಯು ಹತ್ತಿಯ ಬೆಳೆಗೆ ಆರೋಗ್ಯಕರವೆಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ "ಪ್ಯಾಕೇಜ್ ಆಫ್ ಪ್ರಾಕ್ಟಿಸ್" ಪುಸ್ತಕದಲ್ಲಿ ಪ್ರಕಟಿಸಲಾಗಿದೆ.

ಅದರಂತೆ ಕೊಯಮತ್ತೂರು ವಿಜ್ಞಾನಿಗಳು ಆ ವರ್ಷದ ವಾತಾವರಣವು ಅದೇ ರೀತಿ ಇರುವುದರಿಂದ ಡಿ.ಸಿ.ಎಚ್. ೩೨ ಹತ್ತಿ ಬೆಳೆಯಲು ಸರಿಯೆಂದು ಬೀಜವನ್ನು ಸಬ್ಸಿಡಿ ಕೊಟ್ಟು ವಿತರಿಸಿದ್ದಾರೆ. ಆದರೆ ಮುಂದಿನ ವರ್ಷದಿಂದ ಡಿ.ಸಿ.ಎಚ್. ೩೨ ಹತ್ತಿಯನ್ನು ಬೆಳೆಯಲೇ ಬಾರದು ಎಂದು ಪ್ರಕಟಿಸಿದ್ದಾರೆ. ಅದಲ್ಲದೆ ವಿಜ್ಞಾನಿಗಳು ಗುಲಾಬಿ ಬಾಲ್‌ವರ್ಮ್ (BALLWARM) ಬಗ್ಗೆ ಹೇಳಿ ಔಷಧಿ ಸಿಂಪಡಿಸಿಲಿಲ್ಲ ಎಂದು ಹೇಳಿದ್ದಾರೆ. ಯಾವ ರೈತನು ಬೆಳೆ ಕಳೆದು ಕೊಳ್ಳಲು ಇಷ್ಟಪಡುವುದಿಲ್ಲ. ಇಂದಿನ ಬೆಳೆಯಲ್ಲಿ ಮುಂದಿನ ಬದುಕಿನ ಆಕಾಂಕ್ಷೆಗಳು ಅಡಗಿರುತ್ತವೆ. ಮಗನ ಮದುವೆ, ಮಗನ ಓದು, ಸಾಲ ಮರುಪಾವತಿ ಅಂತಹ ಪ್ರಮುಖ ಆಸೆಗಳು ಉಂಟು. ಆಗ ಅವನು ಯಾವುದೇ ರಾಜಿಗೆ ಸಿದ್ಧನಿರುವುದಿಲ್ಲ. ಎಲ್ಲಾ ಕಡೆಗೂ ವಿಚಾರಿಸಿ ತನ್ನ ಮೊದಲ ಅನುಭವವನ್ನು ಸೇರಿಸಿ ಹತ್ತಾರು ಸಾರಿ ಔಷಧ ಸಿಂಪಡಿಸುತ್ತಾನೆ.

ಹಾಗಾದರೆ ಈ ಸಮಸ್ಯೆಯಲ್ಲಿರುವ ಒಳಗುಟ್ಟೇನು? ಡಿ.ಸಿ.ಎಚ್–೩೨ ಒಂದು ಅಂತರ್ ದೇಶೀ ಸಂಕರಣ ಹತ್ತಿ, ಅಮೇರಿಕ ಮೂಲದ ಹೆಣ್ಣು, ರಷ್ಯಾ ಮೂಲದ ಗಂಡು ಹತ್ತಿಗಳ ಸಂಕರಣದಿಂದ ತಯಾರಾದ ಬೀಜ ಇದೇ ತರಹದ "ವರಲಕ್ಷ್ಮಿ" ಎಂಬ ಹೆಸರಿನಲ್ಲಿ ಬಿಡುಗಡೆಯಾಗಿ ನಂತರ ಈ ಡಿ.ಸಿ.ಎಚ್–೩೨ ಉದ್ದ ಎಳೆಯ ಸೂಕ್ಷ್ಮ ನೂಲು ಕೊಡುವ ತಳಿಯೆಂದಾಯಿತು. ಕಿಲೋಗೆ ೨೫ ರೂ. ನಿಂದ ೬೦೦ ರೂಪಾಯಿವರೆಗೂ ಮಾರಾಟವಾದ ಉದಾಹರಣೆ ಇದೆ. ಇಷ್ಟೆಲ್ಲಾ ಪ್ರಸಿದ್ಧಿಯಾದ ಹತ್ತಿಯ ತಳಿಯ ಬಗ್ಗೆ ೨೦೦ ಇಸವಿಯಲ್ಲಿ ಮತ್ತೊಂದು ಚರ್ಚೆಯಾಗಿದೆ.

ಈ ತಳಿಯ ಬೆಳೆ ಕಡಿಮೆಯಾಗಿದ್ದು ಮತ್ತು ಎಳೆಯ ಗುಣಮಟ್ಟ ಕಡಿಮೆಯಾಗಿದ್ದು ಈ ತಳಿಯ ಸಂಶೋಧಕರಾದ ಶ್ರೀಕಾತರಕಿಯವರ ಸಮ್ಮುಖದಲ್ಲಿ ಚರ್ಚಿಸಲ್ಪಟ್ಟು ಈ ತಳಿಯ ಮೂಲ ಬೀಜಗಳ ಗುಣಮಟ್ಟವೇ ಹಾಳಾಗಿದೆ ಎಂದು ನಿರ್ಣಯಿಸಲಾಗಿದೆ. ಅದರ ಶುದ್ಧೀಕರಣ ಪ್ರಕ್ರಿಯೆಗೆ ಹಣವನ್ನು ಪಡೆದು ಅವರ ಹಿರಿತನದಲ್ಲೇ ಶುದ್ಧಿ ಕ್ರಿಯೆ ಪ್ರಾರಂಭವಾಗಿತ್ತು. ಆದರೆ ಈ ಕ್ರಿಯೆ ನಡೆದಾಗ ಬೀಜೋತ್ಪಾದನೆಯನ್ನು ನಿಲ್ಲಿಸಬೇಕಾಗಿತ್ತು. ಅದರಿಂದ ತಯಾರಾದ ಬೀಜವನ್ನು ನಾಶಪಡಿಸಬೇಕಾಗಿತ್ತು. ಈ ರೀತಿ ಮಾಡಲೇ ಇಲ್ಲ. ಬೀಜದ ಉತ್ಪಾದನೆಯನ್ನು ನಿಲ್ಲಿಸದೆ ಅದೇ ಅವಧಿಯಲ್ಲಿ ತಯಾರಾದ

ನಕಲಿ ಪ್ಯಾಕೆಟ್ ಎಲ್ಲಿ ಹುಟ್ಟಿತ್ತು? ಎಲ್ಲಿ ಸಂಗ್ರಹಿಸಪಲ್ಪಟ್ಟಿತ್ತು? ಮತ್ತು ಎಲ್ಲಿ ಮರು ಪರೀಕ್ಷಿಸಲ್ಪಟ್ಟಿತ್ತು? ರೈತರಿಗೆ ಭೀತಿ ಹುಟ್ಟಿಸಿರುವ ಇಂತಹ ಅನಾಹುತಗಳು ನಡೆಯದಂತೆ ಮಾಡಲು ಎಚ್ಚರಿಕೆಯಿಂದ ಈ ಅನಾಹುತಕ್ಕೆ ಕಾರಣವಾದ ಸಂಸ್ಥೆಯಿಂದ ಮತ್ತು ಇಡೀ ಮೂಲ ಬೀಜವೇ ಹಾಳಾಗಿರುವುದರಿಂದ ಉತ್ಪಾದನೆಗೆ ಸರ್ಕಾರದಿಂದ ಯೋಗ್ಯ ಪರಿಹಾರ ಕೊಡಿಸಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

ಬೀಜಗಳನ್ನು ಮಾರಿದ್ದೇ ಈ ಚಾಮರಾಜನಗರದ ರೈತರ ಹಾನಿಗೆ ಕಾರಣವಾಯಿತು.

ಅದಲ್ಲದೇ, ಉತ್ಪಾದನೆ ಕೂಡ ಸಮಯಕ್ಕೆ ಸರಿಯಾಗಿ ನಡೆಯದೆ ಬಿತ್ತನೆ ಬೀಜಗಳು ಅವಧಿಗೆ ಸರಿಯಾಗಿ ಪೂರೈಕೆಯಾಗುವುದಿಲ್ಲ. ಆಗ ರೈತನು ತಮ್ಮ ಬಳಿಯಿರುವ ಮೂಲ ಬಿತ್ತನೆ ಬೀಜವನ್ನೇ ಬಿತ್ತು ಬಿಡುತ್ತಾರೆ. ಯಾವುದೂ ತಪ್ಪಿನಿಂದ ಆದ ಕಲಬೆರಿಕೆಯ ಬಗ್ಗೆ ಸಂಶಯಗೊಂಡು ಬೀಜ ನಿರೀಕ್ಷಕರು ವಿಶ್ವ ವಿದ್ಯಾಲಯದ ವಿಜ್ಞಾನಿಗಳನ್ನೇ ಕರೆಸಿದ್ದಾರೆ. ಆಗ ಆ ವಿಜ್ಞಾನಿಗಳೇ ನೂರಾರು ತಾಕುಗಳಲ್ಲಿನ್ನ ಸಸಿಗಳು ಅಧಿಕೃತ ತಳಿಯ ಬೀಜಗಳು ಅಲ್ಲವೆಂದು ಹೇಳಿ ಪಟ್ಟಿಮಾಡಿ ಕೊಟ್ಟಿದ್ದಾರೆ. ಮುಂದೆ ಆ ತಾಕುಗಳು ಏನಾದವು ಎಂಬ ಪರಾಮರ್ಶೆ ಆಗಬೇಕಾಗಿದೆ. ಅನೇಕ ಒತ್ತಡಗಳಿಂದ ಅವು ಸಹಿತ ಹೈಬ್ರಿಡ್ ಬೀಜಗಳೆಂದು ಒಪ್ಪಿದ ವದಂತಿ ಇದೆ.

ಒಟ್ಟಿನಲ್ಲಿ ಈ ಬೀಜಗಳ ಲಾಟ್ ನಂಬರ್‌ಗಳು ಜಡ್ಡು ಹಿಡಿದು ಹೋದರೆ ಎಲ್ಲಿ ತಪ್ಪಿದೆಯೆಂದು ಕಂಡುಬರುತ್ತ ವೆ. ಈ ಬೀಜ ಉತ್ಪಾದನೆಗೆ ಉಪಯೋಗಿಸಿದ ಎಲ್ಲಾ ಇತಿಹಾಸವು ಇರುತ್ತದೆ. ಅದೆಲ್ಲವನ್ನು ಚಿಕಿತ್ಸಕವಾಗಿ ಪರೀಕ್ಷಿಸಿದರೆ ದೋಷವು ಹೊರಬರುತ್ತದೆ. ೨ ವರ್ಷಗಳ ಮಧ್ಯದಲ್ಲಿ ಅನೇಕ ಕಡೆ ಮೊಳಕೆಯ ಪರೀಕ್ಷೆಗೆ ಒಳಪಟ್ಟಿರುವ ಈ ಲಾಟ್ ನಂ. ಗಳ ಮೂಲ ಉಗಮ ಕೇಂದ್ರವೇ ಮರೆಯಾಗಿದೆ. ನಕಲಿ ಪ್ಯಾಕೆಟ್ ಎಲ್ಲಿ ಹುಟ್ಟಿತ್ತು? ಎಲ್ಲಿ ಸಂಗ್ರಹಿಸಪಲ್ಪಟ್ಟಿತ್ತು? ಮತ್ತು ಎಲ್ಲಿ ಮರು ಪರೀಕ್ಷಿಸಲ್ಪಟ್ಟಿತ್ತು? ಈ ಎಲ್ಲಾ ವಿವರಣೆಯನ್ನು ಸಂಬಂಧಿಸಿದ ಬೀಜ ಸಂಸ್ಥೆ ಮತ್ತು ಬೀಜ ಪ್ರಮಾಣೀಕರಣ ಸಂಸ್ಥೆಗಳಿಂದ ಪಡೆದರೆ ನನ್ನ ಹೇಳಿಕೆಗೆ ಪುಷ್ಟಿ ದೊರೆಯುತ್ತದೆ.

ರೈತರ ಬದುಕಿಗೆ ಭೀತಿ ಹುಟ್ಟಿಸಿರುವ ಇಂತಹ ಅನಾಹುತಗಳು ನಡೆಯದಂತೆ ಮಾಡಲು ಎಚ್ಚರಿಕೆಯಿಂದ ಈ ಅನಾಹುತಕ್ಕೆ ಕಾರಣವಾದ ಸಂಸ್ಥೆಯಿಂದ ಮತ್ತು ಇಡೀ ಮೂಲ ಬೀಜವೇ ಹಾಳಾಗಿರುವುದರಿಂದ ಉತ್ಪಾದನೆಗೆ ಸರ್ಕಾರದಿಂದ ಯೋಗ್ಯ ಪರಿಹಾರ ಕೊಡಿಸಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ. ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಮತ್ತು ಇದು ನನ್ನ ನಿಜವಾದ ಹೆಸರು ಮತ್ತು ರುಜು ಎಂಬುದಾಗಿ ಪ್ರಮಾಣ ಮಾಡಿ, ಇದರಡಿ ನನ್ನ ಸಹಿ ಇದೆ.

– ಶ್ಯಾಮ ಸುಂದರ ಕೀರ್ತಿ

ಚಾಮರಾಜನಗರ

ದಿನಾಂಕ: ೦೮–೧೨–೨೦೦೫ □



ಜಾಲಿ ಮರಕೆ ಸಿಕ್ಕ ಸೆರಗು
ಬೇಲಿ ಮೇಲೆ ಹರಿದ ಹಾವು
ಸಕ್ಕರೆಗೆ ಕಟ್ಟಿರುವೆ ಸಾಲು

ಬಿಗಿದ ಮಾನ ಇಣುಕಿ ನೋಡಿ
ಉಬ್ಬುಕಟ್ಟಿ ಬಚ್ಚಿ ಹಿಡಿದ
ಮಾಂಸಕ್ಕಾಗಿ ತಕ್ಕಡಿ

ನೀಲಿಗಟ್ಟುತಿಹುದು ದೇಹ
ಗಂಟಲಲ್ಲೆ ನಿಂತ ಕೂಗು
ಹೆಪ್ಪಗಟ್ಟಿತು ಬೆಳ್ಳಿ ಬಟ್ಟಲಲ್ಲೂ ಹಾಲು.

ಡಾ॥ ವಸು

ಅಭಿವ್ಯಕ್ತಿ ಸ್ವಾತಂತ್ರ್ಯ ಕುಂಠಿತಗೊಳ್ಳುತ್ತಿದೆಯೆ?

(೭ನೇ ಪುಟದಿಂದ)

ತೊಗಾಡಿಯಾ ಅಡ್ವಾಣಿಯವರನ್ನು ತರಾಟೆಗೆ ತೆಗೆದು ಕೊಂಡು, ಆತ ದೇಶದ್ರೋಹಿ ಎಂದು ಜರಿದರು.

೭) ಬಾಬಾಸಾಹೇಬ ಅಂಬೇಡ್ಕರ್ ಮತ್ತು ಐರಿಷ್ ಮಹಿಳೆ ಫ್ರಾನ್ಸಿಸ್ ಫಿಟ್ಜರಾಲ್ಡ್ ನಡುವೆ ನಡೆಯಿತು ಎನ್ನಲಾದ ಪತ್ರ ವಿನಿಮಯ ಕುರಿತು ರೋಲಿ ಬುಕ್ಸ್ ಎಂಬ ಪ್ರಕಾಶನ ಸಂಸ್ಥೆ ಪುಸ್ತಕವೊಂದನ್ನು ಪ್ರಕಟಿಸಲು ಯೋಜಿಸಿತ್ತು. ಆದರೆ ಅಂಬೇಡ್ಕರ್‌ರ ಮೊಮ್ಮಗ ಪ್ರಕಾಶ್ ಆ ಪುಸ್ತಕವನ್ನು ಪ್ರಕಟಿಸಬಾರದೆಂದು ದೆಹಲಿ ಪೊಲೀಸರ ಬಳಿ ದೂರಿತ್ತರು.

೮) ಬಾಲಿವುಡ್‌ನ ಚಲನಚಿತ್ರ 'ಸಿನ್ಸ್'ನಲ್ಲಿ ಒಬ್ಬ ಕ್ಯಾಥೊಲಿಕ್ ಪಾದ್ರಿ ತನ್ನ ಅರ್ಧದಷ್ಟು ವಯಸ್ಸಿನ ಯುವತಿಯನ್ನು ಪ್ರೇಮಿಸುವುದರ ವೃತ್ತಾಂತವಿತ್ತು. ಆದ್ದರಿಂದ ಆ ಸಿನಿಮಾ ಪ್ರದರ್ಶಿಸಬಾರದೆಂದು ಕೆಲವು ಕ್ಯಾಥೊಲಿಕ್ ಸಂಸ್ಥೆಗಳು ಪ್ರತಿಭಟಿಸಿದೆವು.

೯) ಮೇ ೨೦೦೫ರಲ್ಲಿ ದೆಹಲಿಯಲ್ಲಿ 'ಜೋ ಬೋಲೆ ಸೋ ನಿಹಾಲ್' ಎಂಬ ಚಲನಚಿತ್ರವನ್ನು ಪ್ರದರ್ಶಿಸುತ್ತಿದ್ದ ಎರಡು ಚಿತ್ರಮಂದಿರಗಳಲ್ಲಿ ಬಾಂಬು ಸ್ಫೋಟಿಸಿದವು. ಇಬ್ಬರು ಸತ್ತರು. ಸುಮಾರು ೫೦ ಮಂದಿಗೆ ಗಾಯವಾಯಿತು. ಕೆಲವು ಸಿಖ್ ಗುಂಪುಗಳಿಗೆ ಈ ಚಲನಚಿತ್ರದ ಶೀರ್ಷಿಕೆ ಹಾಗೂ ಕೆಲವು ದೃಶ್ಯಗಳ ಬಗ್ಗೆ ತಕರಾರಿತ್ತು. ಕೊನೆಗೆ, ವಿತರಕರು ಕೆಲವು ಚಲನಚಿತ್ರ ಮಂದಿರಗಳಿಂದ ಈ 'ಚಿತ್ರ ಪ್ರದರ್ಶನ ಹಿಂತೆಗೆದುಕೊಳ್ಳಬೇಕಾಯಿತು.

೧೦) ಇತ್ತೀಚೆಗೆ, ತಮಿಳುನಾಡಿನ ಅಣ್ಣಾ ಯೂನಿವರ್ಸಿಟಿ ಆಫ್ ಟೆಕ್ನಾಲಜಿ, ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಒಂದು ವಸ್ತ್ರ ಸಂಹಿತೆ (Dress Code)ಯನ್ನು ಜಾರಿ ಮಾಡಿತು. ಅದರಂತೆ, ಜೀನ್ಸ್, ಟೀ ಶರ್ಟ್, ಸ್ಕರ್ಟ್, ತೋಳಿಲ್ಲದ ರವಿಕೆ (ಟಾಪ್) ಹಾಗೂ ಮೈಗಂಟುವಂಥ ಉಡುಪುಗಳ ತೊಡುವಿಕೆಯನ್ನು ನಿಷೇಧಿಸಲಾಯಿತು. ಈ ತರಹದ ಉಡುಪು ಶಿಕ್ಷಣದ ಗಂಭೀರತೆಯಿಂದ ವಿದ್ಯಾರ್ಥಿಗಳನ್ನು ವಿಮುಖಗೊಳಿಸುತ್ತದೆ ಎಂದು ವಿಶ್ವವಿದ್ಯಾನಿಲಯದ ಉಪಕುಲಪತಿ ವಿಶ್ವನಾಥನ್‌ರ ಅಭಿಮತ.

೧೧) ಯುವಜನತೆಯ ಕ್ರೀಡಾ ಕಣ್ಮಣಿಯಾಗಿರುವ ಟೆನಿಸ್ ತಾರೆ ಸಾನಿಯ ಮಿರ್ಜಾ ಆಟವಾಡುವಾಗ ಚಿಕ್ಕ ಸ್ಕರ್ಟ್ ಹಾಗೂ ತೋಳಿಲ್ಲದ ಟಾಪ್‌ಗಳನ್ನು ಧರಿಸುವುದರ ವಿರುದ್ಧ ಸುನ್ನಿ ಉಲೇಮ ಮಂಡಳಿಯ ಮೌಲ್ವಿ ಸಿದ್ದಖಿ ಫತ್ವಾ ಹೊರಡಿಸಿದ್ದರು.

೧೨) ಇತ್ತೀಚೆಗೆ ಗೋವಾದಲ್ಲಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಜರುಗಿತು. ಅದರಲ್ಲಿ ಗುಜರಾತ್ ಗಲಭೆಗಳ ವಸ್ತುವಿದ್ದ ರಾಹುಲ್ ಢೋಲಾಕಿಯರ 'ಪರ್ಜಾನಿಯ' ಚಲನಚಿತ್ರ ಪ್ರದರ್ಶಿತವಾಯಿತು. ಇದರ ವಿರುದ್ಧ ಪ್ರತಿಭಟನೆಗಳು ಜರುಗಿದವು. ಈ ಚಲನಚಿತ್ರಕ್ಕೆ ದಾವೂದ್ ಇಬ್ರಾಹಿಂನ ಆರ್ಥಿಕ ಸಹಾಯವಿತ್ತೆಂದು ಪ್ರತಿಭಟನಕಾರರ ಆರೋಪವಾಗಿತ್ತು.

ಈ ಕೆಲವು ಘಟನೆಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿದಾಗ, ನಮ್ಮ ಸಮಾಜದಲ್ಲಿ ಅಸಹನೆ ಅಂತರ್ಸುಳಿಯಾಗಿ (Under Current) ಹರಿಯುತ್ತಿರುವುದನ್ನು ಗಮನಿಸಬಹುದು. ಇದರ ಸೀಮೆ ಮೀರಿದ ಹರಹು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಬಹುದು. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿಶ್ಲೇಷಿಸುವಾಗ, ಅದು ಸ್ವಚ್ಛಂದದ ಪರಾಕಾಷ್ಠೆಯ ಪ್ರತಿಪಾದನೆಯಾಗಬಾರದು. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೪೮೩೦೬

ಕನ್ನಡ ಶಾಸ್ತ್ರೀಯ ಭಾಷೆ
ಪಟ್ಟವೋ? ಚಟ್ಟವೋ?

ವಿಶ್ಲೇಷಣೆ

ಕನ್ನಡ ಲೋಕದ ವಿವಾದಗಳು ಅರ್ಥ ಪೂರ್ಣ ವಾಗ್ವಾದಗಳಾಗುತ್ತಲೇ ಇಲ್ಲ. ಈಗ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಪಟ್ಟ ದಕ್ಕಬೇಕೆ ಎಂಬುದರ ಸುತ್ತ ಅನವಶ್ಯಕವಾಗಿ ಎದ್ದಿರುವ ವಿವಾದವೂ ಅದೇ ದಾರಿ ಹಿಡಿದಿರುವಂತೆ ಕಾಣುತ್ತದೆ. ಸಮುದ್ರ ಮಥನದಲ್ಲೂ ಪರ-ವಿರೋಧಿಗಳ ಸಾವು-ಬದುಕಿನ ಸಂಘರ್ಷವಿತ್ತು. ಆದರೆ ಹಾಲಹಲದ ನಂತರ, ಅಮೃತವೂ ದಕ್ಕಿತು. ಅದರ ಹಂಚಿಕೆಯಲ್ಲಿ ಆದ ತಾರತಮ್ಯ ಮತ್ತೊಂದು ವಿಷಯ. ಆದರೆ ಈ 'ಭಾಷಾ ಮಂಥನ' ಹಾಲಹಲವನ್ನಷ್ಟೇ ಸೃಷ್ಟಿಸಿದೆ. ಅಮೃತ ಪಡೆಯಲು ಇನ್ನಷ್ಟೇ ಸಂಘರ್ಷ ಮಂಥನ ನಡೆಸಬೇಕಿದೆ!

○ ಶಿವಸುಂದರ್

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡಬೇಕೆಂಬ "ಚಳವಳಿ" ಇದ್ದಕ್ಕಿದ್ದಂತೆ ಕನ್ನಡ ಸಾಂಸ್ಕೃತಿಕ ಲೋಕದ ಪ್ರಮುಖ ಪ್ರಶ್ನೆಯಾಗಿಬಿಟ್ಟದೆ. ಕನ್ನಡ ಒಂದು ಪ್ರಾಚೀನ ಹಾಗೂ ಜನಪದರ ಭಾಷೆಯೆಂಬುದರ ಬಗ್ಗೆ ಕರ್ನಾಟಕದ ಸಾಂಸ್ಕೃತಿಕ ದಿಗ್ಗಜರುಗಳ ನಡುವೆ ಯಾವುದೇ ಭಿನ್ನಭಿಪ್ರಾಯವಿಲ್ಲ. ಆದರೂ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಪಟ್ಟ ನೀಡುವುದನ್ನು ವಿರೋಧಿಸುವವರಂತೆ ಕೆಲವರ ಮೇಲೆ ಆರೋಪ ಹೊರಿಸಿ ಧಿಕ್ಕಾರಗಳು, ಪ್ರತಿರೋಧಗಳು ನಡೆಯುತ್ತಿವೆ. ದೇಜಗೌ, ಚಂಪಾ ಕ್ಯಾಂಪ್ ಒಂದು ಕಡೆ ಆದರೆ ಅನಂತಮೂರ್ತಿ ಕ್ಯಾಂಪ್ ಇನ್ನೊಂದೆಡೆ. ಈ ಎರಡೂ ಕ್ಯಾಂಪ್‌ಗಳ ನಡುವೆ ವ್ಯತ್ಯಾಸವೇನು? ಎರಡೂ ಕ್ಯಾಂಪ್‌ಗಳು ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಪಟ್ಟ ಬೇಕೆಂದೇ ವಾದಿಸುತ್ತಿರುವಾಗ ವಿರೋಧವೆಲ್ಲಿಯದು!.

ಇದು ಪ್ರಾಯಶಃ, ನಮ್ಮ ಕನ್ನಡ ಸಾಂಸ್ಕೃತಿಕ ಲೋಕದ ಕೆಲವು ವಿಚಿತ್ರ ಹಾಗೂ ವಿಶಿಷ್ಟತೆಗಳಲ್ಲಿ ಒಂದು. ಹಾಗೆ ನೋಡಿದರೆ, ಕನ್ನಡ ಲೋಕದ ವಿವಾದಗಳು ಅರ್ಥಪೂರ್ಣ ವಾಗ್ವಾದಗಳಾಗಲೇ ಇಲ್ಲ. ಏಕೆಂದರೆ ಸತ್ಯಾನ್ವೇಷಣೆ ಮೂಲಭೂತವಾದ 'ಸಂವಾದ' ಪ್ರತಿವಾದಗಳ ನಡೆಯುವ ಪ್ರಬುದ್ಧತೆ ಕಾಣಿಸಿಕೊಂಡಿರುವುದು ಅತ್ಯಂತ ಅಪರೂಪ. ಬೌದ್ಧಿಕ ವಾದಗಳ ಹಿಂದಿನ ಸ್ವಹಿತಾಸಕ್ತಿ, ಜಾತಿ ಮೂಲ ಇತ್ಯಾದಿಗಳೇ ವಿವಾದಗಳ ಹಿಂದಿನ ಪಾಕ್ಷಿಕ ಸತ್ಯಗಳನ್ನು ನುಂಗಿಹಾಕಿರುವುದು ಕನ್ನಡದ ಹಲವು ದುರಂತಗಳಲ್ಲಿ ಒಂದು. ಹೀಗಾಗಿಯೇ ಹಿಂತಿರುಗಿ ನೋಡಿದಾಗ ಒಂದು ವಿವಾದ ಪೂರ್ಣಗೊಂಡ ನಂತರ ಕಾಣಬೇಕಾದ ಅರ್ಥಪೂರ್ಣ ಸಾರಾಂಶ-ಸಾರಭೂತ ತಿಳವಳಿಕೆ ಕಾಣುವುದೇ ಇಲ್ಲ. ಇದಕ್ಕೆ ಕೆಲವು ಅಪವಾದಗಳಿರಬಹುದಾದರೂ ಇದು ನಮ್ಮ ಕನ್ನಡ ಸಾರಸ್ವತ ಲೋಕದ ಸ್ಥಾಯಿಭಾವ.

ಈಗ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಪಟ್ಟ ದಕ್ಕ ಬೇಕೆ ಎಂಬುದರ ಸುತ್ತ ಅನವಶ್ಯಕವಾಗಿ ಎದ್ದಿರುವ ವಿವಾದವೂ ಅದೇ ದಾರಿ ಹಿಡಿದಿರುವಂತೆ ಕಾಣುತ್ತದೆ. ಸಮುದ್ರ ಮಥನದಲ್ಲೂ ಪರ-ವಿರೋಧಿಗಳ ಸಾವು-ಬದುಕಿನ ಸಂಘರ್ಷವಿತ್ತು. ಆದರೆ ಹಾಲಹಲದ ನಂತರ, ಅಮೃತವೂ ದಕ್ಕಿತು. ಅದರ ಹಂಚಿಕೆಯಲ್ಲಿ ಆದ ತಾರತಮ್ಯ ಮತ್ತೊಂದು ವಿಷಯ. ಆದರೆ ಈ 'ಭಾಷಾ ಮಂಥನ' ಹಾಲಹಲವನ್ನಷ್ಟೇ ಸೃಷ್ಟಿಸಿದೆ. ಅಮೃತ ಪಡೆಯಲು ಇನ್ನಷ್ಟೇ ಸಂಘರ್ಷ ಮಂಥನ ನಡೆಸಬೇಕಿದೆ!

ಇದ್ದಕ್ಕಿದ್ದಂತೆ ಈ 'ಶಾಸ್ತ್ರೀಯ ಭಾಷಾ ಪಟ್ಟದ' ರಾಜಕಾರಣ ಹುಟ್ಟಿಕೊಳ್ಳಲು ಕಾರಣವೇನು? ಒಂದು ಜನಭಾಷೆಗೆ-ಪ್ರಾಚೀನ ಜನಭಾಷೆಗೆ 'ಶಾಸ್ತ್ರೀಯ' ಎಂಬ ಪಟ್ಟ ಕೊಡುವುದರ ಹಿಂದೆ ಅಕೆಡಮಿಕ್ ಔಚಿತ್ಯವೆಷ್ಟು? ರಾಜಕೀಯ ಕಾರಣಗಳೆಷ್ಟು?. ಇಂದು ಕನ್ನಡದಂಥ ಜನಭಾಷೆಗೆ ಅಗತ್ಯವಿರುವುದು ಅದನ್ನು ಉಸಿರುಗಟ್ಟಿಸಿ ಕೊಲ್ಲುತ್ತಿರುವ 'ಭಾಷಾಹತ್ಯೆ' (Linguicide)ಯಂತ ವಾತಾವರಣದಿಂದ ಬಚಾಯಿಸುವ ಆಕ್ಸಿಜನ್ನೇ? ಅಥವಾ ಇತಿಹಾಸದ ಹಿರಿಮೆಯ ಅಮಲಿನ ನಿಸ್ತೇಜಗೊಳಿಸುವ ಅನಸ್ಥೇಷಿಯೊವೋ? ಇಂದು ಚಳವಳಿ ಆಗಬೇಕಿರುವುದು ಈಗಾಗಲೇ ಸಾಬೀತಾಗಿರುವ ಕನ್ನಡದ 'ಶಾಸ್ತ್ರೀಯತೆಗೆ ಸರ್ಕಾರಿ ಮನ್ನಣೆ ಪಡೆದುಕೊಳ್ಳಲೋ ಅಥವಾ ಜನರ ಬದುಕಿನಿಂದ ಕಣ್ಮರೆಯಾಗುತ್ತಿರುವ-ಅಪ್ರಸ್ತುತವಾಗುತ್ತಿರುವ ಕನ್ನಡಕ್ಕೆ ಮರಳಿ ಪ್ರಸ್ತುತತೆ ತಂದುಕೊಡುವುದಕ್ಕಾಗಿಯೋ? ಚಳವಳಿ ನಡೆಯಬೇಕಿರುವುದೇ ಪಟ್ಟಕ್ಕೊ ಅಥವಾ ಕನ್ನಡವನ್ನು ಆ ಮೂಲಕ ಆ ಭಾಷೆಯನ್ನೇ ಉಸಿರಾಡುವ ಆ ಭಾಷಿಕರ ಬದುಕನ್ನು ಕಟ್ಟುವುದಕ್ಕೊ?

ಕನ್ನಡದ ಸಾಂಸ್ಕೃತಿ ಲೋಕ ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಚರ್ಚೆಯನ್ನು ಎತ್ತಿದ್ದರೆ ಗಂಧದ ಜೊತೆ ಗುದ್ದಾಟ ನಡೆಸಿದ ಲಾಭವಾದರೂ ಕನ್ನಡದ ಜನತೆಗೆ ದಕ್ಕುತ್ತಿತ್ತು.

ಶಾಸ್ತ್ರೀಯ ಭಾಷೆ ಎಂದರೇನು?

ಹಂಪಿ ವಿಶ್ವವಿದ್ಯಾಲಯದ ಹಿರಿಯ ಪ್ರೊಫೆಸರಾದ ಡಾ॥ ಕೆ.ವಿ ನಾರಾಯಣ ಅವರು ಅಭಿಪ್ರಾಯ ಪಡುವಂತೆ 'ಕ್ಲಾಸಿಕಲ್ ಭಾಷೆ' ಎಂಬುದನ್ನು 'ಶಾಸ್ತ್ರೀಯ ಭಾಷೆ' ಎಂದು ಅನುವಾದ ಮಾಡುವುದೇ ತಪ್ಪು. ಕ್ಲಾಸಿಕಲ್ ಎಂಬುದಕ್ಕೆ ಪ್ರಾಚೀನವಾದ, ಅನನ್ಯವಾದ ಎಂಬ ಅರ್ಥ ಬರುತ್ತವೆ. ಶಾಸ್ತ್ರೀಯ ಎಂಬುವುದಕ್ಕೆ ತರ್ಕ, ಶಾಸ್ತ್ರಬದ್ಧ, ವೈಜ್ಞಾನಿಕ ಎಂಬ ಅರ್ಥಗಳು ಬರುತ್ತವೆ. ಹಾಗೆ ನೋಡಿದರೆ ಜನರ ಬದುಕಿನ-ಪ್ರಧಾನವಾಗಿ ಶ್ರಮದ ಬದುಕಿನ-ಭಾಗವಾಗಿ ಅರಳಿದ ಎಲ್ಲಾ ಭಾಷೆಗಳು ಒಂದರ್ಥದಲ್ಲಿ ಶಾಸ್ತ್ರೀಯವೇ. ಲಿಪಿ ಇರುವ ಭಾಷೆಗಳಲ್ಲೂ ವೈಜ್ಞಾನಿಕತೆ, ತರ್ಕ ಇದ್ದೇ ಇರುತ್ತದೆ. ಇಲ್ಲದಿದ್ದರೆ ಶತಮಾ

ಚಂಪಾ


ಅನಂತಮೂರ್ತಿ


ದೇಜಗೌ

ನಗಳ ಕಾಲ ಪೀಳಿಗೆಯಿಂದ-ಪೀಳಿಗೆಗೆ ಅದರ ಸಂವಹನವೇ ಸಾಧ್ಯವಾಗುವುದಿಲ್ಲ.

ಹೀಗಾಗಿ ಕ್ಲಾಸಿಕಲ್ ಎಂಬ ಪ್ರಶ್ನೆ, ಆ ಭಾಷೆ ಎಷ್ಟೇ ಪ್ರಾಚೀನವಾದದ್ದು ಹಾಗೂ ಶತಮಾನಗಳ ಕಾಲ ಹೇಗೆ ಅದು ತನ್ನ ಬಂಧ, ಸಾಹಿತ್ಯ ಹಾಗೂ ಇತರ ಭಾಷೆಗಳಿಗಿಂತ ಭಿನ್ನವಾದ ವಿಶಿಷ್ಟತೆ, ಅನನ್ಯತೆ ಉಳಿಸುಕೊಂಡು ಬಂದಿದೆ ಎಂಬ ಪ್ರಶ್ನೆಯೇ ಆಗಿದೆ. ಆದರೆ ಯಾವುದೇ ಒಂದು ಜೀವಂತ ಜನಭಾಷೆ ಹಾಗೂ ಅದರ ವ್ಯಾಕರಣ, ಲಿಪಿ ಎಲ್ಲವೂ ರೂಪಾಂತರಗೊಳ್ಳುತ್ತಲೇ ಬಂದಿವೆ. ಹೀಗಾಗಿ ಭಾಷಾ ವಿನ್ಯಾಸ, ವ್ಯಾಕರಣ ಇತ್ಯಾದಿ ಭಾಷಿಕ ವಿಷಯಗಳಲ್ಲಿಯೂ ಬದಲಾವಣೆ ಇಲ್ಲದವು ಮಾತ್ರ ಕ್ಲಾಸಿಕಲ್ ಎಂದು ಪರಿಗಣಿಸಬೇಕೆಂದರೆ, ಇಂದು ಪ್ರಾಚೀನ ಇತಿಹಾಸ ಹೊಂದಿದ್ದು ಆಧುನಿಕ ರೂಪಾಂತರ ಪಡೆದಿರುವ ಯಾವ ಪ್ರಾಚೀನ ಜನಭಾಷೆಗಳೂ ಕ್ಲಾಸಿಕಲ್ ಸ್ಥಾನಕ್ಕೆ ಅರ್ಹವಾಗುವುದಿಲ್ಲ.

ಎನ್‌ಸೈಕ್ಲೊಪೀಡಿಯಾ ಆಫ್ ಲಾಂಗ್ವೇಜ್‌ನಲ್ಲಿ ಭಾಷಾ ಶಾಸ್ತ್ರಜ್ಞರು ನೀಡಿರುವ ವ್ಯಾಖ್ಯಾನದ ಪ್ರಕಾರ "ಪ್ರಾಚೀನವೂ ವಿಸ್ತೃತವೂ ಆದ ಬರಹಗಳನ್ನು ಹೊಂದಿದ್ದು ಈಗ ಯಾವ ಸ್ವಾಭಾವಿಕರನ್ನು ಹೊಂದಿರದ ಭಾಷೆಯೇ ಕ್ಲಾಸಿಕಲ್ ಭಾಷೆ. ಉದಾ: ಲ್ಯಾಟಿನ್, ಪ್ರಾಚೀನ ಗ್ರೀಕ್, ಸಂಸ್ಕೃತ" ಎಂದು ವಿವರಿಸುತ್ತದೆ. ಅಂದರೆ, ಕ್ಲಾಸಿಕಲ್ ಭಾಷೆ ಎಂದರೆ ಮೃತಭಾಷೆ ಎಂದರ್ಥ. ಅಂದರೆ ಯಾವ ಜೀವಂತ ಜನಭಾಷೆಯೂ ಈ ವ್ಯಾಖ್ಯಾನದ ಪ್ರಕಾರ ಕ್ಲಾಸಿಕಲ್ ಅಲ್ಲ! ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಜನಭಾಷೆ ಕ್ಲಾಸಿಕಲ್ ಸ್ಥಾನಮಾನ ಕೇಳುತ್ತಿದೆ ಎಂದರೆ ತನ್ನ "ಡೆತ್ ಸರ್ಟಿಫಿಕೇಟ್" ಕೇಳುತ್ತಿದೆ ಎಂದರ್ಥ.

ಇಲ್ಲಿ ಭಾಷೆಯ ಪ್ರಾಚೀನತೆಗಿಂತ, ಅಲ್ಲಿನ ಸಾಹಿತ್ಯದ ಅರ್ಥಾತ್ ಲಿಪಿಕ ಸಾಹಿತ್ಯದ ಪ್ರಾಚೀನತೆಯನ್ನೇ ಪ್ರಧಾನವಾಗಿ ಪರಿಗಣಿಸಲಾಗುತ್ತಿದೆ. ಆ ಮೂಲಕ ಲಿಪಿಕವಲ್ಲದ ಭಾಷೆಗಳ ಪ್ರಾಚೀನತೆಯನ್ನೇ ಈ 'ಕ್ಲಾಸಿಕಲ್ ಭಾಷಾ ರಾಜಕಾರಣ' ತಿರಸ್ಕರಿಸುತ್ತದೆ ಎಂಬುದು ನಾರಾಯಣರಂಥ ಹಲವು ಭಾಷಾ ಶಾಸ್ತ್ರಜ್ಞರ ಆಕ್ಷೇಪ. ಒಂದು ಪ್ರಜಾಸತ್ತೆಯಲ್ಲಿ ನಂಬಿಕೆ ಇಟ್ಟಿರುವ ಸಂಸ್ಕೃತಿಗೆ ಈ ಪ್ರಶ್ನೆ ತುಂಬಾ ಮುಖ್ಯವಾದದ್ದು.

ಎರಡನೆಯದಾಗಿ ಈ ಭಾಷೆಯ - ಸಾಹಿತ್ಯದ ಪ್ರಾಚೀನತೆಯನ್ನು ಅಳೆಯುವ ಮಾನದಂಡ ಯಾವುದು? ಮೊನ್ನೆ ಕೇಂದ್ರ ಮಂತ್ರಿ ಜೈಪಾಲ್ ರೆಡ್ಡಿಯವರು "ಕ್ಲಾಸಿಕಲ್ ಎಂದು ಕರೆಯಲು ಕನಿಷ್ಠ ೧೫೦೦-೨೦೦೦ ವರ್ಷಗಳಷ್ಟು ಹಳೆಯ ಸಾಹಿತ್ಯ ಸಂಪ್ರದಾಯವಿರಬೇಕು" ಎಂದಿದ್ದಾರೆ. ಕ್ಯಾಬಿನೆಟ್ ಈ ತೀರ್ಮಾನಕ್ಕೆ ಬರಲು ಸಾಹಿತ್ಯ ಅಕಾಡೆಮಿಯ ಪರಿಣತರು ಸಲಹೆ ನೀಡಿದ್ದಾರೆ. ಆದರೆ ಇದರ ಬಗ್ಗೆ ವಿಶ್ವಮಾನ್ಯ ಮಾನದಂಡಗಳೇನೂ ಇಲ್ಲ. ೧೦೦೦ ವರ್ಷಗಳಷ್ಟು ಹಳೆಯದಾದ ಸಾಹಿತ್ಯ ಪರಂಪರೆ ಉಳ್ಳ ಭಾಷೆ ಕ್ಲಾಸಿಕಲ್ ಅಲ್ಲ ಎಂದು ಹೇಳಲು ಶಾಸ್ತ್ರೀಯ ಮಾನದಂಡಗಳೇನೂ ಇಲ್ಲ.

ಆದರೆ ಒಂದು ಅಕೆಡಮಿಕ್ ವಲಯದ ವಿರಾಮ ವೇಳೆಯ ಪ್ರಶ್ನೆಯಾಗಬಹುದಾದಲ್ಲಿ ಒಂದು ರಾಜಕೀಯ ಚಳವಳಿಯಾದದ್ದೇಕೆ?

ಕ್ಲಾಸಿಕಲ್ ಭಾಷೆಯ ಸುತ್ತ ಕೆರಿಯಾರ್ ರಾಜಕಾರಣ:

ಭಾಷಾ ವಿದ್ವಾಂಸರ ಮಟ್ಟಿಗೆ ಹೆಚ್ಚು ಕಡಿಮೆ ಯಾವ್ಯಾವುದು ಕ್ಲಾಸಿಕಲ್ ಭಾಷೆ ಎಂಬುದು ತೀರ್ಮಾನವಾಗಿರುವ ವಿಷಯ. ವಿಶ್ವ ಭಾಷಾ ವಿದ್ವಾಂಸರು ನೀಡಿರುವ ಪಟ್ಟಿ ಅಂತರ್ಜಾಲದ 'ವಿಕಿಪೀಡಿಯಾ' ಎಂಬ ವೆಬ್ ಸೈಟಿನಲ್ಲಿ ಲಭ್ಯವಿದೆ. ಅದರಲ್ಲಿ ಕ್ಲಾಸಿಕಲ್ ಭಾಷೆಗಳ ಪಟ್ಟಿಯಲ್ಲಿ ವಿಶ್ವ ೧೦ ಭಾಷೆಗಳಿವೆ. ಇಂಡೋ-ಯುರೋಪಿಯನ್ ಭಾಷಾ ಸಮುದಾಯದ ಪ್ರಾಚೀನ ಗ್ರೀಕ್, ಲ್ಯಾಟಿನ್, ಸಂಸ್ಕೃತ, ಪರ್ಷಿಯನ್, ಪಾಲಿ ಭಾಷೆಗಳಿವೆ. ಆಫ್ರೋ-ಅರೇಬಿಕ್ ಭಾಷಾ ಸಮುದಾಯದ ಪ್ರಾಚೀನ ಅರೇಬಿಕ್ ಹಾಗೂ ಹೀಬ್ರೊ ಭಾಷೆಗಳಿವೆ. ಸೈನೋ-ಟಿಬೆಟಿಯನ್ ಸಮುದಾಯದ ಚೀನೀ ಭಾಷೆಯಿದೆ.

ಅಷ್ಟು ಮಾತ್ರವಲ್ಲ, ಇವುಗಳೊಂದಿಗೆ ದ್ರಾವಿಡಾ ಭಾಷಾ ಸಮುದಾಯದ ತಮಿಳು ಹಾಗೂ ಕನ್ನಡಗಳು ಆ ಪಟ್ಟಿಯಲ್ಲಿವೆ.

ಹೀಗೆ ವೈಜ್ಞಾನಿಕವೋ, ಅವೈಜ್ಞಾನಿಕವೋ ಜೀವಂತ ಭಾಷೆಯಾದ ಹಾಗೂ ತನ್ನದೇ ಭಾಷಾಕರನ್ನು ಹೊಂದಿರು ಕನ್ನಡ ಹಾಗೂ ತಮಿಳನ್ನು ಭಾಷಾ ವಿದ್ವಾಂಸರು ಶಾಸ್ತ್ರೀಯ ಭಾಷೆಗಳ ಪಟ್ಟಿಗೆ ಸೇರಿಸಿದ್ದಾರೆ. ಅದರಿಂದ ಯಾವ ವಿಶೇಷ ಪ್ರಯೋಜನವೂ ಆ ಭಾಷೆಗಳಿಗೆ ಆಗಿಲ್ಲ. ಇಂದು ಆ ಭಾಷೆಗಳನ್ನಾಡುತ್ತಿರುವ ಆ ಭಾಷಿಕರಿಗೂ ಆಗಿಲ್ಲ. ಆದರೂ ಇದ್ದಕ್ಕಿದ್ದಂತೆ ತಮಿಳನ್ನು ಒಂದು ಶಾಸ್ತ್ರೀಯ ಭಾಷೆಯನ್ನಾಗಿ ಪರಿಗಣಿಸಬೇಕೆಂಬ ವಾದವನ್ನು ತಮಿಳುನಾಡಿನ ರಾಜಕಾರಣಿಗಳು ಕಳೆದ ಕೆಲವು ವರ್ಷಗಳಿಂದ ಪ್ರಾರಂಭಿಸಿದರು.

ಎನ್‌ಸೈಕ್ಲೊಪೀಡಿಯಾ ಆಫ್ ಲಾಂಗ್ವೇಜ್‌ನಲ್ಲಿ ಭಾಷಾ ಶಾಸ್ತ್ರಜ್ಞರು ನೀಡಿರುವ ವ್ಯಾಖ್ಯಾನದ ಪ್ರಕಾರ "ಪ್ರಾಚೀನವೂ ವಿಸ್ತೃತವೂ ಆದ ಬರಹಗಳನ್ನು ಹೊಂದಿದ್ದು ಈಗ ಯಾವ ಸ್ವಾಭಾವಿಕರನ್ನು ಹೊಂದಿರದ ಭಾಷೆಯೇ ಕ್ಲಾಸಿಕಲ್ ಭಾಷೆ. ಉದಾ: ಲ್ಯಾಟಿನ್, ಪ್ರಾಚೀನ ಗ್ರೀಕ್, ಸಂಸ್ಕೃತ" ಎಂದು ವಿವರಿಸುತ್ತದೆ. ಅಂದರೆ, ಕ್ಲಾಸಿಕಲ್ ಭಾಷೆ ಎಂದರೆ ಮೃತಭಾಷೆ ಎಂದರ್ಥ. ಅಂದರೆ ಯಾವ ಜೀವಂತ ಜನಭಾಷೆಯೂ ಈ ವ್ಯಾಖ್ಯಾನದ ಪ್ರಕಾರ ಕ್ಲಾಸಿಕಲ್ ಅಲ್ಲ! ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಜನಭಾಷೆ ಕ್ಲಾಸಿಕಲ್ ಸ್ಥಾನಮಾನ ಕೇಳುತ್ತಿದೆ ಎಂದರೆ ತನ್ನ "ಡೆತ್ ಸರ್ಟಿಫಿಕೇಟ್" ಕೇಳುತ್ತಿದೆ ಎಂದರ್ಥ. ಇಲ್ಲಿ ಭಾಷೆಯ ಪ್ರಾಚೀನತೆಗಿಂತ, ಅಲ್ಲಿನ ಸಾಹಿತ್ಯದ ಅರ್ಥಾತ್ ಲಿಪಿಕ ಸಾಹಿತ್ಯದ ಪ್ರಾಚೀನತೆಯನ್ನೇ ಪ್ರಧಾನವಾಗಿ ಪರಿಗಣಿಸಲಾಗುತ್ತಿದೆ. ಆ ಮೂಲಕ ಲಿಪಿಕವಲ್ಲದ ಭಾಷೆಗಳ ಪ್ರಾಚೀನತೆ ಯನ್ನೇ ಈ 'ಕ್ಲಾಸಿಕಲ್ ಭಾಷಾ ರಾಜಕಾರಣ' ತಿರಸ್ಕರಿಸುತ್ತದೆ ಎಂಬುದು ನಾರಾಯಣರಂಥ ಹಲವು ಭಾಷಾ ಶಾಸ್ತ್ರಜ್ಞರ ಆಕ್ಷೇಪ. ಒಂದು ಪ್ರಜಾಸತ್ತೆಯಲ್ಲಿ ನಂಬಿಕೆ ಇಟ್ಟಿರುವ ಸಂಸ್ಕೃತಿಗೆ ಈ ಪ್ರಶ್ನೆ ತುಂಬಾ ಮುಖ್ಯವಾದದ್ದು.

ಈ ರಾಜಕಾರಣ ಪ್ರಾರಂಬವಾದದ್ದು ಜಾರ್ಜ್ ಹಾರ್ಟ್ ಎಂಬ ಅಮೆರಿಕದ ಭಾಷಾ ವಿದ್ವಾಂಸನೊಬ್ಬನಿಂದ. ತಮಿಳಿನ ಪ್ರೊ. ಮರೈಮಲೈ ಎಂಬ ವಿದ್ವಾಂಸರೊಬ್ಬರು ತಮಿಳು ಭಾಷಾ ಪರಂಪರೆಯ ಬಗ್ಗೆ ವಿಶೇಷ ಪರಿಶ್ರಮ ಹಾಗೂ ವಿದ್ವತ್ತು ಹೊಂದಿದ್ದ ಉತ್ತರ ಅಮೆರಿಕದ ಯುನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದ ಡಿಪಾರ್ಟ್‌ಮೆಂಟ್ ಆಫ್ ಸೌತ್ ಅಂಡ್ ಸೌತ್ ಏಷಿಯನ್ ಸ್ಟಡೀಸ್‌ನಲ್ಲಿ ತಮಿಳು ಪ್ರಾಧ್ಯಾಪಕರಾಗಿದ್ದ ಜಾರ್ಜ್ ಎಲ್. ಹಾರ್ಟ್‌ರಿಗೆ ಪತ್ರ ಬರೆದು ತಮಿಳನ್ನು ಕ್ಲಾಸಿಕಲ್ ಭಾಷೆ ಎಂದು ಪರಿಗಣಿಸಲು ಶಿಫಾರಸ್ಸು ಪತ್ರ ಬರೆದುಕೊಡಲು ಕೋರಿದರು.

೨೦೦೦ ನೇ ಇಸವಿಯ ಏಪ್ರಿಲ್ ೧೧ ರಂದು ಪ್ರೊ. ಹಾರ್ಟ್‌ರವರು Statement on the status of tamil as a classical language' ಎಂಬ ಹೇಳಿಕೆ ನೀಡಿದರು. ಅದರಲ್ಲಿ ವಿದ್ವತ್ಪೂರ್ಣವಾಗಿ ಹೇಗೆ ತಮಿಳು ಭಾಷೆ ಎಲ್ಲ ರೀತಿಯಿಂದಲೂ ಕ್ಲಾಸಿಕಲ್ ಎಂದು ಕರೆಸಿಕೊಳ್ಳಲು ಅರ್ಹ ಎಂಬುದನ್ನು ವಿವರಿಸಿ, ಭಾರತ ಸರ್ಕಾರ ತಮಿಳು ಭಾಷೆಗೆ ಕ್ಲಾಸಿಕಲ್ ಸ್ಥಾನಮಾನ ಕೊಡಲು ಹಿಂಜರಿಯುತ್ತಿರುವುದು ದುರ್ದೈವ ಎಂದು ಅಭಿಪ್ರಾಯಪಟ್ಟಿದ್ದರು. "ತಮಿಳಿಗೆ ಆ ಸ್ಥಾನ ನೀಡಿದರೆ ತೆಲುಗು - ಕನ್ನಡ ಭಾಷೆಗಳೂ ಆ ಸ್ಥಾನ ಕೇಳಬಹುದೆಂಬುದು ಎಂಬುದು ಸರ್ಕಾರದ ಆತಂಕ ವಿರಬಹುದು- ಆದರೆ, ಇಂಗ್ಲಿಷ್, ಫ್ರೆಂಚ್ ಭಾಷೆಗಳೂ ಗ್ರೀಕ್-ಲ್ಯಾಟಿನ್‌ಗಳಿಗಿಂತ ಆಧುನಿಕ ಹಾಗೂ ಜನಪ್ರಿಯವಾಗಿದ್ದರೂ ಅವೇನೂ ಶಾಸ್ತ್ರೀಯ ಸ್ಥಾನಮಾನ ಕೇಳುತ್ತಿಲ್ಲ-ಆದ್ದರಿಂದ ಭಾರತ ಸರ್ಕಾರ ಆ ಆತಂಕಗಳು ಇಲ್ಲದೆ ತಮಿಳನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಬೇಕು" ಎಂದು ಆಗ್ರಹಿಸಿದ್ದರು.

ಹಾರ್ಟ್ ಅವರ ಈ ಹೇಳಿಕೆ ಆಧಾರದಲ್ಲಿ ವಿಶ್ವದ್ಯಂತ ಇರುವ ತಮಿಳು ಸಂಘಟನೆಗಳು ತಮಿಳುನಾಡಿನ ರಾಜಕಾರಣಿಗಳ ಮೇಲೆ ಒತ್ತಡ ಹೇರಲು ಆರಂಭಿಸಿದರು. ಅಲ್ಲಿಂದಾಚೆಗೆ ತಮಿಳುನಾಡಿನ ಎಲ್ಲಾ ರಾಜಕೀಯ ಪಕ್ಷಗಳು ಭಾರತ ಒಕ್ಕೂಟದಿಂದ ಆಗ್ರಹಿಸುವ ಹಲವಾರು ಆಗ್ರಹಗಳಲ್ಲಿ ಇದೂ ಒಂದು ಪ್ರಮುಖ ಆಗ್ರಹವಾಗಿ ಸೇರ್ಪಡೆಯಾಯಿತು. ೨೦೦೪ರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಚುನಾವಣಾ ಭರವಸೆಗಳಲ್ಲಿ ಇದೂ ಸೇರ್ಪಡೆಯಾಯಿತು. ಯುಪಿಎ ಒಕ್ಕೂಟದ ಐಕ್ಯ ಪ್ರಣಾಲಿಯಲ್ಲೂ ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಭರವಸೆ ನೀಡಲಾಯಿತು. ಇಷ್ಟನ್ನು ಯುಪಿಎ ಮೈತ್ರಿಕೂಟದಲ್ಲಿ ತಮಿಳುನಾಡಿನ ಡಿ.ಎಂ.ಕೆ, ಪಿ.ಎಂ.ಕೆ ಪಕ್ಷಗಳು ಸೇರಲು ಕೇಂದ್ರ ಮಾಡಲೇಬೇಕಿತ್ತು. ಹೀಗಾಗಿ ೨೦೦೪ ರ ಸೆಪ್ಟೆಂಬರ್ ೧೭ ರಂದು ಭಾರತ ಸರ್ಕಾರ ತಮಿಳನ್ನು ಒಂದು ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು.

ಶಾಸ್ತ್ರೀಯ ಭಾಷೆ ಎಂದರೆ ಸಿಗುವ ಸವಲತ್ತೇನು!:

ಭಾರತದ ಸಂವಿಧಾನದಲ್ಲಿ ರಾಜಭಾಷೆ, ಅಧಿಕೃತ ಭಾಷೆ, ಸಂಪರ್ಕ ಭಾಷೆಗಳ ಪ್ರಸ್ತಾಪ ಹಾಗೂ ಸ್ಥಾನಮಾನಗಳ ನಿರ್ವಚನವಿದೆಯೇ ವಿನಃ ಶಾಸ್ತ್ರೀಯ ಭಾಷೆಯ ಪ್ರಸ್ತಾಪ ಅಥವಾ ಸ್ಥಾನಮಾನಗಳ ಕುರಿತು ಯಾವುದೇ ನಿರ್ದೇಶನವಿಲ್ಲ. ಒಂದು ಪ್ರಜಾಸತ್ತೆಯ ಕಾರ್ಯನಿರ್ವಹಣಾ ಮಾರ್ಗಸೂಚಿಯಾಗಿರುವ ಸಂವಿಧಾನ, ರಾಜ್ಯಗಳಲ್ಲಿ ಆಯಾ ರಾಜ್ಯದ ಜನಸಮುದಾಯದ ಭಾಷೆ, ಆ ರಾಜ್ಯದ ಅಧಿಕೃತ ಭಾಷೆಯಾಗಬೇಕು ಹಾಗೂ ಒಂದು ಜನಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಒಂದು ರಾಜ್ಯದಲ್ಲಿದ್ದು ತಮ್ಮ ಭಾಷೆಯೂ ರಾಜ್ಯದ ಅಧಿಕೃತ ಭಾಷೆಯಾಗಬೇಕೆಂದು ಆಗ್ರಹಿಸಿಬೇಕೆಂದು ಒತ್ತಾಯಿಸಿದಲ್ಲಿ ಸೂಕ್ತ ಕ್ರಮ ತೆಗೆದು ಕೊಳ್ಳಲು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಆದೇಶಿಸಬಹುದು.

ಇಷ್ಟಿದ್ದರೂ ಅತ್ಯಂತ ಅಪ್ರಜಾತಾಂತ್ರಿಕವಾಗಿ, ಏಕಪಕ್ಷೀಯವಾಗಿ ಹಿಂದಿಯನ್ನು ರಾಜ್ಯಭಾಷೆಯನ್ನಾಗಿಯೂ, ಮುಂದೆ ಆದೇಶ ಬರುವವರೆಗೆ ಸರ್ಕಾರ ಹಾಗೂ ಹೈಕೋರ್ಟು ಸುಪ್ರೀಂಕೋರ್ಟಿನ ವ್ಯವಹಾರಗಳನ್ನು ನಡೆಸುವಾಗ ಇಂಗ್ಲಿಷ್ ಬಳಕೆ ಮುಂದುವರೆಸಬೇಕೆಂದು ಇದೇ ಸಂವಿಧಾನ "ಮಾರ್ಗದರ್ಶನ" ಮಾಡಿದೆ. ಅದೇನೇ ಇರಲಿ. ಸಂವಿಧಾನದಲ್ಲಿ 'ಶಾಸ್ತ್ರೀಯ ಭಾಷೆ' ಎಂದು ಕರೆಯುವ ಮಾನದಂಡಗಳಾಗಲಿ, ದಕ್ಕುವ ಸವಲತ್ತುಗಳ ಬಗ್ಗೆಯಾಗಲೀ ಏನೂ ಪ್ರಸ್ತಾಪವಿಲ್ಲ.

ಹಾಗಿದ್ದರೂ ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಕರೆಸಿಕೊಳ್ಳಲ್ಪಡುವ ಭಾಷೆಗೆ ಕೆಲವು ಸವಲತ್ತುಗಳನ್ನು ಘೋಷಿಸಿದೆ. ಅದರ ಪ್ರಕಾರ ಪ್ರತಿವರ್ಷ ಆಯಾ ಶಾಸ್ತ್ರೀಯ ಭಾಷಾ ವಿದ್ವಾಂಸರಿಗೆ ಎರಡು ಕೇಂದ್ರೀಯ ಪ್ರಶಸ್ತಿ ನೀಡಲಾಗುವುದು. ಆ ಭಾಷೆಯ ಶಾಸ್ತ್ರೀಯತೆಯನ್ನು ಅಧ್ಯಯನ ಮಾಡಲು ಒಂದು ಉನ್ನತ ಅಧ್ಯಯನ ಕೇಂದ್ರ ಸ್ಥಾಪಿಸಲಾಗುವುದು. ಹಾಗೂ ಬೇರೆಬೇರೆ ವಿಶ್ವವಿದ್ಯಾಲಯಗಳಲ್ಲಿ ಆ ಶಾಸ್ತ್ರೀಯ ಭಾಷೆ ಅಧ್ಯಯನಕ್ಕೆ ಪೀಠ ಸ್ಥಾಪಿಸಲು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ)ಕ್ಕೆ ಮನವಿ ಮಾಡಿಕೊಳ್ಳಲಾಗುವುದು. ಇತ್ತೀಚೆಗೆ ಮತ್ತೊಬ್ಬ ಮಂತ್ರಿ ಶಾಸ್ತ್ರೀಯ ಭಾಷೆಗೆ ೨೦ ಕೋಟಿ ರು. ಅನುದಾನ ಘೋಷಿಸಿದ್ದಾರೆ. ಅದಕ್ಕೆ ಕ್ಯಾಬಿನೆಟ್ ಮಾನ್ಯತೆ ಇರುವ ಬಗ್ಗೆ ತಿಳಿದು ಬಂದಿಲ್ಲ. ಇವಿಷ್ಟು 'ಶಾಸ್ತ್ರೀಯ ಭಾಷೆ' ಎಂದು ಕರೆಸಿಕೊಳ್ಳಲ್ಪಡುವ ಭಾಷೆಗೆ ಸಿಗುವ "ಸವಲತ್ತುಗಳು"! ಇವೆಲ್ಲವೂ ಭಾಷೆಯನ್ನು ಪ್ರಾಥಮಿಕ ಸ್ತರದಿಂದ ಕಲಿಸಬೇಕೆಂದರೆ ಹಣವಿಲ್ಲದ, ಯುಜಿಸಿಗೂ ಹಣ ಕಡಿತವಾಗುತ್ತಿರುವ ಉದಾರೀಕರಣ, ಖಾಸಗೀಕರಣದ ಯುಗದಲ್ಲಿ ಎಂಬುದನ್ನು ನೆನಪಿನಲ್ಲಿಡೋಣ!

ತಾರತಮ್ಯ ಹುಟ್ಟಿಸಿದ ಪೈಪೋಟಿ ಚಳವಳಿ

ಹೀಗೆ ತಮಿಳನ್ನು ಇದ್ದಕ್ಕಿದ್ದಂತೆ ಭಾರತ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದ್ದರಲ್ಲಿ ಯಾವುದೇ ಭಾಷಿಕ, ಐತಿಹಾಸಿಕ, ಸಾಂಸ್ಕೃತಿಕ ಕಾರಣಗಳಿಲ್ಲ. ಇದ್ದದ್ದೆಲ್ಲಾ ಬರೀ ರಾಜಕಾರಣ. ಯಾವುದೇ ವಿಷಯ ಮಾನ್ಯತೆ ಹಾಗೂ ಮನ್ನಣೆ ಗಳಿಸಿಕೊಡುತ್ತದೆ ಎಂಥಾದಲ್ಲಿ ಅದರ ಅಗತ್ಯ, ಪರಿಣಾಮ, ಪ್ರಜಾತಂತ್ರದ ಮೇಲಾಗುವ ಪ್ರಭಾವ ಯಾವುದನ್ನೂ ಪರಿಗಣಿಸದೆ ಅದನ್ನು ಅಧಿಕಾರ ಹಿಡಿಯಲು ಅಥವಾ ಉಳಿಸಿಕೊಳ್ಳಲು ಬಳಸಿಕೊಳ್ಳವುದೇ ಅವಕಾಶವಾದಿ ರಾಜಕಾರಣದ ಮೂಲಗುಣ. ತಮಿಳು ಶಾಸ್ತ್ರೀಯ ಭಾಷೆ ಎಂದಾದುದರ ಹಿಂದೆಯೂ ಇದೇ ನಡೆದಿದೆ. ಹಿಂದೊಮ್ಮೆ 'ಹಿಂದಿ' ಹೇರಿಕೆಯ ವಿರುದ್ಧ ಮಿಲಿಟೆಂಟ್ ಚಳುವಳಿ ನಡೆಸಿದ್ದ ತಮಿಳು ಸಂಘಟನೆಗಳು, ಇಂದು ಹಿಂದಿ ರಾಜಕೀಯವಾಗಿಯಾಗಲಿ, ಸಾಂಸ್ಕೃತಿಕವಾಗಿಯಾಗಲಿ ತಮಿಳನ್ನು ಆಕ್ರಮಿಸುತ್ತಿರುವುದರ ಬಗ್ಗೆ ಮಾತೇ ಎತ್ತುತ್ತಿಲ್ಲ. ಹಿಂದೆಯೂ ಇಂದಿಗೂ ತಮಿಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ಪಡೆಯುತ್ತಿರುವ ಇಂಗ್ಲಿಷ್ ವಿರುದ್ಧ ಯಾವುದೇ ಆಗ್ರಹ ಮುಂದಿಡುತ್ತಿಲ್ಲ. ಏಕೆಂದರೆ ಭಾರತದಾದ್ಯಂತ ಹಾಗೂ ವಿಶ್ವದ ಹಲವು ಭಾಗಗಳಲ್ಲಿ ವ್ಯಾಪಿಸಿರುವ ತಮಿಳು ಒಂದು ಎಲೈಟ್-ಸಂಪನ್ನ ವರ್ಗಕ್ಕೆ ತಮಿಳಿನ ಜನಕ್ಕೆ ತಮಿಳು ಕಲಿಸುವುದಕ್ಕಿಂತ ತಮ್ಮ ಉನ್ನತಿಗೆ ಜನ ಹಿಂದಿ-ಇಂಗ್ಲಿಷ್ ಕಲಿಯುವುದು ಬೇಕಿದೆ. ಹಾಗೂ ಹೊರಗಿನ ಜನರಿಗೆ ತಮ್ಮ ಸಾಂಸ್ಕೃತಿಕ ಹಿರಿಮೆ ಒಪ್ಪಿಸುವುದರ ಮೂಲಕ ತಮ್ಮ-ಅಂದರೆ ತಮಿಳು ಭಾಷಿಕರ ಒಂದು ಸಂಪನ್ನ ವರ್ಗ-ಮೇಲ್ಮೆ ಸಾಧಿಸುವ ಅಗತ್ಯವಿದೆ. ಆದ್ದರಿಂದಲೇ "ತಮಿಳು ಶಾಸ್ತ್ರೀಯ ಭಾಷೆ' ಎಂದಾಗಿರುವುದು ತಮಿಳಿನ ಈ ವರ್ಗಕ್ಕೆ ತಮ್ಮ ಮೇಲ್‌ಚಲನೆಗೆ ಇನ್ನಷ್ಟು ಅಗತ್ಯವಿದೆ ತಮಗೆ ಒಳಿತಾದದ್ದೇ ಇಡೀ ತಮಿಳು ಜನತೆಗೆ ಒಳಿತು ಎಂದು ದಾರಿ ತಪ್ಪಿಸುತ್ತಿದ್ದಾರೆ.

ದೇಜಗೌರಂಥ ಹಿರಿಯ ಸಾಹಿತಿಗಳು 'ತಮಿಳಿನ ತಿರುಕ್ಕುರಳ್ ನಮ್ಮ ಬಸವಣ್ಣನ ವಚನದ ಮೊಣಕಾಲಿಗೂ ಬರಲ್ಲ' ಎಂಬಂತಹ ಹೇಳಿಕೆಗಳನ್ನು ನೀಡುವ ಮೂಲಕ ಕನ್ನಡದ ಹಿರಿಮೆಗಿಂತ ತಮಿಳಿನ ವಿರೋಧವನ್ನಷ್ಟೇ ವ್ಯಕ್ತಪಡಿಸಿದ್ದಾರೆ. ಇದು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಬೇಕೆಂಬ ಚಳವಳಿಯ ಹಿಂದಿನ ದುರಾಭಿಮಾನಿ ನೆಲೆಗಳನ್ನು ತೋರಿಸುತ್ತದೆ. ಇನ್ನೂ ತೋರಿಕೆಯ ಚಳವಳಿ ಏಕೆಂದರೆ, ತಮಿಳಿಗೆ ಆ ಸ್ಥಾನಮಾನ ಕೊಟ್ಟ ನಂತರ ಕೇಂದ್ರ ಸರ್ಕಾರ 'ಭಾಷಾ ಪ್ರಾಚೀನತೆಯ' ವಿಷಯವನ್ನು ಅಧಿಕಾರ ರಾಜಕಾರಣದ ವರ್ತುಲಕ್ಕೆ ತಂದದ್ದಾಗಿದೆ. ಈ ಅಧಿಕಾರ ರಾಜಕಾರಣದ ತರ್ಕ ಸಹಜವಾಗಿಯೇ ಕನ್ನಡಕ್ಕೂ ತೆಲುಗಿಗೂ ಅದೇ ಮಾನ್ಯತೆಯನ್ನು ನೀಡುವಂತೆ ಕಡ್ಡಾಯ ಮಾಡುತ್ತದೆ. ಈಗಾಗಲೇ ರಾಜಶೇಖರನ್‌ರಂತ ರಾಜಕಾರಣಿಗಳು ದೆಹಲಿಯಲ್ಲಿ ಲಾಬಿ ನಡೆಸಿದ್ದು ಆ 'ಕಿರೀಟ' ಕನ್ನಡಕ್ಕೆ ದಕ್ಕಿಯೇ ದಕ್ಕತ್ತದೆ. ಅಷ್ಟರಲ್ಲಿ, ಅದು ತಮ್ಮಿಂದಲೇ ಆದದ್ದು ಎಂಬ 'ಮನ್ನಣೆ'ಗಾಗಿ ಚಳವಳಿ ನಡೆಯುತ್ತಿದೆ. ಇದು ಕನ್ನಡಿಗರ ದುರ್ದೈವ!

ಹೀಗಾಗಿ ಈ 'ಶಾಸ್ತ್ರೀಯ ಭಾಷೆ' ರಾಜಕಾರಣ ಮೂಲತಃ ಅಪ್ರಜಾತಾಂತ್ರಿಕವಾದದ್ದು ಹಾಗೂ ಆ ಭಾಷಿಕರ ಒಂದು ಸಂಪನ್ನ ವರ್ಗದ ಹಿತಾಸಕ್ತಿ ಕಾಯುವಂತದ್ದು. ದುರದೃಷ್ಟವಶಾತ್, ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದಕ್ಕಿದ ತಕ್ಷಣ ಕನ್ನಡದ ಸಾರಸ್ವತ ಲೋಕ, ಅದರ ಹಿಂದಿನ ಜನ ವಿರೋಧಿ, ಅಪ್ರಜಾತಾಂತ್ರಿಕ ನೆಲೆಗಳನ್ನು ಪ್ರಶ್ನಿಸುವುದರ ಬದಲು, ಪೈಪೋಟಿ ಹಾಗೂ ದುರಭಿಮಾನಿ ನೆಲೆಗಳಿಂದ ಕನ್ನಡಕ್ಕೂ ಆ ಸ್ಥಾನಮಾನಬೇಕೆಂಬ ಮೇಲುಸ್ತರದ ತಿಳವಳಿಕೆಯಿಂದ ತೋರಿಕೆಯ ಚಳವಳಿ ನಡೆಸುತ್ತಿದೆ. ತಮಿಳಿಗೆ ಶಾಸ್ತ್ರೀಯ ಸ್ಥಾನಮಾನ ದಕ್ಕಿಸಿಕೊಳ್ಳುವುದರ ಹಿಂದೆ ತಮಿಳಿನ ಒಂದು ಸಂಪನ್ನ ವರ್ಗದ ಒಂದು ವ್ಯವಸ್ಥಿತ ಪ್ರಚಾರ ಯೋಜನೆಗಳಿವೆ. ಆದರೆ ಈ ವರೆಗೆ ಕನ್ನಡ ಶಾಸ್ತ್ರೀಯವೋ ಅಲ್ಲವೋ ಎಂಬ ಚರ್ಚೆಗೇ ಹೋಗದ ಕನ್ನಡ, ತಮಿಳಿಗೆ ಸಿಕ್ಕದ್ದು ತಮಗೇಕೆ ಸಿಗಬಾರದು ಎಂಬ ನೆಲೆಯಿಂದ ಕೇಳುತ್ತಿರುವುದು ಬೇಜವಾಬ್ದಾರಿ ಪೈಪೋಟಿ ಮನಸ್ಸತ್ವವನ್ನಷ್ಟೇ ಸಾಬೀತು ಮಾಡಿದೆ.

ದೇಜಗೌರಂಥ ಹಿರಿಯ ಸಾಹಿತಿಗಳು 'ತಮಿಳಿನ ತಿರುಕ್ಕುರಳ್ ನಮ್ಮ ಬಸವಣ್ಣನ ವಚನದ ಮೊಣಕಾಲಿಗೂ ಬರಲ್ಲ' ಎಂಬಂತಹ ಹೇಳಿಕೆಗಳನ್ನು ನೀಡುವ ಮೂಲಕ ಕನ್ನಡದ ಹಿರಿಮೆಗಿಂತ ತಮಿಳಿನ ವಿರೋಧವನ್ನಷ್ಟೇ ವ್ಯಕ್ತಪಡಿಸಿದ್ದಾರೆ. ಇದು ಕನ್ನಡಕ್ಕೆ ಶಾಸ್ತ್ರೀಯ ಪಟ್ಟ ಬೇಕೆಂಬ ಚಳವಳಿಯ ಹಿಂದಿನ ದುರಾಭಿಮಾನಿ ನೆಲೆಗಳನ್ನು ತೋರಿಸುತ್ತದೆ. ಇನ್ನೂ ತೋರಿಕೆಯ ಚಳವಳಿ ಏಕೆಂದರೆ, ತಮಿಳಿಗೆ ಆ ಸ್ಥಾನಮಾನ ಕೊಟ್ಟ ನಂತರ ಕೇಂದ್ರ ಸರ್ಕಾರ 'ಭಾಷಾ ಪ್ರಾಚೀನತೆಯ' ವಿಷಯವನ್ನು ಅಧಿಕಾರ ರಾಜಕಾರಣದ ವರ್ತುಲಕ್ಕೆ ತಂದದ್ದಾಗಿದೆ. ಈ ಅಧಿಕಾರ ರಾಜಕಾರಣದ ತರ್ಕ ಸಹಜವಾಗಿಯೇ ಕನ್ನಡಕ್ಕೂ ತೆಲುಗಿಗೂ ಅದೇ ಮಾನ್ಯತೆಯನ್ನು ನೀಡುವಂತೆ ಕಡ್ಡಾಯ ಮಾಡುತ್ತದೆ. ಈಗಾಗಲೇ ರಾಜಶೇಖರನ್‌ರಂತ ರಾಜಕಾರಣಿಗಳು ದೆಹಲಿಯಲ್ಲಿ ಲಾಬಿ ನಡೆಸಿದ್ದು ಆ 'ಕಿರೀಟ' ಕನ್ನಡಕ್ಕೆ ದಕ್ಕಿಯೇ ದಕ್ಕತ್ತದೆ. ಅಷ್ಟರಲ್ಲಿ, ಅದು ತಮ್ಮಿಂದಲೇ ಆದದ್ದು ಎಂಬ 'ಮನ್ನಣೆ'ಗಾಗಿ ಚಳವಳಿ ನಡೆಯುತ್ತಿದೆ. ಕನ್ನಡಿಗರ ದುರ್ದೈವ!

ಕನ್ನಡ ಅವಸಾನದತ್ತ-ಸಾಹಿತಿಗಳು ಕಿರೀಟದತ್ತ!:

ಕನ್ನಡದ ಸಾಂಸ್ಕೃತ ಲೋಕ ಕನ್ನಡ ಭಾಷೆಯ ಪ್ರಶ್ನೆಯನ್ನು ಆ ಭಾಷೆಯನ್ನಾಡುವ ಕನ್ನಡಿಗರ ಬದುಕಿನ ಪ್ರಶ್ನೆಯೊಂದಿಗೆ ಬೆರೆಸಿ ನೋಡುವ ಪ್ರಯತ್ನವನ್ನೇ ಮಾಡಿಲ್ಲ. ಕನ್ನಡ ಇಂದಿಗೂ ಉಳಿದು-ಬೆಳೆದು ಬಂದಿರುವ ಹಿಂದೆ ಕನ್ನಡದ ದಮನಕ್ಕೆ ಕಾರಣವಾದ ಸಂಸ್ಕೃತ-ಹಿಂದಿ-ಇಂಗ್ಲಿಷ್ ಭಾಷೆಗಳ ವಿರುದ್ಧ ಕನ್ನಡ ಬಿಟ್ಟರೆ ಗತ್ಯಂತರವಿಲ್ಲದ ಕನ್ನಡದ ಜನ, ಅಂದರೆ ಕನ್ನಡದ ರೈತಾಪಿ-ಕೂಲಿ ದುಡಿಯುವ ಜನ ನಡೆಸಿಕೊಂಡೇ ಬಂದಿರುವ ಬದುಕಿನ ಸಮರದ ಇತಿಹಾಸವಿದೆ. ಆದ್ದರಿಂದಲೇ ಕನ್ನಡ ಅರಳಿರುವುದು ವಿಜಯನಗರ ಸಾಮ್ರಾಜ್ಯದ ಭೋಗ-ವೈಭೋಗದ ಅರಮನೆಗಳ ಲೀಲಾ ವಿಲಾಸಗಳಲ್ಲಿ, ತಮ್ಮ ಶ್ರಮದ ಬದುಕಿನಲ್ಲಿ ಸಾಮೂಹಿಕತೆಯಲ್ಲಿ ಹೊಲಗದ್ದೆಗಳಲ್ಲಿ ದುಡಿಯುವ ಜನ ಕಂಡುಕೊಂಡ ಸಂವೇದನೆ-ಜ್ಞಾನ ಸಂವಹನಗಳ ವ್ಯಾಕರಣದಲ್ಲಿ.

ಹಾಗೆ ನೋಡಿದರೆ ಜನಭಾಷೆಯಾದ ಕನ್ನಡದ ವಿರುದ್ಧ ಸಂಸ್ಕೃತ, ಇಂಗ್ಲಿಷ್-ಹಿಂದಿ ಹೇರಿಕೆಗಳು ಕೇವಲ

ಭಾಷಾ ಹೇರಿಕೆಯನ್ನೇನೂ ಸೂಚಿಸುವುದಿಲ್ಲ. ರೈತಾಪಿ ಶೂದ್ರ ಕನ್ನಡಿಗರ ಮೇಲೆ ವೈದಿಕ ಬ್ರಾಹ್ಮಣ್ಯ ಊಳಿಗಮಾನ್ಯ ಪುರೋಹಿತಶಾಹಿ ನಡೆಸುತ್ತಿದ್ದ ದಮ್ಯದ ಭಾಷಿಕ ಅಭಿವ್ಯಕ್ತಿ, ಸಂಸ್ಕೃತ ಕನ್ನಡದ ಮೇಲೆ ನಡೆಸಿದ ಯಾಜಮಾನ್ಯ. ಆದ್ದರಿಂದ ಸಂಸ್ಕೃತದ ಯಜಮಾನ್ಯದ ವಿರುದ್ಧ ಊಳಿಗ ಮಾನ್ಯತೆಯ ವಿರುದ್ಧ ಕನ್ನಡಿಗ ಶೂದ್ರ ರೈತಾಪಿ-ದಲಿತ ಕನ್ನಡಿಗ ಸಮುದಾಯ ನಡೆಸಿದ ಹೋರಾಟದಿಂದ ಬೇರ್ಪಡಿಸಿ ನೋಡಲು ಬರುವುದಿಲ್ಲ. ವಚನ ಕಾಯಕ ಜೀವಿಗಳ ಸಾಹಿತ್ಯ ಮಾತ್ರವಾಗಿರಲಿಲ್ಲ-ಕಾಯಕದ ಸಾಹಿತ್ಯವೂ ಆಗಿತ್ತು. ಕನ್ನಡದ ಕಾಯಕ ಜೀವಿಗಳ ವಿಕಾಸಕ್ಕೆ ಅಡ್ಡಿಯಾಗಿದ್ದ ಊಳಿಗಮಾನ್ಯ ಪುರೋಹಿತ ಶಾಹಿ ವ್ಯವಸ್ಥೆಯ ವಿರುದ್ಧ ಬಂಡಾಯವೇ ಆಗಿತ್ತು. ಇತಿಹಾಸದುದ್ದಕ್ಕೂ ಈ ಎಲ್ಲಾ ಬಂಡಾಯಗಳು ವಿಜಯವನ್ನೇ ಸಾಧಿಸಿತೆಂದೇನೂ ಅಲ್ಲ. ಸೋಲು, ಅನುಸಂದಾನ, ಪಾಕ್ಷಿಕ ಪರಾಜಯ ಎಲ್ಲವೂ ನಡೆದಿವೆ.

ಆದರೆ ಕನ್ನಡದ ದುಡಿಯುವ ಜನರ ಬದುಕಿಗೆ ಅಡ್ಡಿಯಾಗಿದ್ದ ಊಳಿಗಮಾನ್ಯತೆ ಹಾಗೂ ಅದರ ಸಾಂಸ್ಕೃತಿಕ ಅಭಿವ್ಯಕ್ತಿಗಳ ವಿರುದ್ಧದ ಹೋರಾಟದಲ್ಲೇ ಕನ್ನಡಿಗರ ಬದುಕು-ಕನ್ನಡ ಭಾಷೆ ವಿಕಸನಗೊಂಡಿದೆ. ಇದು ಕನ್ನಡಕ್ಕೆ ಮಾತ್ರ ಅನ್ವಯಿಸುವ ಸಂಗತಿಯೂ ಏನಲ್ಲ. ಫ್ರೆಂಚ್ ಭಾಷೆಯ ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧದ ಹೋರಾಟದಲ್ಲೇ ಇಂಗ್ಲಿಷ್ ಭಾಷೆ ಸಹ ಬೆಳೆದದ್ದು. ಅದಕ್ಕೆ ಮುನ್ನ ಇಂಗ್ಲಿಷನ್ನು ಸೇವಕರ- ಕುಲೀನರು ಮಾತನಾಡಬಾರದ ಭಾಷೆಯೆಂದೇ ಪರಿಗಣಿಸಲಾಗುತ್ತಿತ್ತು. ಇಂಗ್ಲಿಷ್ ರೈತಾಪಿ-ರಾಜಸತ್ತೆಯ ವಿರುದ್ಧ ನಡೆಸಿದ ಹೋರಾಟ ಹಾಗೂ ಪಡೆದುಕೊಂಡ ರಾಜಕೀಯ - ಆರ್ಥಿಕ ಸ್ವಾತಂತ್ರ್ಯದ ಜೊತೆಜೊತೆಗೇ ಇಂಗ್ಲೀಷ್ ಭಾಷೆಯೂ ಬೆಳೆದದ್ದು.

ಆದರೆ ಕನ್ನಡಕ್ಕೆ-ಕನ್ನಡಿಗರಿಗೆ ಸ್ವತಂತ್ರವಾದ ವಿಕಸನದ ಅವಕಾಶ ಪ್ರಾಪ್ತವಾಗುವ ಹೊತ್ತಿಗೆ ಇಂಗ್ಲಿಷ್ ವಸಾಹತುಶಾಹಿ ಇಡೀ ಭಾರತದ ದುಡಿಯವ ಜನರ ಅಭಿವೃದ್ಧಿಯನ್ನು ದಮನಿಸಿದಂತೆ ಕನ್ನಡವನ್ನು ದಮನಿಸಲಾರಂಬಿಸಿತ್ತು. ಶಂಬಾ ಜೋಷಿ ಹೇಳುವಂತೆ ಆರ್ಯರ ದಾಳಿ ಕನ್ನಡಿಗರ ಭೌಗೋಳಿಕ ವ್ಯಾಪ್ತಿ ಹಾಗೂ ಸಾಂಸ್ಕೃತಿಕ ಹಿರಿಮೆಯನ್ನು ಕುಗ್ಗಿಸಿದಂತೆ ಬ್ರಿಟೀಷರ ದಾಳಿಯೂ ಕನ್ನಡಿಗರಲ್ಲಿ ರಾಜಕೀಯ ದಾಸ್ಯದ ಜೊತೆಗೆ, ಆರ್ಥಿಕ ಪರಾವಲಂಬನೆ ಹಾಗೂ ಸಾಂಸ್ಕೃತಿಕ ದಾಸ್ಯವನ್ನು ಹುಟ್ಟುಹಾಕಿತ್ತು. ೧೯೪೭ ರಲ್ಲಿ ಬ್ರಿಟೀಷರು ಭಾರತ ಬಿಟ್ಟುಹೋದರೂ ಅಧಿಕಾರ ಹಿಡಿದ ಕಾಂಗ್ರೆಸ್ಸಿಗೆ ಭಾಷಾವಾರು ಪ್ರಾಂತ್ಯ ರಚನೆ ಆಗುವುದು ಭಾರತದ ಐಕ್ಯತೆಗೆ ಧಕ್ಕೆ ಎಂಬ ಬ್ರಿಟೀಷರ ಮನೋಭಾವನೆಯನ್ನೇ ಹೊಂದಿತ್ತು. ೧೯೫೬ ರಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದರು ಹಿಂದಿಯನ್ನು ಏಕಮಾತ್ರ ರಾಜಭಾಷೆಯಾಗಿ ಎಲ್ಲರ ಮೇಲೂ ಹೇರಲಾಯಿತು. ಇದು ಹಿಂದಿ-ಹಿಂದೂ-ಹಿಂದೂಸ್ಥಾನವೆಂಬ ಹಿಂದೂ ಕೋಮುವಾದಿ ರಾಜಕಾರಣದ ಭಾಗವಾಗಿಯೇ ಇತ್ತು. ತೀರ ಇತ್ತೀಚಿನವರೆಗೆ ಹಿಂದಿ ಕಲಿಕೆಯನ್ನು ಗೃಹ ಇಲಾಖೆಯೇ ನೋಡಿಕೊಳ್ಳುತ್ತಿತ್ತು. ಅಂದರೆ ಕನ್ನಡಿಗ ವಿದ್ಯಾರ್ಥಿಯೊಬ್ಬ ಹಿಂದಿ ಕಲಿಯದೇ ಇರುವುದು ಭಾರತ ಸರ್ಕಾರಕ್ಕೆ ಕಾನೂನು ಸುವ್ಯವಸ್ಥೆಯ ಸಮಸ್ಯೆ!

ಎಲ್ಲಕ್ಕಿಂತ ಹೆಚ್ಚಾಗಿ, ಭಾರತದ ಆರ್ಥಿಕತೆಯ ಪರಾಧೀನತೆ, ಭಾರತದ ಹಾಗೆಯೇ ಕನ್ನಡದ ದುಡಿಯುವ

ಕನ್ನಡದ ದುಡಿಯುವ ಜನರ ಬದುಕಿಗೆ ಅಡ್ಡಿಯಾಗಿದ್ದ ಊಳಿಗಮಾನ್ಯತೆ ಹಾಗೂ ಅದರ ಸಾಂಸ್ಕೃತ ಅಭಿವ್ಯಕ್ತಿಗಳ ವಿರುದ್ಧದ ಹೋರಾಟದಲ್ಲೇ ಕನ್ನಡಿಗರ ಬದುಕು-ಕನ್ನಡ ಭಾಷೆ ವಿಕಸನಗೊಂಡಿದೆ. ಇದು ಕನ್ನಡಕ್ಕೆ ಮಾತ್ರ ಅನ್ವಯಿಸುವ ಸಂಗತಿಯೂ ಏನಲ್ಲ. ಫ್ರೆಂಚ್ ಭಾಷೆಯ ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧದ ಹೋರಾಟದಲ್ಲೇ ಇಂಗ್ಲೀಷ್ ಭಾಷೆ ಸಹ ಬೆಳೆದದ್ದು. ಅದಕ್ಕೆ ಮುನ್ನ ಇಂಗ್ಲೀಷನ್ನು ಸೇವಕರ- ಕುಲೀನರು ಮಾತನಾಡಬಾರದ ಭಾಷೆಯೆಂದೇ ಪರಿಗಣಿಸಲಾಗುತ್ತಿತ್ತು. ಇಂಗ್ಲೀಷ್ ರೈತಾಪಿ-ರಾಜಸತ್ತೆಯ ವಿರುದ್ಧ ನಡೆಸಿದ ಹೋರಾಟ ಹಾಗೂ ಪಡೆದುಕೊಂಡ ರಾಜಕೀಯ-ಆರ್ಥಿಕ ಸ್ವಾತಂತ್ರ್ಯದ ಜೊತೆಜೊತೆಗೇ ಇಂಗ್ಲೀಷ್ ಭಾಷೆಯೂ ಬೆಳೆದದ್ದು.

ಜನರ ಸ್ವಾತಂತ್ರ್ಯವನ್ನು-ವಿಕಾಸದ ಅವಕಾಶವನ್ನು ಮೊಟಕುಗೊಳಿಸಿದೆ. ಭಾರತದ ಆರ್ಥಿಕತೆಯನ್ನು ನಿರ್ದೇಶಿಸುವ ಸಾಮ್ರಾಜ್ಯಶಾಹಿ ಆರ್ಥಿಕತೆಗೆ ತಕ್ಕಂತೆ ಇಲ್ಲಿನ ಕನ್ನಡಿಗ ರೈತಾಪಿ-ದಲಿತ-ಕಾರ್ಮಿಕರ ಬದುಕು ಪುನರ್‌ರೂಪಿತವಾಗುತ್ತಿದೆ. ಸಾವಿರಾರು ವರ್ಷಗಳ ನಾಗರಿಕತೆ-ಹಾಗೂ-ವಿಕಾಸದ ಮೂಲಕ ಕನ್ನಡದ ಜನಪರ ಕನ್ನಡ ಭಾಷೆಯ ಮೂಲಕ ಹಿಡಿದಿಟ್ಟುಕೊಂಡಿದ್ದ ಜ್ಞಾನ-ವಿವೇಕ-ಸಾರಸ್ವತ ಸಂಪದ ಕನ್ನಡ ಜನತೆಗೆ ಎಷ್ಟೇ ಪ್ರಸ್ತುತವಿದ್ದರೂ ಅಂತರ ರಾಷ್ಟ್ರೀಯ ಮಾರುಕಟ್ಟೆಗೆ ಅಪ್ರಸ್ತುತ. ಆದರೆ ಕರ್ನಾಟಕದ ಬದುಕನ್ನು ನಿಯಂತ್ರಿಸುತ್ತಿರುವುದು ಈ ಅಂತರ ರಾಷ್ಟ್ರೀಯ ಮಾರುಕಟ್ಟೆಯೇ ನಿಯಂತ್ರಿಸುತ್ತಿರುವುದು ಪುನರ್ ರೂಪಿಸುತ್ತಿರುವುದರಿಂದ ಕನ್ನಡ-ಕನ್ನಡ ಬಿಟ್ಟು ಬೇರೇನೂ ಗೊತ್ತಿಲ್ಲದ ಕನ್ನಡಿಗರು ಅಪ್ರಸ್ತುತವಾಗುತ್ತಿದ್ದಾರೆ. ಕನ್ನಡದ ಗಂಧ-ಗಾಳಿ ಗೊತ್ತಿಲ್ಲದಿದ್ದರೂ ಇಂಗ್ಲಿಷ್ ಗೊತ್ತಿದ್ದರೆ ಎಲ್ಲಿ ಬೇಕಾದರೂ ಸಲ್ಲುವ ಆರ್ಥಿಕತೆ-ಬದುಕು ರೂಪುಗೊಳ್ಳತ್ತದೆ. ಕನ್ನಡ ಕನ್ನಡಿಗರ ಬದುಕಿನಿಂದ ಕಣ್ಮರೆಯಾಗುತ್ತದೆ. ಇಂಗ್ಲಿಷ್ ಜ್ಞಾನ ಕೊಳ್ಳಲಾಗದ

ಕನ್ನಡ ಒಂದು ಭಾಷೆಯಾಗಿ ಕಣ್ಮರೆಯಾಗುವ ಅಪಾಯವಲ್ಲ. ಕನ್ನಡವೇ ಬದುಕಾಗಿರುವ-ಕನ್ನಡದ ಬದುಕು-ಅಂದರೆ ಕನ್ನಡಿಗ ರೈತಾಪಿ-ಕಾರ್ಮಿಕ-ದಲಿತರ ಬದುಕು ದಾಸ್ಯಕ್ಕೀಡಾಗುವ ಅಪಾಯವನ್ನೆದುರಿಸುತ್ತಿದೆ. ಇದು ಕನ್ನಡ ಎದುರಿಸುತ್ತಿರುವ ನಿಜವಾದ ಅಪಾಯ. ಕನ್ನಡವೇ ಕಣ್ಮರೆಯಾಗುತ್ತಿರುವ ಹೊತ್ತಿನಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಕಿರೀಟ ತೊಡಿಸುವ ರಾಜಕಾರಣ ನಡೆಯುತ್ತಿದೆ.

ಕನ್ನಡಿಗ ಬದುಕನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಆದ್ದರಿಂದಲೇ "ಬದುಕಿಗೆ ಇಂಗ್ಲಿಷ್-ಭಾವನೆಗೆ ಕನ್ನಡ" ಎಂಬ ನೈಚ್ಯಾನು ಸಂಧಾನದ ರಾಜಕಾರಣವನ್ನು ಪ್ರಗತಿಪರರೆಂಬುವರೇ ಪ್ರಾರಂಭಿಸಿದ್ದಾರೆ.

ಸಂಸ್ಕೃತ-ಹಿಂದಿಯ ಆಕ್ರಮಣದ ಎದಿರೂ ಕನ್ನಡ ಇಷ್ಟೊಂದು ಹತಾಶ ಹಾಗೂ ನಿಸ್ಸಹಾಯಕವಾಗಿರಲಿಲ್ಲ. ಬದುಕಿನಲ್ಲಿಲ್ಲದ ಭಾಷೆ-ಬದುಕಿಗೆ ಅಪ್ರಸ್ತುತವಾಗಿರುವ ಭಾಷೆ ಅವಸಾನದತ್ತ ಧಾವಿಸುತ್ತಿರುತ್ತದೆ. ಬರಿಯ ಭಾಷೆ ಮಾತ್ರವಲ್ಲ-ಆ ಭಾಷಿಕರು ಸಹ! ಇದು ಒಂದು ಭಾಷೆಯ -ಒಂದು ಸಾಂಸ್ಕೃತಿಯ ಒಂದು ಜನಾಂಗದ-ಅದರಲ್ಲೂ ಆ ಜನಾಂಗದ ದುಡಿಯುವ ವರ್ಗದ ಸಾಮೂಹಿಕ ಹತ್ಯೆ.

ಭಾಷಾ ವಿದ್ವಾಂಸರು, ಒಂದು ಭಾಷಾ ಹತ್ಯೆ ಸಂಭವಿಸಲು (Linguicide) ಕೆಳಗಿನ ಸಂದರ್ಭಗಳನ್ನು ಉಲ್ಲೇಖಿಸುತ್ತಾರೆ.

೧) ಒಂದು ಭಾಷೆಯಾಡುವ ಮಕ್ಕಳನ್ನು ಅವರ ಪೋಷಕರಿಂದ ಬೇರ್ಪಡಿಸಿದಾಗ.

೨) ಅಧಿಕೃತ ಭಾಷೆ ಎಂಬ ಹೆಸರಲ್ಲಿ ಮತ್ತೊಂದು ಭಾಷೆಯನ್ನು ಹೇರಿದಾಗ.

೩) ಮತ್ತೊಂದು ಸಂಸ್ಕೃತಿಯನ್ನು ಹೇರಿದಾಗ.

೪) ಒಂದು ಭಾಷೆಯನ್ನು ನಿಷೇಧಿಸಿದಾಗ.

೫) ಸ್ಪರ್ಧಾತ್ಮಕ ಭಾಷಾ ವಾತಾವರಣ ನಿರ್ಮಿಸಿದಾಗ.

೬) ಒಂದು ಭಾಷೆಯನ್ನು ಆಡುವ ಭಾಷಿಕರ ಸಂಹಾರ ನಡೆದಾಗ.

೭) ಒಂದು ಭಾಷಿಕರ ಸಂಸ್ಕೃತಿಯನ್ನೇ ವಿನಾಶ ಮಾಡಿದಾಗ.

೮) ಸ್ಥಳೀಯರ ಜನಸಂಖ್ಯೆ ಕಡಿಮೆಯಾದಾಗ.

೯) ಸ್ಥಳೀಯ ಭಾಷೆಯಲ್ಲಿ ಬೋಧಿಸಲು ನಿರಾಕರಿಸಿದಾಗ

೧೦) ಉದ್ಯಮಿಗಳು ಹಾಗೂ ಕಾರ್ಖಾನೆಗಳು ಜಾಹಿರಾತು ಹಾಗೂ ಇತರ ವಿಷಯಗಳಲ್ಲಿ ಸ್ಥಳೀಯ ಭಾಷಾ ಬಳಕೆಯನ್ನು ನಿರಾಕರಿಸಿದಾಗ....

ಕನ್ನಡ ಈ ಮೇಲಿನ ಹತ್ತೂ ಸಂದರ್ಭಗಳನ್ನು ಎದುರಿಸುತ್ತಿದೆ. ಅಂದರೆ ಕನ್ನಡ ಕಣ್ಮರೆಯಾಗುವ ನಿಜವಾದ ಅಪಾಯವನ್ನು ಎದುರಿಸುತ್ತಿದೆ. ಅದು ಕೇವಲ ಕನ್ನಡ ಒಂದು ಭಾಷೆಯಾಗಿ ಕಣ್ಮರೆಯಾಗುವ ಅಪಾಯವಲ್ಲ. ಕನ್ನಡವೇ ಬದುಕಾಗಿರುವ-ಕನ್ನಡದ ಬದುಕು-ಅಂದರೆ ಕನ್ನಡಿಗ ರೈತಾಪಿ-ಕಾರ್ಮಿಕ-ದಲಿತರ ಬದುಕು ದಾಸ್ಯಕ್ಕೀಡಾಗುವ ಅಪಾಯವನ್ನೆದುರಿಸುತ್ತಿದೆ.

ಇದು ಕನ್ನಡ ಎದುರಿಸುತ್ತಿರುವ ನಿಜವಾದ ಅಪಾಯ. ಕನ್ನಡವೇ ಕಣ್ಮರೆಯಾಗುತ್ತಿರುವ ಹೊತ್ತಿನಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಕಿರೀಟ ತೊಡಿಸುವ ರಾಜಕಾರಣ ನಡೆಯುತ್ತಿದೆ. ಕನ್ನಡಕ್ಕೆ ಎದುರಾಗಿರುವ ನಿಜವಾದ ಅಪಾಯದ ವಿರುದ್ಧ ಎಂದೂ ದನಿ ಎತ್ತದ ಪ್ರಭೃತಿಗಳು ಶಾಸ್ತ್ರೀಯ ಭಾಷೆಗಾಗಿ ಸಮರ ಸಾರುವ ಮಾತನಾಡುತ್ತಿದ್ದಾರೆ. ಕನ್ನಡ ಶಾಸ್ತ್ರೀಯ ಭಾಷೆ ಆಗಲು ಲಾಬಿ ಸಾಕು.

ಆದರೆ ಕನ್ನಡ ಉಳಿಯಲು ನಿಜವಾದ ಸ್ವಾತಂತ್ರ್ಯ ಸಮರವನ್ನೇ ಸಾರಬೇಕಿದೆ. ಅದನ್ನು ಕನ್ನಡ ಸಾರಸ್ವತ ಲೋಕ ಮಾಡುವುದೇ? ಅವರು ಮಾಡದ ಮಾತ್ರಕ್ಕೆ ಕನ್ನಡ ಜನ-ದುಡಿಯುವ ಜನ ತಮ್ಮ ಬದುಕಿಗಾಗಿ ಈ ಸಮರ ಮಾಡಲೇಬೇಕು. □

ಒಂದು ಅ-ಖಂಡ ಕಾವ್ಯ

ಸುಮಬ್ಯಾಲೆ

○ಮಂಜುನಾಥ್ ಗೀತಾ





೧

ಅಂತಾಗಿ ನಿಂತಾಗ
ತಟ್ಟಂಥ ಮುರಿದು ಏಕಾಂತ
ಎದ್ದವಳೆ ಕುಸುಮಾಲೆ
ಕೇರಿ ಕೇರಿಗೆ ಊರಿಗೂರಿಗೆ
ಎದ್ದು ಕುಣಿವಂತೆ ಎದ್ದು ಕುಣಿದವಳೆ
ಕುಸುಮಾಲೆ 'ಸುಮಬ್ಯಾಲೆ'
ನನ್ನೊಳಗೆ ಮುಟ್ಟಿನ ರಕುತ
ನಿಮ್ಮ ಹೊಲಕೆ ಸತುವು
ಕಣ್ಣಿನಷ್ಟು ಕೆಂಪಾಗೆ ನೆತ್ತರುದಕ
ಮೊಲೆ ಹಾಲು ಗಿಣ್ಣು
ಕಂಕುಳ ಬೆವರಲಿ ಕುಲದ ನಾತ
ಇದು ಈ ಊರ ನೋವು
ಈ ಕೇರಿ ಎದೆ ನೋವು
ಈ ಜಗದ ನೋವು
ನಿಲ್ದಾಣದಲಿ ನಿಂತು ಕರೆವಾಗ ಯಾರೂ
ಇಲ್ಲ
ಈಗಿದ್ದವರು ಈಗಿಲ್ಲ

೨

ಈ ದಿನವೂ ಸಿರದ ಮ್ಯಾಲೆ ಅಮಾದಿ
ಹೊಲವಿಲ್ಲದ ಚೋಮ
ಎತ್ತವನೆ ಹೇಲು
ಪಾತಾಳಗರಡಿ ಇಟ್ಟು ಕೆದಕುವರು
ಸೆಮಿನಾರುಗಳಲಿ ಕೂತು ನಾರವರು
ಪಂಡಿತರು ಕೂದಲು ಸೀಳುವರು
ಕೇಳು ಹೊಲೆ ಮಾದಿಗ ಜಲಗಾರ
ನೀನು ಈಗಲೂ ಫ್ರಿಡ್ಜಲಿರುವ ತಂಗಳಿಗೆ
ಎಡತಾಕುತಿರುವುದು
ವೈಮಾನಿಕ ಸಮೀಕ್ಷೆಯಲಿ
ನಿಚ್ಚಳವಾಗಿ ಕಾಣುತಿರುವುದು

೩

ಮಾರಿಯರು ಮಸಣಿಯರು
ಗದ್ದುಗೆಯೊಳಗೆ ಸಾಬರು
ನೀಲಗಾರ ಮಂಟೇದರ
ಸಿದ್ದಪ್ಪಾಜಿ ನಿನಪಾದ
ಘನ ನೀಲಿ ನಿನ್ನಾಣೆ
ಮಸಣದಾಗಿಲ್ಲ ಯಾ ಉಸಿರೂ







ಹೆಸರು ಮಾತ್ರ ಬರೆದವರೆ
ಸರ್ಕಾರಿ ಇಸ್ಕೂಲು ಬೋರ್ಡಿನಲಿ
ಹಾಜರಿ ನೂರಕ್ಕೆ ನೂರು
೪
ಅಲ್ಲಾಡುತಾವೆ ಹಲ್ಲು
ಪರದಾಡುತಾವೆ ಕಣ್ಣು ಪೊರೆ ಬಂದು
ಬೆಂಗಳೂರು ಮುಂಬೈ
ಸಿಲಿಕಾನ್ ವ್ಯಾಲಿಯಾಲಿ
ಕಾಣುತಿಲ್ಲ ಪುಟ್‌ಪಾತು ಮಟನ್ ಮಾರ್ಕೆಟ್ಟು
ಯಾವೂರೆ ತಾಯಿ
ಎಲ್ಲಿದ್ದೆ ಈ ತನಕ
ಬಂದೆಯಲ್ಲ ನೋಡು
ಬೀದೀಲಿ ನಿಂತವನೆ ಕನಕ
ನಾನಲ್ಲ ಇವರು
ಶೂರರು ಧೀರರು ಚೋರರು
ಮತ್ತು ಸೂಳೆ ಮಕ್ಕಳು
ಹಟ್ಟೀಲೂ ಬೆಳಕಿಲ್ಲ ಬೀದಿಲೂ
ಹೊತ್ತಾರೆಯೇ ಹೊಂಟವರೆ
ಲಾಂಟೀನುಗಳ ಮಾರೋಕೆ
೫
ಹಸಿವ ಒಡಲು ನಿಮ್ಮಂತಾಗಿ
ಮಕ್ಕಳ ಮಾರವರೆ ಕಾಸುಕೊಡದ ಬೀದಿಗೆ
ಹೊಕ್ಕಳು ಬಳ್ಳಿಗಳ ಕುಯ್ದು
ಪೊರಕೆಗೆ ಹಿಡಿ ಮಾಡವರೆ
ಅಯ್ಯಾ ಘನಲಿಂಗವೇ
ಜನಿವಾರಗಳಲ್ಲಿ ಕಟ್ಟಿ ಬಿಗಿದು
ನಿಮ್ಮ ವಚನಗಳ ಕಟ್ಟು
ಬೆಳಗಾಗಿ ಉಚ್ಚೆ ಮಾಡುವಾಗ
ನೆನೆದವರೆ ಅಯ್ಯಾ
ಎಂದರೆ ಸ್ವರ್ಗ....
೬
ಆದಿಮ ನೀನು ಜಂಗಮ
ಹೊಲಗೇರಿಯಲಿ ಹೇಲು
ಕೆಳಗೇರಿಯಲಿ ಉಚ್ಚೆ
ನೋಡಿ ಬಂದವರೆ ಜನ
ಗಮಗಮಿಸುವ ಹಾಲು ಬಣ್ಣದ ಕಮೋಡು
೭
ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ
ಹಾಗೂ ಇನ್ನೇನೂ ಇಲ್ಲದ
ಗಂಡಂದಿರು ಇಲ್ಲವರೆ
ಜೂಜಾಡುತಾ ವೈನ್ ಕುಡಿಯುತಾ
ನಾನು ಮಾತಿಲ್ಲದ ಮಾಸಿಲ್ಲದ



ಮುಟ್ಟು ಚಟ್ಟಿಲ್ಲದ ಹೆಣ್ಣು
ನಿಮ್ಮ ಏರಿಯಾಗಳಲಿ ಸಿಂಹಾಸನಗಳಲಿ
ಕಾರುಗಳಲಿ ಕೂತು
ವಿಷದ ಮೊಲೆ ಉಣಿಸಿದವಳು
ಪಾಂಚಾಲಿ ಮಹಾದೇವಿಯಕ್ಕ
ಕೇರಿಯಲಿ ಅಪ್ಪನಿಗೆ
ಓಣಿಯಲಿ ಮಗನಿಗೆ
ಸೆರಗು ಹಾಸಿದವಳು
೮
ಎಡಗೈಲಿ ಕತ್ತಿ ಬಲಗೈಲಿ ಕೋವಿ
ಹಿಡಿದವನು ಕೇಳವನೆ:
ನೀನು ಹೀಗೆಯೇ ಇರು
ಇರಬೇಕು ಜಂಗಮ
ನಮ್ಮ ಹೊಸ್ತಿಲು ತುಳಿದರೆ
ನಿನಗೇ ಕೆಡಕು ಹೊಲಸು
ನೀನು ಆದಿಮ ಜಂಗಮ
ಹೇಲು ಹೊರ ಬೇಕು
ಉಚ್ಚೆ ಬಾಚ ಬೇಕು
ನಿಮ್ಮ ಕೇರಿಗೆ ಭಾಷಣಕ್ಕೆ ಬರುತ್ತೇನೆ
ಚಪ್ಪಾಳೆ ತಟ್ಟ ಬೇಕು
ನಾಳೆ ಬಸವ ಜಯಂತಿ
ನಾನು ಬರುವವರೆಗೆ
ಬಸವಣ್ಣನ ಫೋಟೋ ಒರೆಸಿಡಬೇಕು
ಆದಿ ಜಂಗಮ ನೀನು
ಹೀಗೆಯೇ ಇರಬೇಕು
ನಿಂತಲ್ಲಿ ನಿಲ್ಲದೆ ಮನೆಯನೆಂದೂ ಕಟ್ಟದೆ
ಗುರಿಯನೆಂದೂ ಮುಟ್ಟದೆ
೯
ಅತ್ತ ತಿರುಗಿ ಅಂದನು:
ಕೇಳಿ ಕೂಸುಗಳೇ ಕುನ್ನಿಗಳೇ
ನೀವೇ ಈ ದೇಶದ ಬೆಳಕು
ನೀವು ಬೀರ ಬೇಕು ಬೆಳಕು
ನೀವು ಬೆಳಕು ಬೀರಬೇಕೆಂದರೆ
ಉರಿಯುತಿರಿ ಉರಿಯುತಿರಿ
ಉರಿದು ಬೂದಿಯಾಗುವತನಕ
ಬೆಳಕು ಮುಗಿವ ತನಕ
ನಿಮ್ಮ ಹಟ್ಟಿ ಕೇರಿಗಳ ಮಾತಿರಲಿ ಒತ್ತಟ್ಟಿಗೆ
ಉರಿಯಿರಿ ನೀವು ಒಟ್ಟೊಟ್ಟಿಗೆ
ನಾಳೆ ನಿಮ್ಮ ಹೆಸರು
ಪೇಪರಲ್ಲಿ ಬರುತ್ತೆ!
೧೦
ಅಲ್ಲಾಹು ಜೀಸಸ್
ನಿಮ್ಮ ಎಕ್ಕಡಗಳಿಗೆ ಸಮವಿಲ್ಲ



ಈ ದೇಶ ಕೋಶ ತಾಳ ತುದಿ
ನೀವು ಕುಡಿದ ಹೆಂಡದ ಜೊಲ್ಲು
ತೊಟ್ಟುತಾ ನಮ್ಮ ಈ ಹೈಕಳ
ಕಣ್ಣ ತುದಿಯಲಿ ರಕುತ
ಮುಷ್ಟಿ ಬಾಟಲಿಗಳಲಿ ನೊರೆಯುಕ್ಕುತಾ
ಹೊಟ್ಟೆ ತುಂಬ ಕೋಕಾ ಕೋಲಾ
೧೧
ಯಾವುದು ನಿಮ್ಮ ಕುಲ
ಯಾವುದು ನಿಮ್ಮ ನೆಲ
ಯಾವುದು ನಿಮ್ಮ ಜಲ ಎಂದರೆ
ಕೇಳಿರಿ ಅಯ್ಯಾ ಕೇಳಿರಿ
ಕೇರಿಯೊಳಗೆ ಈಗ ಜೀವಗಳಿಲ್ಲ
ಕಣ್ಣ ಬಾವಿಗಳಲಿ ನೀರಿಲ್ಲ
ನಿಂತು ಆಂತು ನೋಡಲು ನೆಲವಿಲ್ಲ
ಕುಲವೆಂದರೆ ತಿಳಿದಿಲ್ಲ
೧೨
ಕುಣಿಯುತಾಳೆ ಕುಸು ಮಾಲೆ
ಹೊಲಗೇರಿಯಿಂದ ಬಂದವಳು
ಮಾಸಲು ಲಂಗದವಳು
ಮೀಸಲು ಕುಲದವಳು
ಕುಣಿಯುತಾವಳೆ
ರಾಜಧಾನಿಯಲಿ ಲೈವ್ ಬ್ಯಾಂಡ್‌ನಲಿ
ಅಲ್ಲೇ ಕುಂತವನೆ ಚೆನ್ನಯ್ಯ
ಥಳಥಳದ ಮೇಜಿನ ಮ್ಯಾಲೆ
ಬ್ರ್ಯಾಂಡಿ ವಿಸ್ಕಿ ಸೋಡಾದ
ಅಂದಾಜು ಅಮಲಿನ ಮ್ಯಾಲೆ
ಕುಣಿಯುತಾಳೆ ಕುಸುಮಾಲೆ
೧೩
ಯಾವುದೀಗ ಸತ್ಯ
ಯಾವುದೀಗ ಮಿಥ್ಯ
ಕಲಸು ಮೇಲೋಗರದ ಬಾಳಿಗೆ
ಯಾವುದೀಗ ಪಾಪ
ಯಾವುದೀಗ ಪುಣ್ಯ
ಕೇರಿಗಳಲಿ ಅಡಗಿದೆ ಮಾರಿಗೆಜ್ಜೆ ಸದ್ದು
ಗುಡಿಸಲು ಮಣ್ಣ ಗೋಡೆಗಳಲಿ
ತೂಗುತಿದೆ ಬಂದೂಕದ ನೆರಳು
೧೪
ಬಾರದ ಚೆನ್ನನ ಬಯಕೆಯಲಿ
ಅವ್ವಯ್ಯ ಅಪ್ಪಯ್ಯ
ಮಠದ ಹಿಟ್ಟು ತರಹೋದ ಅಮಾಸನಿಗೆ
ಕಾದವನೆ ಕುರಿಯಯ್ಯ



ಬಾರಲಿಲ್ಲ ಚೆನ್ನ
ಬಾರಲಿಲ್ಲ ಅಮಾಸ
ಕಲ್ಲಾದ ಅಪ್ಪಯ್ಯ ಅವ್ವಯ್ಯ
ಕಲ್ಲಾದ ಕುರಿಯಯ್ಯ
ದೊಡ್ಡದಾದ ಸಂಬಂಜ ಕುದುರಲಿಲ್ಲ ಕೂಡಲಿಲ್ಲ
ಬರಲಿಲ್ಲ ಚೆನ್ನ
ಬರಲಿಲ್ಲ ಅಮಾಸ

ಹೊಲಗೇರಿಯಲಿ ಕೂಗ್ಯಾವೆ ಮೈಕು
ಹೊಳೆದಾವೆ ಲೈಟು
ಅಮಾಸನಿಲ್ಲದ ಊರಿನಲಿ
ಚೆನ್ನನಿಲ್ಲದ ಕೇರಿಯಲಿ
ಕೋಣ ಕಡಿಯು ಹಬ್ಬ
ಹೆಂಡ ಕುಡಿಯುವ ಹಬ್ಬ

೧೫
ಜನಗಣಮನ ಮುಗಿದ ಮೇಲೆ
ಬಾವುಟ ಕದ್ದವನೆ ಪೋರ
ಅವನಪ್ಪನೇ ಹೇಳಿ ಕಳಿಸಿದ್ದ
ಕದ್ದು ತಾ ಅಂತ
ಚೆಡ್ಡಿ ಹೊಲಿಸೋಕೆ ಅಂತ

೧೬
ಕೂತು ಕೂತು ನಿದ್ದೆ ತೂಗುವ
ಜೋತಮ್ಮದೀರು
ನನ್ನಿಯ ನುಡಿದವರೆ ಜೋತಮ್ಮದೀರು
ನನ್ನೀಯ ನುಡಿಸುತಾವರೆ
ಕಲ್ಲೂ ನೀರೂ ಕರಗು ವಗಳಿಗೆ
ಅಕ್ಕಮಾದೇವಿಯ ಕೂಸಿಗೆ
ಆಡವರೆ ಜೋಗುಳ ಪದವ
ಅವರು ಬಗ್ಗಿ ನೋಡಿಲ್ಲ
ಆರಿ ಹೋಗಿದೆ ಕೂಸಿನ ಜೀವ
ಹಟ್ಟಿಗಳಲಿ ನಡೆದಿರುವುದು ನೋಡಿಲ್ಲ
ಹಾರಾಟ ತೂರಾಟ ಮೈ ಮಾರಟ
ಮಳೆಯಲ್ಲಿ ನೆನೆದು ಬಂದ ಶೂಗಳು
ಒಲೆಗೂಡಿನಲಿ ಬೆಚ್ಚಗಿವೆ

೧೭
ಖಂಡವಿದೆ ಕೋ
ಮಾಂಸವಿದೆ ಕೋ
ಗುಂಡಿಗೆಯ ಬಿಸಿ ರಕ್ತವೂ
ಕೊಟ್ಟಿಗೆಯಲ್ಲಿ ದನದ ಬಾಡು
ಎಲ್ಲವೂ ನಿಮ್ಮ ಪಾದಾರವಿಂದಗಳಿಗೆ
ಪುಷ್ಪಂಗಳು
ನಿಮ್ಮ ಎಕ್ಕಡಗಳ ಜಾಗದಲ್ಲಿ
ನಮ್ಮ ವಿಭೂತಿ ಹಣೆಯು
ನಿಮ್ಮ ಹಿತ್ತಲಲಿ
ನಮ್ಮ ಹೈಕಳು ಜೀತಗಾರನ ಯಾಸದಲಿ
ನೆಪ್ಪಿರಲಿ ಅವರ ಕೋಟೊಳಗೆ ಕುಡುಗೋಲು
ಅಂಬೇಡಕರನ ಕನ್ನಡಕದ ಹಿಂದೆ
ಅಂದಿನಿಂದಲೂ ಉರಿಯುತಿರುವುದು
ಕತ್ತಲಾದರೂ ಮುಳುಗದ ಜೋಡಿ ಸೂರ್ಯ
ಹಟ್ಟಿ ನೆರಕೆಯ ನಿಲಿಸಿರುವುದು
ಗಾಂಧೀಕೋಲು



೧೮
ಎಷ್ಟಂದು ಆಡಿದರೂ
ತೀರುವುದಿಲ್ಲ ಪದವು
ಏಳು ರಾತ್ರಿ ಏಳು ಹಗಲು
ಕುಂತು ಪಾಡಿದರೂ
ದಣಿಯುವುದಿಲ್ಲ ತಂಬೂರಿಯು
ಕಲಿಗಾಲ ಮುಗಿದರೂ
ಮುಗಿಯದ ಈ ಪದವು
ಪದ್ಯಕ್ಕೆ ಮುಕ್ತಾಯವು

ಜಾತಿ ಆಚೆಗಿನ ಸಾಂಸ್ಕೃತಿಕ ಅನನ್ಯತೆಯ ಸ್ವರೂಪ

○ಡಾ॥ ಕೆ. ವೈ. ನಾರಾಯಣ ಸ್ವಾಮಿ

(ಈ ಲೇಖನಕ್ಕೆ ತಮ್ಮ ಚರ್ಚೆಯ ಮೂಲಕ ಸಹಕರಿಸಿದವರು ಕೆ. ರಾಮಣ್ಣ, ಪ್ರೊ. ಗೋವಿಂದಯ್ಯ, ಶ್ರೀ. ಉಮಾ ಶಂಕರ್, ಡಾ॥ ಶಿವಪ್ಪ ಹಾಗೂ ಡಾ॥ ಕೆ. ಮುಟ್ಟಸ್ವಾಮಿ.)

ಚರ್ಚೆ

ಅಹಿಂದ ಚಳುವಳಿಯು ಕೇವಲ ರಾಜಕೀಯ ಅಧಿಕಾರದ ಹಂಚಿಕೆಯ ಪ್ರಶ್ನೆಯನ್ನು ಮುಖ್ಯವಾಗಿಸಿಕೊಂಡಿದೆ ಎಂದೇ ಬಹುಜನ ಅರ್ಥ ಮಾಡಿಕೊಂಡಿದ್ದಾರೆ. ಕಳೆದ ೬೦ ವರ್ಷಗಳ ಪ್ರಜಾಪ್ರಭುತ್ವದ ಆಳ್ವಿಕೆಯಲ್ಲಿ ಅಧಿಕಾರದ ಅಂಚಿನಲ್ಲೇ ಉಳಿದು ಹೋಗಿರುವ ಹಿಂದುಳಿದ ಅಲ್ಪಸಂಖ್ಯಾತ ದಲಿತ ಜಾತಿ/ಕೋಮುಗಳಿಗೆ ಅಧಿಕಾರವನ್ನುಗಳಿಸಿ ಕೊಡುವ ಆಶ್ವಾಸನೆಯಾಗಿದೆ. ಆದರೆ ಇವೊತ್ತಿನ ನಮ್ಮ ಸಂದರ್ಭದಲ್ಲಿ ಅಹಿಂದ ಜಾತಿಯನ್ನು ಮೀರಲು ಸಾಂಸ್ಕೃತಿಕವಾಗಿ ಪ್ರಯತ್ನಿಸುವ ಚಳುವಳಿಯು ಆಗಬೇಕಿದೆ. ಅದನ್ನು ನೋಡದಿರುವ ಉದಾಸೀನತೆಯನ್ನು ನಮ್ಮ ಸಮಾಜ ರೂಢಿಸಿಕೊಂಡಿದೆ. ತಾವಾಗಿಯೇ ನೋಡದಿರುವ ಈ ಊನವನ್ನು ಕಾಣದಿರುವ ಸಮಸ್ಯೆಯಾಗಿಸಿ ನಿರ್ಲಕ್ಷಿಸಲಾಗಿದೆ.



ಆರಂಭದಲ್ಲಿ ಕೆಲ ಸ್ಪಷ್ಟೀಕರಣಗಳು:

೧. ಕಳೆದ ಕೆಲ ತಿಂಗಳುಗಳಿಂದ ತೀವ್ರಗೊಂಡಿರುವ ಅಹಿಂದ ಚಳುವಳಿಯು ಕೇವಲ ರಾಜಕೀಯ ಅಧಿಕಾರದ ಹಂಚಿ ಕೆಯ ಪ್ರಶ್ನೆಯನ್ನು ಮುಖ್ಯವಾಗಿಸಿಕೊಂಡಿದೆ ಎಂದೇ ಬಹುಜನ ಅರ್ಥ ಮಾಡಿಕೊಂಡಿದ್ದಾರೆ. ಕಳೆದ ೬೦ ವರ್ಷಗಳ ಪ್ರಜಾಪ್ರಭುತ್ವದ ಆಳ್ವಿಕೆಯಲ್ಲಿ ಅಧಿಕಾರದ ಅಂಚಿನಲ್ಲೇ ಉಳಿದು ಹೋಗಿರುವ ಹಿಂದುಳಿದ ಅಲ್ಪಸಂಖ್ಯಾತ ದಲಿತ ಜಾತಿ/ಕೋಮುಗಳಿಗೆ ಅಧಿಕಾರವನ್ನುಗಳಿಸಿ ಕೊಡುವ ಆಶ್ವಾಸನೆಯಾಗಿದೆ ಅಹಿಂದ ಎಂದು ಯೋಚಿಸುತ್ತಿರುವ ಅನೇಕರಿಗೆ ಈ ಪ್ರಬಂಧದ ಶೀರ್ಷಿಕೆ ಅಚ್ಚರಿ ಮತ್ತು ಗೊಂದಲವನ್ನು ಹುಟ್ಟುಹಾಕಿರಬಹುದು. ಆದರೆ ಇವೊತ್ತಿನ ನಮ್ಮ ಸಂದರ್ಭದಲ್ಲಿ ಅಹಿಂದ ಜಾತಿಯನ್ನು ಮೀರಲು ಸಾಂಸ್ಕೃತಿಕವಾಗಿ ಪ್ರಯತ್ನಿಸುವ ಚಳುವಳಿಯು ಆಗಬೇಕಿದೆ. ಈವರಿಗೆ ಕಾಲಾಂತರದಲ್ಲಿ ಜಾತಿ ಆಚೆಗೆ ಜಿಗಿಯುವ ಪ್ರಯತ್ನಗಳು ನಿರಂತರವಾಗಿ ಈ ನೆಲದಲ್ಲಿ ನಡೆದು ಬಂದಿವೆ.

ಆದರೆ ಅದನ್ನು ನೋಡದಿರುವ ಉದಾಸೀನತೆಯನ್ನು ನಮ್ಮ ಸಮಾಜ ರೂಢಿಸಿಕೊಂಡಿದೆ. ತಾವಾಗಿಯೇ ನೋಡದಿರುವ ಈ ಊನವನ್ನು ಕಾಣದಿರುವ ಸಮಸ್ಯೆಯಾಗಿಸಿ ನಿರ್ಲಕ್ಷಿಸಲಾಗಿದೆ. ಜಾತಿ ಮೀರುವಂತಹ ಪ್ರಜ್ಞಾ ಪೂರ್ವಕ ಪ್ರಯತ್ನಗಳನ್ನು ನಮ್ಮ ಬಹುರೂಪಿ ಜ್ಞಾನ ಪರಂಪರೆಗಳಿಂದ ಆಯ್ದು ಅದರ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಆ ಸಾಂಸ್ಕೃತಿಕ ಅನನ್ಯತೆಯನ್ನು ವಿಸ್ತಾರಗೊಳಿಸುವ ಕ್ರಿಯೆ ಜರೂರಾಗಿ ನಡೆಯಬೇಕಿದೆ. ಅಹಿಂದ ಇಂತಹ ವಿಸ್ತರಣೆಯ ಕಾರ್ಯವನ್ನು ತನ್ನ ಮುಖ್ಯ ರಾಜಕೀಯ ಕಾರ್ಯ ಯೋಜನೆಯಲ್ಲಿ ಒಳಗೊಳ್ಳಬೇಕಿದೆ. ಮತ್ತು ಆ ದಿಕ್ಕಿನಲ್ಲಿ ನಡೆಯಬೇಕಿದೆ.

೨. ಈ ಪ್ರಬಂಧದ ಶೀರ್ಷಿಕೆ ಜಾತಿ ಆಚೆಗಿನ ಸಾಂಸ್ಕೃತಿಕ ಅನನ್ಯತೆಯ ಸ್ವರೂಪ ಎಂದಿದೆ. ಈ ತಲೆ ಬರಹವನ್ನ ನಾವು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳಬೇಕಿದೆ. ಸಾಂಸ್ಕೃತಿಕ ಅನನ್ಯತೆ ಎಂಬುದು ಜಾತಿಯಿಂದ ಆಚೆಗಿರುವ ವಾಸ್ತವ ಎಂಬ ಅರ್ಥದಲ್ಲಿ ಗ್ರಹಿಸಬಾರದು. ಜಾತಿಯ ಒಳಗಿದ್ದೂ ಅದನ್ನ ಮೀರಲು ಹವಣಿಸುತ್ತಿರುವ ಚಲನಶೀಲತೆಯನ್ನ ಅನನ್ಯತೆ ಎಂದು ಇಲ್ಲಿ ಗುರುತಿಸಲಾಗಿದೆ. ಪ್ರತಿಯೊಂದು ಜಾತಿಯ ಒಳಗೂ ಇಂತಹ ಅಪರೂಪದ ಜಾತಿ ಮೀರುವ ನಡಿಗೆಗಳನ್ನು ಚರಿತ್ರೆಯಲ್ಲಿ, ನಮ್ಮ ದೇಸಿ ಪರಂಪರೆಗಳಲ್ಲಿ ಗುರುತಿಸಲು ಸಾಧ್ಯವಿದೆ.

೩.ಸಂಸ್ಕೃತಿ ಪರಿಕಲ್ಪನೆ ಮತ್ತು ಗೊಂದಲ. ಇವೊತ್ತಿನ ನಮ್ಮ ಸಂದರ್ಭದಲ್ಲಿ ಸಂಸ್ಕೃತಿ ಎಂಬ ಪದವನ್ನ ನಾವು ಯಾವ ಅರ್ಥದಲ್ಲಿ ಹಾಗೂ ಯಾವ-ಉದ್ದೇಶಕ್ಕಾಗಿ ಬಳಸುತ್ತೇವೆಯೋ ಅದೇ ಅರ್ಥದಲ್ಲಿ ಅದನ್ನ ದಕ್ಕಿಸಿಕೊಳ್ಳುವುದು ಕಷ್ಟ. ದೇಸಿ, ಭಾಷೆ, ಜನಾಂಗ, ಜಾತಿ, ಧರ್ಮ, ಕೃಷಿ, ವಿಜ್ಞಾನ ಮತ್ತು ವಿಮರ್ಶೆಯಲ್ಲಿ ಈ ಪಾರಿಭಾಷಿಕ ಪದ ಹೆಚ್ಚು ಬಳಕೆಯಾಗುತ್ತಿರುದರಿಂದ ಈ ಗೊಂದಲ ಏರ್ಪಟ್ಟಿದೆ. ಸಂಸ್ಕೃತಿಯನ್ನು ಒಂದು ಕ್ಷುಲ್ಲಕ ವಿಷಯದ ಗುಣವನ್ನು ವಿವರಿಸುವುದರಿಂದ ಹಿಡಿದು ಅತ್ಯಂತ ಸಂಕೀರ್ಣವೂ ಅಮೂರ್ತವೂ ಆದ ಅನುಭಾವ ಮೀಮಾಂಸೆಯ ವರ್ಣನೆ ತನಕ ಬಿಡುಬೀಸಾಗಿ ಬಳಸಲಾಗಿದೆ. ಸಂಸ್ಕೃತಿ ತನಗೆ ತಾನೆ ಸ್ವತಃ ಸಂಭವಿಯಲ್ಲ. ಅದು ಒಂದು ಜೀವನಕ್ರಮ ಒಟ್ಟು ಅರ್ಥದಲ್ಲಿ ಹೇಳುವುದಾದರೆ ಸಂಸ್ಕೃತಿ ಜಾತಿಯಂತಹ ಅಮಾನವೀಯವಾದ ಜಾತಿವ್ಯವಸ್ಥೆಯನ್ನು, ಹಾಗೂ ಸುಧಾರಣ ಚಳುವಳಿಯಂತಹ ಮಾನವೀಯ ಪ್ರಕ್ರಿಯೆಯನ್ನು ಒಳಗೊಳ್ಳುವ ಸಂಗತಿಯಾಗಿದೆ. ಆದ್ದರಿಂದ ಸ್ಥಗಿತ(ಡೆಡ್) ಹಾಗೂ ಚಲನಶೀಲತೆಯ (ಲಿವಿಂಗ್) ನೆಲೆಗಳೆರಡಕ್ಕೂ ಸಂಸ್ಕೃತಿಯಲ್ಲಿ ಸಮಾನ ಅವಕಾಶವಿದೆ. ಈ ಎರಡರ ನಡುವೆ ನಿರಂತರವಾಗಿ ನಡೆಯುತ್ತಿರುವ ಸಂಘರ್ಷದ ಕತೆಯೆ ನಮ್ಮ ಸಾಂಸ್ಕೃತಿಕ ಚರಿತ್ರೆಯಾಗಿದೆ.

ಭಾಗ-೧

ವಿಜಾತಿಯ ವಿರುದ್ಧ ಆಡುವ ಮಾತುಗಳಿಂದ ಜಾತಿಯನ್ನು ಹೆಚ್ಚಿಸುವ ಕೆಲಸಗಳು ಹೆಚ್ಚಾಗಬಹುದು- ಲೋಹಿಯ

ಭಾರತದಲ್ಲಿ ಸಮಾಜ, ಚರಿತ್ರೆ, ಸಂಸ್ಕೃತಿ ಸೇರಿದಂತೆ ಎಲ್ಲವೂ ಸಂಕೀರ್ಣ ಸ್ವರೂಪದವು. ಭಾರತೀಯ ಸಮಾಜ ಅನೈಸರ್ಗಿಕವಾದ ಜಾತಿಗಳ ಸಮಾಜ. ಜಾತಿ ಭಾರತೀಯ ಮನಸ್ಸನ್ನ ಸಂಪೂರ್ಣವಾಗಿ ಆವರಿಸಿಕೊಂಡಿದೆ. ಇದು ಹುಟ್ಟಿನ ಮೇಲೆ ನಿರ್ಣಯವಾಗುವ ಒಂದು ಅಸಂಗತ ತರ್ಕ. ಜಾತಿ ಎಂಬುದು ಮನುಷ್ಯನ ಸಹಜ ಪ್ರತಿಭೆ ಮತ್ತು ಸಾಮರ್ಥ್ಯದ ಮೇಲೆ ನಿಯಂತ್ರಣವನ್ನು ಹೇರುತ್ತದೆ.

ಚರ್ಚೆ

ಹುಟ್ಟನ್ನು ಮಾನದಂಡವನ್ನಾಗಿ ಪರಿಗಣಿಸಿ ಮಾನವ ಹಕ್ಕುಗಳನ್ನು ನಿರಾಕರಿಸುವುದನ್ನು ಸಮರ್ಥಿಸುತ್ತದೆ.

ಮನುಷ್ಯ ಮನುಷ್ಯರ ಮಧ್ಯ ಇಲ್ಲದ ಪ್ರತ್ಯೇಕತೆಯನ್ನ ಸೃಷ್ಟಿಸಿ ನಂಬಿಸುತ್ತದೆ. ಈ ನಂಬಿಕೆ ಎಷ್ಟು ಗಾಢವಾಗಿದೆಯೆಂದರೆ ಲಾಭ ಮತ್ತು ಪ್ರತಿಷ್ಠೆಗಳನ್ನು ಪಡೆಯುತ್ತಿರುವ ಕೇವಲ ಮೇಲು ಜಾತಿಗಳು ಮಾತ್ರವಲ್ಲ ಅಪಮಾನ ಮತ್ತು ಶೋಷಣೆಗೆ ನಿರಂತರವಾಗಿ ಒಳಗಾಗುತ್ತಿರುವ ಕೆಳಜಾತಿಗಳು ಕೂಡ ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ನಂಬಿಕೊಂಡಿವೆ. ಹಾಗಿದ್ದೂ ಭಾರತೀಯ ಚರಿತ್ರೆಯುದ್ದಕ್ಕೂ ಪುನರಾವರ್ತಿತವೂ ಆದ ಸಂಘಟನೆಯೆಂದರೆ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ನಡೆದಿರುವ ಪ್ರಜ್ಞಾಪೂರ್ವಕವಾದ ನಿರಂತರ ಪ್ರಯತ್ನ. ಈ ಪ್ರಯತ್ನಗಳು ಜಾತಿ ವ್ಯವಸ್ಥೆಯಲ್ಲಿನ ದುರ್ಬಲ ಕೊಂಡಿಗಳನ್ನು ಪರಿಚಯ ಮಾಡಿಕೊಟ್ಟಿವೆ. ಜಾತಿಯನ್ನು ಮೀರುವ ಸಾಧ್ಯತೆಗಳನ್ನು ತೋರಿಸಿಕೊಟ್ಟಿದೆ. ದುರಂತ ವೆಂದರೆ ಜಾತಿಯಾಚೆಗಿನ ಜಗಿತಗಳನ್ನು ಅತ್ಯಂತ ಹಿಂಸಾತ್ಮಕವಾಗಿ ಹತ್ತಿಕ್ಕಿಕೊಂಡು ಬರಲಾಗಿದೆ. ಮತ್ತು ಅಂತಹ ಹಿಂಸೆಯನ್ನು ಪುರಾಣವನ್ನಾಗಿಸಿ ಸ್ಥಿರೀಕರಿಸಿದೆ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಜಾತಿಯ ವಿರುದ್ಧ ನಡೆದ ಪ್ರತಿಭಟನೆಗಳನ್ನು ಬೇರೆ ಬೇರೆ ಹುನ್ನಾರಗಳ ಮೂಲಕ ಮಟ್ಟಹಾಕಲು ಜಾತಿಯ ಪ್ರಜ್ಞೆ ನಿರಂತರವಾಗಿ ಕಾರ್ಯೋನ್ಮುಖವಾಗಿದೆ.

ಈ ಕಾರಣಕ್ಕೆ ನಾವು ಜಾತಿಯ ಕೆಸರಿನೊಳಗೆ ಸಿಕ್ಕಿಬಿದ್ದಿರ ಬೇಕಾದ ಅಗತ್ಯವಿಲ್ಲ. ನಮ್ಮ ಪರಂಪರೆಗಳಲ್ಲಿ ಈ ಜಾತಿಯ ವಿರುದ್ಧ ನಡೆದಿರುವ ಜಾತಿಯಾಚೆಗಿನ ಚಲನೆಗಳನ್ನ ಗುರುತಿಸಿಕೊಳ್ಳುವ (ಮ್ಯಾಪಿಂಗ್ ಮಾಡುವ) ಮೂಲಕ ಇವೊತ್ತಿನ ವರ್ತಮಾನವನ್ನು ನಾವು ಎದುರಾಗಬೇಕಿದೆ. ಇವು ಮರೆಗೆ ಸರಿದಿರುವ ಬೆಳಕಿನ ಕಿಂಡಿಗಳನ್ನು ಶೋಧಿಸುವ ಕಾರ್ಯವೂ ಆಗಬಹುದು. ಇಲ್ಲಿಂದ ಮುಂದೆ ಚರಿತ್ರೆಯಿಂದ ಹಿಡಿದು ಈವರೆಗೆ ನಡೆದು ಬಂದಿರುವ ಜಾತಿಯಾಚೆಗಿನ ಚಲನೆಗಳನ್ನು ವಿವರಿಸಿಕೊಳ್ಳಲು ಪ್ರಯತ್ನ ಮಾಡಲಾಗುವುದು.

ಭಾರತದ ಚರಿತ್ರೆಯಲ್ಲಿ ಜಾತಿಯನ್ನು ಪ್ರಜ್ಞೆಯ ಮೂಲಕ ತೊಡೆದು ಹಾಕಲು ಪ್ರಯತ್ನ ಪಟ್ಟಿದ್ದು ಬೌದ್ಧ ಧರ್ಮ. ಬುದ್ಧನ ಜಾತಕ ಕತೆಗಳಲ್ಲಿ ಪ್ರಸ್ತಾಪವಾಗುವ ಅಸ್ಪೃಶ್ಯ ಮಾತಂಗ ಮುನಿಯ ಕತೆ ಭಾರತೀಯ ಜಾತಿಗಳ ಹಿಂಸಾ ಸ್ವರೂಪವನ್ನು, ಹಾಗೂ ಅದನ್ನು ಎದುರಾಗಿ ಜೈಯಿಸುವ ಸಾಧ್ಯತೆಯನ್ನು ನಮ್ಮ ಮುಂದೆ ಮಂಡಿಸುತ್ತದೆ.

ಅಷ್ಟೇ ಅಲ್ಲ ಈ ಕಥನ ಜಾತಿಯಾಚೆಗಿನ ಜಗಿತಕ್ಕಿರುವ ಮಿತಿಗಳನ್ನು ತೋರುತ್ತದೆ. ಸಂಕ್ಷಿಪ್ತವಾಗಿ ಈ ಕಥನ ಹೀಗಿದೆ. ವಾರಣಾಸಿಯಲ್ಲಿ ಅಸ್ಪೃಶ್ಯ ಮಾತಂಗನಾಗಿ ಹುಟ್ಟಿದ ಬುದ್ಧ ಒಮ್ಮೆ ಪಟ್ಟಣ ಪ್ರವೇಶ ಮಾಡುವಾಗ ಪಟ್ಟಣದ ಶ್ರೀಮಂತ ಶೆಟ್ಟಿಯ ಮಗಳಾದ ದಿಟ್ಟಮಂಗಳಿಯು ಉದ್ಯಾನಕ್ಕೆ ಕ್ರೀಡಿಸಲು ಹೋಗುವಾಗ ಆಕಸ್ಮಿಕವಾಗಿ ಎದುರಾಗುತ್ತಾನೆ. ಶಕುನಗಳಲ್ಲಿ ನಂಬಿಕೆ ಇದ್ದ ಅವಳು ಸುಗಂಧ ಜಲದಿಂದ ಕಣ್ಣುಗಳನ್ನು ತೊಳೆದು ಕೊಂಡು ನೋಡಬಾರದ ದೃಶ್ಯಗಳೇ ಕಣ್ಣಿಗೆ ಬೀಳುತ್ತಿವೆ ಎಂದುಕೊಂಡು ಮನೆಗೆ ಹಿಂತಿರುಗುತ್ತಾಳೆ.

ಅವಳ ಪರಿವಾರದವರು ಎಲೈ ಚಂಡಾಲ ನಿನ್ನಿಂದಾಗಿ ನಮಗೆ ಸಿಗುತ್ತಿದ್ದ ಹೆಂಡ ಮತ್ತು ಮಾಂಸಗಳು ತಪ್ಪಿಹೋದವು ಎನ್ನುತ ಮಾತಂಗನನ್ನು ಸಿಕ್ಕಾಪಟ್ಟೆ ಹೊಡೆದರು. ನಿರ್ದೋಷಿಯಾದ ಮಾತಂಗ ಈ ಘಟನೆಯಿಂದ ತಲ್ಲಣಗೊಂಡು ನೇರ ಮಂಗಳಿಯ ಮನೆಯ ಮುಂಭಾಗಕ್ಕೆ ಬಂದು ಬಾಗಿಲಲ್ಲಿ ಮಲಗಿಕೊಳ್ಳುತ್ತಾನೆ. ಮಂಗಳಿಯ ತಂದೆ ಯಾಕೆ ಅಂತ ಕೇಳಿದರೆ ನನಗೆ ಮಂಗಳಿ ಬೇಕು ಎನ್ನುತ್ತಾನೆ. ಹೀಗೆ ಒಂದು ವಾರಗಳ ಕಾಲ ಉಪವಾಸ ಮಾಡಿದ ನಂತರ ಮಂಗಳಿಯನ್ನ ಅವನಿಗೆ ವಿಧಿಯಿಲ್ಲದೆ ಕೊಡುತ್ತಾರೆ.

> **ನಮ್ಮ ಪರಂಪರೆಗಳಲ್ಲಿ ಜಾತಿಯ ವಿರುದ್ಧ ನಡೆದಿರುವ ಜಾತಿಯಾಚೆಗಿನ ಚಲನೆಗಳನ್ನ ಗುರುತಿಸಿಕೊಳ್ಳುವ ಮೂಲಕ ಇವೊತ್ತಿನ ವರ್ತಮಾನವನ್ನು ನಾವು ಎದುರಾಗಬೇಕಿದೆ. ಇವು ಮರೆಗೆ ಸರಿದಿರುವ ಬೆಳಕಿನ ಕಿಂಡಿಗಳನ್ನು ಶೋಧಿಸುವ ಕಾರ್ಯವೂ ಆಗಬಹುದು. ಚರಿತ್ರೆಯಿಂದ ಹಿಡಿದು ಈವರೆಗೆ ನಡೆದು ಬಂದಿರುವ ಜಾತಿಯಾಚೆಗಿನ ಚಲನೆಗಳನ್ನು ವಿವರಿಸಿಕೊಳ್ಳಲು ಪ್ರಯತ್ನ ಮಾಡಲಾಗುವುದು. ಭಾರತದ ಚರಿತ್ರೆಯಲ್ಲಿ ಜಾತಿಯನ್ನು ಪ್ರಜ್ಞೆಯ ಮೂಲಕ ತೊಡೆದು ಹಾಕಲು ಪ್ರಯತ್ನ ಪಟ್ಟಿದ್ದು ಬೌದ್ಧ ಧರ್ಮ. ಬುದ್ಧನ ಜಾತಕ ಕತೆಗಳಲ್ಲಿ ಪ್ರಸ್ತಾಪವಾಗುವ ಅಸ್ಪೃಶ್ಯ ಮಾತಂಗ ಮುನಿಯ ಕತೆ ಭಾರತೀಯ ಜಾತಿಗಳ ಹಿಂಸಾ ಸ್ವರೂಪವನ್ನು, ಹಾಗೂ ಅದನ್ನು ಎದುರಾಗಿ ಜೈಯಿಸುವ ಸಾಧ್ಯತೆಯನ್ನು ನಮ್ಮ ಮುಂದೆ ಮಂಡಿಸುತ್ತದೆ.**

ಯಾವ ರಸ್ತೆಯಲ್ಲಿ ಅವನನ್ನು ಅಪಮಾನಗೊಳಿಸಿದ್ದರೋ ಅದೇ ರಸ್ತೆಯಲ್ಲಿ ಮಂಗಳಿಯ ಬೆನ್ನೇರಿ ತನ್ನ ಚಂಡಾಲ ಗ್ರಾಮಕ್ಕೆ ಬರುತ್ತಾನೆ. ತದ ನಂತರದಲ್ಲಿ ಮಾತಂಗನು ಕಾಡಿಗೆ ಹೋಗಿ ಶ್ರವಣ ಸನ್ಯಾಸವನ್ನು ಸ್ವೀಕರಿಸಿ ಅಭಿಜ್ಞ ಮತ್ತು ಸಮಾಪತಿ ಜ್ಞಾನವನ್ನು ಪಡೆದು ಹಿಂತಿರುಗುತ್ತಾನೆ. ಸನ್ಯಾಸಿಯಾದ ಗಂಡನನ್ನು ನೆನೆದು ದು:ಖಿತಳಾದ ಮಂಗಳಿಗೆ ಅವಳ ಹಿಂದಿನ ಸಂಪತ್ತಿಗಿಂತ ಹಿರಿದಾದಷ್ಟು ಸಂಪತ್ತನ್ನು ಕೊಡುತ್ತಾನೆ. ಮತ್ತು ಹೆಬ್ಬೆರಳಿನಿಂದ ನಾಭಿಯನ್ನು ಮುಟ್ಟಿ ಅವಳನ್ನು ಮುತ್ರವತಿಯಾಗಿಸುತ್ತಾನೆ.

ಹೀಗೆ ಮಹಾಬ್ರಹ್ಮನಾದ ಮಾತಂಗನ ಹೆಂಡತಿ ಎಂಬ ಗುರುತಿನಿಂದ ಅಪಾರ ಸಂಪತ್ತನ್ನು ಸಮಾಜದಲ್ಲಿ ಗೌರವ ಪ್ರತಿಷ್ಠೆಗಳನ್ನು ಪಡೆಯುತ್ತಾಳೆ. ಮಾಂಡವ್ಯ ನೆಂಬ ಹೆಸರಿನ ಮಗನನ್ನು ಪಡೆಯುತ್ತಾಳೆ. ಮಾಂಡವ್ಯನಿಗೆ ಜಂಬೂದ್ವೀಪ ಶ್ರೇಷ್ಠ ಬ್ರಾಹ್ಮಣ ಆಚಾರ್ಯರಿಂದ ವೇದ ಪಾಠಗಳಾಗುತ್ತವೆ. ಚಂಡಾಲನ ಮಗ ಬ್ರಾಹ್ಮಣನಾಗಿ ಬೆಳೆಯುತ್ತಾನೆ. ಒಮ್ಮೆ ಮಾಂಡವ್ಯ ತನ್ನ ಅಪಾರ ಸಂಪತ್ತಿನಿಂದ ಆಗಿಂದಾಗ್ಗೆ ಬ್ರಾಹ್ಮಣರಿಗೆ ಭೂರಿ ಭೋಜನವನ್ನ ಏರ್ಪಾಟು ಮಾಡುತ್ತಾನೆ.

ತನ್ನ ದಿವ್ಯ ದೃಷ್ಟಿಯಿಂದ ಇದನ್ನು ಅರಿತ ಮಾತಂಗ ಈ ಅಪಾತ್ರದಾನವನ್ನು ತಪ್ಪಿಸುವ ಸಲುವಾಗಿ ಮತ್ತು ಯಾರು ದಾನಕ್ಕೆ ಯೋಗ್ಯರು ಎಂಬುದನ್ನು ಮನವರಿಕೆ ಮಾಡಿಕೊಡಲು ಬರುತ್ತಾನೆ. ಆ ದಿನ ೧೬ ಸಾವಿರ ಬ್ರಾಹ್ಮಣರಿಗೆ ಪಾಯಸವನ್ನು ಮಾಡಿ ಸ್ವತ: ಮಾಂಡವ್ಯನು ಬಡಿಸುತ್ತಿರುತ್ತಾನೆ. ಧವಣ ಶಾಲೆಗೆ ಬಂದ ಕೊಳಕಾದ ಮಾತಂಗನನ್ನು ಮಗನೇ ತಡೆದು ಹೊರಗಟ್ಟುತ್ತಾನೆ. ಈ ಭೋಜನ ಬ್ರಾಹ್ಮಣರಿಗೆ ಮಾತ್ರ ನಿನ್ನಂಥ ಚಂಡಾಲನಿಗೆ ಕೊಡಲಾರೆ ಎಂದು ತಿರಸ್ಕರಿಸುತ್ತಾನೆ. ಮಾತಂಗ ಅವರ ಕೈಗೆ ಸಿಕ್ಕದೆ ಹಿಮಾಲಯಕ್ಕೆ ಹಿಂತಿರುಗುತ್ತಾನೆ.

ಆದರೆ ಯಕ್ಷರಾಜರು ಮಾತಂಗನಿಗಾದ ಅಪಮಾನಕ್ಕೆ ಪ್ರತಿಕಾರ ತೀರಿಸಿಕೊಳ್ಳುತ್ತಾರೆ. ಮಾಂಡವ್ಯನನ್ನು ವಿರೂಪಗೊಳಿಸುತ್ತಾರೆ. ಇದನ್ನ ಕೇಳಿದ ಮಂಗಳಿಗೆ ಬಂದಿದ್ದವನು ತನ್ನ ಗಂಡ ಮಾತಂಗನೆಂಬುದು ಹೊಳೆದು ಹೊಗುತ್ತದೆ. ಪುತ್ರ ಬಿಕ್ಷೆಯನ್ನು ಯಾಚಿಸಿ ಗಂಡನಲ್ಲಿಗೆ ಬರುತ್ತಾಳೆ. ಆಗ ಮಾತಂಗನು .ಾತಿಯ ಮದದಿಂದ ಕೂರುಪಿಗಳಾದ ಅವರ ಆರೋಗ್ಯ ಮರಳಿ ಬರಬೇಕಾದರೆ ನಿನ್ನ ಮಗ ನನ್ನ ಎಂಜಲನ್ನ ತಿನ್ನಬೇಕು. ಬಾಹ್ಮಣರು ತಿನ್ನಬೇಕು ಎಂದು ಎಂಜಲು ಮಾಡಿದ ಪಾಯಸವನ್ನ ನೀಡುತ್ತಾನೆ. ಅದರಿಂದ ಎಲ್ಲರ ಆರೋಗ್ಯ ಮರಳುತ್ತದೆ.

ಆದರೆ ಇವರನ್ನ ಜಾತಿಗೆಟ್ಟ ಬ್ರಾಹ್ಮರು ಎಂದು ಇತರರು ಇವರನ್ನ ಕುಲದಿಂದ ಹೊರಗಾಕುತ್ತಾರೆ. ಎಲ್ಲಾ ಬ್ರಾಹ್ಮಣರು ಪಕ್ಕದ ಮೇದ ರಾಜ್ಯಕ್ಕೆ ಹೋಗುತ್ತಾರೆ. ಒಮ್ಮೆ ಮಾತಂಗ ಬಿಕ್ಷಾಟನೆಗೆ ಮೇದ ರಾಜ್ಯದಲ್ಲಿ ಸಂಚರಿಸುವುದನ್ನ ಕಂಡ ಬ್ರಾಹ್ಮಣರು ಇವನಿಂದ ತಾವು ಜಾತಿಗೆಟ್ಟ ಸಂಗತಿ ಜನರಿಗೆ ತಿಳಿದರೆ ನಮಗೆ ಬೆಲೆಯಿರುವುದಿಲ್ಲ ಎಂದು ಬಗೆದು ರಾಜನಲ್ಲಿಗೆ ಹೋಗಿ ಪಟ್ಟಣಕ್ಕೆ ಒಬ್ಬ ಮಾಯಾವಿ, ಜಾದುಗಾರ ಬಂದಿದ್ದಾನೆ ಕೂಡಲೆ ಅವನನ್ನು ಸಂಹರಿಸಿ ಎಂದು ಪಿರ್ಯಾದು ಕೊಡುತ್ತಾರೆ. ಚಾವಡಿಯಲ್ಲಿ ಬಿಕ್ಷಾನ್ನ ತಿನ್ನುತ್ತಿದ್ದ ಮಾತಂಗನನ್ನು ರಾಜಭಟರು ಕತ್ತರಿಸಿ ಹಾಕುತ್ತಾರೆ. ಚಂಡಾಲನಾದ ಮಾತಂಗನು ಬ್ರಹ್ಮಲೋಕ ಏರುತ್ತಾನೆ .ಅವನು ಹೀಗೆ ಬ್ರಹ್ಮ ಪದವಿಗೇರಲು ಜಾತಿಯು ಅಡ್ಡಿಯಾಗಲಿಲ್ಲ. ಇದು ಕತೆ.

ಈ ಕಥನವು ತೋರುವ ಜಾತಿ ಕುರಿತಾದ ತಿಳುವಳಿಕೆ ನಮ್ಮ ಇವೊತ್ತಿನ ಸಮಾಜದ ಜಾತಿ ಚಲನೆಗಳ ಆಧುನಿಕ ಲಕ್ಷಣಗಳೆಲ್ಲವನ್ನ ಒಳಗೊಂಡಂತಿದೆ. ಕನ್ನಡ ಜಾನಪದ ಕಥನವಾದ ಮಾರಿಯ ಕತೆಯು ಕೂಡ ಇಂತಹ ಅನನ್ಯತೆ ಮರುರೂಪವಾಗಿರುವಂತೆ ತೋರುತ್ತದೆ. ಆದರೆ ಅಲ್ಲಿನ ಜಾತಿಪರ ವರ್ತನೆಗಳು ಸಂಪೂರ್ಣವಾಗಿ ಸಹನೆ ಕಳೆದು ಕೊಂಡಿರುವ ಮನಸ್ಥಿತಿಯನ್ನು ಕಟ್ಟಿಕೊಡುತ್ತದೆ. ಮಾತಂಗ ಮುನಿಯ ಕತೆಯಲ್ಲಿ ಅವನ ಸಿದ್ದಿಗೆ ಅಡ್ಡಿ ಪಡಿಸುವ ಸಾಮಾಜಿಕ ಪ್ರತಿರೋಧದ ನೆಲೆ ಇಲ್ಲ. ಆದರೆ ಮಾರಿ ಕತೆಯಲ್ಲಿನ ಅಸ್ಪೃಶ್ಯ ತನ್ನ ಕುಲದ ಗುರುತನ್ನ ಬಚ್ಚಿಟ್ಟು ವಿದ್ಯೆಯನ್ನು ಕಲಿಯಬೇಕಾಗಿ ಬರುತ್ತದೆ.

ಜಾತಿಯನ್ನು ಮರೆಮಾಚಿ ಮದುವೆಯಾಗಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ. ಈ ಎರಡೂ ಕಥನಗಳಲ್ಲಿ ಕೇಂದ್ರಬಿಂದು ಮುಖ್ಯವಾಗಿ ಅಂಬೇಡ್ಕರ್ ವಿವರಿಸಿದಂತೆ ಜಾತಿ ಎನ್ನುವುದು ಅಸೆಂಡಿಂಗ್ ಆರ್ಡರ್ ಆಫ್ ರೆವರೆನ್ಸ್

ಅಂಡ್ ಡಿಸೆಂಡಿಂಗ್ ಆರ್ಡರ್ ಆಫ್ ಕಂಟೆಂಪ್ಟ್‌ನ ರೂಪಕಾತ್ಮ ಅಭಿವ್ಯಕ್ತಿಯಾಗಿದೆ. ಜ್ಞಾನ ಮತ್ತು ದೊಡ್ಡ ಮಾರ್ಗಗಳಿಂದ ಅಸ್ಪೃಶ್ಯನೊಬ್ಬ ಜಾತಿ ಅಹಂಕಾರಗಳನ್ನು ಭಂಗಗೊಳಿಸುವ ಸಾಧ್ಯತೆಯನ್ನು ಮಾತಂಗನ ಕಥೆ ತೋರುತ್ತಿರುವಂತೆ, ಅಂತಹ ಚಲನೆ ಜಾತಿರಾಹಿತ್ಯದ ಕಡೆ ಚಲಿಸುವ ಬದಲು ಜಾತಿಯನ್ನು ಪುನ: ಚೇತನಗೊಳಿಸುವ ಕಡೆ ಹೊರಳುವುದನ್ನು ಮಾತಂಗನ ಹತ್ಯೆಯು ಕಟ್ಟಿಕೊಡುವುದರಿಂದಲ್ಲೇ ಈ ಕಥನ ಸಮಾಜಶಾಸ್ತ್ರೀಯ ಪಾಠವಾಗಿ ನಮಗೆ ಪ್ರಸ್ತುತವಾಗುತ್ತದೆ.

ಜಾತಿಯಾಚೆಗಿನ ಚಲನೆಗಳಾದ ಅಂತರ ಜಾತಿಯ ಮದುವೆ, ಸಹ ಭೋಜನಗಳು ಕೂಡ ಜಾತಿಯ ನೆನಪನ್ನು ನಾಶಗೊಳಿಸಲಾರವು ಎಂಬ ಸಂಕೀರ್ಣತೆಯನ್ನ ಈ ಎರಡೂ ಕಥನಗಳು ನಮ್ಮ ಮುಂದಿಡುತ್ತವೆ. ಕೆಳಜಾತಿಗಳು ಪಡೆದುಕೊಳ್ಳುವ ಆರ್ಥಿಕ ಹಾಗೂ ಸಮಾಜಿಕ ಸ್ಥಾನಮಾನಗಳು ಹೇಗೆ ಅವರು ಮೇಲು ಜಾತಿಗಳನ್ನು ಅನುಕರಿಸಲು ಹಾಗೂ ಕುಲದ ಗುರುತುಗಳನ್ನು ಮರೆಯಲು ಪ್ರೇರೇಪಿಸುತ್ತವೆ ಎಂಬ ಡೈಲೆಕ್ಟಲ್ ಪ್ರಕ್ರಿಯೆಯನ್ನು ಮಾಂಡವ್ಯನ ವರ್ತನೆಗಳು ದಾಖಲಿಸಿವೆ. ಮಾತಂಗನ ನಂತರದಲ್ಲಿ ಕಾಣಿಸಿಕೊಳ್ಳುವ ಬೌದ್ಧ ಧರ್ಮವು ಅರಿವಿನ ಮೂಲಕ ಜಾತಿಯನ್ನ ತೊಡೆಯಲು ನಡೆಸಿದ ಹೋರಾಟದ ಕತೆ ಎಲ್ಲರು ತಿಳಿದ ವಿಷಯವೇ ಆಗಿದೆ.

ಭಾಗ–೨

ಬೌದ್ಧ ಧರ್ಮ ಭಾರತೀಯ ಸಂದರ್ಭದಲ್ಲಿ ಜಾತಿಗೆ ಪ್ರತಿಕ್ರಿಯಿಸಿದ ಸಂಘಟನೆಯಾದರೆ ವಚನ ಚಳವಳಿ ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ೧೨ನೇ ಶತಮಾನದಲ್ಲಿ ಜಾತಿಯ ವಿರುದ್ಧ ನಡೆದ ಜನ ಹೋರಾಟವಾಗಿದೆ.

ವಚನ ಚಳುವಳಿ ಶೈವ ಮೂಮೆಂಟ್ ಆಗಿದ್ದರೂ ಕೊಡ ಅದು ಮುಖ್ಯವಾಗಿ ಬೌದ್ಧ ಮತ್ತು ಜೈನ ಧರ್ಮದ ಅರಿವಿನ ಮುಂದುವರಿಕೆಯಾಗಿಯೇ ಕಂಡು ಬರುತ್ತದೆ. ಹಾಗೂ ಸ್ಥಳೀಯವಾಗಿ ಜಾತಿಯ ವಿರುದ್ಧ ಧಂಗೆಯನ್ನ ಒಳಗೆ ಪೋಷಿಸಿಕೊಂಡು ಬಂದ ಅನೇಕ ದೇಸಿ ಜ್ಞಾನ ಪರಂಪರೆಗಳ ಕೊಡುಗೆಯೂ ಕಾರಣವಾಗಿ ವಚನ ಚಳುವಳಿ ಅಸ್ಥಿತ್ವ ಪಡೆಯಿತು. ಮಾತಂಗ ಚಂಡಾಲ ಯೋನಿಜನಾಗಿ ಹುಟ್ಟಿ ಅಪಮಾನವನ್ನ ಅನುಭವಿಸಿ ಅದರ ವಿರುದ್ಧ ಹೋರಾಟ ಮಾಡಿದ ಉದಾಹರಣೆಯಾದರೆ ಬಸವಣ್ಣ ಮೇಲು ಕುಲದಲ್ಲಿ ಹುಟ್ಟಿಯು ಪ್ರಜ್ಞಾಪೂರ್ವಕವಾಗಿ ಮಾದಿಗರ ಚೆನ್ನಯ್ಯನ ಮಗನು ಡೋಹರ ಕಕ್ಕಯ್ಯನ ಮಗಳು ಬೆರಣಿಗೆ ಹೋಗಿ ಹೊಲದಲಿ ಸಂಗವ ಮಾಡಲು ಅವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲ ಸಂಗಮದೇವ ಎಂಬ ಅಪಜಾತಿಕರಣಕ್ಕೆ ಒಳಗಾಗುತ್ತಾರೆ.

ಆ ಮೂಲಕ ಜಾತಿಯ ವಿರುದ್ಧ ಜಾಗೃತಿಯ ಚಳವಳಿ ಕಟ್ಟಲು ನೈತಿಕತೆಯನ್ನು ಗಳಿಸಿ ಕೊಳ್ಳುತ್ತಾರೆ. ಜಾತಿಯನ್ನು ಗಟ್ಟಿಗೊಳಿಸುತ್ತಿರುವ ಅಂಶಗಳಲ್ಲಿ ದೈವ–ಧಾರ್ಮಿಕ ಆಚರಣೆ–ವಂಶಾವಳಿ–ಪುರಾಣಗಳ ಪ್ರಭಾವವನ್ನು ಹಾಗೂ ಶಿಕ್ಷಣ–ಅರಿವಿನ ಕೊರತೆಯನ್ನು ಗುರುತಿಸಿ ಅವುಗಳ ಪರ್ಯಾಯಗಳನ್ನು ರೂಪಿಸುವ ಚಳುವಳಿಯನ್ನ ಸಂಘಟಿಸುತ್ತಾರೆ. ಸಹಭೋಜನ ಮತ್ತು ಅಂತರ ಜಾತಿಯ ವಿವಾಹಗಳ ಮೂಲಕ ಜಾತಿ ವಿನಾಶಕ್ಕೆ ಮುಂದಾಗುತ್ತಾರೆ. ಆದರೆ ಬಸವಣ್ಣ ಜಾತಿವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾಗಬೇಕಾಗುತ್ತದೆ ಎಂಬುದೆ ಆತ್ಯಂತಿಕ ಸತ್ಯವೆಂಬಂತೆ ಚರಿತ್ರೆ ನಂಬಿಸಲು ಯತ್ನಿಸಿದೆ.

ಬಸವಣ್ಣ ವೀರಶೈವ ಧರ್ಮವನ್ನು ಮತ್ತೇ ಏಕಾರಾಧನೆಯ ನೆಲೆಗೆ ಬಂಧಿಸಿದ್ದು ಜಾತಿಯ ನೆನಪುಗಳನ್ನು ಸಾಂಸ್ಕೃತಿಕವಾಗಿ ಅಳಿಸದೆ ಹೊಸ ಒಡಂಬಡಿಕೆಗಳನ್ನು ಕೆಳಜಾತಿಯ ಶರಣರಮೇಲೆ ಹೇರಿದ್ದು ಸಾಂಸ್ಕೃತಿಕವಾಗಿ ಬಸವಣ್ಣ ಇಟ್ಟ ತಪ್ಪು ಹೆಜ್ಜೆ ಇರಬಹುದು. ಅಂದರೆ ವಚನ ಚಳುವಳಿಯ ಆಶಯಕ್ಕೆ ಇದ್ದ ಮುಕ್ತ ಅವಕಾಶವು ಆಚರಣೆಯ ನೆಲೆಯಲ್ಲಿ ಇರಲಿಲ್ಲ.

ಬಸವಣ್ಣ ವೀರಶೈವ ಧರ್ಮವನ್ನು ಮತ್ತೇ ಏಕಾರಾಧನೆಯ ನೆಲೆಗೆ ಬಂಧಿಸಿದ್ದು ಜಾತಿಯ ನೆನಪುಗಳನ್ನು ಸಾಂಸ್ಕೃತಿಕವಾಗಿ ಅಳಿಸದೆ ಹೊಸ ಒಡಂಬಡಿಕೆಗಳನ್ನು ಕೆಳಜಾತಿಯ ಶರಣರಮೇಲೆ ಹೇರಿದ್ದು ಸಾಂಸ್ಕೃತಿಕವಾಗಿ ಬಸವಣ್ಣ ಇಟ್ಟ ತಪ್ಪು ಹೆಜ್ಜೆ ಇರಬಹುದು. ಅಂದರೆ ವಚನ ಚಳುವಳಿಯ ಆಶಯಕ್ಕೆ ಇದ್ದ ಮುಕ್ತ ಅವಕಾಶವು ಆಚರಣೆಯ ನೆಲೆಯಲ್ಲಿ ಇರಲಿಲ್ಲ. ಶರಣರು ತಮಗೆ ಶಿವನ ಹೊರತು ಇಷ್ಟ ಬಂದ ದೇವರನ್ನ ಪೂಜಿಸುವಂತಿರಲಿಲ್ಲ. ಅಲ್ಲದೆ ಕೆಳಜಾತಿಗಳ ಜನರ ಪರಂಪರಾನುಗತವಾದ ಮಾತೃ ದೇವತಾ ಉಪಾಸಕರಾಗಿದ್ದವರ ಮನೋಲೋಕದ ಮೇಲೆ ಯಾವ ರೀತಿಯ ಪರಿಣಾಮನವನ್ನು ಬೀರಿತ್ತು ಎಂಬ ಸಂಗತಿಯನ್ನು ಹುಡುಕಬೇಕಿದೆ.

ಶರಣರು ತಮಗೆ ಇಷ್ಟ ಬಂದ ರೀತಿಯಲ್ಲಿ ಇಷ್ಟ ಬಂದ ಹೆಸರಿನಲ್ಲಿ ಶಿವನನ್ನು ಕುರಿತು ಸಂಧಾನ ನಡೆಸಬಹುದಿತೇ ಹೊರತು (ಅಂಕಿತಗಳನ್ನು ಗಮನಿಸಿ) ಶಿವನ ಹೊರತು ಇಷ್ಟ ಬಂದ ದೇವರನ್ನ ಪೂಜಿಸುವಂತಿರಲಿಲ್ಲ. ಅಲ್ಲದೆ ಮೂಢ ನಂಬಿಕೆಯ ಹೆಸರಿನಲ್ಲಿ ಕೆಳ ಜಾತಿಗಳ ಜನರ ಪರಂಪರಾನುಗತವಾದ ಮಾತೃದೇವತೆಯರ ಕುರಿತಾಗಿ ತೋರುವ ಕೀಳರಿಮೆಯು ಶರಣತ್ವವನ್ನು ಸ್ವೀಕರಿಸಿದ ಮಾತೃದೇವತಾ ಉಪಾಸಕರಾಗಿದ್ದವರ ಮನೋಲೋಕದ ಮೇಲೆ ಯಾವ ರೀತಿಯ ಪರಿಣಾಮನವನ್ನು ಬೀರಿತ್ತು ಎಂಬ ಸಂಗತಿಯನ್ನು ಹುಡುಕಬೇಕಿದೆ.

ಕೇರಳದ ನಾರಾಯಣ ಗುರು ಅವರ ಈಳವ ಶಿವನ ಕಲ್ಪನೆ – ಮೂರ್ತಿ ಇಲ್ಲದ ದೇವಾಲಯ ನಿರ್ಮಾಣ ಮತ್ತು ಆಯಾ ಜನಾಂಗ ತಾನು ಪರಿಭಾವಿಸುವ ತೆರನಾಗಿ ದೈವದ ಜೊತೆಯ ಅನುಸಂಧಾನಕ್ಕೆ ಆಸ್ಪದ ನೀಡಿದ್ದು ಸಾಂಸ್ಕೃತಿಕವಾಗಿ ಆ ಚಳುವಳಿಯ ಯಶಸ್ಸಿಗೆ ಕಾರಣವಾಗಿರಬಹುದು. ಆದರೆ ವಚನ ಚಳುವಳಿಯಲ್ಲಿ ಇಂತಹ ಆಸ್ಪದ ಇಲ್ಲದೆ ಹೋದುದ್ದೇ ಆಶಯದಲ್ಲಿ ಬಹುವಾಗಿದ್ದ ಆಚರಣೆಯಲ್ಲಿ ಏಕವಾಗಿದ್ದ ದ್ವಂದ್ವ ವಚನ ಚಳುವಳಿಯ ಹಿನ್ನೆಡೆಗೆ ಕಾರಣವಾಗಿರಬಹುದು! ಇದು ಕಾರಣವಾಗಿಯೇ ಬಸವಣ್ಣನ ನಂತರದಲ್ಲಿ ಜ್ಯಾತ್ಯತೀತವಾದ ವೀರಶೈವ ಮತ ಜಾತಿಯಾಗಿ ಸ್ಥಗಿತವಾಗಿದ್ದು ಸಾಮಾಜಿಕ ಶ್ರೇಣಿಯಲ್ಲಿ ಬ್ರಾಹ್ಮಣರ ನಂತರದ ಸ್ಥಾನವನ್ನು ಆಕ್ರಮಿಸಿಕೊಂಡಿದ್ದು ಈಗ ಇತಿಹಾಸ.

ಆದರೆ ದೇವಾಲಯವನ್ನು ತಾರತಮ್ಯ ಹಾಗೂ ಶೋಷಣೆಯ ಕೇಂದ್ರವೆಂದು ಅದನ್ನು ಬಹಿಷ್ಕರಿಸಿದ ಬಸವಣ್ಣನನ್ನೇ ದೇವರಾಗಿಸಿ ವಚನ ಚಳುವಳಿಯ ತತ್ವ ವನ್ನೇ ಪಲ್ಲಟಗೊಳಿಸಿ ವೀರಶೈವ ಜಾತಿ ಇಂದಿಗೂ ತನ್ನ ಹುಟ್ಟಿನ ಗುಟ್ಟನ್ನ ಅರಿಯದ ಮಾಂಡವ್ಯನ ತರಹ ವಿಜೃಂಭಿಸುತ್ತಿದೆ. ಜಾತಿ ವಿರುದ್ಧ ಆಡುವ ಮಾತು ಜಾತಿಯ ಬಲವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬ ಲೋಹಿಯ ಮಾತು ವಚನ ಚಳುವಳಿಯ ವಿಚಾರದಲ್ಲೂ ನಿಜವಾಯಿತು.

ಆದರೆ ವಚನ ಚಳುವಳಿಯ ಹಿನ್ನೆಡೆಗೆ ರಾಜಕೀಯ ಮತ್ತು ಸಾಮಾಜಿಕ ಕಾರಣಗಳನ್ನು ಗುರುತಿಸಲು ಆಸಕ್ತಿ ತೋರಿದ ಚರಿತ್ರೆಯ ವರ್ತನೆ ಹಾಗೂ ಸಾಂಸ್ಕೃತಿಕ ಕಾರಣಗಳನ್ನು ಹುಡುಕಲು ತೋರಿದ ನಿರ್ಲಕ್ಷೆಯನ್ನು ಅರ್ಥ ಮಾಡಿಕೊಂಡರೆ ಮಾತ್ರ ಸಮಾಜಶಾಸ್ತ್ರಜ್ಞರ ರೂಢಿಗತ ಗ್ರಹಿಕೆಗಿಂತ ಭಿನ್ನವಾದ ಜಾತಿಯ ಸಂಕೀರ್ಣತೆಯ ಸ್ವರೂಪ ಅರಿಯಲು ಸಾಧ್ಯವಾಗುತ್ತದೆ.

ವಚನ ಚಳುವಳಿ ಲಿಂಗಾಯತ ಜಾತಿಯಾಗಿ ರೂಪಗೊಂಡ ಮೇಲೆ ವಚನ ಚಳುವಳಿಯ ಅನನ್ಯತೆಯು ಬೇರೆ ಬೇರೆ ಚಲನಶೀಲರೂಪಗಳಲ್ಲಿ ಪುನರ್ ಕಾಣಿಸಿಕೊಂಡಿತ್ತು. ಜನಪದ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ, ಮಾದೇಶ್ವರ, ಸಂತ ಪರಂಪರೆಗಳಲ್ಲಿ ಈ ಅನನ್ಯತೆ ಜಾತಿ ವಿರುದ್ಧದ ಆಧ್ಯಾತ್ಮಿಕ ಧಂಗೆಯಾಗಿ ಮುಂದುವರಿಯಿತು. ಮಂಟೇಸ್ವಾಮಿ ಪರಂಪರೆಯಂತು ಜಾತಿಯ ಮೂಲಬೇರಾದ ಶುದ್ಧ ಮತ್ತು ಅಶುದ್ಧ ಕಲ್ಪನೆಗಳನ್ನೇ ಬುಡಮೇಲು ಮಾಡಿತು.

ಚರ್ಚೆ

ಚರ್ಚೆ

> ಕರ್ನಾಟಕದಲ್ಲಿ ಜಾತಿಯ ವಿರುದ್ಧ ಸಾಂಸ್ಕೃತಿಕ ಆಂದೋಲನವನ್ನ ಜೀವಂತವಾಗಿಟ್ಟದ್ದರೆ ಉತ್ತರ ಕರ್ನಾಟಕವನ್ನುಸಿದ್ಧರೂಢ ಮತ್ತು ಸೂಫಿ ಪರಂಪರೆಗಳು ಜಾತಿಯ ಬೇರಿಗೆ ಉಪ್ಪು ನೀರೆರವ ಕಾರ್ಯವನ್ನ ಮುಂದುವರಿಸಿಕೊಂಡು ಬಂದವು. ಇವು ತಮ್ಮ ಆಚರಣಾ ವಿಧಿಗಳಲ್ಲಿಯೇ ಜಾತಿಯನ್ನು ಛಿದ್ರಿಸುವ ಪದ್ಧತಿಗಳನ್ನು ಬಳಕೆಗೆ ತಂದರು. ಇವು ಎಷ್ಟು ಕ್ರಾಂತಿಕಾರವಾಗಿತ್ತೆಂಬುದನ್ನ ಅರಿಯಲು ಮಧ್ಯ ಕರ್ನಾಟಕದ ಕೆಲವು ಭಾಗಗಳಲ್ಲಿ ಕಾರ್ಯ ಎಂಬ ಹೆಸರಿನ ಆಚರಣೆಯನ್ನು ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ.

ಶುದ್ಧತೆಯ ಹೆಸರಿನಲ್ಲಿ ಶ್ರೇಷ್ಠತೆಯನ್ನು ಕಲ್ಪಿಸಿಕೊಂಡು ಜನರನ್ನ ಪ್ರತ್ಯೇಕಿಸುತ್ತಿದ್ದ ಪ್ರಕ್ರಿಯೆಯ ವಿರುದ್ಧ ದೊಡ್ಡ ಹೋರಾಟವನ್ನೇ ಮಾಡಿತು. ಕುರಿದೊಡ್ಡಿಯನ್ನೆ ಗದ್ದುಗೆಯನ್ನಾಗಿ ಮಾಡಿದ್ದು, ದೊಡ್ಡಮ್ಮನ ಮುಟ್ಟಿನ ತೋಪನ್ನ ಪವಿತ್ರಗೊಳಿಸಿದ್ದು, ತಿಪ್ಪೆಯ ಹತ್ತಿರಕ್ಕೆ ಕಲ್ಯಾಣದ ಬಸವಣ್ಣನನ್ನು ಕರೆಸಿಕೊಂಡಿದ್ದು.

ಯಾವುದನ್ನ ಕೀಳು ಹೊಲಸು ಎಂದು ದೂಷಿಸಲಾಗಿತ್ತೋ ಅಂತಹ ಎಲ್ಲವುಗಳನ್ನು ಮಂಟೇಸ್ವಾಮಿ ತನ್ನ ಪವಾಡಗಳಿಂದ ಅದಲು ಬದಲು ಮಾಡುತ್ತಾನೆ. ಶುದ್ಧತೆಯ ರೂಢಿಗತ ಅರ್ಥವನ್ನು ಛಿದ್ರಿಸಿ ಹೊಸ ಅರ್ಥ ಹೊರಡಿಸುತ್ತಾನೆ. ರಾಜಕೀಯ ಅಧಿಕಾರ ಮತ್ತು ಉತ್ಪಾದನಾ ಸಾಧನಗಳು ಒಂದು ಜಾತಿಯಲ್ಲಿ ಕೇಂದ್ರಿಕೃತವಾದರೆ ಅದು ಯಾಜಮಾನ್ಯದ ಜಾತಿವ್ಯವಸ್ಥೆಯನ್ನು ಬಲಗೊಳ್ಳಿಸುತ್ತದೆ ಎನ್ನುವುದನ್ನು ಮಂಟೇಸ್ವಾಮಿ ಪರಂಪರೆ ಭಂಗಗೊಳಿಸುತ್ತದೆ.

ಭಾಗ–೩

ಮಂಟೇಸಾಮಿ ಮತ್ತು ಮಾದಪ್ಪ ಪರಂಪರೆಗಳು ದಕ್ಷಿಣ ಕರ್ನಾಟಕದಲ್ಲಿ ಜಾತಿಯ ವಿರುದ್ಧ ಸಾಂಸ್ಕೃತಿಕ ಆಂದೋಲನವನ್ನ ಜೀವಂತವಾಗಿಟ್ಟದ್ದರೆ ಉತ್ತರ ಕರ್ನಾಟಕವನ್ನುಸಿದ್ಧರೂಢ ಮತ್ತು ಸೂಫಿ ಪರಂಪರೆಗಳು ಜಾತಿಯ ಬೇರಿಗೆ ಉಪ್ಪು ನೀರೆರವ ಕಾರ್ಯವನ್ನ ಮುಂದುವರಿಸಿಕೊಂಡು ಬಂದವು. ಇವು ತಮ್ಮ ಆಚರಣಾ ವಿಧಿಗಳಲ್ಲಿಯೇ ಜಾತಿಯನ್ನು ಛಿದ್ರಿಸುವ ಪದ್ಧತಿಗಳನ್ನು ಬಳಕೆಗೆ ತಂದರು.

ಇವು ಎಷ್ಟು ಕ್ರಾಂತಿಕಾರವಾಗಿತ್ತೆಂಬುದನ್ನ ಅರಿಯಲು ಮಧ್ಯ ಕರ್ನಾಟಕದ ಕೆಲವು ಭಾಗಗಳಲ್ಲಿ ಕಾರ್ಯ ಎಂಬ ಹೆಸರಿನ ಆಚರಣೆಯನ್ನು ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಇದು ಅವಧೂತ ಪರಂಪರೆಯ ಭಾಗವೆಂದು ಆ ಭಾಗದ ವಿದ್ವಾಂಸರ ಅಭಿಪ್ರಾಯ. ಕಾರ್ಯ ಎನ್ನವುದನ್ನ ನಾಮಪದವಾಗಿ ಭಿನ್ನಭಿನ್ನ ಜಾತಿಗಳು ಬೇರೆಬೇರೆ ಕ್ರಿಯೆಗಳಿಗೆ ಬಳಸುವುದು ರೂಢಿಯಲ್ಲಿದೆ.

ಇದು ಒಂದು ಗುಪ್ತ ಆಚರಣೆ. ಯಾವುದೇ ಆಡಂಬರವಿಲ್ಲದೆ ನಿಗಧಿ ಪಡಿಸಿದ ದಿನದಂದು ಸರಿ ರಾತ್ರಿಯಿಂದ ಕೋಳಿ ಕೂಗುವ ಜಾವದವರೆಗೆ ಕೆಲವು ಗಂಟೆಗಳ ಕಾಲ ಅಸ್ತಿತ್ವದಲ್ಲಿರುವ ಜಾತಿರಹಿತ ಸಮಾಜ. ಇದು ಅನಂತರ ಯಥಾಸ್ಥಿತಿಗೆ ಮರಳುತ್ತದೆ. ಸಂಜೆಯವರೆಗೆ ಜಾತಿಯ ಎಲ್ಲಾ ಗುರುತು ಮತ್ತು ಶುದ್ಧ ಮತ್ತು ಅಶುದ್ಧ ಮೇಲು ಕೀಳುಗಳ ಜೊತೆಯಲ್ಲಿ ವ್ಯವಹಾರಿಸುವ ಜಾತಿ ಸಮುದಾಯದ ಸದಸ್ಯರು ಈ ರಾತ್ರಿಯ ಆಚರಣೆಯಲ್ಲಿ ಮಾತ್ರ ಜಾತಿಯ ಯಾವ ನೆನಪು ಇಲ್ಲದಂತೆ ಒಂದೇ ಕುಲದ ಸದಸ್ಯರಂತೆ ನಡೆದುಕೊಳ್ಳುತ್ತಾರೆ.

ಈ ಆಚರಣೆಯಲ್ಲಿ ಗುರುದೀಕ್ಷೆ ಪಡೆದವರೆಲ್ಲರು ಬೇಧವನ್ನು ಮರೆತು ಭಾಗವಹಿಸಬಹುದು. ಕುರುಬ–ದೇವಾಂಗ–ಅಗಸ–ಎಲ್ಲಾ ಅಸ್ಪೃಶ್ಯ ಜಾತಿಗಳು ಸೇರಿದಂತೆ ಕೆಲ ಲಿಂಗಾಯಿತರು ಈ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಸಹಭೋಜನ–ಸಹಪಂಕ್ತಿ ಮತ್ತು ತತ್ವಪದಗಳ ಭಜನೆ ಇಲ್ಲಿ ನಡೆಯುವ ಮುಖ್ಯವಾದ ಕ್ರಿಯೆಗಳು. ಮಾಂಸ ಆಹಾರ ಮತ್ತುಭಂಗಿ ಇವು ಸೇವನೆಯಾಗುವ ಪದಾರ್ಥಗಳು.

ಹೆಂಗಸರ ಭಾಗವಹಿಸುವಿಕೆ ಗಂಡಸರಿಗೆ ಹೋಲಿಸಿದರೆ ಗಣನೀಯವಾಗಿ ಕಡಿಮೆಯಾದರೂ ಹೆಂಗಸರ ಮೇಲು ಯಾವುದೇ ನಿಷೇಧವಿಲ್ಲದಿರುವುದು ಅಚ್ಚರಿಯ ಸಂಗತಿ. ಬಹುಷ: ಆರಂಭದಲ್ಲಿ ಇನ್ನು ಮುಕ್ತವಾಗಿದ್ದಿರಬಹುದಾದ ಈ ಆಚರಣೆ ಈಗ ಜಾತಿ ಬೇಧವಿಲ್ಲದಂತೆ ನಡೆದರು ಕೆಳಜಾತಿಗಳ ಮನೆಯವರು ಕಾರ್ಯ ಮಾಡುವಂತಿದ್ದರೆ ಯಾವುದಾದರು ಮೇಲು ಜಾತಿಯ ಮನೆಯಲ್ಲಿ ಅಡುಗೆಯನ್ನು ಮಾಡಿಸುವ ಮಟ್ಟಿಗೆ ತನ್ನ ರೂಪವನ್ನು ಬದಲಿಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಹೊಳಲಕೆರೆ ತಾಲೂಕು ತೇಕಲಹಟ್ಟಿಯಲ್ಲಿ ವಾರ್ಷಿಕವಾಗಿ ನಡೆವ ಓಬಳ ದೇವರ ಜಾತ್ರೆಯಲ್ಲಿ ನಡೆವ ಆಚರಣೆಯಲ್ಲಿ ಮೇಲು ಜಾತಿಗಳು ಜಾತ್ರೆಯ ದಿನ ಬೆಳಿಗ್ಗೆ ಊರ ಹೊಲೆಯರಿಗೆ ದೇವಾಲಯದ ಮುಂದೆ ಊಟಕ್ಕೆ ಬಡಿಸಿದ ನಂತರ ಎಂಜಲು ಎಲೆಯನ್ನು ಕೈಯಿಂದ ಬಾಚುವ ಆಚರಣೆ ತಪ್ಪದೆ ನಡೆದು ಬರುತ್ತಿದೆ. ಮೈ ಮುಟ್ಟುವುದೇ ಅಪರಾಧವಾಗಿರುವ ಸಮಾಜದಲ್ಲಿ ಎಂಜಲನ್ನು ಎತ್ತುವ ಮೂಲಕ ಮೇಲು ಜಾತಿಗಳು ಅಂದು ಪ್ರಾಯಚ್ಚಿತ್ತ ಮಾಡಿಕೊಳ್ಳುವ ಕಾರ್ಯ ನಡೆಯುತ್ತಿದೆ.

ಅಹಿಂದ ಇಂತಹ ಸಾಂಸ್ಕೃತಿಕ ನೆಲೆಗಳ ವಿಸ್ತಾರವನ್ನು ಕುರಿತು ತೀವ್ರವಾಗಿ ಯೋಚಿಸಬೇಕಿದೆ. ಇದು ಜಾತಿ ರಚನೆಯಲ್ಲಿ ಎಂಥ ಕ್ರಾಂತಿಕಾರಕ ನಡೆ ಎಂಬುದು ಅರ್ಥವಾಗಬೇಕಾದರೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿನ ಮೊರಸು ಒಕ್ಕಲಿಗರು ಆಚರಿಸುವ ಹೊಸ ದ್ಯಾವರ ಎಂಬ ಆಚರಣೆಯನ್ನು ಗಮನಿಸಬೇಕು. ಈ ಆಚರಣೆಯಲ್ಲಿ ಅಸ್ಪೃಶ್ಯರನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆಚರಣೆಯ ಅವಧಿಯಲ್ಲಿ ಕೆಳಜಾತಿ ಜನರೊಡನೆ ಮಾತನಾಡುವುದಿರಲಿ ಅವರ ನೆರಳು ಕೂಡ ಸೋಂಕಬಾರದು ಎಂಬ ನಿಯಮವನ್ನು ಹೇರಲಾಗಿದೆ.

ಹೀಗೆ ಜಾತಿಯನ್ನು ಮೀರುತ್ತಿರುವ ಹಾಗೂ ಜಾತಿಯನ್ನು ಬಲಗೊಳಿಸುತ್ತಿರುವ ಎರಡು ಮಾದರಿಗಳನ್ನು ಪರಸ್ಪರ ಎದುರಾಗಿಸಿ ಅಧ್ಯಯನ ಮಾಡಿದರೆ ಜಾತಿಯ ಸಂಕೀರ್ಣತೆ ಅರ್ಥವಾಗುವುದು. ಜಾತಿಯ ಕಟ್ಟಡದೊಳಗಿನ ಈ ಸಹಜ ಬಿರುಕನ್ನು ಹಿರಿದುಗೊಳಿಸದಿದ್ದರೆ ಕಾಲಾಂತರಗಳಲ್ಲಿ ಹೊಸ ದ್ಯಾವರದಂತಹ ಆಚರಣೆಗಳ ಪ್ರಭಾವದಲ್ಲಿ, ಅವು ಮುಚ್ಚಿ ಹೋಗುವ ಅಪಾಯವನ್ನು ನಾವೇ ಆಹ್ವಾನಿಸಿದಂತಾಗುತ್ತದೆ. ಜಾತಿಯ ಈ ಎರಡೂ ತುದಿಗಳ ಮಧ್ಯ ಜಾತಿ ಮೀರುವ ತುಡಿತ ಹಾಗೂ ಜಾತಿಯನ್ನು ಕಾಠಿಣ್ಯಗೊಳಿಸುವ ಪ್ರಕ್ರಿಯೆಗಳು ಏಕಕಾಲಕ್ಕೆ ಸಂಭವಿಸುತ್ತಿವೆ.

ಇವು ಆಚರಣೆಗಳ ನೆಲೆಯಲ್ಲಿ ಸಾಮುದಾಯಿಕವಾಗಿ ನಡೆಯುವ ಜಾತಿಯಾಚೆಗಿನ ನಡೆಗಳಾಗಿವೆ. ಇವುಗಳಿಗೆ ಪ್ರತಿಮಾತ್ಮಕ ನೆಲೆಯ ಜೊತೆ ದೇಸಿ ಜ್ಞಾನ ಪರಂಪರೆಯ ಪ್ರಭಾವವು ಹಿನ್ನೆಲೆಗೆ ಇರುತ್ತದೆ. ಆದರೆ ಜಾತಿಯ ಒಳಗೆ ವೈಯಕ್ತಿಕ ನೆಲೆಯಲ್ಲಿ ಜಾತಿಯನ್ನು ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿವೆ. ಅಥವಾ ಹತ್ತಿಕ್ಕಿವೆ.

ಅಂತಹ ಪ್ರಕರಣಗಳನ್ನು ಅಹಿಂದ ಗುರುತಿಸಿ ಆ ಆಶಯಗಳನ್ನು ಬಲಗೊಳಿಸುವತ್ತಾ ಯೋಚಿಸಬೇಕಿದೆ. ಇವನ್ನು ಉದಾಹರಿಸಲು ಭೂತದ ಕಡೆ ನೋಡುವ ಅಗತ್ಯವಿಲ್ಲ ಹಾಗೂ ಇಂಥ ನೂರು ಚಲನಗಳು ನಮ್ಮ ವರ್ತಮಾನದ ಭಾಗವೂ ಹೌದು ಎಂಬುದೇ ಅವರ ಗುಪ್ತ ಬಲದ ಸೂಚನೆಯೂ ಆಗಿದೆ.

ಉದಾಹರಣೆ – ೧

ಮುದಮಲ್ ರಂಗರಾವ್ ಮಂಗಳೂರಿನಲ್ಲಿ ನೆನಪಿಗೆ ಸರಿದಿರುವ ಮಾನವತ್ವಾವಾದಿ. ಆತ ತನ್ನ ಇಡೀ ಬದುಕನ್ನು ಕೊರಗ ಜಾತಿಯ ಮಕ್ಕಳಿಗೆ ಶಿಕ್ಷಣ ಕೊಡಿಸುವುದಕ್ಕೆ ಮುಡಿಪಾಗಿಟ್ಟದ್ದರು. ಆತನ ಈ ಕಾರ್ಯಕ್ಕಾಗಿ ಜಾತಿಯಿಂದ ಬಹಿಷ್ಕೃತರಾಗ ಬೇಕಾಗುತ್ತದೆ. ರಸ್ತೆಯಲ್ಲಿ ಆತ ನಡೆದು ಹೋಗುತ್ತಿದ್ದರೆ ಜಾತಿವಾದಿಗಳು ಕಲ್ಲಿನಿಂದ ಹೊಡೆದು ಗಾಯಗೊಳಿಸುತ್ತಾರೆ. ಆದರೂ ಆತ ತನ್ನ ಪಥ ಬದಲಿಸುವುದಿಲ್ಲ.

ತಾನು ಕಲಿಸುತ್ತಿರುವ ಕೊರಗ ಹುಡುಗನೊಬ್ಬ ಐ.ಎ.ಎಸ್. ಅಧಿಕಾರಿಯಾಗಿ ಕಾರಿನಲ್ಲಿ ಬರಬೇಕು ಆತನ ಕಾರಿನ ಗಾಲಿಯ ಧೂಳ ನನ್ನ ತಲೆಯ ಮೇಲೆ ಬಿದ್ದರೆ ಶೋಷಣೆ ಮಾಡುವ ಜಾತಿಯಲ್ಲಿ ಹುಟ್ಟಿದ ನನ್ನ ಪಾಪ

> ಕೊರಗ ಹುಡುಗನೊಬ್ಬ ಐ.ಎ.ಎಸ್. ಅಧಿಕಾರಿಯಾಗಿ ಕಾರಿನಲ್ಲಿ ಬರಬೇಕು ಆತನ ಕಾರಿನ ಗಾಲಿಯ ಧೂಳ ನನ್ನ ತಲೆಯ ಮೇಲೆ ಬಿದ್ದರೆ ಶೋಷಣೆ ಮಾಡುವ ಜಾತಿಯಲ್ಲಿ ಹುಟ್ಟಿದ ನನ್ನ ಪಾಪ ಪರಿಹಾರವಾಗುತ್ತದೆ ಎಂದೇ ನಂಬಿ ಬದುಕಿದ್ದರು. ಯಾವ ನೆಲದ ಅಷ್ಠಮಠಗಳಲ್ಲಿ ಈಗಲೂ ಎಲ್ಲಾ ಜಾತಿಗಳಿಗೂ ಸಹ ಪಂಕ್ತಿ ಬೋಜನಕ್ಕೆ ಅವಕಾಶವಿಲ್ಲವೋ ಅಂತಹ ನೆಲದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ರಂಗರಾವ್ ಹಿಡಿದ ದಾರಿ ನಮಗೆ ದೊಡ್ಡ ಆದರ್ಶವಾಗಬೇಕಿದೆ. ಮೈಸೂರಿನ ಗೋಪಾಲಸ್ವಾಮಿ ಅಯ್ಯರ್ ಅವರನ್ನು ಸಹ ನೆನಸುಮಾಡಿಕೊಳ್ಳಬಹುದು.

ಪರಿಹಾರವಾಗುತ್ತದೆ ಎಂದೇ ನಂಬಿ ಬದುಕಿದ್ದರು. ಯಾವ ನೆಲದ ಅಷ್ಟಮಠಗಳಲ್ಲಿ ಈಗಲೂ ಎಲ್ಲಾ ಜಾತಿಗಳಿಗೂ ಸಹ ಪಂಕ್ತಿ ಬೋಜನಕ್ಕೆ ಅವಕಾಶವಿಲ್ಲವೋ ಅಂತಹ ನೆಲದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ರಂಗರಾವ್ ಹಿಡಿದ ದಾರಿ ನಮಗೆ ದೊಡ್ಡ ಆದರ್ಶವಾಗಬೇಕಿದೆ. ಮೈಸೂರಿನ ಗೋಪಾಲಸ್ವಾಮಿ ಅಯ್ಯರ್ ಅವರನ್ನು ಸಹ ನೆನಪು ಮಾಡಿಕೊಳ್ಳಬಹುದು.

ಉದಾ: ೨.

ಚಿತ್ರದುರ್ಗದಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಕೆಂಚಪ್ಪನವರು ಪ್ರಸಿದ್ಧ ವಕೀಲರು. ಇವರು ಚಿತ್ರದುರ್ಗದಲ್ಲಿ ಪ್ರಥಮ ಬ್ರಾಹ್ಮಣ ಮತ್ತು ಲಿಂಗಾಯತೇತರ ವಕೀಲರು. ಇವರು ಜಾತಿಯನ್ನು ಮತ್ತೊಂದು ಮಾದರಿಯಲ್ಲಿ ಉಲ್ಲಂಘಿಸಿದ್ದರು. ತನ್ನ ಮಗನ ಮದುವೆಯ ಮಂಟಪದಲ್ಲಿಯೇ ಅಸ್ಪೃಶ್ಯ ಜಾತಿಯ ತಮ್ಮ ಬಾಲ್ಯ ಸ್ನೇಹಿತನ (ಕೆ. ಎಚ್. ರಂಗನಾಥರ ತಂಗಿ) ಮಗಳ ಮದುವೆಯನ್ನು ಒಟ್ಟಾಗಿ ನಡೆಸಿ ಜಾತಿಯನ್ನು ಧಿಕ್ಕರಿಸಿದ್ದರು, ಹಾಗೂ ದಲಿತ ಹುಡುಗನೊಬ್ಬ (ಡಾ॥ ತಿಪ್ಪೇಸ್ವಾಮಿ-ಮೊದಲ ತಲೆಮಾರಿನ ದಲಿತರಿಗೆ ಮಾತ್ರ ಮೀಸಲಾತಿ ನೀಡಬೇಕು ಎಂದು ಪ್ರತಿಪಾದಿಸಿ ಪ್ರಗತಿಪರವೆಂದುಕೊಳ್ಳುವ ದಲಿತ ರಾಜಕಾರಣಿಗಳಿಂದ ಟೀಕೆ ಮತ್ತು ಹಲ್ಲೆಗೆ ಒಳಗಾದವರು) ಬ್ರಿಟನ್‌ನಲ್ಲಿ ಉನ್ನತ ಅಧ್ಯಯನಕ್ಕೆ ಆಯ್ಕೆಯಾದಾಗ ಆತನ ಹೆಂಡತಿಯನ್ನ ಹಾಗೂ ಆತನ ತಂದೆಯನ್ನು ಒಂದು ವರ್ಷಗಳ ಕಾಲ ತನ್ನ ಮನೆಯಲ್ಲಿಟ್ಟು ಕೊಂಡು ಮನೆಯ ಸದಸ್ಯರಂತೆ ನೋಡಿಕೊಂಡಿದ್ದರು. ಮೊದಲ ತಲೆಮಾರಿನ ದಲಿತ ಪ್ರತಿಭಾಂತರನೇಕರ ಯಶೋಗಾಥೆಯ ನೆನಪುಗಳಲ್ಲಿ ಇಂತಹ ಅನೇಕ ಜಾತಿಯಾಚೆಗಿನ ಚಲನೆಗಳು ಗುಪ್ತವಾಗಿವೆ.

ಉದಾ: ೩

ಕೊಳ್ಳೇಗಾಲದ ತಂಬೂರಿ ರಾಜಮ್ಮ ಕಾಮಗೆರೆ ಗ್ರಾಮದ ಒಕ್ಕಲಿಗರ ಹೆಣ್ಣು ಮಗಳು. ಆಕೆ ದಲಿತನಾದ ಮಾದಪ್ಪನ ಹಾಡಿಗೆ ಒಲಿದು ಮದುವೆಯಾಳು. ಊರಿನ ಕುಲಸ್ಥರು ಮತ್ತು ಪಂಚಾಯ್ತಿಯವರು ಆಕೆಯನ್ನು ಹೆದರಿಸಿ ಮಾದಪ್ಪನನ್ನು ಬಿಟ್ಟು ಬಿಡಲು ಒತ್ತಾಯ ತಂದಾಗ ಆತ್ಮಹತ್ಯೆ ಬೆದರಿಕೆ ಒಡ್ಡಿ ಜಾತಿಯನ್ನ ಜೈಸಿದವಳು. ಆಕೆಯ ಅಕ್ಕ ತಂಗಿಯರು ಬಂದು ಮನೆಯ ಮುಂದೆ ಅವಳನ್ನು ಮದುವೆ ಮುರಿದು ಕೊಳ್ಳಲು ಕೇಳಿಕೊಂಡಾಗಲು ಜಪ್ಪಯ್ಯ ಅನ್ನದೆ ಯಾವುದೇ ಪಶ್ಚಾತ್ತಾಪದ ಸೋಂಕಿಲದೆ ಅದೇ ಊರಿನಲ್ಲಿ ಇಂದಿಗೂ ಬದುಕಿದ್ದಾಳೆ ಅಷ್ಟೇ ಅಲ್ಲ ಜಾತಿವಾದಿಗಳು ಅಂತರಜಾತಿ ವಿವಾಹವನ್ನು ಸೈ ಎನ್ನುವಂತೆ ಮಾಡಿದ್ದಾಳೆ. ಜಾತಿ ಮೀರಿ ಮದುವೆಯಾದುದ್ದಕ್ಕೆ ನನಗೇನು ಮಕ್ಕಳಾಗಿಲ್ವಾ? ಎಂಬ ಆಕೆಯ ಮುಗ್ಧ ಪ್ರಶ್ನೆಗೆ ಯಾವ ಮನುವಾದಿ ತಾನೆ ಉತ್ತರ ಹೇಳಬಲ್ಲ?

ಉದಾ: ೪

ರಾಣೆ ಬೆನ್ನೂರು ತಾಲೂಕಿನಲ್ಲಿ ಅಂತರವಳ್ಳಿ ಎಂಬ ಊರಿದೆ. ಅಲ್ಲಿ ಚರಿಗೆಹಳ್ಳವೆಂಬ ಹೊಳೆ ಊರ ದೇವರಾದ ತ್ರಿಲೋಕೇಶ್ವರನ ಕೃಪೆಯಿಂದ ನಿರಂತರ ಹರಿಯುತ್ತಿದೆ ಎಂದೇ ಹಳೆತಲೆಮಾರು ನಂಬಿತ್ತು. ಆದರೆ ಬದಲಾದ ಮಳೆ ಮತ್ತು ವ್ಯವಸಾಯ ಭೂಮಿಗಳಲ್ಲಿ ರೆಡ್ಡಿಗಳು ಕೊರೆದ ಅಂಕೆ ಮೀರಿದ ಬೋರುವೆಲ್ಲುಗಳು ಆ ಹಳ್ಳ ಈಗ ಬತ್ತಿ ಹೋಗಲು ಕಾರಣವಾಗಿದೆ. ಆ ಊರಿನ ದಲಿತ ಹೆಣ್ಣು ಮಗಳೊಬ್ಬಳು ಹಳ್ಳ ಬತ್ತಿ ಹೋದದ್ದು ಬೋರುಗಳು ಭೂಮಿಯನ್ನ ಕೊರೆದ ಕಾರಣವಾಗಿ



ಇಂದು ನಮ್ಮ ಮುಂದಿರುವ ವಾಸ್ತವಕ್ಕೆ ಅನೇಕ ಆಯಾಮಗಳು ಇವೆ. ಜಾತಿಯನ್ನು ಸಾಂಸ್ಕೃತಿಕವಾಗಿ ಮೀರಲು ನಡೆಯುವ ಪ್ರಯತ್ನಗಳು ಆಚರಣಾತ್ಮಕವಾಗಿದ್ದರೆ, ಜಾತಿಯನ್ನು ಸಂಘಟಿಸುತ್ತಿರುವ ಎರಡು ಬಗೆಗಳನ್ನು ಗುರುತಿಸಲು ಸಾಧ್ಯವಿದೆ. ಇಪ್ಪತ್ತನೆ ಶತಮಾನದ ವಿದ್ಯಾಮಾನವಾದ ಅಧಿಕಾರ ಶಕ್ತಿಯಾಗಲು ಕೇಂದ್ರಿಕೃತವಾಗುತ್ತಿರುವ ಜಾತಿಗಳೂ ತಮ್ಮೊಳಗಿನ ಸಾಂಸ್ಕೃತಿಕ ಅನನ್ಯತೆಗಳ ಹೊರದಾರಿಗಳನ್ನು ಮುಚ್ಚುತ್ತಿರುವುದು ಇನ್ನೊಂದು ಇದು ರಾಜಕೀಯ ಚಟುವಟಿಕೆಯಾಗಿ ಜಾತಿ ವ್ಯವಸ್ಥೆಯನ್ನ ಬಲಗೊಳಿಸಿದೆ.

ಗಂಗಮ್ಮ ಕೋಪಗೊಂಡಿದ್ದರಿಂದ ಎಂದು ನಂಬಿಕೊಂಡಿದ್ದಾಳೆ. ಇದರಿಂದಾಗಿ ಬೇಸುಗೆ ಕಾಲದಲ್ಲಿ ಕೆಳಜಾತಿಗಳಿಗೆ ಕುಡಿವ ನೀರಿನ ಅಭಾವ ಉಂಟಾಗಿದೆ. ಅದರ ತೀವ್ರತೆ ಅಷ್ಟು ಎಂದ್ರೆ ಎಷ್ಟೋ ಜನ ನಮ್ಮ ಹೆಣ್ಣು ಮಕ್ಕಳು ಬೇಸುಗೆನಾಗ ಹೆರಿಗೆ ಆಗುವಂಗೆ ಬಸುರಾದ್ರೆ ನೀರಿಗೆ ಭಯಪಟ್ಟು ಗುಟ್ಟಾಗಿ ಹೊಟ್ಟೆ ತೊಳಸ್ಕೊಂಡವರೆ ಅಂತ ತಣ್ಣಗೆ ಹೇಳುತ್ತಾಳೆ.

ಅಂಗೈಯಗಲ ಭೂಮಿಯಿಲ್ಲದ ಈ ಅಸ್ಪೃಶ್ಯ ಹೆಣ್ಣು ಮಗಳು ಊರಿನ ಒಕ್ಕಲಾದ ರೆಡ್ಡಿಗಳ ಭೂಮಿಗಳು ಒಂದು ದಿನ ಬರುಡಾಗಿ ಹೋಗುವುದನ್ನ ನೆನದು ಭೀತಿಗೊಂಡಿದ್ದಾಳೆ. ರೆಡ್ಡಿಗಳ ಭೂಮಿ ಬರುಡಾದರೆ ಈಕೆಗೆ ಆಗುವ ನಷ್ಟವೇನು ಇಲ್ಲ.ಆದರೆ ಈಕೆ ಒಕ್ಕಲುತನವನ್ನ ಜಾತಿ ಮತ್ತು ಸ್ವಂತ ಲಾಭ ನಷ್ಟದಾಚೆಗೂ ಯೋಚಿಸಬಲ್ಲ ಆರೋಗ್ಯವಂತ ಮನಸ್ಸನ್ನ ಪಡೆದಿರುವುದರಿಂದ ಹೊಲಗದ್ದೆ ಬೆಳದ್ರೆ ಮನುಷ್ಯರಿಗೆ ಮಾತ್ರ ಅಲ್ಲ ಸಕಲ ಸಬ್ಬಂಡಾರು ಜೀವರಾಶಿಗೂ ಅನುಕೂಲ ನಮ್ಮದಷ್ಟೇ ನೋಡ



ಬಾರದ್ದು, ಅದಕ್ಕೆ ರೆಡ್ಡಿಗಳ ಜಮೀನು ಬರುಡಾಗಬಾರ್ದು ಆದರೆ ಗಂಗಮ್ಮನು ಕೋಪ ಶಮನಮಾಡೋದು ಹೇಗೆ ಅಂತ? ಆಕೆಯ ಈ ಬುದ್ಧಿಮಾತು ಇವೊತ್ತಿನ ತಲೆಮಾರಿನ ಆಕೆಯ ಆಧುನಿಕರಾದ ಮೊಮ್ಮಕ್ಕಳಿಗೆ ಅರ್ಥವಾಗುತ್ತಿಲ್ಲ.

ಇಡೀ ಊರೇ ಬತ್ತಿದ್ದ ಹಳ್ಳದ ನೆನಪನ್ನು ಕಳೆದುಕೊಳ್ಳುತ್ತಿರುವುದು ಆಕೆಯ ಆತಂಕಕ್ಕೆ ಕಾರಣವಾಗಿರುವುದನ್ನ ಯಾರು ಅರ್ಥ ಮಾಡಿಕೊಳ್ಳುತ್ತಿಲ್ಲ. ಜಾತಿಯ ಒಳಗೆ ಹರಿಯುತ್ತಿರುವ ಇಂತಹ ಜಾತಿಯ ವಿಷವಿರದ ಅಂತರ್‌ಜಲವನ್ನು ಬತ್ತದ ಹಾಗೆ ನೋಡಿಕೊಳ್ಳುವುದು ಸಾಂಸ್ಕೃತಿಕ ವಿವೇಕದ ಲಕ್ಷಣ.

ಇಂಥ ನೂರಾರು ನಿದರ್ಶಗಳು ನಮ್ಮ ನಡುವೆ ಎಲ್ಲಾ ಜಾತಿಗಳಲ್ಲೂ ನಡೆಯುತ್ತಿವೆ. ಅವುಗಳನ್ನ ಒಟ್ಟಾಗಿ ನೋಡಿದರೆ ಬಹುಷ: ಇವುಗಳ ಚಲನೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಆದರೆ ನಮ್ಮ ಶಿಕ್ಷಣ ಪದ್ಧತಿಗಳು ಬೇಕಂತಲೆ ಇಂತಹ ನಡೆಗಳನ್ನ ನಮ್ಮ ಆಲೋಚನೆಗಳ ಭಾಗವಾಗದಂತೆ ಜಾಣತನದಿಂದ ನಿರ್ಲಕ್ಷಿಸುತ್ತಾ ಬಂದಿವೆ.

ಭಾಗ-೪

ಇಂದು ನಮ್ಮ ಮುಂದಿರುವ ವಾಸ್ತವಕ್ಕೆ ಅನೇಕ ಆಯಾಮಗಳು ಇವೆ. ಜಾತಿಯನ್ನು ಸಾಂಸ್ಕೃತಿಕವಾಗಿ ಮೀರಲು ನಡೆಯುವ ಪ್ರಯತ್ನಗಳು ಆಚರಣಾತ್ಮಕವಾಗಿದ್ದರೆ, ಜಾತಿಯನ್ನು ಸಂಘಟಿಸುತ್ತಿರುವ ಎರಡು ಬಗೆಗಳನ್ನು ಗುರುತಿಸಲು ಸಾಧ್ಯವಿದೆ.

ಪಾರಂಪರಾನುಗತವಾಗಿ ಸಾಗಿ ಬರುತ್ತಿರುವ ಹಿಂದೂ ಧಾರ್ಮಿಕ ನೆಲೆಯಿಂದು ಕರೆಯಲ್ಪಡುತ್ತಿರುವ ಸಂಸ್ಕೃತ ಪರಂಪರೆ ಒಂದಾದರೆ, ಇಪ್ಪತ್ತನೆ ಶತಮಾನದ ವಿದ್ಯಾಮಾನವಾದ ಅಧಿಕಾರ ಶಕ್ತಿಯಾಗಲು ಕೇಂದ್ರಿಕೃತವಾಗುತ್ತಿರುವ ಜಾತಿಗಳೂ ತಮ್ಮೊಳಗಿನ ಸಾಂಸ್ಕೃತಿಕ ಅನನ್ಯತೆಗಳ ಹೊರದಾರಿಗಳನ್ನು ಮುಚ್ಚುತ್ತಿರುವುದು ಇನ್ನೊಂದು ಇದು ರಾಜಕೀಯ ಚಟುವಟಿಕೆಯಾಗಿ ಜಾತಿ ವ್ಯವಸ್ಥೆಯನ್ನ ಬಲಗೊಳಿಸಿದೆ. ಇದಕ್ಕೆ ದಲಿತ ಚಳುವಳಿಯು ಪಡೆದುಕೊಂಡ ತಿರುವುಗಳು ಸ್ವಷ್ಟ ಉದಾಹರಣೆ. ಎಪ್ಪತ್ತರ ದಶಕದಲ್ಲಿ ಸಮಾಜದ ಎಲ್ಲಾ ತರತಮಗಳ ಮೂಲ ಬೇರು ಜಾತಿ ಅದರ ನಿರ್ಮೂಲನವೊಂದೆ ಗುರಿಯಾಗಿ ಅಸ್ಥಿತ್ವಕ್ಕೆ ಬಂದು ಇಡೀ ಕರ್ನಾಟಕವನ್ನು ಜಾತಿಯ ವಿಷಯದಲ್ಲಿ ಹೊಸಬಗೆಯ ಸಂವೇದನೆಗೆ ಒಳಗು ಮಾಡಿದ್ದು ದಲಿತ ಚಳುವಳಿ.

ಅದು ಪ್ರಬಲ ಜಾತಿಗಳಾದ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ಆತ್ಮವಿಮರ್ಶೆಗೆ ಒಳಗಾಗುವಂತೆ ಮಾಡಿತು. ಆದರೆ ಎಂಬತ್ತರ ದಶಕದಲ್ಲಿ ಶಕ್ತ ರಾಜಕಾರಣವನ್ನು ಅರ್ಥೈಸಲು ವಿಫಲವಾದ ದಲಿತ ಚಳುವಳಿಯು ಮುಂದೆ ಉಪಜಾತಿಗಳ ಆಧಾರದ ಮೇಲೆ ಹಲವು ಕವಲುಗಳಾಗಿ ಛಿದ್ರಗೊಂಡಿತು. ಮತ್ತು ಜಾತಿ ವಿನಾಶ ಮತ್ತು ಅರಿವಿನ ಪ್ರಯತ್ನಗಳು ಹಿಂದೆ ಬಿದ್ದವು.

ಜಾತಿ ಗುರುತಗಳ ಮೇಲೆ ಸಂಘಟನೆಗೆ ತೊಡಗಿದ ದಲಿತ ಚಳುವಳಿಯ ಶಾಖೆಗಳು, ಮಠಗಳ ಸ್ಥಾಪನೆಯ ಅಗತ್ಯವನ್ನು ಮಂಡಿಸಿದ್ದು ಸಾಂಸ್ಕೃತಿಕ ದುರಂತ. ಇನ್ನು ರೈತ ಚಳುವಳಿ ಸಮಾಜವಾದಿಗಳ ನೇತೃತ್ವದಲ್ಲೇ ರೂಪಗೊಂಡರು ಅದು ಸಾಂಸ್ಕೃತಿಕ ಚಳುವಳಿಯಾಗಲೇ ಇಲ್ಲ. ಕೇವಲ ಲಿಂಗಾಯತ ಮತ್ತು ಒಕ್ಕಲಿಗ ಜಾತಿಗಳಿಗೆ ಸೀಮಿತವಾಯಿತು. (ಅಹಿಂದ ಇಂತಹ ತಪ್ಪುಗಳಿಂದ ಪಾಠ ಕಲಿಯಬೇಕಿದೆ.

ಏಕೆಂದರೆ ಅಹಿಂದ ಯಾವುದಾದರು ಒಂದು ಜಾತಿಗೆ ಸೀಮಿತವಾಗುವ ಅಪಾಯದಿಂದ ಪಾರಗಬೇಕು. ಮತ್ತು ಅಹಿಂದ ಸಾಂಸ್ಕೃತಿಕ ಚಳುವಳಿಯ ಸ್ವರೂಪವನ್ನು ಕಳೆದು ಕೊಳ್ಳದೆ ಇದ್ದರೆ ಬಹು ದೊಡ್ಡ ಜಾತ್ಯತೀತತ ಶಕ್ತಿಯಾಗಿ ರೂಪಗೊಳ್ಳಬಹುದು.) ಇವೊತ್ತಿನ ಸನ್ನಿವೇಶದಲ್ಲಿಯೇ ಎಲ್ಲಾ ಮೇಲು ಜಾತಿಗಳ ಒಳಗೂ ಈ ಹಿಂದಿಗಿಂತ ಹೆಚ್ಚು ಸಹನೆ (ಒತ್ತಾಯದ ನೆಲೆಯಿಂದ ಇರಬಹುದು) ಕೆಳ ಜಾತಿಗಳ ಕುರಿತು ವ್ಯಕ್ತವಾಗುತ್ತಿರುವುದು ಹಾಗೂ ಅದೇ ಸಮಯದಲ್ಲಿ ಕೆಳವರ್ಗಗಳಲ್ಲಿ ಈ ಹಿಂದಿಗಿಂತ ಹೆಚ್ಚು ಜಾಗೃತಿ ಕಾಣಿಸಿಕೊಳ್ಳುತ್ತಿರುವುದು ಆಶಾದಾಯಕ ಪ್ರಕ್ರಿಯೆಯಾಗಿದೆ.

ಇಂದಿಗೂ ಅಲ್ಲಲ್ಲಿ ಜಾತಿಯ ಹೆಸರಿನಲ್ಲಿ ನಡೆಯುವ ಹಿಂಸೆ ಮತ್ತು ಅವಮಾನದ ಘಟನೆಗಳನ್ನು ಸಾರ್ವಜನಿಕವಾಗಿ ಖಂಡಿಸುವ ಮಟ್ಟಿಗೆ ಬದಲಾದ ಸಾಮಾಜಿಕ ಬೆಳವಣಿಗೆ ಕೂಡ ಜಾತಿಗಳನ್ನು ನಿಶ್ಯಕ್ತವಾಗಿಸುತ್ತಿವೆ.

ಅಹಿಂದ ಜಾತಿ ರಾಜಕಾರಣದ ನಡುವೆ ಆಧ್ಯಾತ್ಮಿಕ ಧಂಗೆಯನ್ನು ಹುಟ್ಟಿಸಬೇಕಿದೆ. ಶಕ್ತಿ ರಾಜಕಾರಣ ಜನಸಂಖ್ಯೆಯನ್ನ ಆಧರಿಸಿ ಮ್ಯಾಪಿಂಗ್ ಮಾಡಿ ಜಾತಿಯ ಒಳಗೆ ನಡೆಯುತ್ತಿರುವ ವಿದ್ಯಾಮಾನಗಳನ್ನು ಮರೆ ಮಾಡಿ ಇಡೀ ಸಮುದಾಯವೇ ಒಂದು ಎಂದು ನಂಬಿಸುತ್ತಿರುವ ಧೃವೀಕರಣವನ್ನು ತಡೆಯಬೇಕಿದೆ. ಅಧಿಕಾರಕ್ಕಾಗಿ ಜಾತಿಗಳ ನಡುವೆ ಅಪನಂಬಿಕೆಯನ್ನು ಬಿತ್ತಿ, ಎತ್ತಿ ಕಟ್ಟಲು ಮಾಡಿತ್ತಿರುವ ಪ್ರಯತ್ನಗಳನ್ನು ಒಡೆಯಬೇಕಿದೆ. ಸಮಾಜದ ಮೇಲಿನಿಂದ ಕೆಳಗಿನವರೆಗಿನ ಎಲ್ಲಾ ಜಾತಿಗಳಲ್ಲಿ ಜಾತಿಯನ್ನ ಧಿಕ್ಕರಿಸಿ ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡುವ ಇಂಡಿವಿಜುಯಲ್ಸ್ ಇದ್ದಾರೆ.

ಅಂತವರನ್ನು ಒಟ್ಟು ಮಾಡುವ ಕಾರ್ಯಕ್ರಮವನ್ನು ಅಹಿಂದ ರೂಪಿಸಬೇಕಿದೆ. ಬ್ರಿಟಿಷ್ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟ ರಾಜಕೀಯ ಹೋರಾಟವೇ ಆದರೂ ಗಾಂಧಿ ಅದನ್ನು ಜಾತಿ ವಿನಾಶದ ಹೋರಾಟವಾಗಿಯು ರೂಪಿಸಿದ ಮಾದರಿ ಅನಂತರದ ಅಧಿಕಾರ ಕೇಂದ್ರವಾದ ರಾಜಕೀಯದಲ್ಲಿ ಮೂಲೆಗುಂಪಾಗಿದ್ದು ಜಾತ್ಯತೀತ ಮೌಲ್ಯಗಳಿಗೆ ಉಂಟಾದ ಹಿನ್ನೆಡೆಯಂಬ ಸತ್ಯವನ್ನ ನಾವು ಮರೆಯಬಾರದು. ಅಹಿಂದಕ್ಕೂ ಅಂತಹ ಚಾರಿತ್ರಿಕ ಅವಕಾಶ ಈಗ ಸಿಕ್ಕಿದೆ. ಪ್ರಬಲ ಜಾತಿಗಳ ಯಾಜಮಾನ್ಯದ ವಿರುದ್ಧ, ಹಾಗೂ ರಾಜಕೀಯ ಅಧಿಕಾರದ ಹಕ್ಕಿಗೆ ಮಾತ್ರ ಸೀಮಿತವಾಗದೆ ಜಾತಿ ರಹಿತ ಸಮಾಜದ ದಿಕ್ಕಿನಲ್ಲಿ ಅಹಿಂದ ಚಲಿಸಬೇಕಿದೆ. ಎಲ್ಲಾ ಜಾತಿಗಳಿಗೂ ಇಂತಹ ಜಾತ್ಯತೀತವಾದ ಸಮಾಜದ ಅಗತ್ಯವಂತೂ ಇದ್ದೇ ಇದೆ.

ಪ್ರಶ್ನೆಗಳು:

೧.ಸಾರ್ವಜನಿಕ ಮತ್ತು ವೈಯಕ್ತಿಕ ನೆಲೆಗಳಲ್ಲಿ ಜಾತಿ ಕುರಿತಾದ ದ್ವಂದ್ವ ಪ್ರವೃತ್ತಿ

೨.ಜಾತಿ ವಿರುದ್ಧದ ಪರಿಭಾಷೆಯಲ್ಲೇ ಜಾತಿವಾದಿಗಳು ಮಾತನಾಡುತ್ತಿರುವುದು

೩.ಚಳುವಳಿಗಳು ಜಾಗೃತಿ ಮಾಡುವುದನ್ನು ಬಿಟ್ಟು ಅಧಿಕಾರಕ್ಕಾಗಿ ಚೌಕಾಸಿ ನಡೆಸುತ್ತಿರುವುದು ಮತ್ತು ಎರಡನೇ ಹಂತದ ನಾಯಕತ್ವವನ್ನು ಬೆಳೆಸದಿರುವುದು.

೪.ಕೆಳ ಜಾತಿಗಳು ತಮ್ಮ ಸಾಂಸ್ಕೃತಿಕ ಅನನ್ಯತೆಗಳನ್ನು ಮಾರಾಟವಾಗಿಸುತ್ತಿರುವುದು.

೫.ಮಾರುಕಟ್ಟೆಯಾಧಾರಿತ ಮೌಲ್ಯಗಳಿಂದ ಅನನ್ಯತೆಗಳ ಅಪಮೌಲ್ಯೀಕರಣ □

ಸೊಟ್ಟ ಫಲವಾಗಿ



ಕುಲುಮೆಯಲಿ ಕಬ್ಬಿಣ ಮಾತ್ರ ಕಾದು, ಕಾದು
ಆಕಾರ ಪಡೆಯುವುದಿಲ್ಲ ಹುಡುಗಿ,
ಮಾತು ಸಹ ಆಕಾರ ಪಡೆದು ಎದ್ದು ನಿಲ್ಲುತ್ತದೆ

ದಿನದ ಹಗಲು,
ಮುಖಗಂಟದೆ-ಮುಖಗಂಟಿಕ್ಕಿ ದೂರಸರಿದು
ಚೆಲ್ಲಾಪಿಲ್ಲಿಯಾದ ನಕ್ಷತ್ರಗಳು,
ತೆಕ್ಕೆಗೊದಗದ ಕನಸು,
ಅವಳ ನಗೆ ಎಲ್ಲವೂ ಕುಲುಮೆಯಲಿ
ಕಾದು-ಕಾದು- ಕೊನೆಗೊಂದು ಆಕಾರ
ಪಡೆದು ರವಾನಿಸಲ್ಪಟ್ಟ- ವಸ್ತುಗಳೆ,
ಮನಸೊಂದನ್ನು ಬಿಟ್ಟು,,,,,,

ಸುತ್ತಿಗೆಯ ಪ್ರತಿ ಪೆಟ್ಟಿಗೆ
ಕುಲುಮೆಯಲಿ ಕಾದ ವಸ್ತುವಿನಲ್ಲಿನ
ಆ 'ಅವನು' ವಿಕರಾಳವಾಗಿ ಅರಚುತ್ತ-
ಹೊರಬರುತ್ತಾನೆ.
ದೂರಕ್ಕೆ ಕಣ್ಣಾಯಿಸಿ ಎಲ್ಲವನ್ನು ದಾಖಲಿಸಿ
ಒಂದು ಸಣ್ಣ ರುಜು ಮಾಡುತ್ತಾನೆ.
ಕೊನೆಗೊಂದು ಆಕಾರ ಪಡೆದು ತಣ್ಣೀರಲ್ಲಿ
ಮುಳುಗಿದಾಗ ಮತ್ತೆ ಸೇರಿಕೊಳ್ಳುತ್ತಾನೆ;
ಮತ್ತೆ ಕುಲುಮೆಯೊಳಗೆ ಹೋಗುವವರೆಗೂ
ಹಾಲು ಕುಡಿದು ಮಡಿಲಿಗೆ ಜಾರಿದ
ಮಗುವಿನಂತೆ ಸುಮ್ಮನಿರುತ್ತಾನೆ

ಈ ಕುಲುಮೆಯಲಿ ಕನಸುಗಳೂ
ಮೈತೊಳೆದುಕೊಳ್ಳುತ್ತವೆ ಹುಡುಗಿ
ಒಂದು ಎರಡಾಗುತ್ತವೆ, ಎದುರು ಬದುರಾಗುತ್ತವೆ
ಬಂದಷ್ಟೇ ವೇಗದಲ್ಲಿ ಸರಿದು ಬಿಡುತ್ತವೆ
ಇದರ ಹೊರತಾಗಿ
ನಾನು, ನೀನು, ಅವರು, ಅವರು,,,,,,
ಎಲ್ಲರೂ ಅಷ್ಟೇ,,,,
ಕುಲುಮೆಯ ಕುದುರೆಯನ್ನು
ಒತ್ತುವವನನ್ನು ಬಿಟ್ಟು.

○ಲಕ್ಕೂರು ಸಿ. ಆನಂದ

ಜಾನಪದ, ಮಹಿಳೆ ಮತ್ತು ನೋವಿನ ನೆಲೆಗಳು -೪

ನೊಂದ ಹೆಂಡಂದಿರ ದುಃಖ

ಬಹುಪತ್ನಿತ್ವ

ಬಹುಪತ್ನಿತ್ವ ಗಂಡಿನ ಹಕ್ಕಾಗಿ ನಿರ್ವಚಿತವಾಗಿದೆ. ನಂಜುಂಡ, ಭೈರವ, ಮೈಲಾರ ಲಿಂಗ, ಗಂಗಾಧರ, ಚನ್ನಿಗರಾಯ ಮೊದಲಾದವರ ಕುರಿತಿರುವ ಮಹಿಳಾ ಜನಪದ ಕಾವ್ಯಗಳು, ಕಥೆಗಳು ಬಹು ಪತ್ನಿತ್ವದಡಿಯಲ್ಲಿ ನೊಂದ ಹೆಂಡಂದಿರ ದುಃಖಗಳನ್ನು, ಅಪಮಾನಗಳನ್ನು ದಾಖಲಿಸಿವೆ. ಬಹುಜೊತೆಗಾತಿಯರನ್ನು ಹೊಂದಿದ ಗಂಡಿಗೆ ಒಂಟಿತನ ಕಾಡುವುದಿಲ್ಲ. ಆದರೆ ಏಕ ಜೊತೆಗಾರರನ್ನು ಹೊಂದಿದ ಬಹುಪತ್ನಿಯರಿಗೆ ಏಕಾಂಗಿತನ ತೀವ್ರವಾಗಿ ಕಾಡುತ್ತದೆ. ಅವರು ಅಭದ್ರತೆಯನ್ನು ಅನುಭವಿಸುತ್ತಿರುತ್ತಾರೆ. ಇದರಿಂದ ಅವರಲ್ಲಿಯೇ ಗಂಡನ ಒಲುಮೆಯನ್ನು ಪಡೆದುಕೊಳ್ಳಲು ಪೈಪೋಟಿ ನಡೆಯುತ್ತದೆ. ನಿತ್ಯ ನಡೆಯುವ ಈ ಕದನ ಹೆಣ್ಣಿನ ಮಾನಸಿಕ ನೆಮ್ಮದಿಯನ್ನು ಹಾಳುಗೆಡುವುತ್ತದೆ.

ಬಹು ಪತ್ನಿಯರಲ್ಲಿ ನಡೆಯುವ ಈ ಪೈಪೋಟಿಯು ಗಂಡನಿಗೆ ಇನ್ನಿಲ್ಲದ ಮಹತ್ವವನ್ನು ತಂದು ಕೊಡುತ್ತದೆ. ಬಹುಪತ್ನಿಯರಿಗೆ ದಾಂಪತ್ಯ ಜೀವನದಲ್ಲಿ ನಷ್ಟದ ಅನುಭವವಾದರೆ, ಬಹಪತ್ನಿಯರನ್ನು ಹೊಂದಿದವನಿಗೆ ಸಮೃದ್ಧ ಜೀವನದ ಅನುಭವವಾಗುತ್ತದೆ. ಅವನಿಗೆ ಪತ್ನಿಯರು ಅನುಭವಿಸುವ ತಳಮಳ ತಲ್ಲಣಗಳು ಕಾಡುವುದಿಲ್ಲ ಹಾಗೂ ಅವುಗಳನ್ನು ಘಾಸಿಗೊಳಿಸುವುದಿಲ್ಲ. ತನಗಾಗಿ ಪತ್ನಿಯರು ನಡೆಸುವ ಪೈಪೋಟಿಯನ್ನು ತಮಾಷೆಯಾಗಿ ನೋಡುತ್ತಾನೆ. ಒಮ್ಮೊಮ್ಮೆ ಈ ಸಂಬಂಧಗಳಿಂದ ಭಾರಿ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುವಂತೆ ವರ್ತಿಸುತ್ತಾನೆ. ಎಡಚಾರಿಕೆ ಏಳುವ ಅಂದ್ರೆ ಎಳಿಯ ದೇವೀರಿಕಾಟ, ಬಲಚಾರಿಕ ಏಳುವ ಅಂದ್ರೆ ಕಿರಿಯೊಳು ಸೋಮುಯಾಜಿ ಕಾಟ, ಇಲ್ಲೆ ಇರೋವ ಅಂದ್ರೆ ಬೆಟ್ಟ ಸೂಳೇಕಾಟ, ಮೂರು ಜನ ಮಡದೀರ ಕಾಟ, ಹಗಲಿಗೆ ಇರುಳೇ ಕಾಟ, ಕಬ್ಬಕ್ಕಿ ಕಾಟ ಬಹುಕಾಟ... ಯಮದವನೆ ಒಬ್ಬಳ ಬುಟ್ಟು ಮುರುಕೊಯ್ಯ" (ರಾಜಶೇಖರ ಪಿ.ಕೆ. ೧೯೭೨,ಪುಶಿಳ) ಎಂದು ನಂಜುಂಡನು ಹಲಬುತ್ತಾನೆ.

ಹೀಗೆ ಬಹುಪತ್ನಿಯರನ್ನು ಹೊಂದಿದವನನ್ನು ಅಮಾಯಕನನ್ನಾಗಿ ಪ್ರತಿನಿಧೀಕರಿಸಲಾಗಿದೆ. ಖಳನಾಯಕಿಯರಾಗಿ, ಸಣ್ಣಮನಸ್ಸಿನವರಾಗಿ ಹಾಗೂ ತಮ್ಮ ಜಗಳದಿಂದ ಮನರಂಜನೆಯನ್ನು ನೀಡುವ ಬಫೂನ್‌ಗಳಾಗಿ ಬಹುಪತ್ನಿಯರು ಪ್ರತಿನಿಧೀಕರಣಗೊಂಡಿರುವರು.

11. ಹೆಂಡತಿಯ ಕುರಿತಿರುವ ಜನಪದ ಹಾಡುಗಳಲ್ಲಿ ಪ್ರತಿಭಟನೆ ಕಾಣಿಸಿಕೊಳ್ಳುವುದು ಕ್ವಚಿತ್. ಅವುಗಳಲ್ಲಿ ಆತ್ಮ ನಿವೇದನೆಯೇ ಢಾಳಾಗಿರುತ್ತದೆ. ಆದರೂ ಪಿತೃಪ್ರಧಾನ ವ್ಯವಸ್ಥೆಯ ಒಳಗಡೆಯೇ ಹೆಂಡತಿಯಾದವಳು ತನ್ನ ನೋವು ಅಪಮಾನಗಳನ್ನು ಮೀರಲು ಅಥವಾ ಎದುರಿಸಲು ಎಂಥಹ ಸವಾಲುಗಳನ್ನು ರೂಪಿಸಿಕೊಂಡಿದ್ದಾಳೆ ಎನ್ನುವುದನ್ನು ನೋಡಬೇಕಿದೆ. ಮಹಿಳೆಯರು ತಮ್ಮ ಆತ್ಮಾಭಿಮಾನಕ್ಕೆ ಧಕ್ಕೆವುಂಟಾದಾಗಲೊಮ್ಮೆ ಪ್ರತಿರೋಧವನ್ನು ಒಡ್ಡಿದ್ದಾರೆಯೇ, ಪ್ರತಿರೋಧವನ್ನು ಒಡ್ಡಿದರೆ ಅವರ ಪ್ರಮಾಣವೆಷ್ಟು ಎನ್ನುವುದನ್ನು ಹುಡುಕಬೇಕಿದೆ. ಪ್ರತಿರೋಧ ಒಡ್ಡಿದ ಮಹಿಳೆಯರ ಕುರಿತಿರುವ ಜನಪದ ಸಾಹಿತ್ಯವು ಬೆರಳೆಣಿಕೆಯಲ್ಲಿ ಯಾಕೆ ಸಿಗುತ್ತದೆ ಎನ್ನುವ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳಲು ಎರಡು ನಿಟ್ಟಿನಲ್ಲಿ ಆಲೋಚಿಸಬಹುದಾಗಿದೆ.

ಯಾರು ವ್ಯವಸ್ಥೆಯಲ್ಲಿ ಪ್ರಧಾನರಾಗಿರುತ್ತಾರೋ ಅವರ ವಿರುದ್ಧ ಧ್ವನಿ ಎತ್ತಲು ಅಧೀನರಾದವರು ಹಿಂದೇಟು ಹಾಕುತ್ತಿರುತ್ತಾರೆ. ಇದು ಶ್ರೇಣೀಕರಣವುಳ್ಳ ಸಮಾಜದಲ್ಲಿರುವ ವಸ್ತುಸ್ಥಿತಿ. ಸಮಾಜದಲ್ಲಿರುವ ಈ ಸಂಗತಿಯನ್ನು ನಾನು ಮಹಿಳಾ ಹಿನ್ನೆಲೆಯಲ್ಲಿ ವಿಶ್ಲೇಷಿಸಬಯಸುವೆ. ತಮ್ಮ ಪ್ರತಿರೋಧದಿಂದ ಫಲಿತಾಂಶಗಳು ಸಿಕ್ಕುವುದಿಲ್ಲ ಹಾಗೂ ಈಗಿರುವ ತಮ್ಮ ಬದುಕಿನ ಸ್ಥಿತಿಗತಿಯು ಮತ್ತಷ್ಟು ಕನಿಷ್ಠಗೊಳ್ಳು ವುದು ಎಂದು ಕೆಲ ಮಹಿಳೆಯರು ಆಲೋಚಿಸಬಹುದು. ಮತ್ತೆ ಕೆಲವು ಮಹಿಳೆಯರು ತಮ್ಮ ಬದುಕಿನ ಸ್ಥಿತಿಗತಿಗಳನ್ನು ಸಹಜವೆಂದೂ, ಇನ್ನು ಕೆಲವರು ಪೂರ್ವಜನ್ಮದ ಪಾಪಕರ್ಮವೆಂದೂ ಭಾವಿಸಿಕೊಂಡಿರಬಹುದು. ಪ್ರತಿರೋಧ ಒಡ್ಡಿದ ಮಹಿಳೆಯರ ಸಂಖ್ಯೆ ವಿರಳವಾಗಿರುವುದಕ್ಕೆ ಇವಿಷ್ಟು ಕಾರಣಗಳಾದರೆ ಮತ್ತೊಂದು ನಿಟ್ಟಿನಲ್ಲಿ ಆಲೋಚಿಸಿದಾಗ ಬೇರೆ ಬಗೆಯ ಕಾರಣಗಳು ದೊರೆಯುವವು. ಪ್ರತಿರೋಧ ಒಡ್ಡಿದ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ ಅವರ ಧ್ವನಿಗಳು ಕೇಳದಂತೆ ಪಿತೃಪ್ರಧಾನ ವ್ಯವಸ್ಥೆ ರಾಜಕಾರಣ ಮಾಡಿರಬಹುದು.

ಯಾಕೆಂದರೆ ತಾನು ಪ್ರಬಲ ಎಂದು ನಿರೂಪಿಸಬೇಕಾದರೆ ಎದುರಿಗಿರುವ ಮಹಿಳೆಯರ ಪ್ರಬಲ ಧ್ವನಿಗಳನ್ನು ದುರ್ಬಲಗೊಳಿಸುವುದು ಅಥವಾ ಅವುಗಳನ್ನು ನಿರ್ಲಕ್ಷಿಸುವುದು ಇಲ್ಲವೇ ನಿಶ್ಯಬ್ದಗೊಳಿಸುವುದು ಪಿತೃಪ್ರಧಾನ ವ್ಯವಸ್ಥೆಯು ಅನುಸರಿಸಿಕೊಂಡು ಬಂದ ತಂತ್ರವಾಗಿದೆ. ಈ ಎರಡೂ ಸಾಧ್ಯತೆಗಳ ಮಧ್ಯೆ ಜನಪದ ಸಾಹಿತ್ಯದ ಮೂಲಕ ನುಸುಳಿಕೊಂಡು ಬಂದ ಮಹಿಳೆಯ ಪ್ರತಿರೋಧದ ಧ್ವನಿಗಳನ್ನು ಎಚ್ಚರದಿಂದ ವಿಶ್ಲೇಷಿಸಬೇಕಿದೆ. ತಾನು ಎದುರಿಸಿದ ನೋವಿನ ನೆಲೆಗಳನ್ನು ಪ್ರಶ್ನಿಸಲು ಹೋದಾಗ ಹಾಗೂ ಅವುಗಳನ್ನು ಮೀರಲು ಹೋದಾಗ ಮಹಿಳೆ ಏನನ್ನು ಎದುರಿಸಬೇಕಾಯಿತು ಅಥವಾ ಯಾವ ನಿರೀಕ್ಷಣೆಗಳನ್ನಿಟ್ಟುಕೊಂಡು ಅವಳು ಪ್ರತಿರೋಧಿಸಿದ್ದಳೋ ಪ್ರತಿರೋಧಿಸದ ನಂತರ ಅವಳ ನಿರೀಕ್ಷೆಗಳು ಪೂರ್ಣಗೊಂಡವೆ ಎನ್ನುವುದನ್ನು ನೋಡಬೇಕಿದೆ.

'ಉಂಡರುಟ್ಟರು ಸೇರ, ಮಂಡೆ ಬಾಚರು ಸೇರ, ಗಂಡನಲ್ಲ ಕಾಣೋ ದುಸ್ಮಾನ", ಕರಿಯ ಹೆಂಡತಿ ಎಂದು ಕಿರಿಕಿರಿ ಮಾಡ

ಮಹಿಳೆ

ಬಹುಪತ್ನಿಯರಲ್ಲಿ ನಡೆಯುವ ಈ ಪೈಪೋಟಿಯು ಗಂಡನಿಗೆ ಇನ್ನಿಲ್ಲದ ಮಹತ್ವವನ್ನು ತಂದು ಕೊಡುತ್ತದೆ.. ಬಹುಪತ್ನಿಯರಿಗೆ ದಾಂಪತ್ಯ ಜೀವನದಲ್ಲಿ ನಷ್ಟದ ಅನುಭವವಾದರೆ, ಬಹಪತ್ನಿಯರನ್ನು ಹೊಂದಿದವನಿಗೆ ಸಮೃದ್ಧ ಜೀವನದ ಅನುಭವವಾಗುತ್ತದೆ. ಅವನಿಗೆ ಪತ್ನಿಯರು ಅನುಭವಿಸುವ ತಳಮಳ ತಲ್ಲಣಗಳು ಕಾಡುವುದಿಲ್ಲ ಹಾಗೂ ಅವುಗಳನ್ನು ಘಾಷಿಗೊಳಸುವುದಿಲ್ಲ. ತನಗಾಗಿ ಪತ್ನಿಯರು ನಡೆಸುವ ಪೈಪೋಟಿಯನ್ನು ತಮಾಷೆಯಾಗಿ ನೋಡುತ್ತಾನೆ.ಒಮ್ಮೊಮ್ಮೆ ಈ ಸಂಬಂಧಗಳಂದ ಭಾರಿ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುವಂತೆ ವರ್ತಿಸುತ್ತಾನೆ.

○ಡಾ|| ಶೈಲಜಾ ಹಿರೇಮಠ

ನ್ಯಾಡ' ಹರಳಕೊಳ್ಳೋ ನಿನ್ನ ಗುಳಿದಾಳಿ" ಎನ್ನುವ ತ್ರಿಪದಿಯ ಸಾಲುಗಳು ಪುರುಷಾಧಿಕಾರದ ಮುಖ್ಯ ಕೇಂದ್ರಗಳನ್ನು ನುಚ್ಚುನೂರು ಮಾಡಿವೆ. ಗಂಡನ ಹಿಂಸೆ ಅತಿಯಾದಾಗ ಆತನನ್ನು ಮುಲಾ ಜಿಲ್ಲದೆ ತಿರಸ್ಕರಿಸುತ್ತಾಳೆ. ಗಂಡನು ಕಟ್ಟಿದ ಗುಳಿದಾಳಿಯನ್ನು ಆತನಿಗೇ ಹರಿದು ಹಾಕಲು ಹೇಳಿ ಅದರ ಹಂಗಿನಿಂದ ಬಿಡಿಸಿಕೊಂಡು ಸ್ವತಂತ್ರಳಾಗಿ ಬದುಕಲು ಆಶಿಸುತ್ತಾಳೆ. ಗುಳಿದಾಳಿಯನ್ನು ಕಿತ್ತುಹಾಕುವು ದೆಂದರೆ 'ಗಂಡನ' ಭೌತಿಕ ಅಧಿಕಾರವನ್ನು ಮತ್ತು ದೈವಿಕ ಅಸ್ತಿತ್ವವನ್ನು ಧಿಕ್ಕರಿಸುವುದೇ ಆಗಿದೆ. ಪಿತೃಪ್ರಧಾನ ಸಂಸ್ಕೃತಿಯಲ್ಲಿ 'ಗುಳಿದಾಳಿ' ಕೇವಲ ಕರಿಮಣಿ ಸರವಲ್ಲ. ಅದಕ್ಕೆ ಪವಿತ್ರ ಸ್ಥಾನವಿದೆ. ಹೆಂಡತಿಯ ಪಾಲಿಗೆ ಅದು 'ದೇವ'ವಾದರೆ, ಗಂಡಿಗದು ತಾನು ಹೆಂಡತಿಯ ಮೇಲೆ ಹೊಂದಿದ 'ಒಡೆತನದ ಸಂಕೇತ'ವಾಗಿದೆ. 'ಗುಳದಾಳಿ'ಯನ್ನು ಕಿತ್ತೊಗೆಯುವುದೆಂದರೆ ಗಂಡ ತನ್ನ ಮೇಲೆ ಹೊಂದಿದ ಯಜಮಾನಿಕೆಯನ್ನು ಹಾಗೂ ತಾಳಿಯಲ್ಲಿರುವ ಪಾವಿತ್ರತೆಯನ್ನು ತಿರಸ್ಕರಿಸುವುದೇ ಆಗಿದೆ. ಆದರೆ ಈ ಬಗೆಯ ಪ್ರತಿರೋಧ ಒಡ್ಡಿದ ಹೆಂಡತಿಯರ ಪ್ರತಿನಿಧೀಕರಣಗಳು ತುಂಬ ವಿರಳ.

ವ್ಯವಸ್ಥೆಗೆ ಪ್ರತಿರೋಧ ಒಡ್ಡಿದ ಮಹಿಳೆಯರ ಮುಂದಿನ ಬದುಕಿನ ಕುರಿತು ಜನಪದ ಕಾವ್ಯಗಳು ಸಾಮಾನ್ಯವಾಗಿ ಮಾತನಾಡುವುದಿಲ್ಲ. ಮಾತನಾಡಿದರೂ ಅವಳ ಪ್ರತಿರೋಧವನ್ನು ಸಾಮಾಜಿಕ ಅಪರಾಧವಾಗಿ ಚಿತ್ರಿಸುತ್ತ ಅವಳಿಗೆ ಶಿಕ್ಷೆಯನ್ನು ನೀಡುತ್ತದೆ. ಹಾಗೂ ಅದನ್ನು ನ್ಯಾಯಬದ್ಧಗೊಳಿಸುತ್ತವೆ. ಮಹಿಳೆಯು ನಡೆಸಿದ ಪ್ರತಿರೋಧದ ಹಂತದ ನಂತರ ಮೌನ ತಾಳುವ ಪ್ರಸಂಗಗಳನ್ನು ಏನೆಂದು ಅರ್ಥೈಸಬೇಕು, ಪ್ರತಿರೋಧದ ಪ್ರಸಂಗಗಳು ತುಂಡು ತ್ರಿಪದಿಯಲ್ಲಿ ಮಾತ್ರ ಯಾಕೆ ಸಿಗುತ್ತವೆ, ಅವುಗಳು ಸಮಗ್ರವಾಗಿ ಕಥನ ಗೀತೆಗಳಲ್ಲಿ, ಕಥೆಗಳಲ್ಲಿ ಯಾಕೆ ಪ್ರವಹಿಸಿಕೊಂಡು ಬರುವುದಿಲ್ಲ ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಬೇಕಿದೆ. ಇಂಥಹ ಕ್ಲಿಷ್ಟ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಕ್ರಿಯೆ ಇನ್ನಷ್ಟೆ ಪ್ರಾರಂಭಗೊಳ್ಳಬೇಕಿದೆ.

ಮಹಿಳೆಯರು ಹೇಳುವ ಮೊಗ್ಗಾಗಿ ಬಾರೋ ಕುರುಬಿಗೆ, ನುಚ್ಚಾಯ್ತು ನೂರಾಯ್ತು ಹೊಳೆಯಾಗೆ ಮೊದಲಾದ ಜನಪದ ಗೀತೆಗಳಲ್ಲಿ, ಕಥನಗೀತೆಗಳಲ್ಲಿ, ಹೆಣ್ಣು ಗಂಡನಿದ್ದೂ ಗೆಳೆಯನನ್ನು ಕೂಡಿಕೊಂಡ ವಸ್ತುವಿನದಾದರೂ ಅದು ಅನೈತಿಕವಾದುದು ಅಥವಾ ಅಕ್ರಮವಾದುದು ಎನ್ನುವ ಟೋನ್ ಅವುಗಳಲ್ಲಿಲ್ಲ. ಆದರೆ ಲಾವಣಿಕಾರರು ಹೇಳುವ 'ಅಸಲ ಜಾತಿ ಹೆಣ್ಣು' 'ಸಂಪಿಗಿ ತೆನಿಯಂಥ ಹುಡುಗ', 'ಚಂದ್ರುಣಿ' ಗಿಡ್ಡ ಪೋರಿ' (ಇವು ಮಲ್ಲಿಗೆ ದಂಡೆ ಕಾವ್ಯ ಸಂಗ್ರಹದಲ್ಲಿವೆ.) ಮೊದಲಾದ ಗೀತೆಗಳು ಗಂಡನಿದ್ದೂ ಅನ್ಯಪುರುಷರನ್ನು ಕೂಡುವ ಹೆಂಡತಿಯರ ವರ್ತನೆಗಳನ್ನು ಅನೈತಿಕ ಚಟುವಟಿಕೆಗಳನ್ನಾಗಿ ಹಾಗೂ ಸಮಾಜ ಬಾಹಿರ ಸಂಬಂಧಗಳನ್ನಾಗಿ ಪ್ರತಿನಿಧೀಕರಿಸಿವೆ. ಪುರುಷ ನಿಷ್ಠ ಮೌಲ್ಯಗಳನ್ನು ಮುರಿದದ್ದಕ್ಕಾಗಿ ಇಂಥವರು ಕಠಿಣವಾದ ಶಿಕ್ಷೆಗೆ ಒಳಗಾಗಿ ಪಾಪ ಪ್ರಜ್ಞೆಯಿಂದ ನರಳುತ್ತಾರೆ. ಕುಟುಂಬದಿಂದ ಬಹಿಷ್ಕೃತರಾಗಿ, ಅನಾಥರಗಿ ಅಪಮಾನಗಳನ್ನು ಎದುರಿಸುತ್ತ ಸತ್ತಂತೆ ಬದುಕುತ್ತಾರೆ. ಈ ಕಾವ್ಯದಲ್ಲಿನ ಕಥಾ ನಾಯಕಿಯರು ತಾವು ಎದುರಿಸುವ ತಿರಸ್ಕಾರವನ್ನು, ಅಗೌರವವನ್ನು ಬಿಚ್ಚಿಡುತ್ತ ಸಮಾಜದಲ್ಲಿರುವ ಇತರ ಮಹಿಳೆಯರಿಗೆ ತಮ್ಮ [illegible] ತುಳಿಯದಂತೆ ಎಚ್ಚರವನ್ನು [illegible]

ಗಂಡನು ಹೆಂಡತಿಯ ಮೇಲೆ ನಡೆಸುವ ಹೊಡೆತ ಬಡೆತಗಳು, ಬೈಗುಳಗಳು ಆತನ ಹಕ್ಕಾಗಿ, ಪ್ರೀತಿಯ ದ್ಯೋತಕಗಳಾಗಿ ನಿರೂಪಿಸಲ್ಪಡುತ್ತವೆ. 'ನಿನ್ನ ಗಂಡ ಅನ್ಯ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿದ್ದಾನೆ' ಎಂದು ಹೇಳಿದರೂ 'ನಾ ಮುಡಿಯುವ ಮಲ್ಲಿಗೆ ಅವಳೊಂದುಗಳಿಗೆ ಮುಡಿಯಲಿ' ಎಂದು ನುಡಿಯುತ್ತಾಳೆ. ಈ ಎಲ್ಲ ಸಂದರ್ಭಗಳಲ್ಲಿ ಹೆಂಡತಿಯಾದವಳು ಅವಮಾನವನ್ನು ಎದುರಿ ಸುತ್ತಿದ್ದರೂ ಅವಳು ಅದನ್ನು ಅವಮಾನ ಎಂದು ಗ್ರಹಿಸದ ಸಾಮಾಜಿಕ ಸ್ಥಿತಿಯಲ್ಲಿರುತ್ತಾಳೆ.

ಸಾಮಾನ್ಯವಾಗಿ ಕೌಟುಂಬಿಕ ಚೌಕಟ್ಟಿನೊಳಗಡೆಯೇ ಮಹಿಳೆಯ ಮೇಲೆ ದೌರ್ಜನ್ಯ ನಡೆಯತ್ತಿರುತ್ತದೆ. ಕುಟುಂಬವನ್ನು ಖಾಸಗಿಯಾಗಿ ಗುರುತಿಸಿದ್ದರಿಂದ ಇದರೊಳಗಡೆ ಮಹಿಳೆ ಅನುಭವಿಸುವ ನೋವು ಖಾಸಗಿಯೆಂದೇ ಪರಿಗಣಿಸಲ್ಪಡುತ್ತವೆ. ಖಾಸಗಿ ಸಂಗತಿಗಳನ್ನು ಬಹಿರಂಗಗೊಳಿಸಬಾರದೆಂಬ ಸಾಮಾಜಿಕ ನಿಯಮ ಭಾರತದಲ್ಲಿದೆ. ಹೀಗಾಗಿ ತನ್ನ ಮೇಲೆ ದೌರ್ಜನ್ಯ ನಡೆಯುತ್ತಿದೆ ಎನ್ನುವುದೂ ಗೊತ್ತಿದ್ದರೂ ಅದನ್ನು ಯಾರೊಂದಿಗೂ ಹಂಚಿಕೊಳ್ಳಲಾರದ ಸಂಕಷ್ಟದಲ್ಲಿರುತ್ತಾಳೆ. ಹೀಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆ ತನ್ನ ನೋವುಗಳನ್ನು ಅಭಿವ್ಯಕ್ತಗೊಳಿಸುವುದಿಲ್ಲ. ಅವುಗಳನ್ನು ಅದುಮಿಡುತ್ತಾಳೆ. ಗಂಡನಿಂದ ದೈಹಿಕ ಮತ್ತು ಮಾನಸಿಕ ಹಲ್ಲೆಗೊಳಗಾಗುತ್ತಲಿರುವ ಎಷ್ಟೋ ಮಹಿಳೆಯರಿಗೆ ಹಲ್ಲೆಗೊಳಗಾಗುತ್ತಿದ್ದೇವೆ ಎನ್ನುವ ಅರಿವು ಇರುವುದಿಲ್ಲ.

ಗಂಡನು ಹೆಂಡತಿಯ ಮೇಲೆ ನಡೆಸುವ ಹೊಡೆತ ಬಡೆತಗಳು, ಬೈಗುಳಗಳು ಆತನ ಹಕ್ಕಾಗಿ, ಪ್ರೀತಿಯ ದ್ಯೋತಕಗಳಾಗಿ ನಿರೂಪಿಸಲ್ಪಡುತ್ತವೆ. 'ನಿನ್ನ ಗಂಡ ಅನ್ಯ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿದ್ದಾನೆ' ಎಂದು ಹೇಳಿದರೂ 'ನಾ ಮುಡಿಯುವ ಮಲ್ಲಿಗೆ ಅವಳೊಂದುಗಳಿಗೆ ಮುಡಿಯಲಿ' ಎಂದು ನುಡಿಯುತ್ತಾಳೆ. ಈ ಎಲ್ಲ ಸಂದರ್ಭಗಳಲ್ಲಿ ಹೆಂಡತಿಯಾದವಳು ಅವಮಾನವನ್ನು ಎದುರಿಸುತ್ತಿದ್ದರೂ ಅವಳು ಅದನ್ನು ಅವಮಾನ ಎಂದು ಗ್ರಹಿಸದ ಸಾಮಾಜಿಕ ಸ್ಥಿತಿಯಲ್ಲಿರುತ್ತಾಳೆ. ಅಂದರೆ ಅವಳ ನೋವುಗಳು ನಿರ್ಲಕ್ಷಿಸಲ್ಪಟ್ಟಿರುತ್ತವೆ. ಹೆಣ್ಣಿನ ನೋವುಗಳು ಕರ್ಮಫಲಗಳಾಗಿಯೇ ನಿರ್ವಚಿಸಲ್ಪಟ್ಟಿರುವುದರಿಂದ ನೋವುಗಳನ್ನು ಅವಳು ಸ್ವೀಕರಿಸುತ್ತಾಳೆ. ಯಾಕೆಂದರೆ ನೋವುಗಳನ್ನು ತಿರಸ್ಕರಿಸಿದರೂ, ಅವುಗಳಿಂದ ಆಕೆಗೆ ಮುಕ್ತಿಸಿಗುವುದಿಲ್ಲ. ಅವುಗಳನ್ನು ಮೀರಲು ಪ್ರಯತ್ನಿಸಿದರೂ ಪರ್ಯಾಯ ಬದುಕು ಇಲ್ಲವಾದ್ದರಿಂದ ಅವಳಲ್ಲಿ ಪ್ರತಿಭಟನಾ ಅಂಶ ಕಡಿಮೆ.

ಹೆಂಡತಿಯಾದವಳು ತನ್ನ ನೋವನ್ನು ಅಭಿವ್ಯಕ್ತಗೊಳಿಸಲಾಗದ ಸಾಮಾಜಿಕ ಒತ್ತಡದಲ್ಲಿದ್ದಾಳೆ ಅವಳು ತನ್ನ ನೋವನ್ನು ಅದುಮಿಡುವುದರಿಂದ ದೊಡ್ಡವಳಾಗುತ್ತಾಳೆ ಎನ್ನುವ ಸಾಮಾಜಿಕ ನಂಬಿಕೆ ಇದೆ. ಮಹಿಳೆಯು ತಾನು ಅನುಭವಿಸುವ ಬಹುಪಾಲು ನೋವುಗಳನ್ನು 'ನೋವುಗಳನ್ನು' ಪರಿಭಾವಿಸಿರುವುದೇ ಇಲ್ಲ ಹೆಣ್ಣು ಅನುಭವಿಸುವ ನೋವುಗಳಲ್ಲಿ ಕೆಲವು ನಿಸರ್ಗ ಸಹಜ ಎಂದು ನಿರ್ವಚಿಸಲ್ಪಟ್ಟಿವೆ. ಮತ್ತೆ ಕೆಲವು ಪೂರ್ವ ಜನ್ಮದ ಪಾಪಕರ್ಮಗಳಾಗಿ ನಿರ್ವಚಿಸಲ್ಪಟ್ಟಿವೆ. ಕೆಲವು ನೋವುಗಳು ನಿರ್ಲಕ್ಷಕ್ಕೊಳಪಟ್ಟದ್ದರೆ, ಇನ್ನು ಕೆಲವು ನೋವುಗಳು ಸಾಂಸ್ಕೃತಿಕ ಮೌಲ್ಯಗಳಾಗಿ ಪರಿಭಾವಿಸಲ್ಪಟ್ಟಿವೆ.

ಹೆಂಡತಿಯ ಕುರಿತು ಹೇಳುವ ಜಾನಪದ ಸಾಹಿತ್ಯದಲ್ಲಿ ನೋವುಗಳಿರುವಂತೆಯೆ, ಸಾಹಿತ್ಯದ ಕಲಾಕೃತಿಯೂ ಇದೆ. ತ್ರಿಪದಿಗಳಲ್ಲಿ, ಹಾಡುಗಳಲ್ಲಿ, ಕಥನಗೀತೆಗಳಲ್ಲಿ ಅಭಿವ್ಯಕ್ತಗೊಂಡ ಹೆಂಡತಿಯು ನೋವುಗಳು ಆಯಾ ತ್ರಿಪದಿ, ಹಾಡು, ಕಥನಗೀತೆಗಳಲ್ಲಿನ ಹೆಣ್ಣು ಮಕ್ಕಳ ನೋವಾಗಿರುವಂತೆಯೆ, ಒಟ್ಟು ಮಹಿಳಾ ಸಮುದಾಯದ ನೋವೂ ಆಗಿರುತ್ತದೆ. ಇವುಗಳಲ್ಲಿ ಆಗಿ ಹೋದ ಘಟನೆಗಳು ಮಾತ್ರ ಇರುವುದಿಲ್ಲ. ಜನಪದ ಸಾಹಿತ್ಯದಲ್ಲಿ ನಿರೂಪಿಸಲ್ಪಟ್ಟ ಘಟನೆಗಳು ಆಕೆಯ ವರ್ತಮಾನದ ಬದುಕಿನ ಕನ್ನಡಿಯೂ ಆಗಿರುತ್ತವೆ. ಹೀಗಾಗಿ ಜನಪದ ಸಾಹಿತ್ಯದಲ್ಲಿ ಮೂಡಿಬಂದ ಹೆಣ್ಣಿನ ಪ್ರತಿಯೊಂದು ನೋವಿನಲ್ಲೂ ನಾವು ಕರಗುತ್ತೇವೆ. ಹೀಗೆ ಕರಗಿದಾಗ ಜನಪದ ಸಾಹಿತ್ಯದಲ್ಲಿನ ಹೆಣ್ಣಿನ ನೋವುಗಳು, ನಮ್ಮ ನೋವುಗಳು ಅಭಿನ್ನವಾಗಿಬಿಡುತ್ತವೆ.

ಹೆಂಡತಿಯ ಕುರಿತಿರುವ ಹಾಡುಗಳಲ್ಲಿ ಅಭಿವ್ಯಕ್ತಗೊಂಡ ನೋವಿಗೆ ಶಾರೀರಿಕ ನೆಲೆ,\ಮಾನಸಿಕ ನೆಲೆ, ಕೌಟುಂಬಿಕ ನೆಲೆ, ಆರ್ಥಿಕ ಹಾಗೂ ಸಾಮಾಜಿಕ ನೆಲೆ, ಹಾಗೂ ತಾತ್ವಿಕ ನೆಲೆ ಇದೆ. ಅವಳ ನೋವುಗಳನ್ನು ಈ ಮೇಲೆ ಉಲ್ಲೇಖಿಸಿದ ಐದು ನೆಲೆಗಳಿಂದ ಪ್ರತ್ಯೇಕಗೊಳಿಸಿ ನೋಡುಲಾಗುವುದಿಲ್ಲ. ಅವುಗಳು ಒಂದರೊಳಗೊಂದು ಅಂತರ್ಗತವಾಗಿರುತ್ತವ.

ಹೆಂಡತಿಯ ಕುರಿತು ಹೇಳುವ ಜಾನಪದ ಸಾಹಿತ್ಯದಲ್ಲಿ ನೋವುಗಳಿರುವಂತೆಯೆ, ಸಾಹಿತ್ಯದ ಕಲಾಕೃತಿಯೂ ಇದೆ. ತ್ರಿಪದಿಗಳಲ್ಲಿ, ಹಾಡುಗಳಲ್ಲಿ, ಕಥನಗೀತೆಗಳಲ್ಲಿ ಅಭಿವ್ಯಕ್ತಗೊಂಡ ಹೆಂಡತಿಯು ನೋವುಗಳು ಆಯಾ ತ್ರಿಪದಿ, ಹಾಡು, ಕಥನಗೀತೆಗಳಲ್ಲಿನ ಹೆಣ್ಣು ಮಕ್ಕಳ ನೋವಾಗಿರುವಂತೆಯೆ, ಒಟ್ಟು ಮಹಿಳಾ ಸಮುದಾಯದ ನೋವೂ ಆಗಿರುತ್ತದೆ. ಇವುಗಳಲ್ಲಿ ಆಗಿ ಹೋದ ಘಟನೆಗಳು ಮಾತ್ರ ಇರುವುದಿಲ್ಲ. ಜಾನಪದ ಸಾಹಿತ್ಯದಲ್ಲಿ ನಿರೂಪಿಸಲ್ಪಟ್ಟ ಘಟನೆಗಳು ಆಕೆಯ ವರ್ತಮಾನದ ಬದುಕಿನ ಕನ್ನಡಿಯೂ ಆಗಿರುತ್ತವೆ.

ಅಡಿಟಿಪ್ಪಣಿ

೧. ಫಲಬಿಡುವ ಬಳ್ಳಿ ಅಥವಾ ಗಿಡಗಳಿಗೆ ಹೂವುಗಳು ಬಿಡುತ್ತವೆ. ಬಿಟ್ಟ ಹೂವುಗಳೆಲ್ಲ ಫಲವಾಗಿ ರೂಪ ಪಡೆಯುವುದಿಲ್ಲ. ಹೂವು ಬಿಟ್ಟು ಹಾಗೆ ಉದುರಿಹೋಗುತ್ತವೆ. ಇವುಗಳನ್ನೇ ಕಳ್ಳ ಹೂವು ಎಂದು ಕರೆಯುವರು.

೨. ಕುರುಳನಿಳಿಸುವ ಆಚರಣೆಯ ಕುರಿತು ಕಲಬುರ್ಗಿ ಅವರು ಹೀಗೆ ಹೇಳಿರುವರು: ದೇವರಿಗೆ ಕೂದಲನ್ನು ಅರ್ಪಿಸುವ ಕ್ರಿಯೆ ತಿರುಪತಿ, ಎಡೆಯೂರ ಇತ್ಯಾದಿ ಕ್ಷೇತ್ರಗಳಲ್ಲಿ ಇಂದಿಗೂ ಜರುಗುತ್ತಿದೆ. ವ್ಯಕ್ತಿಯನ್ನು

ಹಿಡಿದುಕೊಂಡ ಭೂತ, ಮಂತ್ರವಾದಿಯ ಶಿಕ್ಷೆಗೆ ಮಣಿದು ತಾನು ಬಿಟ್ಟು ಹೋಗುವುದರ ಸೂಚನೆಯಾಗಿ ಮಂತ್ರವಾದಿಗೆ ತನ್ನ ತಲೆಗೂದಲನ್ನು ಕಿತ್ತು ಕೊಡುವುದನ್ನು ಹಳ್ಳಿಗಳಲ್ಲಿ ಇಂದಿಗೂ ಕಾಣಬಹುದು.

ಹೀಗಾಗಿ ಕೂದಲು ಕೊಡುವುದಕ್ಕೆ ಸಮರ್ಪಣೆ ಇಲ್ಲವೆ ಶರಣಾಗತಿಯ ಅರ್ಥವಿದೆಯೆಂದು ಸ್ಪಷ್ಟವಾಗುತ್ತದೆ (ಕುಲಬುರ್ಗಿ ಎಂ.ಎಂ. ೧೯೯೫, ಪು.೫೯) ೧೧೭೪ ರಲ್ಲಿ ಬಂದ ಶಿಕಾರಿಪುರ ೨೩೬ ನೆಯ ಶಾಸನವನ್ನು ಆಧಾರವಗಿಟ್ಟುಕೊಂಡು ಪ್ರಾಚೀನ ಕಾಲದಲ್ಲಿ ವಿವಾಹ ಬಾಹಿರ ಪ್ರೀತಿ ಇಲ್ಲದೆ ಭೋಗ ಸಮ್ಮತಿ ದ್ಯೋತಕವಾಗಿ ಅರ್ಪಿಸುತ್ತಿರಬಹುದೇ? ಎಂಬ ಸಂದೇಹ ಮೇಲಿನ ಶಾಸನ ಪದ್ಯದಿಂದ ಮೂಡುತ್ತದೆ" ಎಂದು ಹೇಳಿದರೆ, ರಾಮನಾಥ ಚರಿತ್ರೆಯಲ್ಲಿಯ ೪೫ನೇ ಸಂಧಿ, ೨೨ನೇ ಪದ್ಯವನ್ನು ವಿಶ್ಲೇಷಿಸುತ್ತ ಕುಲಸ್ತ್ರೀಯರು ದಾಳಕಾರರಿಗೆ ಅಂಜಿ ಅಗ್ನಿ ಪ್ರವೇಶ ಮಾಡಿದರೆ, ಕುಟಿಲೆಯರು, ಕಾಮುಕಿಯರು, ತಮ್ಮ ಮುಂದಲೆಯನ್ನು ಕೊಟ್ಟರೆಂದು ಇಲ್ಲಿನ ಅರ್ಥ. ಬಹುಶಃ ಈ ಮುಂದಲೆ ಶರಣಾಗತಿದ್ಯೋತಕದೊಂದಿಗೆ ಭೋಗ ಸಮ್ಮತಿಯನ್ನು ಧ್ವನಿಸುವುದೆಂದು ಬೇರೆ ಹೇಳಬೇಕಿಲ್ಲ. ಇದರಿಂದ ಇತಿಹಾಸದ ಎರಡನೆಯ ಘಟ್ಟದಲ್ಲಿ ಈ ಕ್ರಿಯೆಗಳು ಸ್ತ್ರೀಯು ತಾನು ಪುರುಷನೊಬ್ಬನ ಭೋಗಕ್ಕೆ ಒಪ್ಪಿಕೊಂಡಿರುವದರ ಸೂಚನೆಗಳಾಗಿಯೂ ಸಮಾಜದಲ್ಲಿ ರೂಢಿಗೊಂಡಿದ್ದವೆಂದು ಸ್ಪಷ್ಟವಾಗುತ್ತದೆ (ಕುಲಬುರ್ಗಿ ಎಂ.ಎಂ ೧೯೯೫, ಪು೬೧).

ಕುರುಳನಿಳಿಸುವ ಆಚರಣೆಯು ಕುರಿತು ಶಾಸನ ಮತ್ತು ಪ್ರಾಚೀನ ಕನ್ನಡ ಸಾಹಿತ್ಯದ ಕೆಲವು ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಿದ ಕುಲಬುರ್ಗಿ ಅವರು ಈ ಬಗೆಯ ಆಚರಣೆಯು ಸ್ತ್ರೀಕೇಂದ್ರಿತವಾಗಿದ್ದವು ಎನ್ನುವ ನಿಲುವಿಗೆ ಬಂದು ತಲುಪುತ್ತಾರೆ; ಹೀಗಾಗಿ ಮೂಲತಃ ಸ್ತ್ರೀಪುರುಷರೆಂಬ ಭೇದವಿಲ್ಲದೆ ದೇವರಿಗಾಗಿ ಭಕ್ತರು ನೆರವೇರಿಸುತ್ತಿದ್ದ ಈ ಕ್ರಿಯೆಗಳನ್ನು ಮುಂದಿನ ದಿನಗಳಲ್ಲಿ ತಾವು ಒಲಿದ, ಒಪ್ಪಿದ ಪುರುಷರಿಗಾಗಿ ಸ್ತ್ರೀಯರು ಆಚರಿಸುತ್ತಿದ್ದರೆನ್ನುವುದು ಹೆಚ್ಚು ಸಂಭವನೀಯವಾಗಿದೆ.. ಈ ಸ್ತ್ರೀಯರು ಗೃಹಣಿಯರಲ್ಲ, ಪರಪುರುಷನೊಂದಿಗೆ ಗುಪ್ತ ಸಂಭೋಗ ಇಟ್ಟುಕೊಂಡವರಲ್ಲ. ಏಕೆಂದರೆ ಒಂದು ವೇಳೆ ಗುಪ್ತ ಸಂಬಂಧ ಇಟ್ಟುಕೊಂಡಿದ್ದರೆ ಒಲಿದುದರ ಸಂಕೇತವಾಗಿ ಕುರುಳು ಕಳಿಸಬಹುದು, ಬೆರಳು ಕತ್ತರಿಸಿ ಕಳಿಸಲಾರರು, ಉರದ ಮೇಲೆ ಶಾಶ್ವತವಾಗಿ ಹೆಸರು ಬರೆಸಿಕೊಳ್ಳಲಾರರು. ಆದುದರಿಂದ ಇವರು ಬಹಿರಂಗವಾಗಿ ವ್ಯಕ್ತಿಯೊಬ್ಬನ ಉಪಪತ್ನಿಯಾಗಿದ್ದವರು. ಅಂದರೆ ಒಬ್ಬ ವ್ಯಕ್ತಿಯನ್ನೇ ನಂಬಿ ಬದುಕುವ ಇಟ್ಟುಕೊಂಡ ಸೂಳೆಯರು "(ಕುಲಬುರ್ಗಿ ಎಂ.ಎಂ. ೧೯೯೫, ಪು ೬೩). ಎಂದು ಹೇಳಿರುವರು.

ಕುಲಬುರ್ಗಿ ಅವರು ಆಯ್ದುಕೊಂಡ ಶಾಸನ ಮತ್ತು ಪ್ರಾಚೀನ ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿನ ಪದ್ಯಗಳಲ್ಲಿನ ಮಹಿಳೆ ತಲೆ ಬೋಳಿಸಿಕೊಂಡ ವಿಷಯದ ಹೊರೆತು, ಕೇಶಮುಂಡನ ಮಾಡಸಿಕೊಳ್ಳುವುದಿಲ್ಲ. ಮೈಲಾರಲಿಂಗನ ಕಾವ್ಯದಲ್ಲಿ ಮೈಲಾರನು 'ನೀನು ಕುರುಬರ ಜಾತಿಯ ಹೆಣ್ಣಾದ್ದರಿಂದ ನಿನ್ನ ಮುಂಡೆ ಬೋಳುಸ್ತೀನಿ' ಎನ್ನುವ ಮಾತನ್ನು ಹೇಳುವನು. ಸಾಮಾನ್ಯವಾಗಿ ಹೆಣ್ಣು ತಲೆಬೋಳಿಸಿಕೊಳ್ಳುವುದು ವಿಧವೆಯಾದನಂತರವೇ. ಪರಪುರಷನ ಆಕರ್ಷಣೆಗೆ ಒಳಗಾಗದಿರಲಿ

ಪ್ರಾಚೀನ ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿನ ಪದ್ಯಗಳಲ್ಲಿನ ಮಹಿಳೆ ತಲೆ ಬೋಳಿಸಿಕೊಂಡ ವಿಷಯದ ಹೊರೆತು, ಕೇಶ ಮುಂಡನ ಮಾಡಸಿಕೊಳ್ಳುವುದಿಲ್ಲ. ಮೈಲಾರಲಿಂಗನ ಕಾವ್ಯದಲ್ಲಿ ಮೈಲಾರನು 'ನೀನು ಕುರುಬರ ಜಾತಿಯ ಹೆಣ್ಣಾದ್ದರಿಂದ ನಿನ್ನ ಮುಂಡೆ ಬೋಳುಸ್ತೀನಿ' ಎನ್ನುವ ಮಾತನ್ನು ಹೇಳುವನು. ಸಾಮಾನ್ಯವಾಗಿ ಹೆಣ್ಣು ತಲೆಬೋಳಿಸಿಕೊಳ್ಳುವುದು ವಿಧವೆಯಾದನಂತರವೇ. ಪರಪುರಷನ ಆಕರ್ಷಣೆಗೆ ಒಳಗಾಗದಿರಲಿ ಎನ್ನುವ ಕಾರಣಕ್ಕಾಗಿಯೇ ಅವಳಿಗೆ ಕೇಶಮುಂಡನ ಮಾಡಲಾಗುತ್ತದೆ. ಹೀಗೆ ಹೆಣ್ಣಿಗೆ ಕೇಶಮುಂಡನ ಮಾಡುವ ಪ್ರಕ್ರಿಯೆಯ ಹಿಂದೆ ಅವಳನ್ನು ವಿರೂಪಗೊಳಿಸುವ ಉದ್ದೇಶವಿರುತ್ತದೆ. ತಲೆಬೋಳಿಸಿಕೊಂಡ ಹೆಣ್ಣನ್ನು ಅಶುಭದ ಸಂಕೇತವಾಗಿಯೇ ಪರಿಗಣಿಸಲಾಗಿದೆ. ಇಂತಹ ಸಾಂಸ್ಕೃತಿಕ ಪರಿಸರದಲ್ಲಿ ಮೈಲಾರನು ತುಪ್ಪದ ಮಾಳಿಗೆ ಹೇಳಿದ ಮಾತು ಕುತೂಹಲವನ್ನುಂಟು ಮಾಡುತ್ತದೆ. ಜಂಗಮರಲ್ಲಿ, ಬ್ರಾಹ್ಮಣರಲ್ಲಿ ಹುಟ್ಟಿದ ಮಾತ್ರಕ್ಕೆ ಅವರಿಗೆ ಜಂಗಮತ್ವ, ಬ್ರಾಹ್ಮಣತ್ವ ಬರುವುದಿಲ್ಲ. ಅವರು ನಿಜವಾದ ಜಂಗಮ ಇಲ್ಲವೆ ಬ್ರಾಹ್ಮಣರೆನಿಸಿಕೊಳ್ಳಬೇಕಾದರೆ ದೀಕ್ಷೆಯನ್ನು ಪಡೆದುಕೊಳ್ಳಬೇಕು.

ಎನ್ನುವ ಕಾರಣಕ್ಕಾಗಿಯೇ ಅವಳಿಗೆ ಕೇಶಮುಂಡನ ಮಾಡಲಾಗುತ್ತದೆ. ಹೀಗೆ ಹೆಣ್ಣಿಗೆ ಕೇಶಮುಂಡನ ಮಾಡುವ ಪ್ರಕ್ರಿಯೆಯ ಹಿಂದೆ ಅವಳನ್ನು ವಿರೂಪಗೊಳಿಸುವ ಉದ್ದೇಶವಿರುತ್ತದೆ. ತಲೆಬೋಳಿಸಿಕೊಂಡ ಹೆಣ್ಣನ್ನು ಅಶುಭದ ಸಂಕೇತವಾಗಿಯೇ ಪರಿಗಣಿಸಲಾಗಿದೆ. ಇಂತಹ ಸಾಂಸ್ಕೃತಿಕ ಪರಿಸರದಲ್ಲಿ ಮೈಲಾರನು ತುಪ್ಪದ ಮಾಳಿಗೆ ಹೇಳಿದ ಮಾತು ಕುತೂಹಲವನ್ನುಂಟು ಮಾಡುತ್ತದೆ. ಜಂಗಮರಲ್ಲಿ, ಬ್ರಾಹ್ಮಣರಲ್ಲಿ ಹುಟ್ಟಿದ ಮಾತ್ರಕ್ಕೆ ಅವರಿಗೆ ಜಂಗಮತ್ವ, ಬ್ರಾಹ್ಮಣತ್ವ ಬರುವುದಿಲ್ಲ. ಅವರು ನಿಜವಾದ ಜಂಗಮ ಇಲ್ಲವೆ ಬ್ರಾಹ್ಮಣರೆನಿಸಿಕೊಳ್ಳಬೇಕಾದರೆ ದೀಕ್ಷೆಯನ್ನು ಪಡೆದುಕೊಳ್ಳಬೇಕು.

ಹೀಗೆ ದೀಕ್ಷೆ ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಜಂಗಮರು 'ಅಯ್ಯಾಚಾರ' ಎಂದು ಹೇಳಿದರೆ, ಬ್ರಾಹ್ಮಣರು 'ಮುಂಜವಿ' ಎಂದು ಹೇಳುವರು. ಇಂತಹ ದೀಕ್ಷೆಗಳನ್ನು ಮೇಲ್ಜಾತಿಗಳಲ್ಲಿ ಪುರುಷರಿಗೆ ಮಾತ್ರ ಕೊಡುತ್ತರೆ. ದೀಕ್ಷಾ ಸಂದರ್ಭದಲ್ಲಿ ಗಂಡಸರಿಗೆ ಮಾಡುವ ಕೇಶ ಮುಂಡನಕ್ಕೂ, ಮಾಳಿಗೆ ಮೈಲಾರನು 'ಕೇಶಮುಂಡನ ಮಾಡಿಕೊಳ್ಳಬೇಕು' ಎಂದು ಹೇಳಿದ ಸಂದರ್ಭಕ್ಕೂ ವ್ಯತ್ಯಾಸವಿದೆ ನಿಜ. ಆದರೆ ಕೇಶಮುಂಡನ ಮಾಡಿ ದೀಕ್ಷೆ ನೀಡುವ ಮೂಲಕ ಜಂಗಮತ್ವ ಇಲ್ಲವೆ ಬ್ರಾಹ್ಮಣತ್ವವನ್ನು ಕೊಡುವಂತೆ ಮೈಲಾರನು ತಾನು ಮದುವೆಯಾಗಬೇಕೆಂದಿರುವ ಹುಡುಗಿಗೆ ಕೇಶ ಮುಂಡನ ಮಾಡಿ ಜಾತಿಯೊಳಗೆ ಕರೆದುಕೊಂಡಿರಬಹುದೇನೋ! ಕೇಶ ಮುಂಡನದ ಜೊತೆಗೆ 'ಚಿನ್ನದ ಕಡ್ಡಿಯೊಳಗೆ ಬೆಳ್ಳಿ ಕಡ್ಡೀಲಿ ನಾಲಿಗೆ ಸುಡುವ' ವಿಷಯದ ಕುರಿತು ಪ್ರಸ್ತಾಪ ಬರುತ್ತದೆ. 'ಹುಟ್ಟು ಗುಣ ಸುಟ್ಟರೂ ಹೋಗದು' ಎನ್ನುವ ಗಾದೆ ಮಾತು ಪ್ರಚಲಿತದಲ್ಲಿದೆ.

ಭಾರತೀಯ ಸಮಾಜಗಳಲ್ಲಿ ಜಾತಿ ಶ್ರೇಣೀಕರಣಕ್ಕನುಗುಣವಾಗಿಯೇ ಜನರ ಗುಣ ಸ್ವಭಾವಗಳನ್ನು ನಡಾವಳಿಗಳನ್ನು ಮತ್ತು ಚಾರಿತ್ರ್ಯವನ್ನು ವಿವರಿಸಲಾಗುತ್ತದೆ. ಮದುವೆಯಾಗಬೇಕೆಂದಿರುವ ಕೆಳಜಾತಿಯ ಹುಡುಗಿಯ ನಾಲಿಗೆಯನ್ನು ಸುಟ್ಟರೆ, ಜಾತಿಯಿಂದ ಅವಳಿಗಂಟಿಕೊಂಡು ಬಂದ ಗುಣಗಳು ನಾಶವಾಗುತ್ತವೆ ಎನ್ನುವ ನಂಬಿಕೆ ಈ ಆಚರಣೆಯ ಹಿಂದೆ ಕೆಲಸ ಮಾಡುತ್ತಿರಬಹುದು. (ಮುಗಿಯಿತು)

ಉಲ್ಲೇಖಗಳು-:

೧. ಕಾಪಸೆ ರೇವಪ್ಪ, (ಸಂ) ೧೯೯೦ ಮಲ್ಲಿಗೆ ದಂಡೆ ಸಮಾಜ ಪುಸ್ತಾಕಾಲಯ, ಧಾರವಾಡ.

೨. ಕಾಳೇಗೌಡ ನಾಗವಾರ, ಬೋರಲಿಂಗಯ್ಯ ಹಿ. ಚಿ.೨೦೦೦, ಗಿರಿಜನ ಕಾವ್ಯ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೩. ಕೇಶವನ್ ಪ್ರಸಾದ್.ಕೆ. (ಸಂ) ೧೯೯೭ ಮಲೆ ಮಾದೇಶ್ವರ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಚಕ್ಕೆರೆ ಶಿವಶಂಕರ (ಸಂ) ೧೯೮೨ ಮೈಲಾರಲಿಂಗನ ಕಾವ್ಯ ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು.

೫. ರಾಘವೇಂದ್ರರಾವ್ ಎಚ್.ಎಸ್. ೧೯೯೩, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು ಬರಗೂರು ರಾಮಚಂದ್ರಪ್ಪ (ಪ್ರ.ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ರಾಮಚಂದ್ರೇಗೌಡ ಹಿ.ಶಿ.೧೯೯೩, ಕನ್ನಡ ಸಾಹಿತ್ಯ ದಲ್ಲಿ ಹಿಂಸೆಯ ಸ್ವರೂಪ ಬರಗೂರು ರಾಮಚಂದ್ರಪ್ಪ (ಪ್ರ.ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭. ರಾಜಶೇಖರ ಪಿ.ಕೆ.(ಸಂ) ೧೯೭೫ ಬೆಟ್ಟದ ಚಾಮುಂಡಿ ತ.ವೆಂ.ಸ್ಮಾರಕ ಗ್ರಂಥ ಮಾಲೆ. ಮೈಸೂರು

ಅಪ್ರತಿಮ ಸಂಘಟಕ ದೇವರಾಯ

೮

© ಡಾ॥ ಸರಜೂ ಕಾಟ್ಕರ್

ಬೆಳಗಾವಿಯಲ್ಲಿ ತನ್ನ ೩೯ನೆಯ ಅಖಿಲ ಭಾರತ ಅಧಿವೇಶನವನ್ನು ಜರುಗಿಸಬೇಕೆಂದು ಕಾಂಗ್ರೆಸ್ ೧೯೨೪ ರಲ್ಲಿ ನಿರ್ಧರಿಸಿತು. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ನೇತೃತ್ವದಲ್ಲಿ ನಾನಾ ರೀತಿಯ ಚಳವಳಿಗಳು ನಡೆಯುತ್ತಿದ್ದ ದಿನಗಳವು. ಗಾಂಧೀಜಿಯವರು ತಮ್ಮ ಉತ್ತರಾಧಿಕಾರಿಯನ್ನು ನೆಹರುರಲ್ಲಿ ಕಂಡಿದ್ದರು. ಗಾಂಧೀ ಹೇಳುವ ಅಹಿಂಸೆಯ ತತ್ವ ಕೆಲ ಕಾಂಗ್ರೆಸ್ಸಿಗರಿಗೆ ಅಪಥ್ಯವೆನ್ನಿಸಿತ್ತು. ಅವರಿಗೆ ಸುಭಾಷ ಚಂದ್ರ ಭೋಸ ನಾಯಕ ರೂಪದಲ್ಲಿ ದೊರಕಿದ್ದರು. ಆದರೆ ಗಾಂಧೀಜಿಯವರನ್ನು ಮೀರಿ ನಡೆಯುವ ಧೈರ್ಯ ಮತ್ತು ಸಾಹಸ ಯಾವ ಕಾಂಗ್ರೆಸ್ಸಿಗನಲ್ಲಿಯೂ ಇರಲಿಲ್ಲ.

ಆಗ ತಾನೆ ಸಾಮಾಜಿಕ ಪ್ರಜ್ಞೆಯ ಅರಿವು ಮೂಡುತ್ತಿದ್ದ ದಲಿತರಿಗೆ ಈ ಸ್ವಾಂತಂತ್ರ್ಯ ಆಂದೋಲನ ಒಂದು ರೀತಿಯ ಅಗ್ನಿ ಪರೀಕ್ಷೆಯಾಗಿ ಕಾಣುತ್ತಿತ್ತು. ಈ ಆಂದೋಲನದಲ್ಲಿ ಭಾಗವಹಿಸಬೇಕೋ, ಬೇಡವೋ ಎಂಬುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಡಾ॥ ಬಾಬಾ ಸಾಹೇಬ ಅಂಬೇಡ್ಕರ್‌ರು ಈಗಾಗಲೇ ದಲಿತ ಜನಾಂಗದ ಪ್ರಶ್ನಾತೀತ ನಾಯಕರಾಗಿ ರೂಪಿಸಲ್ಪಟ್ಟಿದ್ದರು. ಆಂದೋಲನದ ಬಗ್ಗೆ ಡಾ॥ ಅಂಬೇಡ್ಕರ್‌ರಿಗೆ ಮತ್ತು ಗಾಂಧೀಜಿಯವರಿಗೆ ವೈಚಾರಿಕ ಮತಭೇದಗಳಿದ್ದವು. ಇದೇ ಕಾಲಕ್ಕೆ ಹಲ ಕೆಲ ಕ್ರಾಂತಿಕಾರಿಗಳು ಬ್ರಿಟಿಷ್ ಸರ್ಕಾರದ ವಿರುದ್ಧ ಸಶಸ್ತ್ರ ದಂಗೆಯೆದ್ದಿದ್ದರು. ಭಗತ್ ಸಿಂಗ್ ಹಾಗೂ ಆತನ ಸಂಗಡಿಗರು ನಗುನಗುತ್ತ ನೇಣುಗಂಭವನ್ನೇರಿದ್ದರು.

ಒಡಲಾಳ

ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ನೇತೃತ್ವದಲ್ಲಿ ನಾನಾ ರೀತಿಯ ಚಳವಳಿಗಳು ನಡೆಯುತ್ತಿದ್ದ ದಿನಗಳವು. ಗಾಂಧೀಜಿಯವರು ತಮ್ಮ ಉತ್ತರಾಧಿಕಾರಿಯನ್ನು ನೆಹರುರಲ್ಲಿ ಕಂಡಿದ್ದರು. ಗಾಂಧೀ ಹೇಳುವ ಅಹಿಂಸೆಯ ತತ್ವ ಕೆಲ ಕಾಂಗ್ರೆಸ್ಸಿಗರಿಗೆ ಅಪಥ್ಯವೆನ್ನಿಸಿತ್ತು. ಅವರಿಗೆ ಸುಭಾಷ ಚಂದ್ರ ಭೋಸ್ ನಾಯಕ ರೂಪದಲ್ಲಿ ದೊರಕಿದ್ದರು. ಆದರೆ ಗಾಂಧೀಜಿಯವರನ್ನು ಮೀರಿ ನಡೆಯುವ ಧೈರ್ಯ ಮತ್ತು ಸಾಹಸ ಯಾವ ಕಾಂಗ್ರೆಸ್ಸಿಗನಲ್ಲಿಯೂ ಇರಲಿಲ್ಲ. ಸಾಮಾಜಿಕ ಪ್ರಜ್ಞೆಯ ಅರಿವು ಮೂಡುತ್ತಿದ್ದ ದಲಿತರಿಗೆ ಆಂದೋಲನದಲ್ಲಿ ಭಾಗವಹಿಸಬೇಕೋ, ಬೇಡವೋ ಎಂಬುದು ಒಂದು ಸಮಸ್ಯೆಯಾಗಿತ್ತು.

ಎಲ್ಲ ಕಾಂಗ್ರೆಸ್ಸಿಗರನ್ನು ಒಂದುಗೂಡಿಸಿ ಸತ್ಯಾಗ್ರಹವನ್ನು ಮುಂದುವರೆಸುವುದು ಕಾಂಗ್ರೆಸ್ಸಿಗೆ ತುರ್ತು ಅಗತ್ಯವಾಗಿತ್ತು. ದಲಿತರು ಮತ್ತು ಮುಸ್ಲಿಮರು ತನ್ನ ಜೊತೆಗೆ ಇದ್ದಾರೆಂದು ಜಗತ್ತಿಗೆ ತೋರಿಸಿ ಕೊಡುವುದು ಕಾಂಗ್ರೆಸ್ಸಿಗೆ ಅನಿವಾರ್ಯವಾಗಿತ್ತು. ಗಾಂಧೀಜಿಯವರನ್ನು ವಿರೋಧಿಸುವ ಧೈರ್ಯ ಯಾರಿಗೂ ಇಲ್ಲದ್ದರಿಂದ ಅವರನ್ನೇ ಬೆಳಗಾವಿ ಅಧಿವೇಶನದ ಅಧ್ಯಕ್ಷರನ್ನಾಗಿಸಿ ಕಾಂಗ್ರೆಸ್ಸಿನಲ್ಲಿರುವ ಒಳ ಜಗಳ ಹಾಗೂ ಭಿನ್ನಾಭಿಪ್ರಾಯಗಳನ್ನು ಸದೆ ಬಡೆಯಬಹುದೆಂದು ನಾಯಕರುಗಳು ನಿರ್ಧರಿಸಿದರು. ಬೆಳಗಾವಿ ಅಧಿವೇಶನ ಅಧ್ಯಕ್ಷರಾಗಿ ಗಾಂಧೀಜಿಯವರ ಹೆಸರನ್ನು ಘೋಷಿಸಲಾಯಿತು.

ಈ ಮಧ್ಯೆ ದಲಿತರ ಮೇಲೆ ಅಂಬೇಡ್ಕರ್ ಅವರ ಪ್ರಭಾವ ಹೆಚ್ಚು ಹೆಚ್ಚು ಬಲಿಷ್ಠವಾಗತೊಡಗಿತು. ಸ್ವಾತಂತ್ರ್ಯ ಸಿಕ್ಕ ನಂತರ ಸ್ವತಂತ್ರ ಭಾರತದಲ್ಲಿ ತಮ್ಮ ಸ್ಥಾನಮಾನಗಳು ಏನಿರಬಹುದೆಂದು ದಲಿತರು ನೇರವಾಗಿ ಗಾಂಧೀಜಿಯವರನ್ನು ಕೇಳಲಾರಂಭಿಸಿದರು. 'ಮೊದಲು ಸ್ವಾತಂತ್ರ್ಯ ಸಿಗಲಿ' ಎಂಬುವುದು ಗಾಂಧೀಜಿಯವರ ನಿಲುವಾಗಿತ್ತು. 'ದಲಿತರಿಗಾಗಿ ಪ್ರತ್ಯೇಕ ಮತಕ್ಷೇತ್ರಗಳಿರಬೇಕೆಂದು' ದಲಿತರ ಆಗ್ರಹವಾಗಿತ್ತು. ಇಂತಹ ಅಯೋಮಯ ಸ್ಥಿತಿಯಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ಡಿಸೆಂಬರ್ ೨೩, ೧೯೨೪ ರಲ್ಲಿ ಆರಂಭವಾಯಿತು.

ಈ ಅಧಿವೇಶನದಲ್ಲಿ ಡಾ॥ ಅಂಬೇಡ್ಕರ್‌ರನ್ನು ಬೇಕೆಂದೇ ಕಡೆಗಣಿಸಲಾಯಿತು. ಡಾ॥ ಅಂಬೇಡ್ಕರ್‌ರು ಬೆಳಗಾವಿಗೆ ಬಂದರೂ ಅವರನ್ನು ಅಧಿವೇಶನದಲ್ಲಿ ಭಾಷಣ ಮಾಡಗೊಡಲಿಲ್ಲ. ತಮ್ಮ ನಾಯಕನಿಗಾದ ಅವಮಾನವನ್ನು ದಲಿತರು ಸಹಿಸಲಿಲ್ಲ. ಡಾ॥ ಅಂಬೇಡ್ಕರ್‌ರು ಪಿಂಪಳ ಕಟ್ಟಾದಲ್ಲಿ ದಲಿತರನ್ನುದ್ದೇಶಿಸಿ ಭಾಷಣ ಮಾಡಿದರು. ಆ ಕಾರ್ಯಕ್ರಮವನ್ನು ಆಯೋಜಿಸಲು ದೇವರಾಯ ಮತ್ತು ಅವನ ಗೆಳೆಯರು ಬಹಳಷ್ಟು ಶ್ರಮಪಟ್ಟರು. ಕಾಂಗ್ರೆಸ್ ದಲಿತ ಪಕ್ಷವಲ್ಲವೆಂದು ಅಂಬೇಡ್ಕರ್ ಈ ಸಭೆಯಲ್ಲಿ ಸಾರಿದರು. ಇದಾದ



ಡಾ॥ ಅಂಬೇಡ್ಕರ್ ಅವರು ದೇವರಾಯ ಇಂಗಳೆಯವರಿಗೆ ಬರೆದ ಪತ್ರ ಇಂಗಳೆ ಹಣ ಕಳಿಸಿಕೊಟ್ಟ ಬಗ್ಗೆ ಈ ಪತ್ರದಲ್ಲಿ ಉಲ್ಲೇಖವಿದೆ.

ನಂತರ ಅಂಬೇಡ್ಕರ್ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಂಚಾರ ಕೈಗೊಂಡು ದಲಿತರನ್ನುದ್ದೇಶಿಸಿ ಭಾಷಣ ಮಾಡಿದರು. ಅವರ ಈ ಸಂಚಾರದಲ್ಲಿ ದೇವರಾಯ ಅವರ ಜೊತೆಗೇ ಇದ್ದ. ಅಂಬೇಡ್ಕರ್ ಬಗ್ಗೆ ಅಪಾರ ಅಭಿಮಾನ, ಪ್ರೀತಿ ಹೊಂದಿದ್ದ. ದೇವರಾಯ ನಿಪ್ಪಾಣಿಯಲ್ಲಿ ಬೃಹತ್ ಸಭೆಯನ್ನು ಆಯೋಜಿಸಿದ. ಅಲ್ಲಿ ಅಂಬೇಡ್ಕರು ತಮ್ಮ ಕ್ರಾಂತಿಕಾರಕ ಭಾಷಣವನ್ನು ಮಾಡಿದರು. ಅಂಬೇಡ್ಕರ್‌ರಿಗೆ ೫೦೦೦ ರೂ. ಗಳ ಒಂದು ನಿಧಿಯನ್ನು ಈ ಸಭೆಯಲ್ಲಿ ಅರ್ಪಿಸಲಾಯಿತು.

ನವೆಂಬರ ೧೧ ಮತ್ತು ೧೨, ೧೯೨೫ ರಲ್ಲಿ 'ಬಹಿಷ್ಕೃತ ಹಿತಕಾರಣಿ' ಎಂಬ ಎರಡು ದಿನಗಳ ಸಮ್ಮೇಳನವನ್ನು ದೇವರಾಯ ಬೆಳಗಾವಿಯಲ್ಲಿ ಆಯೋಜಿಸಿದ. ಈ ಸಭೆಯ ಅಧ್ಯಕ್ಷತೆಯನ್ನು ಡಾ॥ ಅಂಬೇಡ್ಕರ್ ಅವರೇ ವಹಿಸಿದ್ದರು. ತಮ್ಮ ಭಾಷಣದಲ್ಲಿ ಅವರು ದೇವದಾಸಿ ಪದ್ಧತಿಯನ್ನು ಕಟುವಾಗಿ ಟೀಕಿಸಿದರು. 'ಈ ಪದ್ಧತಿಗೆ ಸಿಕ್ಕ ದಲಿತರು ಪಾಪಿಗಳಾಗುತ್ತಿದ್ದಾರೆ' ಎಂದು ಅಂಬೇಡ್ಕರ್‌ರು ಹೇಳಿದರು. ಕಾಲಕಾಲಕ್ಕೆ ಅಂಬೇಡ್ಕರ್‌ರನ್ನು ದೇವರಾಯ ನಿಪ್ಪಾಣಿ, ಚಿಕ್ಕೋಡಿ, ಅಥಣಿ ಮುಂತಾದ ಊರುಗಳಲ್ಲಿ ಸಮ್ಮೇಳನಗಳನ್ನು ಆಯೋಜಿಸಿ ಕರೆಸಿದ. ಈ ಭಾಗದ ಕೆಲವು ಖಟ್ಲೆಗಳನ್ನು ಆತ ಅಂಬೇಡ್ಕರ್‌ರಿಗೆ ಕೊಟ್ಟು ಬಂದ.

೨೯ ಸೆಪ್ಟೆಂಬರ್ ೧೯೨೮ರಲ್ಲಿ ಕಾಗವಾಡದಲ್ಲಿ ದಲಿತರ ಒಂದು ಬೃಹತ್ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷರಾಗಿದ್ದವರು ರಾಮಾ ಭೋಮಾ ಮಾಂಗ್. ಈ ಸಮ್ಮೇಳನದಲ್ಲಿ ಹೊಲೆಯ, ಮಾಂಗ, ಸಮಗಾರ ಮತ್ತು ಢೋರ್ ಸಮಾಜದ ಜನ ಬಹುಸಂಖ್ಯೆಯಲ್ಲಿ ನೆರದಿದ್ದರು. ಈ ಸಮ್ಮೇಳನದಲ್ಲಿ ದೇವರಾಯ

ಆರಂಭಿಸಿದ ದಲಿತೋದ್ಧಾರ ಕಾರ್ಯಕ್ಕಾಗಿ ಅವರನ್ನು ಸಾರ್ವಜನಿಕವಾಗಿ ಅಭಿನಂದಿಸಲಾಯಿತು.

೧೯೨೭ ರಲ್ಲಿ ಸರ್ಕಾರ ದೇವರಾಯನನ್ನು ಬೆಳಗಾವಿ ಜಿಲ್ಲೆ ಸ್ಕೂಲ್ ಬೋರ್ಡ್ ಸದಸ್ಯರೆಂದು ನೇಮಿಸಿತು. ಇದು ದಲಿತ ಸಮಾಜಕ್ಕೆ ಸರ್ಕಾರ ನೀಡಿದ ದೊಡ್ಡ ಗೌರವವಾಗಿತ್ತು. ಈ ಹಿಂದೆ ಯಾವ ದಲಿತನಿಗೂ ಈ ಗೌರವ ಸಿಕ್ಕಿರಲಿಲ್ಲ. ಆ ಕಾರಣಕ್ಕಾಗಿ ೪ ಏಪ್ರಿಲ್ ೧೯೨೭ ರಲ್ಲಿ ಹುಕ್ಕೇರಿಯಲ್ಲಿ ದೇವರಾಯನನ್ನು ಅಭಿನಂದಿಸಲೆಂದೇ ಒಂದು ಸಭೆಯನ್ನು ಆಯೋಜಿಸಲಾಯಿತು. ಈ ಸಭೆಗೆ ದಲಿತ ಸಮಾಜದ ಎಲ್ಲ ಮುಖಂಡರೂ ಹಾಜರಾಗಿದ್ದರು. ಸ್ವತಃ ಡಾ॥ ಅಂಬೇಡ್ಕರ್‌ರು ಶುಭ ಸಂದೇಶವನ್ನು ಕಳಿಸಿ ಕೊಟ್ಟಿದ್ದರು. ಅದನ್ನು ಸಭೆಯಲ್ಲಿ ಓದಿ ಹೇಳಿ ನಂತರ ದೇವರಾಯನಿಗೆ ಶಾಲು ಹಾಕಿ ಸನ್ಮಾನಿಸಲಾಯಿತು.

ಈ ಸಭೆಯಲ್ಲಿ ದೇವರಾಯ ಬಡ ದಲಿತ ಮಕ್ಕಳ ಶಿಕ್ಷಣಕ್ಕಾಗಿ 'ಪೈಸಾ ಫಂಡ್' ಎಂಬ ಯೋಜನೆಯನ್ನು ಜಾಹೀರುಗೊಳಿಸಿದ. ಪ್ರತಿ ದಲಿತ ಕುಟುಂಬ ತನ್ನ ಮನೆಯಲ್ಲಿ ಎಷ್ಟು ಜನರಿರುತ್ತಾರೋ ಅಷ್ಟು ಪೈಸೆಗಳನ್ನು ಈ ಫಂಡಿಗೆ ನೀಡಬೇಕಾಗುತ್ತಿತ್ತು. ಈ ಫಂಡಿನಿಂದ ಬಡ ದಲಿತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ನೀಡುವ ವ್ಯವಸ್ಥೆಯನ್ನು ಮಾಡುವುದು ಈ ಯೋಜನೆಯ ಗುರಿಯಾಗಿತ್ತು. ಈ ಯೋಜನೆ ಅಲ್ಲಿದ್ದ ದಲಿತ ನಾಯಕರ ಮನಸ್ಸಿಗೆ ಬಂದಿತು. ಈ ಕಾರ್ಯಕ್ಕಾಗಿ ಒಂದು ಕಮೀಟಿಯನ್ನು ರಚಿಸಲಾಯಿತು. ಅದಕ್ಕೆ ದೇವರಾಯನನ್ನೇ ಕಾರ್ಯದರ್ಶಿಯನ್ನಾಗಿ ನೇಮೀಸಲಾಯಿತು.

ಈ ಸಭೆಯಲ್ಲಿ ದೇವರಾಯ ದಲಿತ ಮಕ್ಕಳಿಗೆ ಸರ್ಕಾರ ಕಡ್ಡಾಯವಾಗಿ ಶಿಕ್ಷಣ ನೀಡಬೇಕೆಂಬ ವಿಚಾರವನ್ನು ಪ್ರತಿಪಾದಿಸಿದ. ವ್ಯಭಿಚಾರ ಮಾಡುವ ಶಿಕ್ಷಕರನ್ನು ನೌಕರಿಯಿಂದ ತೆಗೆದು ಹಾಕಬೇಕೆಂದು ಹೇಳಿದ. ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ ಪ್ರತಿ ಜಿಲ್ಲೆಯ ೧೦ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೆಂದೂ ದೇವರಾಯ ಹೇಳಿದ. ಸರ್ಕಾರಿ ಅರಣ್ಯಗಳಲ್ಲಿ ಮತ್ತು ಬೀಳು ಬಿದ್ದ ಸರ್ಕಾರಿ ಜಮೀನುಗಳಲ್ಲಿ ದಲಿತರಿಗೆ ಸಾಗುವಳಿಗಾಗಿ ನೀಡಬೇಕು ಮತ್ತು ಸಾರ್ವಜನಿಕ ಹಿಂದೂ ದೇವಸ್ಥಾನಗಳಲ್ಲಿ ದಲಿತರಿಗೆ ಇತರ ಜಾತಿಯವರಂತೆ ಮುಕ್ತ ಪ್ರವೇಶ ನೀಡಬೇಕು ಹಾಗೂ ಸಾರ್ವಜನಿಕ ಬಾವಿಗಳಲ್ಲಿ ನೀರು ಸೇದುವ ಹಕ್ಕು ದಲಿತರಿಗೂ ಇರಬೇಕೆಂದು ದೇವರಾಯ ಹೇಳಿದ. ಸರ್ಕಾರ ಮುಸಲ್ಮಾನರಿಗೆ ನೀಡಿದಂತೆ ಪ್ರತ್ಯೇಕವಾದ ಮತದಾರ ಸಂಘ ದಲಿತರಿಗೂ ಸಿಗಬೇಕೆಂಬ ವಿಚಾರವನ್ನು ಅಲ್ಲಿ ಮಂಡಿಸಿದ.

ದೇವರಾಯನ ಭಾಷಣ ಕೇಳಿ ಅಲ್ಲಿದ್ದ ದಲಿತರು ಮತ್ತು ದಲಿತ ನಾಯಕರು ಥಕ್ಕಾದರು. ಆತನ ವಿಚಾರ ಸರಣಿ ಅವರಿಗೆ ಹೊಸದಾಗಿತ್ತು. 'ಅಂಬೇಡ್ಕರ್' ಹಂಗ ಮಾತಾಡ್ತಾನ ಅಲ್ಲ? ಎಂದು ತಮ್ಮ ತಮ್ಮಲ್ಲಿಯೇ ಮಾತಾಡಿಕೊಂಡರು.

ಮಾರ್ಚ್ ೨೩, ೧೯೨೯ ರಂದು ಬೆಳಗಾವಿ ಜಿಲ್ಲೆ ಬಹಿಷ್ಕೃತ ಸಾಮಾಜಿಕ ಪರಿಷತ್ತಿನ ಮೊದಲ ಅಧಿವೇಶನವನ್ನು ಬೆಳಗಾವಿಯಲ್ಲಿ ಆಯೋಜಿಸಲಾಯಿತು. ಈ ಅಧಿವೇಶನದ ಸ್ವಾಗತಾಧ್ಯಕ್ಷನಾಗಿ ದೇವರಾಯ ಕೆಲಸಮಾಡಿದ. ಅಧಿವೇಶನದ ಅಧ್ಯಕ್ಷತೆಯನ್ನು ಭಾರತೀಯ ಬಹಿಷ್ಕೃತ ಸಮಾಜ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸೀತಾರಂ ನಾಮದೇವ ಶಿವತರಕರ್ ವಹಿಸಿದ್ದರು. ಈ ಅಧಿವೇಶನದಲ್ಲಿ ಭಾಷಣಕಾರರಾಗಿ ಡಾ॥ ಬಾಬಾಸಾಹೇಬ ಅಂಬೇಡ್ಕರ್, ಡಾ॥ ಸೋಲಂಕಿ, ಶ್ರೀಮತಿ ಜಾನವೇಕರ್, ರಾವಸಾಹೇಬ ಥೋರಾತ್, ಮರಾತೆ, ರಾಜೇಂದ್ರ ಗಡಕರ್, ನಾಗಗೌಡಾ, ಕೊಂಡ ದೇವ, ಖೋಲವಡಿಕರ್, ದತ್ತೋಪಂತ ಪವರ್, ಡಾ॥ ರಮಾಕಾಂತ ಕಾಂಬಳೆ, ಯಶವಂತರವ ಪೋಳ, ರಾಮಪ್ಪ ಕಾಂಬಳೆ, ಧರ್ಮಣ್ಣ ಸಂಬ್ರಾಣಿ ಮುಂತಾದ ವಿವಿಧ ಸ್ತರದ ನಾಯಕರುಗಳ ಭಾಷಣಗಳಾದವು. ಡಾ॥ ಅಂಬೇಡ್ಕರ್ ಹೇಳಿದರು.

'ನಮ್ಮ ಅಸ್ಪೃಶ್ಯತೆಯನ್ನು ನಾವೇ ಹೋಗಲಾಡಿಸಬೇಕಾಗಿದೆ. ನಾವು ಬಲಶಾಲಿ ಮತ್ತು ನಿರ್ಭಯರಾಗಿದ್ದರೆ ಮಾತ್ರ ನಾವು ಈ ಸಮಸ್ಯೆಯಿಂದ ಹೊರಬರಬಹುದಾಗಿದೆ. ಈ ಸಂದರ್ಭದಲ್ಲಿ ನಾವು ಬಹಳಷ್ಟು ಕಷ್ಟಪಡಬೇಕಾಗಬಹುದು. ಸವರ್ಣೀಯರ ಜೊತೆ 'ಒಂದು ಕೈ' ನೋಡುವ ಸಂದರ್ಭವೂ ಬರಬಹುದು. ಅದಕ್ಕಾಗಿಯೇ ನಾವು ಧೈರ್ಯವಂತರಾಗಬೇಕಾಗಿದೆ. ನಮ್ಮ ಬಿಡುಗಡೆಗಾಗಿ ನಾವು ದೇವರನ್ನಾಗಲಿ ಅಥವಾ ದೇವಮಾನವರ ಆಗಮನಕ್ಕಾಗಿಯಾಗಲಿ ಹಾದಿ ಕಾಯುವ ಅಗತ್ಯವಿಲ್ಲ. ನಮ್ಮ ಅನ್ಯಾಯಗಳು ದೂರಾಗಬೇಕಾದರೆ ಸರ್ಕಾರಿ ಮತ್ತು ರಾಜಕೀಯ ಶಕ್ತಿಯನ್ನು ನಾವು ಪಡೆಯಬೇಕು. ರಾಜಕೀಯ ಶಕ್ತಿ ನಮ್ಮ ಕೈಗೆ ಬಾರದ ಹೊರತು ಸಮಾಜದಲ್ಲಿ ನಮಗೆ ಗೌರವ ಸಿಗಲಾರದು' ಎಂದು ಬಾಬಾಸಾಹೇಬರು ಹೇಳಿದರು.

ದೇವರಾಯ ಬಡ ದಲಿತ ಮಕ್ಕಳ ಶಿಕ್ಷಣಕ್ಕಾಗಿ 'ಪೈಸಾ ಫಂಡ್' ಎಂಬ ಯೋಜನೆಯನ್ನು ಜಾಹೀರುಗೊಳಿಸಿದ. ಪ್ರತಿ ದಲಿತ ಕುಟುಂಬ ತನ್ನ ಮನೆಯಲ್ಲಿ ಎಷ್ಟು ಜನರಿರುತ್ತಾರೋ ಅಷ್ಟು ಪೈಸೆಗಳನ್ನು ಈ ಫಂಡಿಗೆ ನೀಡಬೇಕಾಗುತ್ತಿತ್ತು. ಈ ಫಂಡಿನಿಂದ ಬಡ ದಲಿತ ಮಕ್ಕಳ ವಿದ್ಯಾ ಭ್ಯಾಸಕ್ಕಾಗಿ ಹಣ ನೀಡುವ ವ್ಯವಸ್ಥೆಯನ್ನು ಮಾಡುವುದು ಈ ಯೋಜನೆಯ ಗುರಿಯಾಗಿತ್ತು. ಈ ಯೋಜನೆ ಅಲ್ಲಿದ್ದ ದಲಿತ ನಾಯಕರ ಮನಸ್ಸಿಗೆ ಬಂದಿತು. ಈ ಕಾರ್ಯಕ್ಕಾಗಿ ಒಂದು ಕಮೀಟಿಯನ್ನು ರಚಿಸಲಾಯಿತು. ಅದಕ್ಕೆ ದೇವರಾಯನನ್ನೇ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು.

'ನಮ್ಮ ಅಸ್ಪೃಶ್ಯತೆಯನ್ನು ನಾವೇ ಹೋಗಲಾಡಿಸಬೇಕಾಗಿದೆ. ನಾವು ಬಲಶಾಲಿ ಮತ್ತು ನಿರ್ಭಯರಾಗಿದ್ದರೆ ಮಾತ್ರ ನಾವು ಈ ಸಮಸ್ಯೆಯಿಂದ ಹೊರಬರಬಹುದಾಗಿದೆ. ಈ ಸಂದರ್ಭದಲ್ಲಿ ನಾವು ಬಹಳಷ್ಟು ಕಷ್ಟಪಡಬೇಕಾಗಬಹುದು. ಸವರ್ಣೀಯರ ಜೊತೆ 'ಒಂದು ಕೈ' ನೋಡುವ ಸಂದರ್ಭವೂ ಬರಬಹುದು. ಅದಕ್ಕಾಗಿಯೇ ನಾವು ಧೈರ್ಯವಂತರಾಗಬೇಕಾಗಿದೆ. ನಮ್ಮ ಬಿಡುಗಡೆಗಾಗಿ ನಾವು ದೇವರನ್ನಾಗಲಿ ಅಥವಾ ದೇವಮಾನವರ ಆಗಮನಕ್ಕಾಗಿಯಾಗಲಿ ಹಾದಿಕಾಯುವ ಅಗತ್ಯವಿಲ್ಲ. ನಮ್ಮ ಅನ್ಯಾಯಗಳು ದೂರಾಗಬೇಕಾದರೆ ಸರ್ಕಾರಿ ಮತ್ತು ರಾಜಕೀಯ ಶಕ್ತಿಯನ್ನು ನಾವು ಪಡೆಯಬೇಕು. ರಾಜಕೀಯ ಶಕ್ತಿ ನಮ್ಮ ಕೈಗೆ ಬಾರದ ಹೊರತು ಸಮಾಜದಲ್ಲಿ ನಮಗೆ ಗೌರವ ಸಿಗಲಾರದು' ಎಂದು ಬಾಬಾಸಾಹೇಬರು ಹೇಳಿದರು.

ಈ ಸಮ್ಮೇಳನ ಯಶಸ್ವಿಯಾಗಿದ್ದಕ್ಕೆ ದೇವರಾಯನಿಗೆ ತುಂಬ ಸಂತೋಷವಾಗಿತ್ತು. ಬಾಬಾಸಾಹೇಬರು ಹೇಳಿದ ಮಾತುಗಳು ಅವನ ಕಿವಿಯಲ್ಲಿ ಧುಮುಧುಮಿಸ ಹತ್ತಿದ್ದವು. ಅದೇ ತಾನೆ ಬಾಬಾಸಾಹೇಬರು ಮಹಾಡ್ ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಗಿಸಿ ಬಂದಿದ್ದರು. ಅವರು ಅಲ್ಲಿಯ ಚವದಾರ್ ಕೆರೆಯ ನೀರನ್ನು ಮುಟ್ಟುತ್ತಿದ್ದಂತೆಯೇ ಕೋಟ್ಯಂತರ ದಲಿತರ ಮನದಲ್ಲಿದ್ದ ಹೇಡಿತನ ನಾಶವಾಗಿ ಅವರೆಲ್ಲ ಹುಲಿಗಳಾಗಿ ಪರಿವರ್ತಿತರಾಗಿದ್ದರು. ತನ್ನ ಇಡೀ ಜೀವನವನ್ನು ದಲಿತ ಸಂಘಟನೆಯಲ್ಲಿಯೇ ಕಳೆಯಬೇಕೆಂದು ದೇವಾಯ ನಿರ್ಧರಿಸಿದ.

೧೯೩೬ ರಲ್ಲಿ ಬಾಬಾಸಾಹೇಬರು 'ಸ್ವತಂತ್ರ ಮಜೂರ ಪಕ್ಷ'ವನ್ನು ಆರಂಭಿಸಿದರು. ಚಿಕ್ಕೋಡಿ ಮತಕ್ಷೇತ್ರದಿಂದ ತಮ್ಮ ಪಕ್ಷದ ಅಭ್ಯರ್ಥಿಯಾಗಿ ದೇವರಾಯ ಸ್ಪರ್ಧಿಸಬೇಕೆಂದು ಬಾಬಾಸಾಹೇಬರ ಅಪೇಕ್ಷೆಯಾಗಿತ್ತು.

'ದೇವರಾಯ, ಮುಂಬೈ ವಿಧಾನ ಪರಿಷತ್ತಿಗೆ ಚಿಕ್ಕೋಡಿಯಿಂದ ನೀನೇ ಚುನಾವಣೆಗೆ ನಿಲ್ಲಬೇಕು' ಬಾಬಾಸಾಹೇಬರು ಹೇಳಿದರು.

'ಖಂಡಿತವಾಗಿ ನಾವು ನಿಮ್ಮ ಮನುಷ್ಯನೇ. ಆದರೆ ಚುನಾವಣೆಗೆ ನಾನು ನಿಲ್ಲುವುದಕ್ಕಿಂತ ವರಾಳೆಯವರನ್ನು ನಿಲ್ಲಿಸೋಣ. ಅವರು ಕಾಲೇಜು ಕಲಿತವರು; ಮತ್ತು ಕಾಯ್ದೆ ಗೊತ್ತಿದ್ದವರು' ಎಂದ ದೇವರಾಯ.

'ಆದರೆ ನೀನು ನಮ್ಮ ಜೊತೆಗೆ ಇರಬೇಕೆಂದು ನಮ್ಮ ಅಪೇಕ್ಷೆ' ಬಾಬಾಸಾಹೇಬರು ಹೇಳಿದರು.

'ನಾನು ಯಾವಾಗಲೂ ನಿಮ್ಮ ಜೊತೆಗೇ ಇರುವವ. ವರಾಳೆ ಪ್ರಾಮಾಣಿಕವಾಗಿ ನಮ್ಮ ಚಳವಳಿಯಲ್ಲಿದ್ದಾರೆ. ಅವರಿಗೆ ಸ್ಥಾನಮಾನ ಸಿಗಬೇಕು'– ಕೈ ಮುಗಿದ ದೇವರಾಯ.

ದೇವರಾಯನ ನಿಸ್ವಾರ್ಥ ಮನಸ್ಸು ಕಂಡು ಬಾಬಾಸಾಹೇಬರು ಗದ್ಗದಿತರಾದರು. 'ಆಯ್ತು; ನೀವು ಹೇಳಿದಂತಾಗಲಿ' ಎಂದರು.

ಬಾಬಾಸಾಹೇಬರ ಅಭ್ಯರ್ಥಿಯಾಗಿ ಬಿ.ಎಚ್.ವರಾಳೆ ಚುನಾವಣೆಗೆ ಇಳಿದರು. ತಾನೇ ಅಭ್ಯರ್ಥಿಯಾಗಿರುವಂತೆ ದೇವರಾಯ ಅವರ ಪ್ರಚಾರಕ್ಕೆ ಧುಮುಕಿದ. ಕಿಸೆಯಿಂದ ಸಾಕಷ್ಟು ಹಣ ಖರ್ಚು ಮಾಡಿದ. ನಿರೀಕ್ಷೆಯಂತೆ ವರಾಳೆ ಚುನಾವಣೆ ಗೆದ್ದರು. ತಾನೆ ಗೆದ್ದವನಂತೆ ದೇವರಾಯ ಬೀಗಿದ.

೧೯೪೨ ರಲ್ಲಿ ಆತ ವತನದಾರ ಮಹಾರ್ ಪರಿಷತ್ತಿನ ಎರಡು ಸಮ್ಮೇಳನಗಳನ್ನು ಸಂಘಟಿಸಿದ. ೧೯೬೪ ಮೇ ೨೭ ರಂದು ಉಗಾರಖುರ್ದದಲ್ಲಿ ಕರ್ನಾಟಕ ಹರಿಜನ ಪರಿಷತ್ ಎಂಬ ಅಧಿವೇಶನ ಕರೆದ. ಈ ಅಧಿವೇಶನವನ್ನು ಉದ್ಘಾಟಿಸಲು ಆಗಿನ ಕೇಂದ್ರ ಕಾರ್ಮಿಕ ಸಚಿವರಾಗಿದ್ದ ಡಿ. ಸಂಜೀವಯ್ಯ ನವರನ್ನು ಆಹ್ವಾನಿಸಿದ್ದ. ಆದರೆ ಅನಿವಾರ್ಯ ಕಾರಣಗಳಿಂದ ಸಂಜೀವಯ್ಯ ಈ ಅಧಿವೇಶನಕ್ಕೆ ಬರಲಿಲ್ಲ.

ದೇವರಾಯ ತುಂಬ ಚಾಣಾಕ್ಷನಿದ್ದ. ದಲಿತರಲ್ಲಿ ಬಹುಸಂಖ್ಯಾತರು ಹೊಲೆಯರಿದ್ದುದರಿಂದ ಮತ್ತು ಸ್ವತಃ ಬಾಬಾಸಾಹೇಬರು ಜಾತಿಯಿಂದ ಹೊಲೆಯರಾಗಿದ್ದುದರಿಂದ ತಾನು ಕರೆಯುವ ಸಮ್ಮೇಳನಗಳು ಕೇವಲ ಹೊಲೆಯರ ಪರವಾಗಿರಬಾರದೆನ್ನುವ ಪ್ರಾಥಮಿಕ ಜಾಣ್ಮೆ ಅವನಲ್ಲಿತ್ತು. ತನ್ನ ಎಲ್ಲ ಸಮಾವೇಶಗಳಲ್ಲಿಯೂ ಆತ ಸಮಸ್ತ ದಲಿತರು ಒಳಗೊಳ್ಳುವಂತೆ ಕಾರ್ಯಕ್ರಮ ರೂಪಿಸುತ್ತಿದ್ದ. ಈ ಸಮ್ಮೇಳನಗಳು ಕೇವಲ ಒಂದೇ ಜಾತಿಗೆ ಸಂಬಂಧಪಟ್ಟವೆಯೆಂಬ ಅಪವಾದ ಬರುವುದು ಅವನಿಗೆ ಬೇಡವಾಗಿತ್ತು.

೨೭-೭-೧೯೪೩ ರಂದು ದಲಿತರೆಲ್ಲರು ಸರ್ವನಾಶವಾಗ ವಂತಹ ಆಜ್ಞೆಯನ್ನು ಮುಂಬೈ ಸರ್ಕಾರ ಪಾಸ್ ಮಾಡಿತು. ಈ ಆಜ್ಞೆಯಂತೆ (ನಂ. ೭೪೨೦ ಎಫ್. ೩೩) ಈ ಹಿಂದೆ ದಲಿತರಿಗೆ ಅವರ 'ಸೇವಾ ಕಾರ್ಯಗಳಿಗೆಂದು' ನೀಡಿದ ವ್ಯವಸಾಯ ವತನಿ ಭೂಮಿಯನ್ನು ವಾಪಸ್ಸು ಪಡೆಯುವದಾಗಿತ್ತು. ಇದರಿಂದ ಡಾ॥ ಅಂಬೇಡ್ಕರ್‌ರು ಕನಲಿ ಹೋದರು. ಈ ಹಿಂದೆ ಬ್ರಿಟಿಷರು, ದಲಿತರ ಕೈಯಲ್ಲಿದ್ದ ಶಸ್ತ್ರವನ್ನು ಕಸಿದುಕೊಳ್ಳಬೇಕೆಂದು ನಿರ್ಧರಿಸಿದಾಗ ಬಾಬಾಸಾಹೇಬರು ಅವರಿಗೆ ಕೋರೆಗಾಂವ ದಲಿತ ವೀರರ ಸ್ಮರಣೆಯನ್ನು ದಾಖಲೆಸಹಿತ ನೀಡಿ, ಕೋರೆಗಾಂವದ ಈ ದಲಿತ ವೀರರು ಇರದಿದ್ದರೆ ನೀವು ಈ ದೇಶದಲ್ಲಿ ಉಳಿಯುತ್ತಿರಲಿಲ್ಲವೆಂದು ಮನಗಾಣಿಸಿಕೊಟ್ಟಿದ್ದರು. ಈಗ ವತನಿ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವ ಹೇಯ ಹುನ್ನಾರಕ್ಕೆ ಬ್ರಿಟಿಷ್ ಸರ್ಕಾರ ಇಳಿದಿತ್ತು. ಇದನ್ನು ಬಾಬಾಸಾಹೇಬರು ಕಟುವಾಗಿ ವಿರೋಧಿಸಿದರು. ಅದರ ಪ್ರತಿಕ್ರಿಯೆ ಎಲ್ಲೆಡೆ ಮೂಡ ಲಾರಂಭಿಸಿತು.

ದೇವರಾಯ ಮುಂಬೈಗೆ ಹೋಗಿ ಬಾಬಾಸಾಹೇಬರನ್ನು ಭೇಟಿಯಾಗಿ ಬಂದ. ಈ ಆಜ್ಞೆಯ ಸಾಧಕ ಬಾಧಕಗಳನ್ನು ಅಭ್ಯಾಸಿಸಿದ. ಬ್ರಿಟಿಷ್ ಸರ್ಕಾರ ದಲಿತರ ಪರವಾಗಿದ್ದರೂ ಹಲವಾರು ಸಲ ಅದು ದಲಿತ ವಿರೋಧಿಯಾದ ನೀತಿಯನ್ನು ಅನುಸರಿಸುತ್ತಿತ್ತು. ಇದಕ್ಕೆ ಕಾರಣವೂ ಇರದಿರಲಿಲ್ಲ. ಸರ್ಕಾರದಲ್ಲಿರುವ ಸವರ್ಣೀಯ ಹಿಂದೂಗಳು ಮತ್ತು ಉಚ್ಚ ಜಾತಿಯವರು ದಲಿತರ ವಿರೋಧಿಯಾಗಿದ್ದರು. ಇಂಗ್ಲಿಷ್ ಸರ್ಕಾರ ದಲಿತ ಪರವಾಗಿದ್ದರೂ ಸರ್ಕಾರದಲ್ಲಿರುವ ಎಲ್ಲ ಸವರ್ಣೀಯರು ದಲಿತಪರವಾಗಿರಲಿಲ್ಲ. ಸರ್ಕಾರದ ದಲಿತಪರ ಕಾರ್ಯಕ್ರಮಗಳು ಇವರ ಕಣ್ಣಿಗೆ ನೆಡುತ್ತಿದ್ದವು. ಆಗೀಗ ಇಂತಹ ದಲಿತ ವಿರೋಧಿ ಧೋರಣೆಗಳನ್ನು ಜಾರಿ ಮಾಡಿ ಸರ್ಕಾರದಲ್ಲಿರುವ ಸವರ್ಣೀಯರು ರಾಕ್ಷಸಿ ಸಂತೋಷವನ್ನು ಅನುಭವಿಸುತ್ತಿದ್ದರು. ಇವರ ಈ ಕೃತ್ಯ ಲಕ್ಷಾಂತರ ಮೈಲಿ ದೂರದಲ್ಲಿರುವ ಇಂಗ್ಲೆಂಡ್ ತಲುಪಿ, ರಾಣಿಯವರೆಗೆ ಹೋಗುವುದು ಅಸಾಧ್ಯವಾಗಿತ್ತು. ಹೀಗಾಗಿ ಅವರಿಗೆ ರಾಣಿಯ ಯಾವ ಭಯವೂ ಇರಲಿಲ್ಲ.

ಈ ಆಜ್ಞೆಯನ್ನು ಧಿಕ್ಕರಿಸಬೇಕೆಂದು ಬಾಬಾಸಾಹೇಬರು ನಿರ್ಧರಿಸಿದರು. ದೇಶಾದ್ಯಂತ ದಲಿತ ಪ್ರತಿಭಟನೆಗಳು ನಡೆದವು. ಬೆಳಗಾವಿ ಜಿಲ್ಲೆಯ ಕಾಗವಾಡದಲ್ಲಿ ದಲಿತರ ಒಂದು ಬೃಹತ್ತಾದ ಸಭೆ ನಡೆದು ಈ ಆಜ್ಞೆಯ ವಿರುದ್ಧ ಧ್ವನಿ ಎತ್ತಲಾಯಿತು. ಅಂದು ೨೪-೮-೧೯೪೫.

ಈ ಸಭೆಯನ್ನು ದೇವರಾಯನೇ ಸಂಘಟಿಸಿದ. ಆ ಕಾರಣಕ್ಕಾಗಿ ಆತ ಇಡೀ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರ ಅಡ್ಡಾಡಬೇಕಾಯಿತು. ಕೊಲ್ಲಾಪುರದ ಶಾಹು ಛತ್ರಪತಿ

ಬ್ರಿಟಿಷ್ ಸರ್ಕಾರ ದಲಿತರ ಪರವಾಗಿದ್ದರೂ ಹಲವಾರು ಸಲ ಅದು ದಲಿತ ವಿರೋಧಿಯಾದ ನೀತಿಯನ್ನು ಅನುಸರಿಸುತ್ತಿತ್ತು. ಇದಕ್ಕೆ ಕಾರಣವೂ ಇರದಿರಲಿಲ್ಲ. ಸರ್ಕಾರದಲ್ಲಿರುವ ಸವರ್ಣೀಯ ಹಿಂದೂಗಳು ಮತ್ತು ಉಚ್ಚ ಜಾತಿಯವರು ದಲಿತರ ವಿರೋಧಿಯಾಗಿದ್ದರು. ಇಂಗ್ಲಿಷ್ ಸರ್ಕಾರ ದಲಿತ ಪರವಾಗಿದ್ದರೂ ಸರ್ಕಾರದಲ್ಲಿರುವ ಎಲ್ಲ ಸವರ್ಣೀಯರು ದಲಿತಪರವಾಗಿರಲಿಲ್ಲ. ಸರ್ಕಾರದ ದಲಿತಪರ ಕಾರ್ಯಕ್ರಮಗಳು ಇವರ ಕಣ್ಣಿಗೆ ನೆಡುತ್ತಿದ್ದವು. ಆಗೀಗ ಇಂತಹ ದಲಿತ ವಿರೋಧಿ ಧೋರಣೆಗಳನ್ನು ಜಾರಿ ಮಾಡಿ ಸರ್ಕಾರದಲ್ಲಿರುವ ಸವರ್ಣೀಯರು ರಾಕ್ಷಸಿ ಸಂತೋಷವನ್ನು ಅನುಭವಿಸುತ್ತಿದ್ದರು.

ಮಹಾರಾಜರನ್ನು ಆತ ಭೇಟಿಯಾದ. ಅವರು ಸಮ್ಮೇಳನಕ್ಕಾಗಿ ಹಣವನ್ನೂ ನೀಡಿದರು.

'ಕೊಟ್ಟ ಭೂಮಿ ಅದ್ಹ್ಯಾಂಗೆ ಅವರು ವಾಪಸ್ ತಗೋತಾರೆ?' ಇದು ಎಲ್ಲ ದಲಿತರು ದೇವರಾಯನಿಗೆ ಕೇಳಿದ ಪ್ರಶ್ನೆ. ಇವರ ಮುಗ್ಧತೆ ಕಂಡು ದೇವರಾಯ ನಗುತ್ತಿದ್ದ; ವ್ಯಸನ ಪಡುತ್ತಿದ್ದ; ಕೆಟ್ಟೆನಿಸಿಕೊಳ್ಳುತ್ತಿದ್ದ.

'ಕೊಟ್ಟ ಮಾತಿಗೆ ತಪ್ಪದಿರಲು ಅವರು ನಾವೆಂದುಕೊಂಡಿದ್ದೀರಾ? ನಾವು ಒಂದು ಸಲ ಮಾತು ಕೊಟ್ಟರೆ ಮುಗೀತು. ಅದರಂತೆ ನಡೆಯುವವರು. ಅವರು ಫಿರಂಗಿಯರು. ಅವರ ಮೂಗುದಾಣ ನಮ್ಮ ಶತ್ರುಗಳಾದ ವೈದಿಕರ ಕೈಯಲ್ಲಿದೆ' ಎಂದು ಆತ ಸಮಜಾಯಿಸಿ ಹೇಳುತ್ತಿದ.

ಹಾಗೆ ಹೇಳಲು ದೇವರಾಯನಿಗೆ ಕಾರಣವೂ ಇತ್ತು. ಈ ಹಿಂದೆ ದಲಿತ ರಾಜನಾದ ಬಲಿ ಚಕ್ರವರ್ತಿಯನ್ನು ವೈದಿಕರು ಕುತಂತ್ರ ಹೂಡಿ ಪಾತಾಳಕ್ಕಟ್ಟಿದ್ದರು. ಯುದ್ಧದಲ್ಲಿ, ಬುದ್ಧಿಯಲ್ಲಿ, ತಂತ್ರದಲ್ಲಿ ಬಲಿ ಚಕ್ರವರ್ತಿ

ದೇವರಾಯನಿಗೆ ದಲಿತ ರಾಜನಾದ ಬಲಿ ಚಕ್ರವರ್ತಿಯನ್ನು ವೈದಿಕರು ಕುತಂತ್ರ ಹೂಡಿ ಪಾತಾಳಕ್ಕಟ್ಟಿದ್ದರು. ಯುದ್ಧದಲ್ಲಿ, ಬುದ್ಧಿಯಲ್ಲಿ, ತಂತ್ರದಲ್ಲಿ ಬಲಿ ಚಕ್ರವರ್ತಿಯನ್ನು ಸೋಲಿಸಲು ಅಸಾಧ್ಯವಾದಾಗ ವೈದಿಕರು ಕುತಂತ್ರವನ್ನು ಅನುಸರಿಸಬೇಕಾಯಿತು. ಬಲಿ ಚಕ್ರವರ್ತಿ ಕೊಡುಗೈ ದಾನಿ. ಮಾತು ಕೊಟ್ಟನೆಂದರೆ ಮುಗೀತು; ಪ್ರಾಣ ಹೋದರೂ ಅದನ್ನು ಅನುಸರಿಸುತ್ತಿದ್ದ. ಆತನ ಈ ಗುಣದ ಪರಿಚಯವಿದ್ದ ವೈದಿಕರು ಅವನ ಈ ಸದ್ಗುಣ ವನ್ನೇ ಅವನ ನಾಶಕ್ಕೆ ಬಳಸಿಕೊಂಡರು. ಆತನ ಬಳಿ ವಟುವಿನ ರೂಪದ ವಾಮನನ್ನು ಕಳಿಸಿಕೊಟ್ಟರು.

ಯನ್ನು ಸೋಲಿಸಲು ಅಸಾಧ್ಯವಾದಾಗ ವೈದಿಕರು ಕುತಂತ್ರವನ್ನು ಅನುಸರಿಸಬೇಕಾಯಿತು. ಬಲಿ ಚಕ್ರವರ್ತಿ ಕೊಡುಗೈ ದಾನಿ. ಮಾತು ಕೊಟ್ಟನೆಂದರೆ ಮುಗೀತು; ಪ್ರಾಣ ಹೋದರೂ ಅದನ್ನು ಅನುಸರಿಸುತ್ತಿದ್ದ. ಆತನ ಈ ಗುಣದ ಪರಿಚಯವಿದ್ದ ವೈದಿಕರು ಅವನ ಈ ಸದ್ಗುಣವನ್ನೇ ಅವನ ನಾಶಕ್ಕೆ ಬಳಸಿಕೊಂಡರು. ಆತನ ಬಳಿ ವಟುವಿನ ರೂಪದ ವಾಮನನ್ನು ಕಳಿಸಿಕೊಟ್ಟರು.

'ಏನು ಬೇಕು?' ಎಂದು ಕೇಳಿದ ಬಲಿಗೆ ವಾಮನ ಮೂರು ಪಾದ ಸಾಲುವಷ್ಟು ಭೂಮಿ ಕೇಳಿದ. ಮೊದಲ ಪಾದವೆಂದು ಬಲಿ ಗೆದ್ದ ಭೂಮಿ ಹಾಗೂ ಸಮುದ್ರ ಪ್ರದೇಶವನ್ನು ಬೇಡಿದ. ಎರಡನೆಯ ಪಾದದಲ್ಲಿ ಆತ ಆಕಾಶ ಮಾರ್ಗ ಕೇಳಿದ. ಎರಡೇ ಪಾದಗಳಲ್ಲಿ ತಾನು ಪರಾಕ್ರಮದಿಂದ ಗೆದ್ದ ಭೂಪ್ರದೇಶ, ಸಮುದ್ರ ಪ್ರದೇಶ ಮತ್ತು ಆಕಾಶಪ್ರದೇಶಗಳನ್ನು ಬಲಿ ಚಕ್ರವರ್ತಿ ಕಳೆದುಕೊಂಡದ್ದ. ಒಂದು ಹನಿ ರಕ್ತವನ್ನೂ ಸುರಿಸದೆ ವೈದಿಕರು ಬಲಿಯನ್ನು ಗೆದ್ದಿದ್ದ. ಮೂರನೆಯ ಪಾದದಲ್ಲಿ ಬಲಿ ಈ ದೇಶ ಪ್ರದೇಶಗಳನ್ನು ಬಿಟ್ಟು ಕಾಡಿಗೆ ಹೋಗಬೇಕೆಂದು ಆದೇಶಿಸಿದ. ಕೊಟ್ಟ ಮಾತಿಗೆ ತಪ್ಪದ ಬಲಿ ಚಕ್ರವರ್ತಿಯನ್ನು, ಅವನ ಮಾತುಗಳಿಂದಲೇ ವೈದಿಕರು ಬಲಿ ಹಾಕಿದ್ದರು.

ಅದಕ್ಕೆಂದೇ ದೇವರಾಯ 'ಕೊಟ್ಟ ಮಾತಿಗೆ ತಪ್ಪದಿರಲು ಅವರು ನಾವೆಂದುಕೊಂಡಿದ್ದೀರಾ?' ಎಂದು ಉಳಿದ ದಲಿತರಿಗೆ ಕೇಳಿದ್ದ. ದಲಿತರಿಂದ ಕಸಿದುಕೊಂಡ ಈ ರೀತಿಯ ವತನ ಭೂಮಿಗಳು ಸವರ್ಣೀಯರಿಗೆ ನೀಡಲಾಗುವುದೆಂಬ ಪುಕಾರು ಹುಟ್ಟಿತು. ಇದರಿಂದ ದಲಿತರು ಕ್ರುದ್ಧರಾದರು.

'ನಮ್ಮ ಭೂಮಿಯಲ್ಲಿ ಯಾರಾದರೂ ಕಾಲು ಹಾಕಿದರೆ ಅವರ ಕಾಲನ್ನೇ ಮುರಿಯುತ್ತೇವೆ.'

'ಈ ಜನ ನಮ್ಮನ್ನು ಏನೆಂದುಕೊಂಡಿದ್ದಾರೆ? ಭೂಮಿ ನಮ್ಮ ತಾಯಿ ಇದ್ದಂತೆ. ನಮ್ಮ ತಾಯಿಯ ಮೇಲೆ ಬೇರೆಯವರ ಆಕ್ರಮಣ ನಾವು ಸಹಿಸುವುದಿಲ್ಲ.'

'ನಾವು ಸತ್ತರೂ ಚಿಂತೆ ಇಲ್ಲ; ಈ ಕಾಯ್ದೆ ಜಾರಿಯಾಗದಂತೆ ನೋಡಿಕೊಳ್ಳೋಣ.' ಹೀಗೆ ನಾನಾ ರೀತಿಯಲ್ಲಿ ದಲಿತ ಧ್ವನಿಗಳು ಮೊಳಗಹತ್ತಿದವು.

ಈ ಪ್ರಕರಣವನ್ನು ಸಿಟ್ಟು, ಕ್ರೌರ್ಯ, ಹಿಂಸೆಗಳಿಂದ ಬಿಡಿಸುವುದು ಬಾಬಾಸಾಹೇಬರಿಗೆ ಬೇಕಾಗಿರಲಿಲ್ಲ. ಅದರಿಂದ ದಲಿತರಿಗೆ ಹಾನಿಯಾಗುವ ಸಂಭವವಿತ್ತು. ಇಂಗ್ಲಿಷರಿಗೆ ತಾವು ಮಾಡುತ್ತಿರುವುದು ತಪ್ಪೆಂದು ಮನಗಾಣಿಸಿಕೊಡಬೇಕಿತ್ತು. ಅದಕ್ಕಾಗಿ ಸಭೆ, ಅಧಿವೇಶನಗಳನ್ನು ಮಾಡಿ ತಮ್ಮ ಅಸಹನೆಯನ್ನು ತೋರಿಸಿಕೊಡಬೇಕಾಗಿತ್ತು.

ಇದಕ್ಕೆ ದಲಿತರು ಸಜ್ಜಾದರು ಕಾಗವಾಡದಲ್ಲಿ ನಡೆದ ದಲಿತರ ಈ ಸಭೆ ಅಭೂತಪೂರ್ವವಾಗಿತ್ತು. ಇದನ್ನು ಹಾಳು ಮಾಡಲು ಒಂದಿಬ್ಬರು ಕಾಂಗ್ರೆಸ್ ನಾಯಕರು ಪ್ರಯತ್ನಿಸಿದರು. ಆಗ ಸ್ವಾತಂತ್ರ್ಯ ಚಳವಳಿ ಪ್ರಖರ ಬಿಂದು ಮುಟ್ಟಿದ ಹಂತ. 'ಎಲ್ಲರೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೆ ಈ ದಲಿತರು ತುಂಡು ಭೂಮಿಗಾಗಿ ಹೋರಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ನಾಯಕರು ದೇವರಾಯನನ್ನು ಜರಿದರು. ಆದರೆ ಆತ ಈ ಮಾತುಗಳಿಗೆ ಕವಡೆ ಕಿಮ್ಮತ್ತನ್ನು ನೀಡಲಿಲ್ಲ. 'ಇಂತಹ ಅನಾವಶ್ಯಕ ಟೀಕೆಗಳಿಗೆ ಮಹತ್ವ ನೀಡಿ ನನ್ನ ಶ್ರಮವನ್ನೇಕೆ ಹಾಳಿ ಮಾಡಿಕೊಳ್ಳಬೇಕು?' ಎಂದು ಆತ ನಿರ್ಧರಿಸಿದ್ದ.

(೪೩ ನೇ ಪುಟಕ್ಕೆ)

ಖಾಸಗೀಕರಣದ ಅಪಾಯಗಳು

ಸರ್ವರೋಗಕ್ಕೂ ಖಾಸಗೀಕರಣವೇ ಮದ್ದು' ಎಂದು ಇತ್ತೀಚಿನ ವರ್ಷಗಳಲ್ಲಿ ರಣಕಹಳೆ ಊದುತ್ತಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆಲ್ಲ ಸಾರ್ವಜನಿಕ ಉದ್ದಿಮೆಗಳನ್ನು ಮೂರು ಕಾಸಿನ ಬೆಲೆಗೆ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುತ್ತಿವೆ. ಖಾಸಗಿ ಕಂಪನಿಗಳು ಲಾಭಕ್ಕಾಗಿ ಎಂತಹ ತುಚ್ಛ ದಾರಿಗಿಳಿಯುತ್ತವೆಂಬುದಕ್ಕೆ ಹಲವಾರು ನಿದರ್ಶನಗಳು ನಮ್ಮ ಮುಂದಿರುವುದನ್ನು ಖಾಸಗಿ ಕಂಪನಿಗಳ ಮಾಧ್ಯಮ ಜಾಲ ಮರೆಮಾಚುತ್ತವೆ. ಖಾಸಗೀಕರಣದ ಅಪಾಯದ ಬಗ್ಗೆ ಕಣ್ಣುತೆರೆಸುವ ಇತ್ತೀಚಿನ ಉದಾಹರಣೆಯೆಂದರೆ ಮಹಾರಾಷ್ಟ್ರದ ಡಾಬೋಲ್ ವಿದ್ಯುತ್ ಯೋಜನೆ. ಈ ಯೋಜನೆಯಿಂದ ಸಾವಿರಾರು ಕೋಟಿ ರೂಪಾಯಿ ಕೈ ಸುಟ್ಟುಕೊಂಡ ಮಹಾರಾಷ್ಟ್ರ ಸರ್ಕಾರದ ವೈಫಲ್ಯವನ್ನು ಆಳವಾಗಿ ವಿಶ್ಲೇಷಿಸಿದಾಗ ಬಹುರಾಷ್ಟ್ರಿಯ ಕಂಪನಿಗಳ ಲಾಭಕೋರತನ, ಈ ದೇಶದ ಆಳುವ ವರ್ಗದ ದುರುದ್ದೇಶ, ಅಧಿಕಾರಶಾಹಿಯ ಸೋಗಲಾಡಿತನ ಎಲ್ಲವು ಒಂದೊಂದಾಗಿ ಅನಾವರಣಗೊಳ್ಳುತ್ತಾ ಹೋಗುತ್ತವೆ.

1993ರಲ್ಲಿ ಡಾಬೋಲ್ ವಿದ್ಯುತ್ ಕಂಪನಿಯ ಪ್ರಾರಂಭ ಸಮಯದಲ್ಲಿ ಶೇ.10 ರಷ್ಟು ಷೇರನ್ನು ಹೊಂದಿದ್ದ ಅಮೆರಿಕಾದ ಜನರಲ್ ಇಲೆಕ್ಟ್ರಿಕ್ ಮತ್ತು ಬೆಚ್‌ಟೆಲ್ ಕಂಪನಿಗಳು 2001 ರಲ್ಲಿ ಎನ್ರಾನ್ ಕಂಪನಿಯ ಷೇರಿನ ಭಾಗವನ್ನು 2.0 ಕೋಟಿ ರೂಪಾಯಿಗಳಿಗೆ ಕೊಂಡುಕೊಂಡವು. 1993 ರಲ್ಲಿ ಅಮೆರಿಕಾದ ಎನ್ರಾನ್ ಕಂಪನಿಯೊಂದಿಗೆ ಮಹಾರಾಷ್ಟ್ರ ವಿದ್ಯುತ್ ಮಂಡಳಿಯ ಒಪ್ಪಂದ ಮಾಡಿಕೊಂಡು ಡಾಬೋಲ್ ವಿದ್ಯುತ್ ಕಂಪನಿಯನ್ನು ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಸ್ಥಾಪಿಸಿದ್ದು, ಈ ಕಂಪನಿಗೆ ಕೇಂದ್ರ ಸರ್ಕಾರ ಕೂಡ ಹಣಕಾಸಿನ ಖಾತರಿಯನ್ನು ಒದಗಿಸಿತ್ತು. ವಿದ್ಯುತ್ ಉತ್ಪಾದನೆಯಾದ ಕೆಲವೇ ವರ್ಷಗಳಲ್ಲೇ ಮಹಾರಾಷ್ಟ್ರ ಸರ್ಕಾರದ ಬಹುಪಾಲು ಹಣವನ್ನು ನುಂಗುವ ಮಟ್ಟಕ್ಕೆ ಈ ಕಂಪನಿಯ ಹಣದ ಹಸಿವು ಬೆಳೆದು ವಿದ್ಯುತ್ ಉತ್ಪಾದನೆಯನ್ನು ಸ್ಥಗಿತಗೊಳಿಸಲಾಯಿತು. ತಕರಾರು ಇತ್ಯರ್ಥವನ್ನು ಲಂಡನ್ ನ್ಯಾಯಾಲಯದಲ್ಲಿ ಪೂರ್ಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಪ್ಪಂದ ಸಮಯದಲ್ಲಿ ಮಾಡಿದ್ದ ಪ್ರಮಾದದಿಂದಾಗಿ ಎನ್ರಾನ್ ಕಂಪನಿಯು ಮಹಾರಾಷ್ಟ್ರ ವಿದ್ಯುತ್ ಮಂಡಳಿಯನ್ನು ಲಂಡನ್ ಸೇರಿದಂತೆ ಕೇಳರಿಯದ ನ್ಯಾಯಾಲಯಗಳಿಗೆಲ್ಲ ಎಳೆದು ವ್ಯಾಜ್ಯ ಹೂಡಿ ಬೆಸ್ತು ಬೀಳಿಸಿತು. ಇಂತಹ ನ್ಯಾಯಾಲಯ ವ್ಯವಹಾರಗಳಲ್ಲಿ ಎನ್ರಾನ್ ಕಂಪನಿಗೆ ಕಾನೂನು ಸಲಹೆಗಾರರಾಗಿದ್ದವರು ಇಂದಿನ ಹಣಕಾಸು ಮಂತ್ರಿಗಳಾದ ಪಿ.ಚಿದಂಬರಮ್‌ರವರು!

ಸ್ಥಗಿತಗೊಂಡ ಡಾಬೋಲ್ ವಿದ್ಯುತ್ ಕಂಪನಿಯನ್ನು ಪುನರಾರಂಭಿಸಲು ನಮ್ಮ ರಾಷ್ಟ್ರದ ದುಡಿಯುವ ಜನತೆ ತಮ್ಮ ಬೆವರ ಶ್ರಮದಿಂದ ನಿರ್ಮಿಸಿರುವ ಸಾರ್ವಜನಿಕ ದಿಗ್ಗಜ ಉದ್ದಿಮೆಗಳಾದ ಗ್ಯಾಸ್ ಆಥಾರಿಟಿ ಆಫ್ ಇಂಡಿಯಾ (Gail) ಮತ್ತು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ (NTPG) ಗಳಿಗೆ ಕೇಂದ್ರ ಸರ್ಕಾರವು ಒತ್ತಡ ನೀಡಿದೆ. ಇದರಿಂದಾಗಿ ಇವರೆಡೂ ಕಂಪನಿಗಳು ತಲಾ ರೂ. 500 ಕೋಟಿ ಬಂಡವಾಳ ಹೂಡಿ ನಷ್ಟದಿಂದಾಗಿ ಮುಚ್ಚಿರುವ ಕಂಪನಿಯನ್ನು ಪ್ರಾರಂಭಿಸಲು ಸಿದ್ಧವಾಗಿವೆ.

ಸಮಾನಾಂತರವಾಗಿ, ಕೇಂದ್ರ ಸರ್ಕಾರವು ಈ ಹಿಂದೆ ಬಂಡವಾಳ ಹೂಡಿ ಅಂತರರಾಷ್ಟ್ರೀಯ ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಿದ್ದ ಜನರಲ್ ಇಲೆಕ್ಟ್ರಿಕ್ ಮತ್ತು ಬೆಚ್‌ಟೆಲ್ ಕಂಪನಿಗಳಿಗೆ ಪರಿಹಾರವನ್ನು ಸಹ ಘೋಷಿಸಿದೆ. ಶೇ.85 ರಷ್ಟು ಷೇರನ್ನು ಹೊಂದಿದ್ದ ಜನರಲ್ ಇಲೆಕ್ಟ್ರಿಕ್ ಮತ್ತು ಬೆಚ್‌ಟೆಲ್ ಕಂಪನಿಗಳಿಗೆ



ಕ್ರಮವಾಗಿ 623.5 ಕೋಟಿ ಮತ್ತು 688 ಕೋಟಿ ರೂ.ಗಳನ್ನು ಶೇ. 15 ರಷ್ಟು ಷೇರನ್ನು ಹೊಂದಿದ್ದ ಮಹಾರಾಷ್ಟ್ರ ವಿದ್ಯುತ್ ಅಭಿವೃದ್ಧಿ ನಿಗಮ ಮತ್ತು ಐಡಿಬಿಐ ಬ್ಯಾಂಕ್‌ಗಳು ನೀಡಿವೆ. ಇನ್ಶೂರೆನ್ಸ್ ಕಂಪನಿಗೆ 600 ಕೋಟಿಗಳನ್ನು ನೀಡಿದ್ದರೆ, ಇತರೆ 19 ವಿದೇಶಿ ಸಾಲಗಾರರಿಗೆ 950 ಕೋಟಿ ರೂ.ಗಳನ್ನು ಪರಿಹಾರವಾಗಿ ನೀಡಲಾಗಿದೆ. ವಿದೇಶಿ ಕಂಪನಿಗಳಿಗೆ ಒಟ್ಟಾರೆ ರೂ.3.268 ಕೋಟಿಗಳನ್ನು ಪರಿಹಾರವಾಗಿ ನಮ್ಮ ದೇಶದ ಸಾರ್ವಜನಿಕ ಉದ್ದಿಮೆಗಳಿಂದ ಕೊಡಿಸಲಾಗಿದೆಯೆಂಬುದು ಗಮನಾರ್ಹ.

ಆದರೆ ಭಾರತೀಯ ಹಣಕಾಸು ಸಂಸ್ಥೆಗಳಿಗೆ ಬರಬೇಕಾದ ಹಣದ ಬಗ್ಗೆ ಸ್ಪಷ್ಟತೆಯೇ ಇಲ್ಲ. ಡಾಬೋಲ್ ವಿದ್ಯುತ್ ಕಂಪನಿಯಲ್ಲಿ ಬಂಡವಾಳ ಹೂಡಿದ್ದ ಭಾರತೀಯ ಹಣಕಾಸು ಸಂಸ್ಥೆಗಳೆಂದರೆ ಐಡಿಬಿಐ, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಹಾಗೂ ಖಾಸಗಿ ಮಾಲೀಕತ್ವದ ಐಸಿಐಸಿಐ. ಈ ಸಂಸ್ಥೆಗಳ ಒಟ್ಟಾರೆ ಬಂಡವಾಳ ಹೂಡಿಕೆ ಕನಿಷ್ಠವೆಂದರೆ ರೂ.9,000 ಕೋಟಿಗಳು. ಇದನ್ನು ಆ ಸಂಸ್ಥೆಗಳು ಮರೆಯುವುದೇ ವಾಸಿಯೆಂಬಂಥ ವಾತಾವರಣ ಸೃಷ್ಟಿಯಾಗಿದೆ.

ಡಾಬೋಲ್ ಯೋಜನೆಯಲ್ಲಿ ಕಣ್ಣಿಗೆ ರಾಚುವ ಅಂಶವೆಂದರೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಸಾವಿರಾರು ಕೋಟಿ

ವಾಸ್ತವ

ಸ್ಥಗಿತಗೊಂಡ ಡಾಬೋಲ್ ವಿದ್ಯುತ್ ಕಂಪನಿಯನ್ನು ಪುನರಾರಂಭಿಸಲು ನಮ್ಮ ರಾಷ್ಟ್ರದ ದುಡಿಯುವ ಜನತೆ ತಮ್ಮ ಬೆವರ ಶ್ರಮದಿಂದ ನಿರ್ಮಿಸಿರುವ ಸಾರ್ವಜನಿಕ ದಿಗ್ಗಜ ಉದ್ದಿಮೆಗಳಾದ ಗ್ಯಾಸ್ ಆಥಾರಿಟಿ ಆಫ್ ಇಂಡಿಯಾ (Gail) ಮತ್ತು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ (NTPG) ಗಳಿಗೆ ಕೇಂದ್ರ ಸರ್ಕಾರವು ಒತ್ತಡ ನೀಡಿದೆ. ಇದರಿಂದಾಗಿ ಇವರೆಡೂ ಕಂಪನಿಗಳು ತಲಾ ರೂ. ೫೦೦ ಕೋಟಿ ಬಂಡವಾಳ ಹೂಡಿ ನಷ್ಟದಿಂದಾಗಿ ಮುಚ್ಚಿರುವ ಕಂಪನಿಯನ್ನು ಪ್ರಾರಂಭಿಸಲು ಸಿದ್ಧವಾಗಿವೆ.

○ಜಯ

ಹಣವನ್ನು ಸರ್ಕಾರದ ಬೊಕ್ಕಸದಿಂದ ಹಗಲು ದರೋಡೆ ಮಾಡಲು ಬಿಟ್ಟ ನಮ್ಮ ದೇಶದ ಆಳುವ ವರ್ಗ. ಇನ್ನೊಂದೆಡೆ ಈ ನಷ್ಟದ ಸಂಪೂರ್ಣ ಹೊರೆಯನ್ನು ಸಾರ್ವಜನಿಕ ಉದ್ದಿಮೆಗಳ ಮೇಲೆ ಹೊರಿಸಿರುವುದು. ಸ್ಥಗಿತಗೊಂಡಿರುವ ಡಾಬೋಲ್ ವಿದ್ಯುತ್ ಘಟಕವನ್ನು ಪ್ರಾರಂಭಿಸಲು ಗ್ಯಾಸ್ ಆಥಾರಿಟಿ ಆಫ್ ಇಂಡಿಯಾ ಮತ್ತು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ – ಈ ಎರಡು ಸಾರ್ವಜನಿಕ ಉದ್ದಿಮೆಗಳು ಎರಡನೆ ದರ್ಜೆ ವಿದ್ಯುತ್ ಘಟಕವನ್ನು ಶೇ. 45ಕ್ಕಿಂತ ಹೆಚ್ಚು ಹಣ ತೆತ್ತು ಶುರು ಮಾಡಬೇಕಾಗಿದೆ.

ಜನರಲ್ ಇಲೆಕ್ಟ್ರಿಕ್ ಮತ್ತು ಬೆಚ್‌ಟೆಲ್ ಕಂಪನಿಗಳು 2001 ರಲ್ಲಿ ರೂ.2 ಕೋಟಿ ಹಣ ತೊಡಗಿಸಿ 2005 ರ ಹೊತ್ತಿಗೆ ಪರಿಹಾರವಾಗಿ ರೂ.1300 ಕೋಟಿ ಪಡೆದದ್ದು ನಮ್ಮ ದುರಂತ.

ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಪರಿಹಾರ ನೀಡಲು ಕೇಂದ್ರ ಸರ್ಕಾರ ಹಲವಾರು ಹಣಕಾಸು ಸಂಸ್ಥೆಗಳ ಹೊಸ್ತಿಲ ಬಳಿ ಎಡತಾಕಿದೆ. ಮೊದಮೊದಲು, ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಮೇಲೆ ಸರ್ಕಾರದ ಕಣ್ಣು ಬಿದ್ದಿದ್ದು, ಈ ಸಂಸ್ಥೆಯಿಂದೇನಾದರೂ ಹಣ ಮುಟ್ಟದರೆ ಲಕ್ಷಾಂತರ ಕಾರ್ಮಿಕರ ವಿರೋಧಕ್ಕೆ ತುತ್ತಾಗಬೇಕಾಗುತ್ತದೆಂದು ನಂತರ ಮನಗಂಡ ಸರ್ಕಾರ ಸುಮ್ಮನಾಗಿದೆ. ನಂತರ, ಭಾರತೀಯ ಜೀವ ವಿಮಾ ನಿಗಮವು 15–20 ವರ್ಷಗಳ ಬಾಂಡ್ ಬಿಡುಗಡೆ ಮಾಡುವ ಮೂಲಕ ಹಣ ಸಂಗ್ರಹಣೆ ಮಾಡಲು ಮುಂದೆ ಬಂದಿತು.

ಎನ್ರಾನ್ ಕಂಪನಿ ಸೇರಿದಂತೆ ಹಲವು ಬಹುರಾಷ್ಟ್ರೀಯ ಕಂಪನಿಗಳ ದುಬಾರಿ ಬೇಡಿಕೆಗಳಿಗೆ ಸರ್ಕಾರ ಮಣಿಯುವ ಅಗತ್ಯವಿರಲಿಲ್ಲ. ವಿದೇಶಿ ಕಂಪನಿಗ ಳೊಂದಿಗೆ ಮಹಾರಾಷ್ಟ್ರ ಸರ್ಕಾರದ ಒಪ್ಪಂದ, ವಿದ್ಯುತ್ ಖರೀದಿ ಒಪ್ಪಂದ, ವಿದೇಶಿ ಕಂಪನಿ – ಪರ ಅಂಶಗಳು ಒಪ್ಪಂದದಲ್ಲಿ ಸೇರಿರುವುದು, ಇತ್ಯಾದಿ ಬಗ್ಗೆ ಸಮಗ್ರ ತನಿಖೆ ನಡೆಸಿ ಈ ತಪ್ಪುಗಳಿಂದ ಪಾಠ ಕಲಿತು, ದಿಟ್ಟತನದಿಂದ ವಿದೇಶಿ ಕಂಪನಿಗಳನ್ನು ಎದುರಿಸುವ ಬದಲು ನ್ಯಾಯಾಲ ಯದ ಹೊರಗೆ ಸರ್ಕಾರ ದುಬಾರಿ ಬೆಲೆ ತೆರುವ ಮೂಲಕ ಇತ್ಯರ್ಥ ಪಡಿಸಿಕೊಂಡಿದ್ದು ನಾಚಿಕೆಯಿಂದ ತಲೆತಗ್ಗಿಸಬೇಕಾದ್ದೇ. ವಿದ್ಯುತ್ ಕಂಪನಿಯ ವೈಫಲ್ಯಕ್ಕೆ ಕಾರಣರಾದವರ ವಿರುದ್ಧ ನ್ಯಾಯಾಂಗ ತನಿಖೆ ನಡೆಸಿದ್ದರೆ, ವಿದೇಶಿ ಕಂಪನಿಗಳ ಬಣ್ಣ ಬಯಲಾಗುತ್ತಿತ್ತು. ಸಾರ್ವ ಜನಿಕ ಹಣವನ್ನು ವಿದೇಶಿ ಕಂಪನಿಗಳಿಗೆ ಸುರಿಯುವ ಈ ಪರಿ ನಿಜಕ್ಕೂ ಆಘಾತಕಾರಿಯಾದದ್ದು.

ಸಾರ್ವಜನಿಕ ಉದ್ದಿಮೆಗಳು ಸೇವಾ ಮನೋಭಾವದಿಂದ, ಹಣಕ್ಕಿಂತ ಸಂತೃಪ್ತ ಸೇವೆಗೆ ಆದ್ಯತೆ ನೀಡುವುದರಿಂದ ಲಾಭಾಂಶ ಗಣನೆಗೆ ಬರುವುದಿಲ್ಲ. ಆದರೆ ಖಾಸಗಿ ಕಂಪನಿಗಳು ತಮಗೆ ಲಾಭಗಳಿಸುವ ವರೆಗೂ ಬೂಟಾಟಿಕೆಯಿಂದ ವರ್ತಿಸುತ್ತಾ ನಷ್ಟವನ್ನು ಯಾರ ತಲೆಗಾದರೂ ಕಟ್ಟುವ ಚಾಲಾಕಿತನ ಹೊಂದಿರು ತ್ತವೆ. ಖಾಸಗಿ ಕಂಪನಿಗಳು ಹೆಚ್ಚು ಲಾಭಗಳಿಸಿದರೂ ಸೇವೆಯಲ್ಲಿ ಸಾರ್ವಜನಿಕ ಉದ್ದಿಮೆಗಿಂತ ಹೆಚ್ಚಿನ ವೃತ್ತಿಪರತೆ ಹೊಂದಿವೆಯೆಂದು ಹೇಳುವ ಜನರೂ ಇದ್ದಾರೆ. ಇದೂ ಸಹ ಖಾಸಗಿ ಕಂಪನಿಗಳು ಹರಡಿರುವ ಸುಳ್ಳಿನ ಕಂತೆಗಳೇ. ಇತ್ತೀಚೆಗೆ ಮುಂಬೈ ಮಹಾನಗರಿ ಯಲ್ಲಿ ಇತಿಹಾಸದಲ್ಲೇ ಹೆಚ್ಚು ದಾಖಲಾದ ಮಳೆ ಸುರಿದು

ಸಾರ್ವಜನಿಕ ಉದ್ದಿಮೆಗಳು ಸೇವಾ ಮನೋಭಾವದಿಂದ, ಹಣಕ್ಕಿಂತ ಸಂತೃಪ್ತ ಸೇವೆಗೆ ಆದ್ಯತೆ ನೀಡುವುದರಿಂದ ಲಾಭಾಂಶ ಗಣನೆಗೆ ಬರುವುದಿಲ್ಲ. ಆದರೆ ಖಾಸಗಿ ಕಂಪನಿಗಳು ತಮಗೆ ಲಾಭ ಗಳಿಸುವವರೆಗೂ ಬೂಟಾಟಿಕೆಯಿಂದ ವರ್ತಿಸುತ್ತಾ ನಷ್ಟವನ್ನು ಯಾರ ತಲೆಗಾದರೂ ಕಟ್ಟುವ ಚಾಲಾಕಿತನ ಹೊಂದಿರುತ್ತವೆ. ಖಾಸಗಿ ಕಂಪನಿಗಳು ಹೆಚ್ಚು ಲಾಭಗಳಿಸಿದರೂ ಸೇವೆಯಲ್ಲಿ ಸಾರ್ವಜನಿಕ ಉದ್ದಿಮೆಗಿಂತ ಹೆಚ್ಚಿನ ವೃತ್ತಿಪರತೆ ಹೊಂದಿವೆಯೆಂದು ಹೇಳುವ ಜನರೂ ಇದ್ದಾರೆ. ಇದೂ ಸಹ ಖಾಸಗಿ ಕಂಪನಿಗಳು ಹರಡಿರುವ ಸುಳ್ಳಿನ ಕಂತೆಗಳೇ.

ನಗರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಮುಂಬೈ ನಗರದಲ್ಲಿ ವೃದ್ಧರು, ಮಹಿಳೆಯರು, ಮಕ್ಕಳು 20–30 ಮಹಡಿ ಕಟ್ಟಡ ಏರುವುದು, ಇತರೆ ಕೆಲಸಗಳಿಗೆ ವಿದ್ಯುತ್ತನ್ನು ಹೆಚ್ಚಾಗಿ ಅವಲಂಬಿಸಿರುತ್ತಾರೆ. ನಗರದಲ್ಲಿ 4,050 ಟ್ರಾನ್ಸ್ ಫಾರಮ್‌ಗಳನ್ನು ರಿಲೈಯನ್ಸ್ ಕಂಪನಿಯು ಹೊಂದಿದ್ದು, ಅವೆಲ್ಲ ಮಳೆಯಿಂದ ಕೆಟ್ಟಿದ್ದರಿಂದ ಸರಿಪಡಿಸಲು ವಾರಗಟ್ಟಲೆ ಸಮಯವನ್ನು ಈ ಖಾಸಗಿ ಕಂಪನಿ ತೆಗೆದುಕೊಂಡಿತು. ವಾರಗಟ್ಟಲೆ ವಿದ್ಯುತ್ ಇಲ್ಲದೆ ಹೈರಾಣಾದ ಮುಂಬೈ ಜನ ಅಸಹನೆ ಮತ್ತು ಕೋಪೋದ್ರಿಕ್ತರಾಗಿದ್ದರು. ಆದರೆ, ಮಹಾರಾಷ್ಟ್ರ ವಿದ್ಯುತ್ ಮಂಡಳಿಯು 5,667 ಟ್ರಾನ್ಸ್ ಫಾರಮ್‌ಗಳನ್ನು ಹೊಂದಿದ್ದು, ಕೆಟ್ಟ ಉಪಕರಣಗಳನ್ನು ರಿಪೇರಿ ಮಾಡಿ ಕೇವಲ 24 ಗಂಟೆಯೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಸಾರ್ವಜನಿಕ ಉದ್ದಿಮೆಯ ಕಾರ್ಯಕ್ಷಮತೆಗೆ ಸಾಕ್ಷಿ. ಮಹಾರಾಷ್ಟ್ರ ವಿದ್ಯುತ್ ಮಂಡಳಿಯ ನೌಕರರು ಬೆಟ್ಟದ ಮೇಲಿರುವ ಸಣ್ಣ ಪಟ್ಟಣ ತಲುಪಲು ಹಗ್ಗದಿಂದ ಹತ್ತಿದ್ದಾರೆ. ಅಸ್ತವ್ಯಸ್ಥಗೊಂಡ ಕೇಬಲ್ ಸರಿಪಡಿಸಲು ಇಂಜಿನಿಯರ್ ಒಬ್ಬರು ನದಿ ಈಜಿ ಹೋಗಿದ್ದಾರೆ. ರಿಲೈಯನ್ಸ್ ಕಂಪನಿಯ ಕಳಪೆ ಕಾರ್ಯನಿರ್ವಹಣೆಗೆ ಕಾರಣವೆಂದರೆ ಅದು ಸಿಕ್ಕಾಪಟ್ಟೆ ನೌಕರರನ್ನು ಕಡಿತಗೊಳಿ ಸಿದ್ದು, ನೌಕರರ ಸಂಖ್ಯೆ 4600 ರಿಂದ 3000ಕ್ಕೆ ಇಳಿದಿದೆ. ವಿದ್ಯುತ್ ಉಪಕರಣಗಳ ಬಗ್ಗೆ ಜ್ಞಾನ ಹೊಂದಿರುವ ತಾಂತ್ರಿಕ ಸಿಬ್ಬಂದಿಯ ಸ್ಥಳದಲ್ಲಿ ಮಾರ್ಕೆಟಿಂಗ್/ಬಿಲ್ ವಸೂಲಾತಿಗಾಗಿ ಜನರಲ್ ಸಿಬ್ಬಂದಿಯನ್ನು ನೇಮಕ ಮಾಡಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಖಾಸಗಿ ಕಂಪನಿಗಳು ಲಾಭತರುವೆಡೆ ಮಾತ್ರ ಬಂಡವಾಳ ಹೂಡುತ್ತವೆ. ಸೇವೆ, ಗುಣಮಟ್ಟ, ಗ್ರಾಹಕ ಸಂತೃಪ್ತಿ ಇವೆಲ್ಲ ಅವುಗಳಿಗೆ ಅಕ್ಷರಶಃ ಪರಿಪಾಲನೆಗಾಗಿ ಡಇರುವಂಥವಲ್ಲ ಬರೇ ಅಲಂಕಾರಿಕ ಪದಗಳಾಗಿವೆ. ಈ ಹಿನ್ನೆಲೆಯಲ್ಲಿ ಇನ್ನಷ್ಟು ಸಾರ್ವಜನಿಕ ಉದ್ದಿಮೆಗಳನ್ನು ಬಲಪಡಿಸಿ, ಉತ್ತಮ ಆರ್ಥಿಕ ಸುಭದ್ರತೆಗೆ ಬುನಾದಿ ಹಾಕಬೇಕಾಗಿದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲ ರಿಗೆ, ಅಸಹಾಯಕರಿಗೆ ಅಸರೆಯಾಗ ಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿ ಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗು ತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ' ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿ ಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆ ಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಒರಿಸ್ಸಾ: ಜಾತಿ ಸಂಘರ್ಷ

ಸಮಕಾಲೀನ

ಒರಿಸ್ಸಾ ರಾಜ್ಯದಲ್ಲಿ ಶೇ. ೪೦ರಷ್ಟು ಜನ ಬಡತನ ರೇಖೆ ಕೆಳಗಿದ್ದಾರೆ. ಇಲ್ಲಿನ ಬೀಡಿ ಸುತ್ತುವ ಕೆಲಸಗಾರರಿಗೆ ೧೦೦೦ ಬೀಡಿಗೆ ಸಿಗುವ ಸಂಬಳ ಕೇವಲ ೩೮ ರೂಪಾಯಿ ಮಾತ್ರ. ಈ ೩೮ ರೂ. ನಲ್ಲಿ ಸಾಗಾಟದ ಖರ್ಚು ಎಂದು ನಾಲ್ಕು ರೂಪಾಯಿ ಕಡಿತವೂ ಆಗುತ್ತದೆ. ಅಂದರೆ ಈ ಕೆಲಸಗಾರರು ೧೦೦೦ ಬೀಡಿ ಸುತ್ತಿದರೆ ಅವರ ಕೈಯಲ್ಲುಳಿವ ಸಂಬಳ ಮೊತ್ತ ಬರೀ ೩೪ ರೂಪಾಯಿ. ಈ ವೇತನದಲ್ಲಿರುವ ತಾರತಮ್ಯವು ಅಲ್ಲಿಯ ಬಡಪಾಯಿಗಳ ಜೀವನ, ಹಾಗೆಯೇ ಸಾಮಾಜಿಕ ಪರಿಸ್ಥಿತಿಗಳಲ್ಲಿಯೂ ಪ್ರತಿ ಬಿಂಬಿಸಲ್ಪಡುತ್ತದೆ. ಬಡತನದ ಕಷ್ಟ ಸಂಕಷ್ಟಗಳನ್ನು ಕಣ್ಣಾರೆ ನೋಡಬೇಕಾದರೆ ಒರಿಸ್ಸಾದ ಗ್ರಾಮೀಣ ಪ್ರದೇಶಗಳಿಗೆ ಕಾಲಿಡ ಬೇಕು.

○ಪಿ.ವಿ.ಎನ್.ಮೂರ್ತಿ

ಒರಿಸ್ಸಾ ರಾಜ್ಯವು ನಮ್ಮ ರಾಷ್ಟ್ರದ ಅತಿ ಹಿಂದುಳಿದ ರಾಜ್ಯದಲ್ಲಿ ಒಂದು. ಈ ರಾಜ್ಯದಲ್ಲಿ ಶೇ.೪೦ರಷ್ಟು ಜನ ಬಡತನ ರೇಖೆ ಕೆಳಗಿದ್ದಾರೆ. ಇಲ್ಲಿ ಬಡ ಜನರಿಗೆ ಸಿಗುವ ಸಂಬಳ ಕೂಡ ಬೇರೆ ರಾಜ್ಯಗಳಿಗೆ ಹೋಲಿಸಿದರೆ ತೀರಾ ಕಡಿಮೆ. ಉದಾಹರಣೆಯಾಗಿ ನೋಡುವುದಾದರೆ ಇಲ್ಲಿನ ಬೀಡಿ ಸುತ್ತುವ ಕೆಲಸಗಾರರಿಗೆ ೧೦೦೦ ಬೀಡಿಗೆ ಸಿಗುವ ಸಂಬಳ ಕೇವಲ ೩೮ ರೂಪಾಯಿ ಮಾತ್ರ. ಈ ೩೮ರೂ.ನಲ್ಲಿ ಸಾಗಾಟದ ಖರ್ಚು ಎಂದು ನಾಲ್ಕು ರೂಪಾಯಿ ಕಡಿತವೂ ಆಗುತ್ತದೆ. ಅಂದರೆ ಈ ಕೆಲಸಗಾರರು ೧೦೦೦ ಬೀಡಿ ಸುತ್ತಿದರೆ ಅವರ ಕೈಯಲ್ಲುಳಿವ ಸಂಬಳ ಮೊತ್ತ ಬರೀ ೩೪ ರೂಪಾಯಿ. ಕೇರಳದಲ್ಲಿ ೧೦೦೦ ಬೀಡಿ ಸುತ್ತಿದರೆ ರೂ.೭೦ ಸಿಗುತ್ತದೆ. ಕರ್ನಾಟಕದಲ್ಲಿ ರೂ. ೬೬ ಸಿಗಬೇಕಾದಲ್ಲಿ ಈಗ ರೂ. ೫೫ ಮಾತ್ರ ಸಿಗುತ್ತಿದೆ. ಈ ವೇತನದಲ್ಲಿರುವ ತಾರತಮ್ಯವು ಅಲ್ಲಿಯ ಬಡಪಾಯಿಗಳ ಜೀವನ, ಹಾಗೆಯೇ ಸಾಮಾಜಿಕ ಪರಿಸ್ಥಿತಿಗಳಲ್ಲಿಯೂ ಪ್ರತಿಬಿಂಬಿಸಲ್ಪಡುತ್ತದೆ. ಬಡತನದ ಕಷ್ಟ ಸಂಕಷ್ಟಗಳನ್ನು ಕಣ್ಣಾರೆ ನೋಡಬೇಕಾದರೆ ಒರಿಸ್ಸಾದ ಗ್ರಾಮೀಣ ಪ್ರದೇಶಗಳಿಗೆ ಕಾಲಿಡಬೇಕು. ನೀರುದ್ಯೋಗವು ಇಲ್ಲಿನ ಬಹುಮಂದಿಯನ್ನು ಮುಂಬೈ, ಕೋಲ್ಕತ್ತ, ಡೆಲ್ಲಿಯಂಥ ಮಹಾನಗರಗಳ ಕೊಳಚೆ ಪ್ರದೇಶಗಳಿಗೆ ಅಟ್ಟುತ್ತಿದೆ. ಮುಂಬೈ ನಗರವೊಂದಕ್ಕೆ ದಿನಂಪ್ರತಿ ೧೫೦ ಬಡ ಕುಟುಂಬಗಳು ವಲಸೆ ಹೋಗುತ್ತಿವೆ ಎಂಬುದು ಅಧಿಕೃತ ಲೆಕ್ಕವಾಗಿದೆ. ಇವರಲ್ಲಿ ಒರಿಸ್ಸಾ ರಾಜ್ಯದ ಸಂಸಾರಗಳ ಪಾಲೇ ಗಣನೀಯ ಎಂಬುದು ಕಟುಸತ್ಯ.

ಒರಿಸ್ಸಾದಲ್ಲಿ ಇಂದು ಬೆಳೆಯುತ್ತಿರುವ ಒಂದೇ ಒಂದು ಉದ್ಯೋಗವೆಂದರೆ ಜಾತಿ ಜಾತಿಗಳಲ್ಲಿನ ಜಗಳ ಮತ್ತು ಸಂಘರ್ಷ. ಈ ಜಗಳ ಅತಿಯಾದ ಹಿಂಸಾಚಾರಗಳಿಂದ ಸಂಕಷ್ಟಕ್ಕೆ ಸಿಲುಕಿರುವವರೆಂದರೆ ಜಾತಿಯ ಲೆಕ್ಕದಲ್ಲಿ ಅತಿ ಕೀಳ್ಮಟ್ಟದಲ್ಲಿರುವವರು.

ಎರಡು ತಿಂಗಳ ಹಿಂದೆ ದಲಿತ ಬಾಲಕಿ ಒಬ್ಬಳು ಭುವನೇಶ್ವರ ನಗರದ ಹೊರಗಿನ ಪ್ರದೇಶದಲ್ಲಿ ಸೈಕಲ್ ಸವಾರಿಮಾಡಿದ್ದಳು. ಇದನ್ನು ಕಂಡ ಅಲ್ಲಿಯ ಮೇಲ್ಜಾತಿಯವರು, ಅವಳ ಅಪ್ಪ-ಅಮ್ಮನನ್ನು ಕರೆಸಿದರು. ಬಾಲಕಿ ಸೈಕಲ್ ಬಿಟ್ಟಿದ್ದು ತಪ್ಪು ಆದ್ದರಿಂದ ಕ್ಷಮೆ ಕೇಳಬೇಕೆಂದು ಈ ಮೇಲ್ಜಾತಿಯ ಜನರು ತೀರ್ಪಿತ್ತರು. ಈ ಬಡ ಕುಟುಂಬ ಅಲ್ಲಿ ಉಳಿಯಬೇಕಾದರೆ ಅವರು ಕ್ಷಮೆಯಾಚನೆ ಮಾಡಲೇಬೇಕಾಯಿತು.

ಒರಿಸ್ಸಾದ ಪೂರಿ ಜಿಲ್ಲೆಯಲ್ಲಿ ಮೇಲ್ಜಾತಿಯ ಹಿಂದು ಯುವಕರು ೫ ಮಂದಿ ಕ್ಷೌರಿಕ ಜಾತಿಯ ಮಹಿಳೆಯರಿಗೆ ಉಪದ್ರವ ಕೊಡಲು ಶುರುಮಾಡಿದರು. ಆದರೆ ಈ ಯುವಕರ ದುಷ್ಕೃತ್ಯ ಪ್ರಶ್ನಿಸುವವರೇ ಇಲ್ಲದಾಯಿತು. ಪೋಲಿಸರಿಗೆ ನೀಡಿದ ದೂರು ನಿಲ್ಲದಾಯಿತು. ಕಳೆದ ಸೆಪ್ಟೆಂಬರ್ ೧೯ರಂದು ಬುಬಾನುಪತಿ ಗ್ರಾಮದ ನಾಲ್ವರು ಮಹಿಳೆಯರನ್ನು ದಂಡಿಸಿ ರಸ್ತೆಯುದ್ದಕ್ಕೂ ಬೆತ್ತಲೆ ಮೆರವಣಿಗೆ ಮಾಡಲಾಯಿತು. ಮದುವೆ ಸಂದರ್ಭದಲ್ಲಿ ಈ ಮಹಿಳೆಯರು ಮೇಲ್ಜಾತಿಯ ಅಂದರೆ ಕಂದಾಯರ್ ಜಾತಿಯ ಮುಖಂಡರ ಹಾಗೂ ಅವರ ಸಂಬಂಧಿಕರ ಕಾಲು ತೊಳೆಯಲು ನಿರಾಕರಿಸಿದ್ದೇ ಈ ಅಮಾಯಕ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣ ಎನ್ನಿಸಿತು. ಕಾಲು ತೊಳೆಯುವ ಪದ್ಧತಿ ಈ ಕ್ಷೌರಿಕರು ನಡೆಸಲೇಬೇಕು. ಅದು ಪರಂಪರೆಯಾಗಿ ನಡೆದು ಬಂದ ಒಂದು ಪದ್ಧತಿ ಎಂಬುದೇ ಈ ಮೇಲ್ಜಾತಿಯರ ವಾದ. ಈ ಸ್ತ್ರೀಯರನ್ನು ಬೆತ್ತಲೆ ಮೆರವಣಿಗೆ ನಡೆಸಿದ ನಂತರ ಅವರನ್ನು ಒಂದು ಕೊಠಡಿಯಲ್ಲಿ ಕೂಡಿಹಾಕಲಾಯಿತು. ನಂತರ ಅವರ ಮನೆಗಳನ್ನು ಲೂಟಿ ಮಾಡಲಾಯಿತು. ಈ ಕ್ಷೌರಿಕರ ಮನೆಗಳಲ್ಲಿದ್ದ ಸಾಮಾನುಗಳನ್ನು ಲೂಟಿಮಾಡಿದರು. ಮತ್ತೆ ಕೆಲವನ್ನು ಧ್ವಂಸ ಮಾಡಿದರು.

ಕ್ಷೌರಿಕರ ಒಂದು ಮನೆಯಲ್ಲಿ ಮಗಳ ಮದುವೆ ನಿಶ್ಚಯವಾಗಿತ್ತು. ಈ ಮದುವೆಗಾಗಿ ಸಂಗ್ರಹಿಸಿಟ್ಟಿದ್ದ ಎಲ್ಲಾ ವಸ್ತುಗಳನ್ನು ದೋಚಿಕೊಂಡು ಹೋದರು. ಈ ಮನೆಯ ಒಡತಿಯ ಹೆಸರು ಪಾತನಾ ಬರಿಕ್.

ಈ ಘಟನೆ ಖಂಡಿಸುವ ಸಲುವಾಗಿ ಕೆಲವು ಪ್ರಜ್ಞಾವಂತ ಸಮಾಜದ ತರುಣಿಯರು, ದೌರ್ಜನ್ಯಕ್ಕೊಳಗಾದ ಈ ಮಹಿಳೆಯರನ್ನೂ ಹಾಗೂ ಇತರರನ್ನು ಸೇರಿಸಿಕೊಂಡು ಭುವನೇಶ್ವರದಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರದರ್ಶನ ಯಶಸ್ವಿಯಾಯಿತು. ಆದರೆ ಈ ಪ್ರದರ್ಶನಕ್ಕೆ ವಿರೋಧ ವ್ಯಕ್ತ ಪಡಿಸಿದ ಮೇಲ್ಜಾತಿಯ ಮುಖಂಡರು, ಈ ಪ್ರದರ್ಶನದಲ್ಲಿ ಭಾಗವಹಿಸಿದ ಮಹಿಳೆಯರಿಗೆ ಜೀವಬೇದರಿಕೆ ಹಾಕಿದರು. ಅವರಿಗೆ ಮನೆಗಳಿಗೆ ಮರಳಲು ಅಡ್ಡಿ ಪಡಿಸಿದರು.

ಬೆದರಿಕೆ ಹಾಗೂ ಮನೆಗಳ ಲೂಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಜಾತಿಯ ೨೯ ಮಂದಿ ವಿರುದ್ಧ ಪೊಲೀಸರು ಆರೋಪ ಪಟ್ಟಿ ಸಿದ್ಧ ಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿದರು. ಆದರೆ ಅವರಲ್ಲಿ ೫ ಮಂದಿ ಬಂಧಿತರಾದ ಕೆಲವೇ ಕ್ಷಣಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾದರು. ಉಳಿದವರನ್ನು ಬಂಧಿಸುವ ಪ್ರಯತ್ನ ನಡೆಯಲೇ ಇಲ್ಲ. ಕೊನೆಗೆ ಈ ಪ್ರಕರಣ ಕುರಿತು ನೆಪಮಾತ್ರದ ತನಿಖೆ ನಡೆಸಿ ಸಾಕ್ಷಿ ಸರಿಯಾಗಲಿಲ್ಲ ಎಂದು ಅವರನ್ನು ಬಿಡುಗಡೆ ಮಾಡಲಾಯಿತು.

ಹದಿ ಬಂಧು ಬರಿಕ್ ಎಂಬ ವ್ಯಕ್ತಿಗೆ ಈಗ ೫೦ ವರ್ಷ ಪ್ರಾಯ ಸಂದಿದೆ. ೨೦೦೫ರ ಫೆಬ್ರವರಿ ತಿಂಗಳಲ್ಲಿ ಆತನ ಹಳ್ಳಿಯಲ್ಲಿ ಮೇಲ್ಜಾತಿಯವರ ಒಂದು ವಿವಾಹ ನಡೆಯಿತು. ಈ ಸಂದರ್ಭದಲ್ಲಿ ಹದಿ ಬಂಧು ಬರಿಕ್ ಮತ್ತು ಇನ್ನೋರ್ವ ೭೫ ವರ್ಷದ ಹಿರಿಯ ಕ್ಷೌರಿಕನ ಜೊತೆಗೂಡಿ ಈ ವಿವಾಹ ಸಂದರ್ಭದಲ್ಲಿ ಮದುವಣಿಗರ ಹಾಗೂ ಅವರ ಸಂಬಂಧಿಕರ ಕಾಲು ತೊಳೆಯಬೇಕೆಂದು ಅವರಿಗೆ ಅಪ್ಪಣೆಯಾಗಿತ್ತು.

ಆದರೆ ಈ ಇರ್ವರು ಆ ದಿವಸ ಈ ಕಾರ್ಯಕ್ಕೆ ಹಾಜರಾಗಲಿಲ್ಲ. ಆದರೆ ಅವರನ್ನು ಹುಡುಕಿ ತಂದು ದಂಡಿಸಲಾಯಿತು. ಬಳಿಕ ಗ್ರಾಮದ ಎಲ್ಲಾ ಕ್ಷೌರಿಕ ಕುಟುಂಬಗಳಿಗೂ ಬಹಿಷ್ಕಾರ ಹಾಕಲಾಯಿತು. ಅವರು ಗ್ರಾಮದ ಟ್ಯೂಬು ಬಾವಿಗಳಿಂದ ನೀರೆತ್ತಕೂಡದು, ಗ್ರಾಮದಲ್ಲಿರುವ ಅಂಗಡಿಗಳಿಂದ ದಿನಸಿ ಖರೀದಿಸಕೂಡದು, ಗ್ರಾಮದ ದಾರಿಗಳಲ್ಲಿ ನಡೆದಾಡ ಕೂಡದು ಎಂಬ ಕಟ್ಟಳೆ ವಿಧಿಸಲಾಯಿತು.

ಈ ಹದಿ ಬಂಧು, ಪತ್ರಿಕಾ ಪ್ರತಿನಿಧಿಗಳನ್ನು ಭೇಟಿಯಾದಾಗ "ನನಗೆ ನನ್ನ ಮನೆಗೆ ಹೋಗಲು ಭಯವಾಗುತ್ತದೆ. ಗ್ರಾಮದ ಮೇಲ್ಜಾತಿಯ ಯುವಕರು ನನ್ನನ್ನು ಹಿಂಸೆ ಕೊಡಲು ಕಾಯ್ದುಕೊಂಡಿದ್ದಾರೆ. ನಮ್ಮ ಮಕ್ಕಳು ಈಗೀಗ ಅಲ್ಪಸ್ವಲ್ಪ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಮೊದಲಿನಂತೆ ಈ ಮೇಲ್ಜಾತಿಯವರ ಮದುವೆ ಸಮಾರಂಭಗಳಲ್ಲಿ ಮದುಮಗನ ಹಾಗೂ ಆತನ ಬಂಧುಗಳ ಕಾಲು ತೊಳೆಯಲು ಹಾಗೂ ಮದುವೆ ಸಮಾರಾಧನೆ ಬಳಿಕ ಎಲೆ ಎತ್ತಲು, ಊಟದ ಸ್ಥಳಗಳನ್ನು ಸ್ವಚ್ಛಗೊಳಿಸಲು.... ಇದಕ್ಕೆಲ್ಲ ವಿದ್ಯಾವಂತ ಮಕ್ಕಳು ಸಿದ್ಧರಿಲ್ಲ. ಇದರಿಂದಾಗಿ ಮುದುಕರಾಗಿರುವ ನಾವು

ಈ ಮೇಲ್ಜಾತಿಯವರ ಹಿಂಸಾಚಾರಗಳಿಗೆ ಗುರಿಯಾಗುತಿದ್ದೇವೆ" ಎಂದು ಹೇಳಿದರು.

ಇತ್ತೀಚಿನ ಕೆಲವು ವರ್ಷಗಳಿಂದ ಈ ಕೆಲಸ ಮಾಡಲು ಕ್ಷೌರಿಕರು ನಿರಾಕರಿಸುತ್ತಿದ್ದಾರೆ. ಆದರೆ ಹಿಂದಿನವರು ಮೇಲ್ಜಾತಿಯವರ ಬಲತ್ಕಾರಕ್ಕೆ ಮಣಿದು ಈ ಕೆಲಸ ಮಾಡಿಕೊಂಡು ಬರುತ್ತಿದ್ದರು. ಇಂದು ಪರಿಸ್ಥಿತಿ ಬದಲಾಗಿದೆ. ಮುಖ್ಯವಾಗಿ ಈ ಜನಾಂಗದ ಸ್ವತಂತ್ರ ಹಂಬಲ ತೀವ್ರಗೊಂಡಿದೆ. ಈ ತಿಳುವಳಿಕೆಯಿಂದ ಅವರೀಗ ಮೇಲ್ಜಾತಿಯವರ ಗುಲಾಮರಾಗಿರಲು ಸಿದ್ಧರಿಲ್ಲ. ಇದಕ್ಕೆ ಪ್ರತಿಯಾಗಿ ಮೇಲ್ಜಾತಿ ಯುವಕರು ಸೇಡು ಸಾಧಿಸುವ ಕೃತ್ಯಕ್ಕಿಳಿದಿದ್ದಾರೆ.

ಬೂಬನಪಟ್ಟಿ ಗ್ರಾಮದಲ್ಲಿ ಒಟ್ಟು ೬೦ ಕುಟುಂಬಗಳಿವೆ. ಈ ಪೈಕಿ ನಾಲ್ಕು ಕುಟುಂಬಗಳು ಕ್ಷೌರಿಕರ ಪಂಗಡಕ್ಕೆ ಸೇರಿದವುಗಳಾಗಿವೆ. ಅಲ್ಪ ಸಂಖ್ಯಾತರಾಗಿರುವ ಸಮುದಾಯವನ್ನು ಬಗ್ಗು ಬಡಿಯುವುದು ಸುಲಭ. ಕೆಲಸ ಇಷ್ಟವಾಗದಿದ್ದರೂ ಅವರ ನಿಸ್ಸಹಾಯಕತೆ ಅವರನ್ನು ಈ ಕೆಲಸ ಮಾಡಲು ಒಪ್ಪಿಸುತ್ತದೆ. ಹೀಗೆನ್ನುವಾಗ ಈ ಅವಸ್ಥೆ ಬಾಬನಪಟ್ಟಿ ಗ್ರಾಮಕ್ಕೆ ಮಾತ್ರ ಸೀಮಿತವಾದದ್ದು ಎಂದು ಗ್ರಹಿಸುವುದು ಶುದ್ಧ ತಪ್ಪು. ಒರಿಸ್ಸಾದ ಅನೇಕ ಜಿಲ್ಲೆಗಳ ಗ್ರಾಮಗಳಲ್ಲಿನ ಕಥೆಯೂ ಇದೇ ಆಗಿದೆ. ಕೀಳು ಜಾತಿಯವರು ಮೇಲ್ಜಾತಿಯವರ ಸೇವೆಗಾಗಿಯೇ ಜನ್ಮ ತಾಳಿದ್ದು ಎಂಬ ಕ್ರೂರ ಭಾವನೆ ಅಲ್ಲಿಯ ಸಮಾಜಗಳಲ್ಲಿ ಬೇರೂರಿದೆ. ಈ ಕಾರಣವಾಗಿಯೇ ಕೆಳ ಜಾತಿಗಳ ಮೇಲಿನ ದೌರ್ಜನ್ಯಗಳನ್ನು ಅಂದುಕೊಂಡಷ್ಟು ಸುಲಭವಾಗಿ ತಡೆಯುವುದು ಕಷ್ಟಸಾಧ್ಯ ಎನ್ನಿಸಿದೆ. ಕೆಳಜಾತಿಗಳಲ್ಲಿ ದೌರ್ಜನ್ಯ ಪ್ರತಿಭಟಿಸುವ ಮನೋಭಾವ ಜಾಗೃತಗೊಂಡಂತೆ ಮೇಲ್ಜಾತಿ ಜನಗಳು ತಮ್ಮ ಬಲತ್ಕಾರಗಳನ್ನು ಹೆಚ್ಚಿಸುತ್ತಾ ಬರುತಿದ್ದಾರೆ. ಇವರಿಂದ ಹಿಂಸಾಚಾರಗಳೂ ಅಧಿಕವಾಗುತ್ತಿವೆ.

೧೯೯೨ ರಲ್ಲಿ ಸಾನಾ ಬರಿಕ್ ಎಂಬ ಕ್ಷೌರಿಕನನ್ನು ಹಿಂಸಿಸಿದ ಸುದ್ದಿ ಇಡೀ ಜಿಲ್ಲೆಯಾದ್ಯಂತ ಹಬ್ಬಿತ್ತು. ಒರಿಸ್ಸಾದ ಮುಖ್ಯ ಮತ್ತು ಪವಿತ್ರ ಸ್ಥಳವೆಂದು ಪರಿಗಣಿಸಲಾಗುವ ಪೂರಿಯಲ್ಲಿ ೧೯೮೮ರಲ್ಲಿ ಜಲಂಧರ ಬರಿಕ್‌ನ ತಂದೆ ಬರಂಬಾಕ್ ಬರಿಕ್ ಎಂಬಾತನನ್ನು ದನಕ್ಕೆ ಬಡಿದಂತೆ ಬಡಿದು ಹಿಂಸಿಸಲಾಯಿತು. ಕೈಗಳನ್ನು ನೆಲಕ್ಕೂರಿ ನಡೆಸುವ ಚಿತ್ರ ಹಿಂಸೆಗೆ ಒಳಪಡಿಸಲಾಗಿತು. ಈ ಪ್ರಸಂಗ ನಡೆಯುತ್ತಿದ್ದಾಗ ಮೇಲ್ಜಾತಿಯ ಯುವಕ ಬರಂಬಾರ್ ಬರಿಕ್‌ನ ಮೇಲೆ ಕುಳಿತು ಚಾಟಿಯಿಂದ ಬಾರಿಸುತ್ತಿದ್ದ. ಈ ಶಿಕ್ಷೆಯಿಂದ ತಲ್ಲಣಿಸಿದ ಕ್ಷೌರಿಕ ಬಳಿಕ ಹಾಸಿಗೆ ಹಿಡಿದು ಹತನಾದ.

ಈ ಘಟನೆಯಿಂದ ದುಃಖಿತರಾದ ಆ ಜಿಲ್ಲೆಯ ಕ್ಷೌರಿಕರು ಒಂದು ಸಂಘ ಕಟ್ಟಿದರು. ಜಿಲ್ಲಾ ಕಲೆಕ್ಟರ್ ಕಚೇರಿ ಮುಂದೆ ೨೭ ದಿವಸಗಳ ಕಾಲ ಧರಣಿ ನಡೆಸಿದರು. ನಂತರ ಜಿಲ್ಲೆಯ ಕಲೆಕ್ಟರ್ ಸಾಹೇಬರು ಉಭಯ ಕಡೆಯ ಪ್ರತಿನಿಧಿಗಳನ್ನು ಕರೆದು ಸಭೆ ನಡೆಸಿದರು. ಈ ಸಭೆ ನಡೆದಿದ್ದು ೨೦೦೩ ರಲ್ಲಿ.

ಮೇಲ್ಜಾತಿಯವರು, ಕೆಳಜಾತಿಯವರನ್ನು ಈ ಕೆಲಸಗಳಿಗಾಗಿ ಒತ್ತಾಯ ಮಾಡಕೂಡದು, ಈ ಕೆಲಸಗಳನ್ನು ಮಾಡಲು ತಯಾರಿರುವ ಈ ಕೆಳ ಜಾತಿಯ ವ್ಯಕ್ತಿಗಳಿಗೆ, ಅವರ ಜಾತಿಯಲ್ಲಿನ ಇತರರು ಕಡೆಗಣಿಸಬಾರದು ಎಂಬ ಶರತ್ತುಗಳ ಒಪ್ಪಂದವಾಯಿತು. ಆದರೆ ಈ ಒಪ್ಪಂದದಿಂದ ಸಮಸ್ಯೆಗಳ ನಿವಾರಣೆ ಆಗಲಿಲ್ಲ. ಈ ಜಿಲ್ಲೆಗಳ ಜೀವನ ಕ್ರಮ ಇನ್ನೂ ಅದ್ವಾನದ ಅವಸ್ಥೆಯಲ್ಲಿಯೇ ಇದೆ.

ಕಳೆದ ಸೆಪ್ಟೆಂಬರ್ ೧೯ರಂದು ಬೂಬಾನುಪತಿ ಗ್ರಾಮದ ನಾಲ್ವರು ಮಹಿಳೆಯರನ್ನು ದಂಡಿಸಿ ರಸ್ತೆಯುದ್ದಕ್ಕೂ ಬೆತ್ತಲೆ ಮೆರವಣಿಗೆ ಮಾಡಲಾಯಿತು. ಮದುವೆ ಸಂದರ್ಭದಲ್ಲಿ ಈ ಮಹಿಳೆಯರು ಮೇಲ್ಜಾತಿಯ ಅಂದರೆ ಕಂದಾಯರ್ ಜಾತಿಯ ಮುಖಂಡರ ಹಾಗೂ ಅವರ ಸಂಬಂಧಿಕರ ಕಾಲುತೊಳೆಯಲು ನಿರಾಕರಿಸಿದ್ದೇ ಈ ಅಮಾಯಕ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣ ಎನ್ನಿಸಿತು. ಕಾಲು ತೊಳೆಯುವ ಪದ್ಧತಿ ಈ ಕ್ಷೌರಿಕರು ನಡೆಸಲೇಬೇಕು. ಅದು ಪರಂಪರೆಯಾಗಿ ನಡೆದು ಬಂದ ಒಂದು ಪದ್ಧತಿ ಎಂಬುದೇ ಈ ಮೇಲ್ಜಾತಿಯರ ವಾದ. ಈ ಸ್ತ್ರೀಯರನ್ನು ಬೆತ್ತಲೆ ಮೆರವಣಿಗೆ ನಡೆಸಿದ ನಂತರ ಅವರನ್ನು ಒಂದು ಕೊಠಡಿಯಲ್ಲಿ ಕೂಡಿಹಾಕಲಾಯಿತು. ನಂತರ ಅವರ ಮನೆಗಳನ್ನು ಲೂಟಿ ಮಾಡಲಾಯಿತು. ಈ ಕ್ಷೌರಿಕರ ಮನೆಗಳಲ್ಲಿದ್ದ ಸಾಮಾನುಗಳನ್ನು ಲೂಟಿಮಾಡಿದರು. ಮತ್ತೆ ಕೆಲವನ್ನು ಧ್ವಂಸ ಮಾಡಿದರು.

ಇಂದಿಗೂ ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ಒತ್ತಾಯಕ್ಕೆ ಬಗ್ಗದವರ ವಿರುದ್ಧ ಈಗಲೂ ದೌರ್ಜನ್ಯಗಳು ನಡೆಯುತ್ತಲೇ ಇವೆ!

ಗುಲಾಮಗಿರಿ ತೊಡೆದುಹಾಕುವ, ಹಾಗೆಯೇ ಅಂತಹ ಒತ್ತಾಯ, ಬಲತ್ಕಾರಗಳನ್ನು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಸೂಕ್ತ ಕಾಯಿದೆ ಇದೆ. ಆದರೆ ಈ ಒತ್ತಾಯವನ್ನು ಸರಕಾರವಾಗಲೀ ಅಥವಾ ಅಧಿಕಾರಿಗಳಾಗಲೀ ಗಂಭೀರವಾಗಿ ಪರಿಗಣಿಸಿಲ್ಲ. ಗುಲಾಮಿ ಪದ್ಧತಿಯನ್ನು ಎರಡು ಸಮುದಾಯಗಳ ನಡುವಿನ ಜಗಳವೆಂದೇ ಎಣಿಸಲಾಗುತ್ತಿದೆ.

ಪರಂಪರೆಯ ಹೆಸರಲ್ಲಿ ದಲಿತರ ವಿರುದ್ಧ ನಡೆಯುತ್ತಿರುವ ದಬ್ಬಾಳಿಕೆಗಳು ಮುಂದುವರಿದುಕೊಂಡು ಹೋಗುತ್ತಿರುವುದಕ್ಕೆ ಸಂಬಂಧಪಟ್ಟ ಸರಕಾರಗಳ ನಿರ್ಲಕ್ಷ್ಯ ಧೋರಣೆಯೇ ಕಾರಣ. ಆರೋಪಿಗಳಿಗೆ ತಕ್ಕ ದಂಡನೆಯಾದರೆ ಮತ್ತೆ ಇಂಥ ಘಟನೆಗಳು ಮರುಗಳಿಸುವ ಸಾಧ್ಯತೆಗಳು ಕ್ಷೀಣಿಸುತ್ತವೆ. ಆದರೆ ಅದು ಆಗುತ್ತಿಲ್ಲ ಎನ್ನುವುದೇ ವಿಷಾದದ ಸಂಗತಿ.

ದಲಿತರ ವಿರುದ್ಧದ ಹೀನ ಕೃತ್ಯಗಳನ್ನು ನಿಗ್ರಹಿಸಬೇಕಾದ ಅಧಿಕಾರಿಗಳೇ ಅವುಗಳನ್ನು ಮುಚ್ಚಿ ಹಾಕುವ ಕೆಲಸ ಮಾಡುತ್ತಿದ್ದಾರೆ.

ಅಸ್ಪೃಶ್ಯರ ವಿರುದ್ಧದ ದುಷ್ಕೃತ್ಯಗಳ ಕುರಿತು ಒರಿಸ್ಸಾದ ಪತ್ರಿಕೆಗಳಲ್ಲಿ ದಿನಾವೊಂದಿಲ್ಲೊಂದು ವರದಿ ಇರುತ್ತದೆ. ಲೇಖನಗಳೂ ಪ್ರಕಟವಾಗುತ್ತಿವೆ. ೨೦೦೦ನೇ ಇಸ್ವಿ ಮಾರ್ಚ್ ತಿಂಗಳಲ್ಲಿ ಬ್ರಹ್ಮಗಿರಿ ಎಂಬ ಸ್ಥಳದಲ್ಲಿ ಅಗಸರ ಸಮುದಾಯದ ವ್ಯಕ್ತಿಯೋರ್ವನ ವಿವಾಹಕ್ಕೆ ಟೆಂಟ್ ಹಾಕಲಾಗಿತ್ತು. ಈ ಅಗಸ ಬೇರೆ ಹಿಂದಿನ ಅಗಸರಂತೆ ತಮಗೆ 'ಸಲಾಂ' ಹೊಡೆಯುತ್ತಿಲ್ಲವೆಂದು, ತಮ್ಮ ಆದೇಶಗಳನ್ನು ಪಾಲಿಸುತ್ತಿಲ್ಲವೆಂದೂ ಆ ಟೆಂಟ್‌ಗಳನ್ನು ಕಿತ್ತು ನಾಶ ಪಡಿಸಲಾಯಿತು.

೨೦೦೪ ರಲ್ಲಿ ಬೇಡಾನಾಯಕ ಎಂಬ ಹರಿಜನ ಯುವಕ, ಊರಿನ ಶಿವನ ಗುಡಿಯ ಬಳಿಯಿರುವ ನಂದಿ ವಿಗ್ರಹಕ್ಕೆ ನೀರೆರೆದು ಪ್ರಾರ್ಥಿಸಿದ ಎಂಬ ಕಾರಣಕ್ಕೆ ಆತನ ಮೇಲೆ ಕ್ರೂರ ಧಾಳಿ ನಡೆಸಲಾಯಿತು. ನಂತರವೂ ಮೇಲ್ಜಾತಿಯವರಿಂದ ಆತನಿಗೆ ಚಿತ್ರಹಿಂಸೆ ನೀಡಲಾಯಿತು.

ನಮ್ಮ ಸಂವಿಧಾನ ಮನುಷ್ಯರ ಮಧ್ಯೆ ಭೇದ ಎಣಿಸುವುದಿಲ್ಲ. ದುರ್ಬಲರ ಮೇಲಿನ ಬಲತ್ಕಾರ ಒಪ್ಪುವುದಿಲ್ಲ. ಪ್ರತಿ ಪ್ರಜೆಗೂ ಸೂಕ್ತ ಹಕ್ಕು-ಬಾಧ್ಯತೆಗಳನ್ನು ದಯಪಾಲಿಸಿದೆ. ಆದರೂ ಸಂಕಷ್ಟಗಳಿಗೆ ಇನ್ನೂ ಪರಿಹಾರ ದೊರಕಿಲ್ಲ ಜಾತಿ- ಜಾತಿ ನಡುವಿನ ತಾರತಮ್ಯ ತೊಲಗಿಲ್ಲ. ಜಾತಿ ದ್ವೇಷ ಅಂತಿಮವಾಗಿ ಮುಗಿಯದ ಸಂಘರ್ಷಕ್ಕೆ ದಾರಿಮಾಡಿಕೊಟ್ಟಿದೆ.

ಗುಲಾಮಗಿರಿಯಂಥ ದುಷ್ಟ ಪದ್ಧತಿ ತೊಡೆದು ಹಾಕಬೇಕಾದರೆ ಕೆಳಜಾತಿ ಜನ ಸಮುದಾಯ ಸಂಘಟಿತ ಹೋರಾಟ ನಡೆಸುವುದೊಂದೇ ಮಾರ್ಗ. ಜಾತಿ ಜಾಗೃತಿಗಿಂತ ವರ್ಗ ಜಾಗೃತಿ ಈ ಬಡಪಾಯಿ ಶೋಷಿತ ಜನರ ಸಂಕಷ್ಟ ನಿವಾರಣೆಗೆ ಹೆಚ್ಚು ಸಹಕಾರಿ. □

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ರಾಜ್ಯಾದ್ಯಂತ ಸಾಮಾಜಿಕ ನ್ಯಾಯವಾದಿಗಳು ಆಘಾತಕ್ಕೊಳಗಾಗಿ, ದುಃಖಿತರಾಗಿದ್ದಾರೆ. ಮತ್ತೊಂದೆಡೆ ಲಾಲು ಪ್ರಸಾದ್ ಯಾದವ್ ಸೋತದ್ದನ್ನು ದಲಿತರು, ಅತ್ಯಂತ ಹಿಂದುಳಿದವರು ಮತ್ತು ಬಡಜನರು ಖುಷಿ ಪಡುತ್ತಿದ್ದಾರೆ. ಹೇಗಿದ್ದರೂ, ದಲಿತರು, ಅತ್ಯಂತ ಹಿಂದುಳಿದವರು ಮತ್ತು ಬಡಜನ ಜಯವನ್ನಂತೂ ಪಡೆದಿಲ್ಲವಲ್ಲ! ಇದೊಂದು ಸಣ್ಣ ಪ್ರಮಾಣದ ಹಗೆತನವಷ್ಟೆ – ಅವರ ಸಂಕಟವನ್ನು ಈ ಮನುಷ್ಯ ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡನ್ನಲ್ಲದೆ, ಅವರಿಂದ ಮತಗಳನ್ನು ಪಡೆದು ಬಿಹಾರವನ್ನು ಹಾಳುಗೆಡವಲು ಹೊರಟ್ಟಿದ್ದ. ಆದರೀಗ ಸಾಂಪ್ರದಾಯಿಕ ತಲೆಕಡಿಯುವ ಬೇಟೆಯಲ್ಲಿದ್ದ ಭೂಮಿಹಾರ್ (ರಣವೀರ ಸೇನೆಯ ಸ್ಥಾಪಕರು) ಹಾಗೂ ಕುರ್ಮಿಗಳು (ಬೆಲ್ಚಿ ಹತ್ಯಾಕಾಂಡದ ರೂವಾರಿಗಳು) ಆತನನ್ನು ಧೂಳೀಪಟಗೈದು ಬಿಹಾರನ್ನು ಆಳಲು ಹೊರಟಿದ್ದಾರೆ.

ಪಾಸ್ವಾನ್, ಒಬ್ಬ ಮುಸ್ಲಿಂ ಮುಖ್ಯಮಂತ್ರಿಯಾಗಬೇಕೆಂದು ಒತ್ತಾಯ ಮುಂದಿಟ್ಟಾಗ, "ಆ ಸಾಮಾಜಿಕ ಖದೀಮನನ್ನು ಒದ್ದೋಡಿಸಿ" ಎಂಬ ಗುರಿ, ಯಾರ ವಿರುದ್ಧವಿದೆಯೆಂಬುದರ ಬಗ್ಗೆ ತಮಗೆ ತಾವೇ ಸ್ಪಷ್ಟವಾಗಿ ತಿಳಿದಿದ್ದರು, ರಾಜಕೀಯವಾಗಿ ಅದು ಆತ್ಮಹತ್ಯೆ ಎಂದು ಗೊತ್ತಿದ್ದರೂ ಸಹ ಅನ್ಯ ಮಾರ್ಗ ಗೋಚರಿಸಿರಲಿಲ್ಲ. ಮಂಡಲ್ ಜಾರಿಯಾಗುವಲ್ಲಿ ಮುಂಚೂಣಿಯಲ್ಲಿದ್ದ ಆತ, ದಲಿತ ಸಮುದಾಯದ ಬೆಂಬಲವನ್ನು ಲಾಲೂಗೆ ವ್ಯಕ್ತಪಡಿಸುವ ಮೂಲಕ ಆತನ ಆಡಳಿತಕ್ಕೆ ಸಾಮಾಜಿಕ ಸಮರ್ಥನೆಯನ್ನು ನೀಡಿದ್ದ. ಆದರೆ, ತನ್ನ 15 ವರ್ಷಗಳ ಸುದೀರ್ಘ ಆಡಳಿತ ಅವಧಿಯಲ್ಲಿ ದಲಿತರನ್ನು ಮತ್ತು ಪಾಸ್ವಾನ್‌ರನ್ನು ಪ್ರತ್ಯೇಕಿಸುವುದನ್ನೇ ಲಾಲು ತನ್ನ ಗುರಿಯಾಗಿಸಿಕೊಂಡಿದ್ದ.

ದಲಿತರು ಮತ್ತು ಅತ್ಯಂತ ಹಿಂದುಳಿದ ಜಾತಿಯವರೇ ಆಗಿದ್ದಾರೆ. ರಣವೀರ ಸೇನೆ ಪ್ರತಿಸಲವೂ ಆಕ್ರಮಣ ಮಾಡಿದಾಗ ಆಗುತ್ತಿದ್ದ ಸಾಮಾಜಿಕ ವಿಂಗಡನೆಗಳಿಂದ ಲಾಲು ಲಾಭ ಪಡೆಯುತ್ತಲೇ ಇದ್ದರು. ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಂದ ಕೂಡಿದ ದ್ವಿಜರೇ ರಣವೀರ ಸೇನೆಯ ನೇರ ಬೆಂಬಲಿಗರು. ಅದರ ಪರೋಕ್ಷ ಬೆಂಬಲಿಗರೆಂದರೆ ಜೆ.ಡಿ(ಯು)-ಬಿಜೆಪಿಯ ಒಕ್ಕೂಟವೇ ಆಗಿದೆ. ಚುನಾವಣೆಯ ಸೆಣಸಾಟದಲ್ಲಿ ನಿತೀಶ್ ಕುಮಾರ್ ಕುರ್ಮಿಗಳೆಂಬ ದ್ವಿಜೇತರನ್ನು ಹೊರತು ಪಡಿಸಿದಲ್ಲಿ ಉಳಿದವರೆಲ್ಲಾ ಲಾಲುನ ಪರವಾಗಿ ನಿಲ್ಲುತ್ತಿದ್ದರು. ಮತ್ತೊಂದೆಡೆ ನಕ್ಸಲೀಯರು ಆಕ್ರಮಣ ನಡೆಸಿದಾಗ ದ್ವಿಜರೆಲ್ಲಾ ಎನ್‌ಡಿಎನ್ ಪರವಾಗುತ್ತಿದ್ದರು. ಅಲ್ಪಸಂಖ್ಯೆಯಲ್ಲಿದ್ದ ಎನ್‌ಡಿಎ ಸೋತು, ಲಾಲು ಜಯದ ನಗೆಬೀರುತ್ತಿದ್ದ. ಬಿಹಾರವನ್ನು ಗಮನಿಸುತ್ತಿದ್ದ ಅನೇಕರ ಪ್ರಕಾರ ಜೆಹನಾಬಾದ್‌ನ ಜೈಲ್ ಧಂಗೆಯು ಲಾಲುವಿನ ರಾಜಕೀಯ ತಂತ್ರವೇ ಹೊರತು ಕ್ರಾಂತಿಯೇನೂ ಅಲ್ಲ.

ಲಾಲೂನ ಬೆಂಬಲಿಗರು, ಪಕ್ಷದೊಳಗಿನ ಸಂಚಿನಿಂದಾಗಿ ಆತ ಸೋತನೆಂದು ವಾದಿಸುತ್ತಾರೆ. ಅದರ ಪ್ರಕಾರ ಆತ ಫೆಬ್ರವರಿ 2005 ರಲ್ಲೇ ಸೋಲಬೇಕಾಗಿತ್ತು. ಈ ಫೆಬ್ರವರಿ ಮತ್ತು ನವೆಂಬರ್ 2005 ನಡುವೆ ರಾಷ್ಟ್ರಪತಿಯವರ ಆಡಳಿತ ಮತ್ತು ಬೂಟಾ ಸಿಂಗ್‌ರ ದುರ್ನಡತೆಯನ್ನು ಹೊರತುಪಡಿಸಿದರೆ ಅಂತಹ ಬದಲಾವಣೆಯೇನೂ ಆಗಿರಲಿಲ್ಲ. ಕಳೆದ ಒಂದುವರೆ ದಶಕಗಳಿಂದ ಲಾಲುನ ದುರ್ನಡತೆಯಿರುವಾಗಲೂ, ಫೆಬ್ರವರಿ 2005 ರಲ್ಲಿ ಆತನ ಆರ್‌ಜೆಡಿ ಅತಿದೊಡ್ಡ ಪಕ್ಷವಾಗಿಯೇ ಹೊರಹೊಮ್ಮಿತ್ತು. ಅಷ್ಟೊತ್ತಿಗಾಗಲೇ ಮುಖ್ಯಮಂತ್ರಿಯೆಂದು ಸಾರಿಕೊಂಡಿದ್ದ ನಿತೀಶ್ ಕುಮಾರ್, ಹೊಸದಾಗಿ ಕಂಡುಕೊಂಡ ಸಂಕೇತವಾದ ಕಾರಪೂರಿ ಠಾಕೂರ್‌ನೊಡನೆ ಪ್ರಚಾರ ಕೈಗೊಂಡ. ಕಾರಪೂರಿ ಠಾಕೂರ್ ಕ್ಷೌರಿಕ ಸಮುದಾಯದವನಾಗಿದ್ದು, ಎರಡುಬಾರಿ ಬಿಹಾರದ ಮುಖ್ಯಮಂತ್ರಿಯಾಗಿದ್ದು ಅತ್ಯಂತ ಹಿಂದುಳಿದ ನಾಯಕನಾಗಿದ್ದರಿಂದ ಒಬಿಸಿ ಮೀಸಲಾತಿಯಲ್ಲಿ ಒಳಮೀಸಲಾತಿಗಾಗಿ ಒತ್ತಾಯಿಸಿದ್ದ. ಅದು ಕಾರಪೂರಿ ಸೂತ್ರವೆಂದೇ ಪ್ರಸಿದ್ಧವಾಗಿ, ರಾಜ್ಯದಲ್ಲಿ ಒಬಿಸಿಗಳನ್ನು ಒಡೆಯುವಲ್ಲಿ ಯಶಸ್ಸು ಕಾಣುತ್ತದೆ.

ಜನಸಾಮಾನ್ಯರ ಆಕ್ರೋಶ

ಆದರೆ ಅತ್ಯಂತ ಹಿಂದುಳಿದ ಜಾತಿಗಳಾದ ಕ್ಷೌರಿಕ, ಆಚಾರಿ, ಬಡಗಿ, ಕುಂಬಾರ, ಕುರುಬ, ದೋಣಿಗಾರ, ಮಾಲಿ, ನಾಯಿಕ, ತೋಟಿ, ನೋಣಬ, ಕಾನಹಾರ – ಇವರೆಲ್ಲಾ ಲಾಲು ಪ್ರಸಾದ್ ವಿರುದ್ಧ ಧಂಗೆ ಎದ್ದರೇಕೆ?

ಭಾರತದಲ್ಲಿ ಈ ಹಿಂದುಳಿದ ಜಾತಿಗಳಿಲ್ಲದ ಹಳ್ಳಿಗಳಿಲ್ಲ. ಶೂದ್ರರೆಂಬ ಹಿಂದುಳಿದ ಜಾತಿಗಳಲ್ಲಿ ಈ ಅತ್ಯಂತ ಹಿಂದುಳಿದ ಜಾತಿಗಳು ತಮ್ಮ ಪಾರಂಪರಿಕ ಕಸುಬುಗಳಲ್ಲಿ ತೊಡಗಿರುವ ಸೇವಾ ವರ್ಗದವರಾಗಿದ್ದಾರೆ. ಇವರಿಲ್ಲದೆ ಈ ಪಾರಂಪರಿಕ ಆರ್ಥಿಕತೆ ಸ್ತಬ್ಧವಾಗುತ್ತದೆ. ಅಲ್ಲದೆ ಯಾವುದೇ ಹಿಂದೂ ವಿಧಿಗಳು ಪೂರ್ಣವಾಗಲಾರದು. ಆಧುನಿಕತೆಯ ಪ್ರವೇಶದೊಡನೆ ಇವರ ಕಸುಬುಗಳು ಜಡಗೊಂಡವು. ಶಿಕ್ಷಣ ಮತ್ತು ಆರ್ಥಿಕತೆಯಲ್ಲಿ ಇವರು ದಲಿತರಿಗಿಂತ ಕಡೆಯಾಗಿದ್ದಾರೆ. ಬಿಹಾರದ ಜನಸಂಖ್ಯೆಯಲ್ಲಿ ಶೇ.35ರಷ್ಟು ಅತ್ಯಂತ ಹಿಂದುಳಿದವರೇ ಇದ್ದಾರೆ. ಅಲ್ಲದೆ, ಮಂಡಲ್ ಮೀಸಲಾತಿಯ ಮುಖ್ಯಭಾಗವೇ ಇವರಾಗಿದ್ದಾರೆ. ಬಿಹಾರ ನಮಗೆಲ್ಲಾ ಗೊತ್ತಿರುವ ಹಾಗೆ ನರಹತ್ಯೆಯ ನಾಡಾಗಿದೆ. ಆದರೆ ಗೊತ್ತಿಲ್ಲದ ಸಂಗತಿಯೆಂದರೆ 1976-2001ರ ನಡುವೆ ಬಿಹಾರದಲ್ಲಿ 82 ನರಹತ್ಯೆ ಪ್ರಕರಣಗಳು ನಡೆದಿವೆ. ಅವುಗಳಲ್ಲಿ 60 ಪ್ರಕರಣಗಳು 1990-2001 – ಲಾಲೂವಿನ ಸಾಮಾಜಿಕ ನ್ಯಾಯದ ಆಡಳಿತಾವಧಿಯಲ್ಲಿ. ಕೆಲವು ಪ್ರಕರಣಗಳನ್ನು ಹೊರತು ಪಡಿಸಿದಲ್ಲಿ ಉಳಿದವೆಲ್ಲದರಲ್ಲಿ ಬಲಿಯಾದವರು

ಹೀಗಿರುವಲ್ಲಿ, ಲಾಲು ಮಂಡಲ್ ಆಶಯದೊಂದಿಗೆ ಆಡಳಿತ ಆರಂಭಿಸಿದಾಗ, ಅತ್ಯಂತ ಹಿಂದುಳಿದ ಜಾತಿಗಳು ರಾಷ್ಟ್ರಮಟ್ಟದಲ್ಲಿ ತಮ್ಮ ನಿರೀಕ್ಷೆಗಳು ಈಡೇರಿ, ರಾಜ್ಯದಲ್ಲಿ ಸಮಾಜಿಕ ನ್ಯಾಯ ಮತ್ತಷ್ಟು ಹೆಚ್ಚುತ್ತವೆಂದು ಆಶಿಸಿದ್ದವು. ಆದರೆ ಲಾಲೂ ಬೆಳೆಯಲಾರಂಭಿಸಿದಂತೆ ದಲಿತ ಮತ್ತು ಅತ್ಯಂತ ಹಿಂದುಳಿದ ಜಾತಿಗಳನ್ನು ಕಡೆಗಣಿಸಲಾರಂಭಿಸಿ, ಮುಸ್ಲಿಂ-ಯಾದವ ಸೂತ್ರವನ್ನು ಹೆಣೆಯಲಾರಂಭಿಸಿದ. ಈಗೇಕೆ ಮಾಡಿದ ಎಂಬುದನ್ನು ಆತನೇ ವಿವರಿಸಬೇಕು.

2000ರಲ್ಲಿ ನಡೆದ ಚುನಾವಣೆಗಳಲ್ಲೇ ಒಡಕು ಕಾಣಿಸಿಕೊಂಡಿತಾದರೂ, ಲಾಲು ಜಾತ್ಯತೀತ ಮಂತ್ರವನ್ನು ಹಾಡುತ್ತಾ ಹೇಗೋ ಉಳಿದುಕೊಂಡ. ಅನಂತರದಲ್ಲಿ ತನ್ನ ಚುನಾವಣೆಯ ಸಿದ್ಧಾಂತವೆಂಬಂತೆ ರಣವೀರ ಸೇನೆ-ನಕ್ಸಲೀಯ ಯುದ್ಧ ತಂತ್ರವನ್ನು ಬಳಸಿ ಯಶಸ್ವಿಯಾಗಲಾರಂಭಿಸಿದ್ದ. ಈ ತಂತ್ರ ಬೇಗನೇ ಗೊತ್ತಾ ದಾಕ್ಷಣ ಪಾಸ್ವಾನ್ ದಲಿತರಿಂದ ಪರ್ಯಾಯವೆಂಬಂತೆ ತನ್ನದೇ ಆದ ಪಕ್ಷವನ್ನು

ದಲಿತ್ ಡೈರಿ

ಭಾರತದಲ್ಲಿ ಈ ಹಿಂದುಳಿದ ಜಾತಿಗಳಿಲ್ಲದ ಹಳ್ಳಿಗಳಿಲ್ಲ. ಶೂದ್ರರೆಂಬ ಹಿಂದುಳಿದ ಜಾತಿಗಳಲ್ಲಿ ಈ ಅತ್ಯಂತ ಹಿಂದುಳಿದ ಜಾತಿಗಳು ತಮ್ಮ ಪಾರಂಪರಿಕ ಕಸುಬುಗಳಲ್ಲಿ ತೊಡಗಿರುವ ಸೇವಾ ವರ್ಗದವರಾಗಿದ್ದಾರೆ. ಇವರಿಲ್ಲದೆ ಈ ಪಾರಂಪರಿಕ ಆರ್ಥಿಕತೆ ಸ್ತಬ್ಧವಾಗುತ್ತದೆ. ಅಲ್ಲದೆ ಯಾವುದೇ ಹಿಂದೂ ವಿಧಿಗಳು ಪೂರ್ಣವಾಗಲಾರದು. ಆಧುನಿಕತೆಯ ಪ್ರವೇಶದೊಡನೆ ಇವರ ಕಸುಬುಗಳು ಜಡಗೊಂಡವು. ಶಿಕ್ಷಣ ಮತ್ತು ಆರ್ಥಿಕತೆಯಲ್ಲಿ ಇವರು ದಲಿತರಿಗಿಂತ ಕಡೆಯಾಗಿದ್ದಾರೆ. ಬಿಹಾರದ ಜನಸಂಖ್ಯೆಯಲ್ಲಿ ಶೇ.೩೫ರಷ್ಟು ಅತ್ಯಂತ ಹಿಂದುಳಿದವರೇ ಇದ್ದಾರೆ. ಅಲ್ಲದೆ, ಮಂಡಲ್ ಮೀಸಲಾತಿಯ ಮುಖ್ಯ ಭಾಗವೇ ಇವರಾಗಿದ್ದಾರೆ.

ಅನು: ಡಿ. ಡೊಮಿನಿಕ್

ಕಟ್ಟವ. ಅತ್ಯಂತ ಹಿಂದುಳಿದ ಜಾತಿಗಳನ್ನು ಎಲ್ಲರು ಬಿಟ್ಟವರಾಗಿರುವಾಗ, ಅವರ ನಾಡಿ ಬಡಿತವನ್ನು ಸರಿಯಾಗಿ ಗ್ರಹಿಸಿದ ನಿತೀಶ್ ಕಾರಪುರಿ ಸಂಕೇತದ ಮೊರೆಹೋಗುವ ಮೂಲಕ ಅತ್ಯಂತ ಹಿಂದುಳಿದ ಜಾತಿಗಳನ್ನು ತನ್ನ ಹಿಂದೆ ಬರುವಂತೆ ಮಾಡಿ ಕೊಂಡ.

ತಮಿಳು ನಾಡಿನ ದ್ರಾವಿಡ ಚಳುವಳಿ ತನ್ನ ಬ್ರಾಹ್ಮಣೇತರ ಚರಿತ್ರೆಯಲ್ಲಿ ಬಹು ದೊಡ್ಡ ನೈತಿಕ ಬಿಕ್ಕಟ್ಟನ್ನು ಎದುರಿಸುವಂತಾಯಿತು. ಬ್ರಾಹ್ಮಣರ ವಿರುದ್ಧ ಹೋರಾಟ ಮಾಡಿದವರ ವಿರುದ್ಧವೇ ದಲಿರೇಕೆ ತಮ್ಮದೇ ಆದ ಪಕ್ಷಗಳನ್ನು ಕಟ್ಟಿ ಹೋರಾಡುವಂತಾಯ್ತು? ಅದೇ ರೀತಿಯಲ್ಲಿ ಉತ್ತರದಲ್ಲಿ ಸಾಮಾಜಿಕ ನ್ಯಾಯ ಚಳುವಳಿಯ ಬ್ರಾಂಡಾದ ಮಂಡಲ್ ನೈತಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ದುರಂತವೆಂದರೆ ಈ ಸಾಮಾಜಿಕ ನ್ಯಾಯವೇ ಅತೀ ಶೋಷಿತರಾದ ದಲಿತರನ್ನು ಮತ್ತು ಅತ್ಯಂತ ಹಿಂದುಳಿದ ಜಾತಿಗಳನ್ನು ಕಡೆಗಣಿಸುವಂತಾಯಿತು. ಅಲ್ಲದೆ, ಸಿ.ಪಿ.ಎಂ ಜನಸಾ ಮಾನ್ಯ (ಪ್ರೊಲಿಟರೇಟ್)ರನ್ನು ಬಿಟ್ಟು ಮುಸ್ಲಿಂ-ಯಾದವ್ ಮೈತ್ರಿಯೊಡನೆ ಸೇರಿಕೊಂಡಿತಾದರೂ ಏಕೆ?

ವಿವರಣೆಯಿಲ್ಲದೆ ಕೂರಬೇಕೆ?

ಲಾಲೂ ಹಾಗೂ ಆತನ ಸಮಾಜವಾದಿ ಮುಸ್ಲಿಂ-ಯಾದವ್ ಮೈತ್ರಿಯನ್ನೇಕೆ ದಲಿತರು ಮತ್ತು ಅತ್ಯಂತ ಹಿಂದುಳಿದ ಜಾತಿಗಳು ತಿರಸ್ಕರಿಸಿದವು ಎಂಬುದಕ್ಕೆ ಲಾಲುಗಿಂತಲೂ ಹೆಚ್ಚಾಗಿ, ಎಡಪಂಥೀಯ ಸಿಪಿಎಂ ವಿವರಿಸಲೇ ಬೇಕಾಗುತ್ತದೆ. ದಲಿತರು ಮತ್ತು ಅತ್ಯಂತ ಹಿಂದುಳಿದ ಜಾತಿಗಳೇಕೆ ಸಿಪಿಎಂನೊಟ್ಟಿಗೆ ಸೇರಲಾಗಿಲ್ಲ?

ತಾನು ಏನು ಮಾಡುತ್ತಿದ್ದೇನೆಂದು ಲಾಲುಗೆ ಚೆನ್ನಾಗಿ ತಿಳಿದಿತ್ತು. ಮಂಡಲ್ ಹಾಗೂ ಅಡ್ವಾಣಿಯ ಬಂಧನದೊಂದಿಗೆ ಒಬಿಸಿ, ದಲಿತ, ಮುಸ್ಲಿಂ ಮತ್ತು ಒಂದಷ್ಟು ಲಿಬರಲ್ ಬುದ್ಧಿವಾದಿಗಳ ಬೆಂಬಲ ಲಾಲೂಗೆ ದೊರೆಯಿತು. ಈ ವೇಳೆಯಲ್ಲಿ ಎಲ್ಲರು, ಆತನೊಂದಿಗೆ ಇದ್ದರು. ಆದ್ದರಿಂದಾಗಿ ಆತ ಸಾಮಾಜಿಕ ನ್ಯಾಯದ ಮುಖವಾಡವನ್ನು ಹೊತ್ತಿದ್ದ. ಆದರೂ ಕಾರಣವಿಲ್ಲದೆ ಮುಸ್ಲಿಂ-ಯಾದವ ಮೈತ್ರಿಯ ಸೂತ್ರವನ್ನು ಹೆಣೆದದ್ದು ಇತರರನ್ನು ಹೊರಗಿಟ್ಟಂತೆಯೇ ಆಯಿತು. ಅಂದರೆ ಆತ ದಡ್ಡನೇನು.

ರಾಜಕೀಯ ಸಾಮಾಜದಲ್ಲಿ ಕ್ರಿಯಾಶೀಲವಾಗುವುದರಿಂದ, ಅದರ ಪ್ರತಿಯೊಬ್ಬ ಕ್ರೀಡಾಪಟುವೂ ಸಹ ವಿವಿಧ ಸಾಮಾಜಿಕ ವರ್ಗಗಳ ಚಲನೆಗೆ ಪ್ರತಿಕ್ರಿಯಿಸಲೇ ಬೇಕು. ಸಮಾಜ ವಿಜ್ಞಾನಿಗಳು ತಿಳಿಯದಿರುವ ಹಾಗೂ ರಾಜಕೀಯ ವಿಶ್ಲೇಷಕರು ಗ್ರಹಿಸದ ಸಂಗತಿಯೆಂದರೆ ಒಬಿಸಿಗಳಲ್ಲಿನ ಕೆಲವು ಜಾತಿಗಳು ಬಲಿಷ್ಟವಾಗುವ ತರ್ಕ. ಒಂದು ಯಾದವ ಜಾತಿ, ಚಾರಿತ್ರಿಕವಾಗಿ ಹಿಂದುಳಿದಿರುವ ಒಂದು ಸಾಮಾಜಿಕ ವರ್ಗ-ಇವುಗಳಿಗೆ "ಬಲಿಷ್ಟ" ರಾಗುವುದೆಂದರೆ ಕೇವಲ ಅಧಿಕಾರವನ್ನು ಹಿಡಿಯುವುದು, ಭೂಸಂಪನ್ಮೂಲ, ನೌಕರಿ, ವಾಣಿಜ್ಯ ಮುಂತಾದುವುಗಳನ್ನು ಗಳಿಸಿಕೊಳ್ಳುವುದಷ್ಟೇ ಅಲ್ಲ. ಅವುಗಳನ್ನು ಪಡೆದ ಮೇಲೆ ಯಾದವರಂತೆ, ಇತರ ಒಬಿಸಿಗಳಾದ ಕುರ್ಮಿ, ಲೋಧ್, ಜಾಟ್, ಸಖ್-ಜಾಟ್, ಪಟೇಲ, ಕುಣ್ಬಿ-ಮರಾಠ, ತೇವರ್, ಒಕ್ಕಲಿಗ, ಈಳವ ಕಮ್ಮಗಳಿಗೆ ಒಂದು ಅಧೀನ ಜಾತಿಯೊಂದು ಅಗತ್ಯವಾಗಿದ್ದು, ತಾವು ಹೊಸದಾಗಿ ಬಲಿಷ್ಟಗೊಂಡದ್ದನ್ನು ಆ ಜಾತಿಯ ಮೇಲೆ ಪ್ರದರ್ಶಿಸಬೇಕಾಗಿತ್ತಷ್ಟೆ. ಆದ್ದರಿಂದ, ಬಿಹಾರ ಮತ್ತು ಉ.ಪ್ರದ ಯಾದವರಿಗೆ ದಲಿತರ ಮತಗಳತ್ತ ಅತ್ಯಂತ ಹಿಂದುಳಿದ ಜಾತಿಗಳು ಸುಲಭ ಬೇಟೆಯಾಗಿ, ಅವರನ್ನು ಹಿಂಸೆಗೊಳಪಡಿಸಲಾಗುತ್ತದೆ. ಈ ಮೂಲಕವೇ ಅವರು ಹೊಸದಾಗಿ ಕಂಡುಕೊಂಡ ತಮ್ಮ ಶಕ್ತಿಯನ್ನು ಉತ್ಸಾಹದಿಂದ ಪ್ರದರ್ಶಿಸುವುದು. ಹೀಗೆ ಒಬಿಸಿಗಳ ನಾಯಕರು ತಮ್ಮ ಮೂಲ ಸಾಮಾಜಿಕ ಗುಂಪುಗಳಿಂದಲೇ ಪ್ರೇರೇಪಿತರಾಗುತ್ತಾರೆ. ಇದಕ್ಕಾಗಿಯಲ್ಲವೇ ಲಾಠಿಯನ್ನು ಹಿಡಿದು ಲಾಲು ಕುಣಿದಾಡಿದ್ದು. ಏಕೆಂದರೆ ಲಾಠಿಯು ಶಕ್ತಿ ಮತ್ತು ಹಿಂಸೆಯ ಪ್ರತೀಕವಾಗಿದೆ.

ನೂತನ ಮುಖ್ಯಮಂತ್ರಿ ನಿತೀಶ್ ಕುಮಾರ್

ಹೀಗೆ ಬಲಿಷ್ಟಗೊಂಡ ಯಾದವ ಪ್ರಜ್ಞೆಯನ್ನು ಲಾಲು ಬಡಿದೆಬ್ಬಿಸಿದ. ಅಯೋಧ್ಯೆಯ ಅನಂತರದಲ್ಲಿ ಮುಸ್ಲಿಮರು ಭಯಭೀತರಾದರು. ಲಾಲು ಅವರಿಗೆ ರಕ್ಷಣೆಯನ್ನು ನೀಡಿದ. ಅವರನ್ನು ನಿರಂತರವಾಗಿ ಭಯದಲ್ಲೇ ಇರುವಂತೆ ಮಾಡುತ್ತಾ, ಅವರ ಬೆಂಬಲದಿಂದ ಯಾದವರನ್ನು ಮತ್ತಷ್ಟು ಗಟ್ಟಿಗೊಳಿಸಿದ. ಕಾರಣ ಲಾಲು ಒಬ್ಬ ಸಭ್ಯ ರಾಜಕಾರಣಿಯಾಗಿರುತ್ತಿದ್ದಲ್ಲಿ ಆತ ಯಾದವರ ಬೆಂಬಲವನ್ನು ಕಳೆದುಕೊಳ್ಳಬೇಕಾಗುತ್ತಿತ್ತು.

ಆದ್ದರಿಂದ ತನ್ನ ಜನ ತನ್ನಿಂದ ಏನು ಬಯಸುತ್ತಿದ್ದಾರೆಂಬುದನ್ನು ಲಾಲು ಚೆನ್ನಾಗಿ ಅರಿತ್ತಿದ್ದ. ಇಂದು ನಿತೀಶ್ ಕುಮಾರ್ ಸಭ್ಯನಾಗಿದ್ದಂತೆ, 1990ರಲ್ಲಿ ಲಾಲು ಸಹ ಸಭ್ಯನಾಗಿದ್ದ. ಹೀಗಿರುವಾಗ ಸಿಪಿಐ(ಎಂ) ಏಕೆ ಲಾಲುನೊಡನೆ ಇರಲು ಪಣತೊಟ್ಟಿದ್ದು? ಪಶ್ಚಿಮ ಬಂಗಾಳದ ದಲಿತರಿಗೆ ಗ್ರಾಮೀಣ ಬದುಕು ಅಸಹನೀಯವಾಗಿದೆ. ಅನೇಕ ಸಲ ಅವರು ತಮ್ಮ ಮತಚಲಾಯಿಸುವ ಹಕ್ಕನ್ನೂ ಸಹ ಬಳಸಲಾಗುತ್ತಿಲ್ಲ.

ಸೋತ ಲಾಲು ಪ್ರಸಾದ್ ಯಾದವ್

ಈಗ ನಮಗೆ ತಿಳಿದಿರುವಂತೆ ಸಿಪಿಎಂ ಪ್ರಯೋಗಿಸಿದ "ಬರ್ಘಾ ಕಾರ್ಯಾಚರಣೆ"ಯ ಸಾಮಾಜಿಕ ನೀತಿಯು ದಲಿತರನ್ನು ಚುನಾವಣೆಯಿಂದ ದೂರೀಕರಿಸಿದ್ದು ಬೇರೇನೂ ಇರದು. ಈ "ಬರ್ಘಾ ಕಾರ್ಯಾಚರಣೆ" ನಿಜವಾಗಿಯು ಬೆಳೆ-ಹಂಚಿಕೆದಾರರೆಂದೇ ಗ್ರಾಹ್ಯವಾದುದು. ದಲಿತರು ಭೂಹೀನ ಕಾರ್ಮಿಕರಾಗಿರುವುದರಿಂದ ಅವರ್ಯಾರಿಗೂ ಭೂ ಸುಧಾರಣೆ ನೀತಿಯಿಂದ ಪ್ರಯೋಜನವೇನೂ ಆಗಲಿಲ್ಲ. ಮಧ್ಯಮ-ಜಾತಿಗಳೇ ಬೆಳೆ-ಹಂಚಿಕೆದಾರರಾಗಿ ಪ್ರಯೋಜನ ಪಡೆದದ್ದು. ಈ ಗ್ರಹಿಕೆಯಲ್ಲಿ ಸಿಪಿಎಂ ಮತ್ತು ಲಾಲುವಿನ ಆರ್‌ಜೆಡಿ ಒಂದೇ ರೀತಿಯ ಸಾಮಾಜಿಕ ಹಿನ್ನೆಲೆಯನ್ನು ಹೊಂದಿದ್ದು, ಪಾರಂಪರಿಕ ಭೂಮಾಲಿಕ ವರ್ಗವನ್ನು ಹೊಡೆದೋಡಿಸಿದರಲ್ಲದೆ, ಚುನಾವಣೆ ಪ್ರಕ್ರಿಯೆಯಿಂದ ದಲಿತರನ್ನು ಮತ್ತು ಅತ್ಯಂತ ಹಿಂದುಳಿದ ಜಾತಿಗಳನ್ನು ಇನ್ನಷ್ಟು ದೂರೀಕರಿಸಿದರು.

ಅಲ್ಲದೆ, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಮುಸ್ಲೀಮರು ಶೇ.22ರಷ್ಟಿದ್ದಾರೆ. ಪಶ್ಚಿಮ ಬಂಗಾಳದಲ್ಲಿ 42 ಸಂಸತ್ ಕ್ಷೇತ್ರಗಳಿರುವಲ್ಲಿ ಮುಸ್ಲಿಂ ಜನಸಂಖ್ಯೆ ಶೇ.15 ರಷ್ಟಿದೆ. ಯಾರು ಬುಹುಮತ ಪಡೆಯಬಹುದು ಎಂಬುದನ್ನು ಮುಸ್ಲಿಂ ಜನರೇ ನಿರ್ಧರಿಸುವಂತಾಗುತ್ತದೆ. ಈ ಅರ್ಥದಲ್ಲಿ ಲಾಲು ಅರಿಯುವ ಮುನ್ನವೇ ಸಿಪಿಎಂ ಮುಸ್ಲಿಂ-ಯಾದವ ಸೂತ್ರವನ್ನು ಅನುಸರಿಸಿಯಾಗಿತ್ತು.

ಈ ಸೂತ್ರದ ಚೌಕಟ್ಟಿನಲ್ಲೇ ಸಿಪಿಎಂನ ಮುಲಾಯಂ ಪರವಾದ ನಿಲುವು, ಲಾಲುವಿನೊಡನೆ ಮೈತ್ರಿ, ಇರಾನ್‌ಗೆ ಬೆಂಬಲವನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ, ಸಿಪಿಎಂಗೆ ಅದರಲ್ಲೂ ಎಡಪಂಥೀಯರಿಗೆ ಲಾಲುವಿನೊಡನೆಯಂತಹ ಮೈತ್ರಿ ಅಗತ್ಯವಾಯಿತು. ಇಲ್ಲವಾದರೆ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಸೋಲು ಕಟ್ಟಿಟ್ಟ ಬುತ್ತಿಯಾಗಿ ಈ ದೇಶದ ನಾಕಾಶೆಯಿಂದಲೇ ಅವರು ಹೊರಗುಳಿಯ ಬೇಕಾಗುತ್ತದೆ. ಈ ಆಧಾರದಲ್ಲಷ್ಟೇ ನಾವು ಸಿಪಿಎಂಗೆ ಸ್ವಲ್ಪಮಟ್ಟಿಗೆ ಅನುಕಂಪ ವ್ಯಕ್ತಪಡಿಸಬೇಕಾಗುತ್ತದೆ.

ಇಲ್ಲಿ ಎಡಪಂಥೀಯ/ಸಿಪಿಎಂಗಿಂತ ಹೆಚ್ಚಾಗಿ ಲಾಲು ಮತ್ತು ಸಿಪಿಎಂ ಅನ್ನು ಬೆಂಬಲಿಸುತ್ತಿರುವ ಬುದ್ಧಿಜೀವಿಗಳು ಉತ್ತರಿಸಬೇಕಾಗಿದೆ.

ಇವರೆಲ್ಲಾ, ಭಾರತದ ನಿಜವಾದ ಪ್ರೊಲಿಟರೇಟ್‌ಗಳಾದ ದಲಿತರು ಮತ್ತು ಅತ್ಯಂತ ಹಿಂದುಳಿದ ಜಾತಿಗಳನ್ನು ಬಿಟ್ಟು, ಬಲಾಢ್ಯ ಒಬಿಸಿ ಜಾತಿಗಳೊಡನೆ ಏಕೆ ಇರುತ್ತಾರೆ? ಈ ಐಡಿಯಾಲಜಿಕಲ್ ನೆಲೆಯ ಬುದ್ಧಿಜೀವಿಗಳು ಒಳ್ಳೆಯ ನೌಕರಿಯಲ್ಲಿದ್ದು, ಅನೇಕ ವೇಳೆ ಡಬ್ಬಲ್ ವೇತನ ಪಡೆಯುವವರೇ ಆಗಿದ್ದಾರೆ. ಅಲ್ಲದೆ ಅನೇಕರು ಶ್ರೀಮಂತ ಕುಟುಂಬಗಳ ಹಿನ್ನೆಲೆ ಹೊಂದಿದವರಾಗಿದ್ದಾರೆ. ಇವರಿಗೆ ಸಾಕಷ್ಟು ಸಾಮಾಜಿಕ ಬಂಡವಾಳವೂ ಇದೆ.

ಇವರೆಲ್ಲಾ ಭಾರತದೊಳಗಿನ ಸಾಮಾಜಿಕ ಚಲನೆಯನ್ನು ಅರಿಯದಷ್ಟು ದಡ್ಡರೇ? ಹಾಗೇನಾದರೂ ಇದ್ದಲ್ಲಿ ಅದು ಅಪಾಯಕಾರಿಯಾದುದು. ಅಥವಾ ಅನೇಕರು ಒಪ್ಪಿಕೊಳ್ಳುವಂತೆ ಇವರೆಲ್ಲಾ ಉಳಿದುಕೊಂಡಿರುವ, ರಾಷ್ಟ್ರೀಯ ಸಲಹಾ ಸಮಿತಿಗಳಲ್ಲಿ, ಯುಜಿಸಿ, ಕುಲಪತಿಗಳ ಸ್ಥಾನ, NCERT, NBT, NIEPA or ಸರ್ಕಾರಿ ಯೋಜನೆಗಳ,

ಸೆಮಿನಾರ್‌ಗಳ ಸಲಹೆಗಾರರಾಗಲು ಕಾಯುತ್ತಿರುವವರೇ ಆಗಿದ್ದಾರೆ. ಇದೂ ಸಹ ಅಪಾಯಕಾರಿಯಾದುದೇ ಸರಿ!

ಈವರೆಗೆ ರಾಜಕಾರಣಿಗಳಷ್ಟೆ ಅಣಕ ಮತ್ತು ಮಾಧ್ಯಮಗಳ ಟೀಕೆಗೊಳಗಾಗಿದ್ದಾರೆ. ಬಲಪಂಥೀಯ ಬುದ್ಧಿಜೀವಿಗಳು ನಾಚಿಕೆಯಿಲ್ಲದೆ ಪಾರಂಪರಿಕ ಆಳುವ ಜಾತಿಗಳನ್ನು ಬೆಂಬಲಿಸುವವರಾಗಿರುವಾಗ, ಉದಯೀಮಾನದಲ್ಲಿರುವ ಆಳುವ ಜಾತಿಗಳಿಗೆ ಸುತ್ತು ಬಳಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸುತ್ತಿರುವ ಈ ಎಡಪಂಥೀಯ ಪ್ರಗತಿಪರ ಬುದ್ಧಿಜೀವಿಗಳ ಸೋಗಲಾಡಿತನ ಮತ್ತಷ್ಟು ಹೇಯವಾದುದು.

ಕುತಂತ್ರಿಗಳಾಗಿರುವ ಬುದ್ಧಿಜೀವಿಗಳು:

ಸೆರಾಮಿಕ್ ಪಾತ್ರೆಗಳು ಮತ್ತು ಪ್ಲಾಸ್ಟಿಕ್/ಪೇಪರ್ ಗ್ಲಾಸ್ ಮತ್ತು ಪ್ಲೇಟ್‌ಗಳು ಬಂದು ಕುಂಬಾರ ಸಮುದಾಯಗಳ ಕುಲ ಕಸುಬನ್ನು ಅಪಮೌಲ್ಯಗೊಳಿಸಿದವು. ಸ್ಟೀಲ್ ಪ್ಲೇಟ್ ಮತ್ತು ಅಡುಗೆ ಮನೆಯ ವಸ್ತುಗಳು ಬಂದು ಥಾಥೇರ್ ಸಮುದಾಯಗಳ ಕುಲ ಕಸುಬನ್ನು ಸ್ತಬ್ಧಗೊಳಿಸಿದವು. ಇಟ್ಟಿಗೆ ಕಾರ್ಖಾನೆಗಳು, ಜೆಸಿಬಿ ಯಂತ್ರಗಳು, ಟ್ರಾಕ್ಟರ್‌ಗಳು ಬಂದು ಮನೆಕಟ್ಟುವ, ಬಾವಿತೋಡುವ ಸಮುದಾಯಗಳನ್ನು ದಿಕ್ಕೆಡಿಸಿದವು.

ಸೇತುವೆಗಳು ಬಂದು ಕೇವತ್‌ನಂಥ ಜನಸಾಗಿಸುವ ದೋಣಿಗಾರರ ಕೆಲಸವನ್ನು ಹಾಳುಮಾಡಿದವು. ಆಧುನಿಕ ಬೇಸಾಯ ಸಾಧನಗಳು ಬಂದು ಪಾರಂಪರಿಕ ಲೋಹರ್ ಸಮುದಾಗಳನ್ನು ನಿರುದ್ಯೋಗಕ್ಕೆ ದೂಡಿದವು. ಆಧುನಿಕ ಶೇವಿಂಗ್ ಕಿಟ್ಸ್ ಬಂದು ಕ್ಷೌರಿಕರ ಉದ್ಯೋಗವನ್ನು ಕಸಿದುಕೊಂಡವು. ಆಧುನಿಕ ಉಣ್ಣೆಯಿಂದಾಗಿ ಕುರುಬ ಸಮುದಾಯಗಳು ಜಡತ್ವಗೊಂಡವು. ಹೀಗೆ ಅನೇಕ ಸಮುದಾಯಗಳ ಕುಲ ಕಸುಬುಗಳು ಹಾಳಾಗಿ, ಅವರು ಇವತ್ತಿನ ಆರ್ಥಿಕ ಸಮಾಜದಲ್ಲಿ ನಿರಂತರ ಹಸಿವೆಯಿಂದ ನರಳುವಂತಾಗಿದೆ.

ಈ ಸಮುದಾಯಗಳೆಲ್ಲಾ ಭಾರತದ ಪಾರಂಪರಿಕ ತಯಾರಿಕ/ಸೇವಾ ಘಟಕಗಳಾಗಿದ್ದು, ಇಂದು ಅವುಗಳನ್ನು ಅತ್ಯಂತ ಹಿಂದುಳಿದ ಜಾತಿಗಳೆಂದು ಕರೆದು ಶೂದ್ರ ಚೌಕಟ್ಟಿನಡಿ ಗುರುತ್ತಿಸಲಾಗುತ್ತಿದೆ. ಇವರ ಸಂಖ್ಯೆ ಎಲ್ಲಾ ಕಡೆ ಹೆಚ್ಚಾಗಿದೆ: ಉ.ಪ್ರ.ದಲ್ಲಿ 26% ಗಿಂತಲೂ ಅಧಿಕವಾಗಿದ್ದರೆ, ಬಿಹಾರದಲ್ಲಿ 34% ರಷ್ಟಿದ್ದಾರೆ. ಹೀಗೆ ಇವರೆಲ್ಲಾ ಭಾರತದ್ಯಂತ ಅನೇಕ ಗುಂಪುಗಳಾಗಿ ಚದುರಿ ಹೋಗಿದ್ದಾರೆ. ಉದಾಹರಣೆಗೆ ತಮಿಳ್ನಾಡಿನಲ್ಲಿ 171 ಗುಂಪುಗಳಿದ್ದರೆ, ಮಹಾರಾಷ್ಟ್ರದಲ್ಲಿ 164, ಉ.ಪ್ರ.ದಲ್ಲಿ 67, ಪ.ಬಂ.ದಲ್ಲಿ 117 ಗುಂಪುಗಳಿವೆ. ಇವರೆಲ್ಲಾ ಒಂದೆಡೆ ವಾಸವಾಗಿಲ್ಲದ ಕಾರಣದಿಂದಾಗಿ, ಚುನಾವಣೆಗಳಲ್ಲಿ ನಗಣ್ಯರಾಗಿಬಿಡುತ್ತಾರೆ. ಇದು ಭಾರತೀಯ ಸಾಮಾಜಿಕ ವ್ಯವಸ್ಥೆಯ ಕಾರಣದಿಂದಾಗಿದೆಯೇ ವಿನಃ ಮತ್ತೇನೂ ಅಲ್ಲ. ಯಾವುದೇ ಒಂದೇ ಹಳ್ಳಿಯಲ್ಲಿ 50 ಮಂದಿ ಕ್ಷೌರಿಕರು ಅಥವಾ 60 ಮಂದಿ ಗಾಣಿಗರು ಇರಲಾಗದು.

ಯಾರಾದರು ಹಿಂದುಳಿದಿರುವಿಕೆಯ ನಕಾಶೆಯನ್ನು ತಯಾರಿಸಿದಲ್ಲಿ ಆರ್ಥಿಕತೆ–ಶಿಕ್ಷಣ–ನೌಕರಿ–ನಾಗರೀಕರಣಗಳೆಲ್ಲವೂ ಒಟ್ಟು ಸೇರಿ ನಿರ್ಧರಿಸುತ್ತವೆಯಾಗಿ ಜಗತ್ತಿನಲ್ಲಿ ದಲಿತರು ಮತ್ತು ಅತ್ಯಂತ ಹಿಂದುಳಿದ ಜಾತಿಗಳನ್ನು ದೀನ ಸ್ಥಿತಿಯಲ್ಲಿ ಇಡಲಾಗಿರುವುದನ್ನು ಕಾಣಬಹುದಾಗಿದೆ. ಹೀಗಿರುವಾಗ ಒಬಿಸಿಗಳ ಮುನ್ನಡೆ ಅಥವಾ ಅವರ ಸಶಕ್ತೀಕರಣದ ಸಂಕೇತವಾಗಿ ಮಂಡಲ್ ಸಮಿತಿಯನ್ನು ಕಾಣಲಾಗುತ್ತಿದೆ. ಆದರೆ ಆ ಸಂಕೇತ ತನ್ನೊಳಗೇ ವಿವಾದದಿಂದ ಕೂಡಿದೆ. ಡಿಸೆಂಬರ್ 31, 1980ರಲ್ಲಿ ಜಾತಿಯಿಂದ ಒಬ್ಬ ಯಾದವನಾದ ಮತ್ತು ಸಮಿತಿಯ ಅಧ್ಯಕ್ಷನಾದ ಬಿ.ಪಿ ಮಂಡಲ್ ವರದಿಯನ್ನು ಸಲ್ಲಿಸುವಾಗ ರಾಷ್ಟ್ರಪತಿಯವರಿಗೆ ಹೀಗೆಂದು ಬರೆಯುತ್ತಾರೆ: "ನಿಮಗೆ ನಾವೆಲ್ಲಾ ಒಮ್ಮತದಿಂದ ಕೂಡಿದ ವರದಿಯನ್ನು ಸಲ್ಲಿಸಲು ಬಯಸುತ್ತೇವೆ ಮತ್ತು ಸಮಿತಿಯ ಎಲ್ಲಾ ಸದಸ್ಯರು ಈ ಅಭಿಪ್ರಾಯವನ್ನು ಅನುಮೋದಿಸುತ್ತಾರೆ. ವರದಿಗೆ ಎಲ್ಲರು ಸಹಿ ಮಾಡಿ ಇನ್ನೇನು ಸಲ್ಲಿಸಬೇಕು ಎನ್ನುವ ಕ್ಷಣದಲ್ಲಿ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ ಎಲ್.ಆರ್. ನಾಯಕ್ ತಮ್ಮ ಭಿನ್ನಮತೀಯ ಸಂಗತಿಯನ್ನು ದಾಖಲಿಸಲು ನಿರ್ಧರಿಸಿದರಲ್ಲದೆ, ಆ ಸಂಗತಿಯು ವರದಿಯ ಸಂ.7ನೇ ಭಾಗದಲ್ಲಿ ದಾಖಲಾಗಿದೆ."

ಯಾರು ಈ ಎಲ್.ಆರ್. ನಾಯಕ್ ಹಾಗೂ ಆತನ ಭಿನ್ನಮತದ ಸಂಗತಿಯಾದರೂ ಏನು? ಆತನ ಬಗ್ಗೆ ಬಿ.ಪಿ. ಮಂಡಲ್‌ನೇ ಹೀಗೆನ್ನುತ್ತಾನೆ: "ಸಮಿತಿಯ ಸದಸ್ಯರು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ (ಒಬಿಸಿಗಳು). ಆದರೆ ಒಬ್ಬ ಎಲ್.ಆರ್. ನಾಯಕ್ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ."

1980ರಲ್ಲೇ ಅಂದರೆ 25 ವರ್ಷಗಳ ಹಿಂದೆಯೇ ನಾಯಕ್ ಭವಿಷ್ಯ ನುಡಿದ್ದರು. ಇಂದು ನಮ್ಮೆದುರು ಇರುವ ಬಹುಮುಖ್ಯ ಸಂಗತಿಯೆಂದರೆ ಈ "ಮಧ್ಯಂತರ ಜಾತಿ"ಗಳನ್ನು ಮಂಡಲ್ ಪಟ್ಟಿಯಿಂದ ಹೊರಗೆ ಹಾಕಿ, ಭಾರತದ ನಿಜವಾದ ಪ್ರೊಲಿಟರೇಟ್ ಆಗಿರುವ ಈ ಅತ್ಯಂತ ಹಿಂದುಳಿದ ಜಾತಿಗಳಿಗೆ ಪೂರ್ಣ ಮೀಸಲಾತಿ ದೊರಕಬೇಕು. ಆದರೆ ಭಾರತೀಯ ಎಡಪಂಥೀಯ–ಲಿಬರಲ್–ಸೆಕ್ಯುಲರ್ ಬುದ್ಧಿಜೀವಿಗಳು–ಗೊತ್ತಿದ್ದೂ, ಮಂಡಲ್ ವರದಿಯ ಪ್ರತಿ ಪುಟವನ್ನು ಅರಗಿಸಿಕೊಂಡವರಾದರೂ, ನಾಯಕ್ ವಾದಿಸಿದ ತರ್ಕವನ್ನು ಮಾತ್ರ ಬದಿಗೆ ಸರಿಸಿ, ಈ ಬಲಾಢ್ಯ ಮಧ್ಯಂತರ ಜಾತಿಗಳ ಪರವಾಗಿಯೇ ನಿಂತು ಸಾಮಾಜಿಕ ನ್ಯಾಯದ ಬಗ್ಗೆ ಬೊಬ್ಬೆ ಹೊಡೆಯುತ್ತಿದ್ದಾರೆ. ಇದು ಹೀಗೇಕೆ ಇನ್ನೂ ಮುಂದುವರೆದಿದೆ? ಇವರೇಕೆ ಈ ಅತ್ಯಂತ ಹಿಂದುಳಿದ ಜಾತಿಗಳನ್ನು ತಮ್ಮ ಸಾಮಾಜಿಕ ನ್ಯಾಯದ ಉದ್ದೇಶದಲ್ಲಿ ಸೇರಿಸಿಕೊಂಡಿಲ್ಲ?

ವರದಿಗೆ ಸಹಿ ಮಾಡಲೊಪ್ಪದೆ ನಾಯಕ್ ತನ್ನ ಭಿನ್ನಮತಕ್ಕೆ ಎರಡು ಕಾರಣಗಳನ್ನು ವಿವರಿಸುತ್ತಾರೆ: ಒಂದು, ಒಬಿಸಿ ಅನ್ನೋ ದೊಡ್ಡ ವಿಭಾಗದಲ್ಲಿ ಎರಡು ವಿಂಗಡನೆಗಳಿವೆ, ಮಧ್ಯಂತರ ಹಿಂದುಳಿದ ವರ್ಗಗಳು – ಇವು ಕೃಷಿಕರನ್ನು ಮತ್ತು ಬಲಾಢ್ಯರನ್ನು ಹೊಂದಿವೆ ಮತ್ತು ಎರಡನೆಯದ್ದು ದಬ್ಬಾಳಿಕೆಗೊಳಗಾದ ಹಿಂದುಳಿದ ವರ್ಗಗಳಾಗಿದ್ದು ಮೊದಲನೆಯದರೊಡನೆ ಸ್ಪರ್ಧಿಸಲಾಗದವಾಗಿವೆ. ಆದ್ದರಿಂದ, ಈ ಒಬಿಸಿ ಪಟ್ಟಿಯನ್ನು ಎರಡು ಭಾಗಗಳಾಗಿ ವಿಂಗಡಿಸಿ ಅತ್ಯಂತ ಹಿಂದುಳಿದ ಜಾತಿಗಳ ಹಿತರಕ್ಷಣೆ ಮತ್ತು ಸಾಮಾಜಿಕ ನ್ಯಾಯವನ್ನು ಕಾಪಾಡಬೇಕಾಗಿದೆ ಎನ್ನುತ್ತಾರೆ. ನಾಯಕ್ ಮಂಡಲ್ ಸಮಿತಿಯಲ್ಲಿ ತಮ್ಮ ವಾದಕ್ಕೆ ಬೆಂಬಲವನ್ನು ಪಡೆಯಲಾಗುವುದಿಲ್ಲ. ಅಂದರೆ ಅಂದೇ ಅತ್ಯಂತ ಹಿಂದುಳಿದ ಜಾತಿಗಳಿಗೂ ಸಾಮಾಜಿಕ ನ್ಯಾಯ ತಪ್ಪಿಹೋಯಿತು. ಇದಲ್ಲದೆ, ಈ ಮಧ್ಯಂತರ ಜಾತಿಗಳಿಂದ ಇತರ ಅತ್ಯಂತ ಹಿಂದುಳಿದ ಜಾತಿಗಳಿಗೆ ಹಿಂಸೆ ತಪ್ಪಿದ್ದಲ್ಲವೆಂದೂ ನಾಯಕ್ ಸಮಿತಿಗೆ ಎಚ್ಚರಿಕೆ ನೀಡಿದ್ದರು, "ನನ್ನ ಪ್ರಕಾರ ನಿಮ್ಮ ಹಿಂದುಳಿದ ವರ್ಗಗಳು" ಹಿಂಸೆಗೊಳಗಾಗುತ್ತವೆ ಎಂದು ವಾದಿಸಿದ್ದರು.

1980ರಲ್ಲೇ ಅಂದರೆ 25 ವರ್ಷಗಳ ಹಿಂದೆಯೇ ನಾಯಕ್ ಭವಿಷ್ಯ ನುಡಿದ್ದರು. ಇಂದು ನಮ್ಮೆದುರು ಇರುವ ಬಹು ಮುಖ್ಯ ಸಂಗತಿಯೆಂದರೆ ಈ "ಮಧ್ಯಂತರ ಜಾತಿ"ಗಳನ್ನು ಮಂಡಲ್ ಪಟ್ಟಿಯಿಂದ ಹೊರಗೆ ಹಾಕಿ, ಭಾರತದ ನಿಜವಾದ ಪ್ರೊಲಿಟರೇಟ್ ಆಗಿರುವ ಈ ಅತ್ಯಂತ ಹಿಂದುಳಿದ ಜಾತಿಗಳಿಗೆ ಪೂರ್ಣ ಮೀಸಲಾತಿ ದೊರಕಬೇಕು. ಆದರೆ ಭಾರತೀಯ ಎಡಪಂಥೀಯ – ಲಿಬರಲ್ – ಸೆಕ್ಯುಲರ್ ಬುದ್ಧಿಜೀವಿಗಳು– ಗೊತ್ತಿದ್ದೂ, ಮಂಡಲ್ ವರದಿಯ ಪ್ರತಿ ಪುಟವನ್ನು ಅರಗಿಸಿಕೊಂಡವರಾದರೂ, ನಾಯಕ್ ವಾದಿಸಿದ ತರ್ಕವನ್ನು ಮಾತ್ರ ಬದಿಗೆ ಸರಿಸಿ, ಈ ಬಲಾಢ್ಯ ಮಧ್ಯಂತರ ಜಾತಿಗಳ ಪರವಾಗಿಯೇ ನಿಂತು ಸಾಮಾಜಿಕ ನ್ಯಾಯದ ಬಗ್ಗೆ ಬೊಬ್ಬೆ ಹೊಡೆಯುತ್ತಿದ್ದಾರೆ. ಇದು ಹೀಗೇಕೆ ಇನ್ನೂ ಮುಂದುವರೆದಿದೆ? ಇವರೇಕೆ ಈ ಅತ್ಯಂತ ಹಿಂದುಳಿದ ಜಾತಿಗಳನ್ನು ತಮ್ಮ ಸಾಮಾಜಿಕ ನ್ಯಾಯದ ಉದ್ದೇಶದಲ್ಲಿ ಸೇರಿಸಿಕೊಂಡಿಲ್ಲ?

ಕಾರಣ, ರಾಜಕೀಯ ಅಧಿಕಾರ ಈಗ ಈ ಮಧ್ಯಂತರ ಜಾತಿಗಳಿಗೆ ಹಸ್ತಾಂತರವಾಗುತ್ತಿರುವುದರಿಂದ ಬುದ್ಧಿಜೀವಿಗಳು ಅವರೊಡನೆ ಸಾಗುವುದು ಒಳಿತೆಂದು ಭಾವಿಸಿರಬೇಕು. ಇದನ್ನು ಕುತಂತ್ರಿಗಳಷ್ಟೇ ಯೋಚಿಸುವಂಥದ್ದು. ಹಾಗಾದರೆ ಬುದ್ಧಿಜೀವಿಗಳೂ ಸಹ ಕುತಂತ್ರಿಗಳೇ?

ಡಾ॥ ಅಂಬೇಡ್ಕರ್ ಅದಕ್ಕೆ ಉತ್ತರ ನೀಡಿದ್ದಾರೆ. 1936 ರಲ್ಲಿ ಡಾ॥ ಅಂಬೇಡ್ಕರ್ (ಜಾತಿ ನಿರ್ನಾಮ) ಬುದ್ಧಿಜೀವಿಗಳ ಬಗ್ಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ: "ಬುದ್ಧಿಜೀವಿಗಳು ಸಹಾಯ ನೀಡಲು, ದಿಕ್ಕು ತಪ್ಪಿರುವ ಮಾನವೀಯತೆಯನ್ನು ಮುಕ್ತಗೊಳಿಸಲು ಆಶಿಸುವ ಶ್ರೇಷ್ಠ ವ್ಯಕ್ತಿಗಳ ವರ್ಗವೇ ಆಗಿರಬಹುದು ಅಥವಾ ಅವರೊಂದು ಕುತಂತ್ರಿಗಳ ಗುಂಪಾಗಿ ತಮ್ಮದೇ ಆದ ಹಿತಾಸಕ್ತಿಗಳಿಗಾಗಿ ಬೆಂಬಲವನ್ನು ಪಡೆಯಲು ವಾದಿಸಲೂಬಹುದು"

ಅತ್ಯಂತ ಹಿಂದುಳಿದ ಜಾತಿಗಳ ರಾಜಕೀಯ ಸುನಾಮಿ:

ಅತ್ಯಂತ ಹಿಂದುಳಿದ ಜಾತಿಗಳನ್ನು ಮತಪೆಟ್ಟಿಗೆಯನ್ನಾಗಿ ಮಾಡಿ ಬಿಹಾರದ ಇತ್ತೀಚಿನ ಚುನಾವಣೆಗಳಲ್ಲಿ ನಿತೀಶ್ ಕುಮಾರ್ ಬಹುಮತದೊಂದಿಗೆ ಅಧಿಕಾರವನ್ನು ಹಿಡಿದ. ಕರ್ನಾಟಕದಲ್ಲೂ ಕುರುಬ ಸಮುದಾಯಕ್ಕೆ ಸೇರಿದ ಸಿದ್ಧರಾಮಯ್ಯನವರೂ ಸಹ ಬಿರುಗಾಳಿಯನ್ನು ಎಬ್ಬಿಸಿದ್ದಾರೆ. ಅವರು ಅತ್ಯಂತ ಹಿಂದುಳಿದ ಜಾತಿಗಳು, ದಲಿತರು ಮತ್ತು ಅಲ್ಪಸಂಖ್ಯಾತರಿಂದ ಕೂಡಿದ ಅಹಿಂದವನ್ನು ಪುನಶ್ಚೇತನಗೊಳಿಸುತ್ತಿದ್ದಾರೆ. ಈಗ ಅಹಿಂದ ಎಲ್ಲರ ಮನೆಮಾತಾಗಿ ಹೋಗಿದೆ. ಹೀಗೆಯೇ ಉ.ಪ್ರ.ದಲ್ಲಿ ಅತ್ಯಂತ ಹಿಂದುಳಿದ ಜಾತಿಗಳು ಬಹುಜನ ಪಕ್ಷದತ್ತ



ಪಾಸ್ವಾನ್ ಸೋತು ಗೆದ್ದರೇ? ಅಥವಾ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಹಮ್ಮೇ?

ವಾಲುತ್ತಿದ್ದಾರೆ. ಈಗೇನಾದರೂ ಅಲ್ಲಿ ಚುನಾವಣೆ ನಡೆದಲ್ಲಿ ಬಹುಜನ ಪಕ್ಷಕ್ಕೆ ಜಯ ಕಟ್ಟಿಟ್ಟದ್ದು.

ಅಂದರೆ ಈ ಅತ್ಯಂತ ಹಿಂದುಳಿದ ಜಾತಿಗಳು (ಎಂಬಿಸಿಗಳು) ಒಂದು ಹೊಸ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿ ಸ್ಥಾಪಿತ ರಾಜಕೀಯ ಪಕ್ಷಗಳ ಲೆಕ್ಕಚಾರವನ್ನು ತಲೆಕೆಳಗು ಮಾಡುತ್ತಿವೆಯೇ? ಈ ಎಂಬಿಸಿಗಳು ಮಂಡಲ್ ವಿಭಾಗದಲ್ಲಿ ಒಬಿಸಿಗಳೆನ್ನುವ ಶೂದ್ರ ವರ್ಗದ ಶ್ರೇಣಿಯ ತಳದಲ್ಲಿರುವವರು.

ಆಧುನಿಕತೆ ಮತ್ತು ಕೈಗಾರೀಕರಣದಿಂದ ಪಾರಂಪರಿಕ ಕುಶಲಕರ್ಮಿಗಳು ಮತ್ತು ತಯಾರಕರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡು, ಪ್ರಸ್ತುತ ಭಾರತದ ಆರ್ಥಿಕ ಬದುಕಿನಲ್ಲಿ ತುಕ್ಕುಹಿಡಿದು ನೆಲಕಚ್ಚಿದ್ದಾರೆಂದರೆ ಅತಿಶಯೋಕ್ತಿಯೇನಲ್ಲ.

ಭಾರತಾದ್ಯಂತ ಅವರು ಚದುರಿದ್ದು, ಅನೇಕ ಜಾತಿ ಕಸುಬುಗಳಲ್ಲಿ ವಿಂಗಡನೆಗೊಂಡಿದ್ದಾರೆ. ಇದರಿಂದಾಗಿ ಇಲ್ಲಿವರೆಗೆ ಅವರು ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿರಲಿಲ್ಲ. ಹೀಗಿರುವಲ್ಲಿ ಅವರ ಸಂಕಟಗಳನ್ನು ದಕ್ಷಿಣದ ಬ್ರಾಹ್ಮಣೇತರ ಚಳುವಳಿಯು ಬಳಸಿ ಚಳುವಳಿಯ ಆಧಾರವನ್ನಾಗಿಸಿತ್ತು.

ಉತ್ತರದ ಮಂಡಲ್ ಚಳುವಳಿಯ ಸಂದರ್ಭದಲ್ಲಿ ಒಬಿಸಿ ನಾಯಕರು ಯಾದವರನ್ನಾಗಲಿ, ಕುರ್ಮಿಗಳನ್ನಾಗಲಿ ಅಥವಾ ಲೋಧರನ್ನಾಗಲಿ ಜಾತಿ ವ್ಯವಸ್ಥೆಯ ಬಲಿ ಪಶುಗಳೆಂದು ಬಿಂಬಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಈ ಎಂಬಿಸಿಗಳ ಸಂಕಟಗಳನ್ನೇ ಬಳಸಿ ಮಂಡಲ್ ವರದಿ ಸಾಮಾಜಿಕ ನ್ಯಾಯಕ್ಕಾಗಿದೆಯೆಂದು, ಅವರ ವಿಮೋಚನೆಗಾಗಿದೆಯೆಂದೂ ಬಿಂಬಿಸಲಾಯಿತು.

ಹೀಗೆ ಎಂಬಿಸಿಗಳ ಸಂಕಟ ಮತ್ತು ನೋವಿನ ಮೇಲೆ ಸವಾರಿ ಮಾಡುತ್ತಾ ದಕ್ಷಿಣ ಮತ್ತು ಉತ್ತರದಲ್ಲಿ ಒಬಿಸಿಗಳು ಅಧಿಕಾರಕ್ಕೆ ಬಂದರು. ಆದರೆ ಹೀಗೇಕೆ ಈ ಅತ್ಯಂತ ಹಿಂದುಳಿದ ಜಾತಿಗಳು ಮಂಡಲ್ ವಿಭಾಗದಿಂದ ದೂರ ಚದುರುತ್ತಿದ್ದಾರೆ. ಎಲ್ಲರಿಗೂ ತಿಳಿದ ಸಂಗತಿಯೆಂದರೆ, ಈ ಮೇಲ್ತುದಿಯಲ್ಲಿರುವ ಒಬಿಸಿಗಳ ಮುಖ್ಯ ಕಾಳಜಿಯೆಂದರೆ ಮಂಡಲ್ ನೌಕರಿ ಮತ್ತು ಅದರಿಂದ ಲಭಿಸುವ ರಾಜಕೀಯಾಧಿಕಾರ ಅಷ್ಟೆ.

ಆದರೆ, ಕರ್ನಾಟಕ ಮತ್ತು ಬಿಹಾರದಲ್ಲಿ ಈ ಒಬಿಸಿ ಮೀಸಲಾತಿಯನ್ನು ವಿಭಾಗಿಸಲಾಗಿದ್ದು, ಎಂಬಿಸಿಗಳಿಗೆ ಪ್ರತ್ಯೇಕ ಮೀಸಲಾತಿಯನ್ನು ಒದಗಿಸಲಾಗಿದೆ. ಆದರೂ ಎಂಬಿಸಿಗಳು ಒಬಿಸಿಗಳ ಬಗ್ಗೆ ಸಿಟ್ಟಾಗಿದ್ದಾರೆ. ಮತ್ತೊಂದು ಕಾರಣವೂ ಇದೆ: ಒಬಿಸಿ ನಾಯಕರು ಮಂಡಲ್ ಮೀಸಲಾತಿಯಲ್ಲಿ ಮಂಡಲ್ ಸಮಿತಿಯ ಒಬ್ಬನೇ ದಲಿತ ಸದಸ್ಯನಾದ ಎಲ್ ಆರ್ ನಾಯಕ್ ಸೂಚಿಸಿದಂತೆ ವಿಭಾಗೀಕರಣವನ್ನು ಮಾಡಲು ಬಿಡಲಿಲ್ಲ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಸ್ವ-ಘೋಷಿತ ಪ್ರಗತಿಪರರೆಂದು ಕರೆದುಕೊಳ್ಳುತ್ತಿರುವ ವಿದ್ವಾಂಸರು, ದಕ್ಷಿಣದ ಬ್ರಾಹ್ಮಣೇತರ ಚಳುವಳಿ ಮತ್ತು ಉತ್ತರದ ಮಂಡಲ್ ಚಳುವಳಿಯು ಕೇವಲ ಮಧ್ಯಂತರ ಒಬಿಸಿ/ಶೂದ್ರ ಬಲಾಢ್ಯ ಜಾತಿಗಳ ಚಳುವಳಿಯಾಗಿತ್ತೆಂಬುದನ್ನು ಅರ್ಥೈಸುವಲ್ಲಿ ಎಡವಿದ್ದಾರೆಂಬುದನ್ನು ಒಪ್ಪಿಕೊಳ್ಳಲು ತಯಾರಿಲ್ಲದಿರುವುದು.

ಈ ಬಲಾಢ್ಯ ಒಬಿಸಿ ಜಾತಿಗಳು ಭಾರತಾದ್ಯಂತ ದ್ವಿಜರ/ಬ್ರಾಹ್ಮಣರ ಯಾಜಮಾನ್ಯವನ್ನು ನಾಶಮಾಡಲು ಇಷ್ಟಪಡುತ್ತಾರೆ. ಅದು ಮೆಚ್ಚುವಂಥದ್ದೆ. ಆದರೆ ಅವರು ಆ ಮೂಲಕ ತಮ್ಮದ್ದೇ ಆದ ಯಾಜಮಾನ್ಯವನ್ನು ಸ್ಥಾಪಿಸ ಹೊರಟಿರುವುದು ಖಂಡನೀಯ.

ಹೀಗೆ ಯಾಜಮಾನ್ಯವನ್ನು ಸ್ಥಾಪಿಸಿದ ಈ ಬಲಾಢ್ಯ ಒಬಿಸಿಗಳು, ತಾವು ಹೊಸದಾಗಿ ಕಂಡುಕೊಂಡ ಅಧಿಕಾರವನ್ನು ಚಲಾಯಿಸಲು ಒಂದು ಬಲಿಪಶುವನ್ನು ಬಯಸುತ್ತಾರೆ. ಇದರಿಂದಾಗಿಯೇ ದಕ್ಷಿಣದಲ್ಲಿ ಬೇಗನೇ ದಲಿತರು ಸಿಟ್ಟಾಗಿ, ದಕ್ಷಿಣದ ಬ್ರಾಹ್ಮಣೇತರ ಶಕ್ತಿಗಳಿಂದ ಹೊರ ಬಂದುದು. ಅದೇ ರೀತಿಯಲ್ಲಿ ಉತ್ತರದ ಮಂಡಲ್ ಶಕ್ತಿಗಳೂ ಸಹ ಹೊರ ಬರಲಾರಂಭಿಸಿವೆ.

> **ಇತ್ತೀಚೆಗೆ ಈ ಅತ್ಯಂತ ಹಿಂದುಳಿದ ಜಾತಿ ಗಳು ಗುರುತ್ತಿಸುತ್ತಿರುವುದೇನೆಂದರೆ, ದಕ್ಷಿಣದ ಬ್ರಾಹ್ಮಣೇತರ ಚಳುವಳಿ ಮತ್ತು ಉತ್ತರದಲ್ಲಿನ ಮಂಡಲ್ ಚಳುವಳಿಗಳೆಲ್ಲವು, ಬಲಾಢ್ಯ ಒಬಿಸಿಗಳ ಪ್ರಾಬಲ್ಯವೇ ಹೊರತು ಬೇರೇನೂ ಅಲ್ಲ; ಅವಕ್ಕೆ ಹಿಂಸೆಯು ಒಂದು ಸಾಮಾಜಿಕ ಅಗತ್ಯವಾಗಿದೆಯಲ್ಲದೆ, ಈ ಹೊಸ ಆಳುವ ವರ್ಗವು ದ್ವಿಜರಿಗಿಂತ ಮತ್ತಷ್ಟು ಕ್ರೂರವಾಗಿ, ಮಧ್ಯಯುಗೀನ ಊಳಿಗಮಾನ್ಯ ನಡಾವಳಿಯನ್ನು ರೂಢಿಸಿಕೊಳ್ಳಲಷ್ಟೇ ಸಾಧ್ಯವಾಗಿದೆ.**

ಹೀಗಿರುವಲ್ಲಿ, ಇತ್ತೀಚೆಗೆ ಈ ಅತ್ಯಂತ ಹಿಂದುಳಿದ ಜಾತಿಗಳು ಗುರುತ್ತಿಸುತ್ತಿರುವುದೇನೆಂದರೆ, ದಕ್ಷಿಣದ ಬ್ರಾಹ್ಮಣೇತರ ಚಳುವಳಿ ಮತ್ತು ಉತ್ತರದಲ್ಲಿನ ಮಂಡಲ್ ಚಳುವಳಿಗಳೆಲ್ಲವು, ಬಲಾಢ್ಯ ಒಬಿಸಿಗಳ ಪ್ರಾಬಲ್ಯವೇ ಹೊರತು ಬೇರೇನೂ ಅಲ್ಲ; ಅವಕ್ಕೆ ಹಿಂಸೆಯು ಒಂದು ಸಾಮಾಜಿಕ ಅಗತ್ಯವಾಗಿದೆಯಲ್ಲದೆ, ಈ ಹೊಸ ಆಳುವ ವರ್ಗವು ದ್ವಿಜರಿಗಿಂತ ಮತ್ತಷ್ಟು ಕ್ರೂರವಾಗಿ, ಮಧ್ಯಯುಗೀನ ಊಳಿಗಮಾನ್ಯ ನಡಾವಳಿಯನ್ನು ರೂಢಿಸಿಕೊಳ್ಳಲಷ್ಟೇ ಸಾಧ್ಯವಾಗಿದೆ.

ಕಳೆದ ಒಂದು ದಶಕಗಳಿಗಿಂತಲೂ ಹೆಚ್ಚು ಎಂಬಿಸಿಗಳು ತಮ್ಮದೇ ಆದ ವೇದಿಕೆಯಿಲ್ಲದೆ ತಮಗಿಷ್ಟ ಬಂದಂತೆ ಮತ ಚಲಾಯಿಸುತ್ತಲೇ ಬಂದರು.

ಒಂದೇ ಒಂದು ಸಾಮಾನ್ಯ ಸಂಗತಿಯೆಂದರೆ ಅವರು ಪಾರಂಪರಿಕ ಬಲಾಢ್ಯ ಒಬಿಸಿಗಳ ವಿರುದ್ಧ ಮತ ಚಲಾಯಿಸುತ್ತಲೇ ಬಂದದ್ದು. ಹಾಗೆಯೇ ಕರ್ನಾಟಕದಲ್ಲೂ ಎಂಬಿಸಿಗಳು ಒಕ್ಕಲಿಗ ಮತ್ತು ಲಿಂಗಾಯಿತರೊಡನೆ ಮತ್ತೆಂದೂ ಹೋಗಲಿಚ್ಚಿಸದೆ, ಸಿದ್ಧರಾಮಯ್ಯ ಮತ್ತು ಅಹಿಂದದಲ್ಲಿ ಅವರಿಗೊಂದು ಹೊಸ ದಿಕ್ಕು ಗೋಚರಿಸಿದಂತಾಗಿದೆ.

ಬಿಹಾರದಲ್ಲಿ ನಿತೀಶ್‌ನ ಕುರ್ಮಿಗಳು ಯಾದವರಿಗಿಂತಲೂ ಕ್ರೂರಿಗಳಾಗಿದ್ದರೂ ಸಹ ಆತನ ಎಂಬಿಸಿ ಕಾರ್ಡ್‌ನ ಆಟದಿಂದಾಗಿ ಆತನಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಎಡಪಂಥೀಯ, ಬಲಪಂಥೀಯ, ಸೆಕ್ಯುಲರ್, ಲಿಬರಲ್, ಸೋಶಿಯಲಿಸ್ಟ್ ಹಾಗೂ ದಲಿತರಿಂದಲೂ ತೊರೆದವರಾಗಿ, ಮಂಡಲ್ ಶಕ್ತಿಗಳಿಂದ ಹಿಂಸಿತರಾಗಿ, ರಾಜಕೀಯ ನಿರಾಶ್ರಿತರಾದ ಎಂಬಿಸಿಗಳು ಒಂದು ವೇದಿಕೆಗಾಗಿ ತೀವ್ರವಾಗಿ ಹುಡುಕಾಡುತ್ತಿದ್ದಾರೆ. ಮೇಲಿನ ಎರಡು ಸಂಗತಿಗಳಿಂದಾಗಿ ಹಾಗೂ ಎಲ್ಲರಿಂದಲೂ ತೊರೆದವರಾಗಿ, ಬಲಾಢ್ಯ ಒಬಿಸಿಗಳಿಂದ ಹಿಂಸಿತರಾಗಿ, ಅವರ ನಡುವೆ ಹೊಸದೊಂದು ಸಾಮಾಜಿಕ ತಿರುವು ಕಾಣಿಸಿಕೊಳ್ಳುತ್ತಿದೆ.

ಈಗ ಅವರೆಲ್ಲಾ ಒಂದು ಸಮಾನ ಸಾಮಾಜಿಕ ಒಕ್ಕೂಟಕ್ಕಾಗಿ ಕಾಯುತ್ತಿದ್ದಾರೆ. ಅಲ್ಲದೆ, ಅವರು ತಮ್ಮ ಸಂಖ್ಯಾ ಬಲವನ್ನು ಅರಿತಂತೆ ಕಾಣುತ್ತಿದೆ. ಬಿಹಾರದಲ್ಲಿ 34% ರಷ್ಟಿರುವ ಅವರು, ಉ.ಪ್ರದಲ್ಲಿ 26% ರಷ್ಟಿದ್ದಾರೆ. ಹೀಗೆಯೇ ದೇಶದೆಲ್ಲೆಡೆ ಅವರು ಕಾಣಿಸಿಕೊಳ್ಳುತ್ತಾರೆ.

ಮೀನುಗಾರರಿಗೆ ಸುನಾಮಿಯ ಒಳ ಮರ್ಮ ಹೇಗೆ ಅರಿಯದಂತಾದರೋ ಹಾಗೆಯೇ ಭಾರತದ ರಾಜಕಾರಣಿಗಳು ಎಂಬಿಸಿಗಳ ಸಂಘಟನೆ ಮತ್ತು ಚಲನೆಯನ್ನು ಅರಿಯದಂತಾಗಿದ್ದಾರೆ.

ಎಂಬಿಸಿಗಳ ಸಶಕ್ತತೆಗಾಗೆ ಯಾವಾಗ ಒಂದು ರಾಜಕೀಯ ಕರೆ ಮೊಳಗುತ್ತದೋ ಆ ಕ್ಷಣವೇ ಅವರು ಸಮೂಹೋಪಾದಿಯಲ್ಲಿ ಬಂದುಬಿಡುತ್ತಾರೆ. ದಲಿತರನ್ನು ಹೊರತು ಪಡಿಸಿದಲ್ಲಿ ಭಾರತದಲ್ಲಿರುವ ಈ ಪ್ರೊಲಿಟರೇಟ್‌ರನ್ನು ಯಾರಾದರೂ ಬರಮಾಡಿಕೊಳ್ಳುವರೇ ಕಾಯ್ದು ನೋಡಬೇಕಿದೆ. □

ಬುದ್ಧಾಯಣ

೭

ನಿಬ್ಬಾಣ ಎಂದರೆ ಮೋಕ್ಷವಲ್ಲ, ಮುಕ್ತಿ ಅಲ್ಲ, ಸ್ವರ್ಗದಲ್ಲಿನ ಸ್ಥಾನವಲ್ಲ, ಅದೊಂದು ಮಧ್ಯಮ ಮಾರ್ಗ, ಧರ್ಮ ಮಾರ್ಗ, ರಾಗ-ಭಾವದಿಂದ ವಿಮೋಚನೆ, ಬದುಕಿನಲ್ಲಿಯೇ ನಾವು ಕಂಡುಕೊಳ್ಳುವ ಪರಿಪೂರ್ಣತೆ! ಆತ್ಮದ ಮೋಕ್ಷಕ್ಕಿಂತ ಲೌಕಿಕ ಜೀವಿಗಳ ಸಂತೋಷ ಭಿನ್ನ ಎಂಬುದು! ಮತ್ತು ಸಂತೋಷ ಇದೆ ಎಂಬುದು! ಆತ್ಮದ ವಿಚಾರ ಮತ್ತು ಸಾವಿನ ನಂತರ ಆತ್ಮದ ಮುಕ್ತಿ ಎಂಬುದು ಸಂಪೂರ್ಣ ವಿಚಾರ ಆಗಿದೆ.

○ಸಿ.ಎಚ್.ರಾಜಶೇಖರ್

ಎಲ್ಲವೂ ಅಶಾಶ್ವತ; ಯಾವುದಕ್ಕೂ ಅಂಟಿಕೊಳ್ಳಬೇಡ

ಸಂಗಾರವ ಎಂಬ ಜ್ಞಾನಿಯೊಂದಿಗೆ, ಅಸಂಗ ಎಂಬ ಬೌದ್ಧ ಧರ್ಮದ ಮಹಾ ತತ್ತ್ವಜ್ಞಾನಿಯೊಂದಿಗೆ ಹಾಗೂ ತನ್ನ ಬಿಕ್ಷುಗಳೊಂದಿಗೆ ಉಪನ್ಯಾಸ ನೀಡುವಾಗ ಈ ಜಗತ್ತಿನ ಉಗಮ, ನಾಶ, ವಿಕಾಸ ಮತ್ತು ಪರಿವರ್ತನೆಯನ್ನು ಕುರಿತು ಒಬ್ಬ ಭಿಕ್ಷುವು ಬುದ್ಧನನ್ನು ಕುರಿತು ಹೀಗೆ ಪ್ರಶ್ನಿಸುತ್ತಾನೆ;

"ಗುರುದೇವಾ, ಈ ಜಗತ್ತು ನಿತ್ಯವೋ? ಅನಿತ್ಯವೋ? ಶಾಶ್ವತವೋ? ಅಶಾಶ್ವತವೋ?"

"ಎಲ್ಲೈ ಗೆಳೆಯಾ, ಈ ಜಗತ್ತು ನಿತ್ಯವೆಂದು ಭ್ರಮಿಸಬೇಡ. ಅಶಾಶ್ವತವೇ ಅದರ ಮೂಲ ಸ್ವರೂಪ"

"ಗುರುದೇವಾ ಈ ಜಗತ್ತು ಶೂನ್ಯಾದಿಂದ ಉದ್ಭವಿಸಿತು ಎಂದು ಕೆಲವರು, ಮತ್ತೆ ಸೃಷ್ಟಿಕರ್ತನಿಂಧ ಎಂದು ಹಲವರು ವಾದಿಸುತ್ತಾರೆ. ಈ ಎರಡರಲ್ಲಿ ಯಾವುದು ಸರಿ? ಯಾವುದು ತಪ್ಪು?"

"ಎಲ್ಲೈ ಗೆಳೆಯಾ, ಈ ಎರಡೂ ಅತಾರ್ಕಿಕ ವಾದ, ಭ್ರಮೆ ಮತ್ತು ಊಹೆಯಿಂದ ಕೂಡಿದ್ದು"

"ಗುರುದೇವಾ, ಹಾಗಾದರೆ ಈ ಜಗತ್ತಿನ ಜೀವ ಸೃಷ್ಟಿಯ ರಹಸ್ಯವೇನು?"

"ಎಲ್ಲೈ ಗೆಳೆಯಾ, ಭೂಮಿ, ನೀರು, ಬೆಂಕಿ ಮತ್ತು ಗಾಳಿ ಎಂಬ ನಾಲ್ಕು ಚತುರ್ಭೂತಗಳೇ ಜೀವ ಸೃಷ್ಟಿಯ ಮೂಲ!"

"ಗುರುದೇವಾ, ಈ ಮೂಲವನ್ನೆ ಅಲ್ಲವೇ ಪ್ರಾಚೀನರು ಶೂನ್ಯವೆಂದು ಕರೆದದ್ದು"

"ಎಲ್ಲೈ ಗೆಳಯಾ, ಮೂಲತಃ ಶೂನ್ಯವೆಂಬುವ ಉಪಾದಿ ಇಲ್ಲ, ಇದ್ದರೂ ಸೃಷ್ಟಿ ಸಾಧ್ಯವಿಲ್ಲ, ಬದಲಾವಣೆ ಸಾಧ್ಯವಿಲ್ಲ. ಏಕೆಂದರೆ, ಎಲ್ಲ ವಸ್ತುಗಳು ಕಾರಣ ಮತ್ತು ಉದ್ದೇಶಗಳಿಂದ ಹುಟ್ಟುತ್ತವೆ!"

"ಗುರುದೇವಾ, ಈ ಕಾರಣ ಮತ್ತು ಉದ್ದೇಶಗಳು ಸ್ವತಂತ್ರವೆ?

"ಎಲ್ಲೈ ಗೆಳೆಯಾ, ಇವು ಕೂಡ ಸ್ವತಂತ್ರ್ಯವಲ್ಲ, ಅವುಗಳು ಸ್ವತಂತ್ರ್ಯ ಅಂತಃಸತ್ವವನ್ನು ಹೊಂದಿಲ್ಲ!"

"ಗುರುದೇವಾ, ಹಾಗಾದರೆ ಅದು ಏನು?"

"ಎಲ್ಲೈ ಗೆಳೆಯಾ, ಅದನ್ನೆ ನಾನು ಮೂಲ ಸಂಯುಕ್ತ ವಸ್ತುಗಳು ಎಂದದ್ದು!"

"ಗುರುದೇವಾ, ಈ ಸಂಯುಕ್ತ ವಸ್ತುಗಳ ಮೂಲ ಏನು?"

"ಎಲ್ಲೈ ಗೆಳೆಯಾ, ಭೂಮಿ, ನೀರು, ಬೆಂಕಿ ಮತ್ತು ಗಾಳಿ".

"ಗುರುದೇವಾ, ಕಾರಣ ಮತ್ತು ಉದ್ದೇಶ ಹಾಗೂ ಸಂಬಂಧಗಳಿಂದ ಕೂಡಿದ ಈ ಸಂಯುಕ್ತ ವಸ್ತುಗಳು ಶಾಶ್ವತವೋ? ಅಶಾಶ್ವತವೋ?

"ಎಲ್ಲೈ ಗೆಳೆಯಾ, ಎಲ್ಲ ಸಂಯುಕ್ತ ವಸ್ತುಗಳು ಅಶಾಶ್ವತ!"

"ಗುರುದೇವಾ, ಹೀಗೇಕೆ? ಇದರ ಹಿನ್ನೆಲೆ ಏನು?"

"ಎಲ್ಲೈ ಗೆಳೆಯಾ, ಎಲ್ಲ ಸಂಯುಕ್ತ ವಸ್ತುಗಳ ಸಂಯೋಜನೆಯೇ ಉಗಮ! ಮೂಲ ವಸ್ತುಗಳ ವಿಘಟನೆಯೇ ವಿನಾಶ!" ಆದ್ದರಿಂದಲೇ ನಾನು ಎಲ್ಲ ಸಂಯುಕ್ತ ವಸ್ತುಗಳು ಅಶಾಶ್ವತ ಎಂದದ್ದು," ಈ ಅನಿತ್ಯಕ್ಕೆ ಮೂರು ಮುಖಗಳಿವೆ"

"ಗುರುದೇವಾ, ಅನಿತ್ಯ ತತ್ತ್ವದ ಮೂರು ಮುಖಗಳಾವುವು?"

"ಎಲ್ಲೈ ಗೆಳೆಯಾ, ಸಂಯುಕ್ತ ವಸ್ತುಗಳ ಅನಿತ್ಯತೆ, ವ್ಯಕ್ತಿಯ ಅನಿತ್ಯತೆ, ಮತ್ತು ಉದ್ದಿಷ್ಟ ವಸ್ತುಗಳ ಸ್ವ ಸ್ವರೂಪದ ಅನಿತ್ಯತೆ, ಇವೇ ಆ ಮೂರು ಅನಿತ್ಯ ಮುಖಗಳು. ಇವನ್ನು ಸಂಯುಕ್ತ ಅಸ್ತಿತ್ವದ ಅನಿತ್ಯತೆ ಎಂದು ಕರೆಯಲಾಗುತ್ತದೆ".

"ಗುರುರ್ದೇವಾ. ಹಾಗಾದಾರೆ ಈ ಅಸ್ತಿತ್ವದ ಪ್ರತಿಪಾದನೆ ಹೇಗೆ?"

"ಎಲ್ಲೈ ಗೆಳೆಯಾ. 'ಅಸ್ತಿತ್ವ' ಎಂದರೆ 'ಇರುವುದು' ಅಥವಾ 'ಇರುವಿಕೆ' ಅದನ್ನೇ 'ಆಗುವುದು' ಅಥವಾ 'ಆಗುವಿಕೆ' ಎನುವುದು".

"ಗುರುದೇವಾ, ಈ ಇರುವುದು ಮತ್ತು ಆಗುವುದು ಯಾವ ತತ್ತ್ವದ ಮೇಲೆ ನಿಂತಿದೆ?"

"ಎಲ್ಲೈ ಗೆಳೆಯಾ, ಇದು ಭೂತಕಾಲ, ಭವಿಷ್ಯತ್ ಕಾಲ ಮತ್ತು ವರ್ತಮಾನದ ಮೇಲೆ ನಿಂತಿದೆ. ಅಂದರೆ 'ಹಿಂದಿನಕ್ಷಣ' 'ಮುಂದಿನ ಕ್ಷಣ' ಮತ್ತು 'ಈಗ', 'ಈ ಕ್ಷಣ' ಈ ತತ್ತ್ವ ಸಿದ್ಧಾಂತದ ಮೇಲೆ ನಿಂತಿದೆ.

"ಗುರುದೇವಾ, ಇದನ್ನು ದೃಷ್ಟಾಂತದ ಮೂಲಕ ಅಥವಾ ವಿಶ್ಲೇಷಣೆಯ ಮೂಲಕ ವಿವರಿಸಿ ವಿಷದ ಪಡಿಸಿ"

"ಎಲ್ಲೈ ಗೆಳೆಯಾ ಕೇಳು, ಒಂದು ವಿಷಯ ಒಂದು ವಸ್ತು ಒಂದು ಪದಾರ್ಥ ಒಂದು ವ್ಯಕ್ತಿ, ಒಂದು ಕಾಲ ಮತ್ತು ಪರಿಸರ. ಈ ಅರ್ಥದಲ್ಲಿ ಹಿಂದಿನ ಕ್ಷಣದ ಜೀವಿ ಜೀವಂತವಿದೆ, ತನ್ನ ಇರುವಿಕೆಯನ್ನು ಸಾದರಪಡಿಸಿದೆ. ಕಣ್ಣೇದುರು ಬದುಕಿದೆ. ಅದೇ ವರ್ತಮಾನಕ್ಕೆ ಬಂದರೆ ಬದುಕಿಲ್ಲ. ಭವಿಷ್ಯತ್ ಕಾಲಕ್ಕೆ ಹೊರಳಿದರೆ ಮುಂದಿನ ಕ್ಷಣದ ಜೀವಿ ಬದುಕುತ್ತವೆ. ಇದನ್ನೆ ಪ್ರಸ್ತುತವೆನ್ನುವುದು. ಅಸ್ತಿತ್ವ ಎನುವುದು. ಇದರ ಸಾರಾಂಶವಿಷ್ಟೇ ಮಾನವ ಜೀವ ಸದಾ ಬದಲಗುತ್ತಿರುತ್ತದೆ. ಯಾವಾಗಲೂ ಬೆಳೆಯುತ್ತಿರುತ್ತದೆ. ಅದು ತನ್ನ

ದುಕಿನ ಎರಡು ಭಿನ್ನ ಕ್ಷಣಗಳಲ್ಲಿ ಒಂದೇ ಆಗಿರುವುದಿಲ್ಲ. ದನ್ನೇ ವಿಕಾಸ, ಪರಿವರ್ತನೆ ಮತ್ತು ಪ್ರಗತಿ ಎನ್ನುವುದು, ಥವಾ ಕಾಲ ಮತ್ತು ದೇಶದೊಳಗಿನ ಪ್ರಕ್ರಿಯೆ ನ್ನುವುದು".

"ಗುರುದೇವಾ, ಇದನ್ನು ನಾವು ಹೇಗೆ ಗ್ರಹಿಸು ದು? ಇದು ಹೇಗೆ ಸಾಧ್ಯ?"

"ಎಲೈ ಗೆಳೆಯಾ, ಎಲ್ಲವೂ ಅನಿತ್ಯ ಎಂದು ಗ್ರಹಿ ವ ಮೂಲಕ ಮಾತ್ರ ಸಾಧ್ಯ".

'ಗುರುದೇವಾ, ಇದು ಶೂನ್ಯವಾದವಲ್ಲವೆ?"

"ಎಲೈ ಗೆಳೆಯಾ, ಸಂಯುಕ್ತ ವಸ್ತುಗಳ ಸಂಯೋ ನೆ ಮತ್ತು ಕಾರಣತಾವಾದದ ಹಿನ್ನೆಲೆ ಹಾಗೂ ಅಸ್ತಿತ್ವಾ ದ ಭೌತಿಕ ಹಿನ್ನೆಲೆಯಲ್ಲಿ ಗ್ರಹಿಸಿದಾಗ ಇದು ಂಪೂರ್ಣ ಶೂನ್ಯತೆ ಅಲ್ಲ. ಇಲ್ಲಿ ಪ್ರತಿಯೊಂದು ನಿರಂತ ವಾಗಿ ಬದಲಾಗುತ್ತಿರುತ್ತದೆ. ಹಿಂದಿನ ಅಸ್ತಿತ್ವವನ್ನು ಕಳೆದು ೊಳ್ಳುತ್ತದೆ. ಅಂದ ಮಾತ್ರಕ್ಕೆ ಮುಂದಿನ ಅಸ್ತಿತ್ವದ ಸ್ವರೂಪ ನ್ನು ಅಲ್ಲಗೆಳೆಯಬಾರದು.

ಅಂದರೆ ಒಂದು ಇಲ್ಲವಾದಾಗ ತಾನು ತೆರವುಗೊ ಸಿದ ಸ್ಥಾನವನ್ನು ವರ್ತಮಾನ ತುಂಬುತ್ತದೆ. ಹಾಗಾದರೆ ೂನ್ಯತೆಯಿಂದಲೇ ಪ್ರತಿಯೊಂದು ಸಾಧ್ಯವಾಗುವುದು ಂಬುದು ಅರ್ಥ ಮಾಡಿಕೊಳ್ಳಬೇಕು. ಶೂನ್ಯತೆ ಇಲ್ಲದೆ ದ್ದಿದ್ದರೆ ಪ್ರಪಂಚದಲ್ಲಿ ಯಾವುದು ಇಲ್ಲ ಅಥವಾ ಸಾಧ್ಯ ಲ್ಲ. ನಾವು ಮುಖ್ಯವಾಗಿ ಇಲ್ಲಿ ಗ್ರಹಿಸಬೇಕಾದ ಅಂಶ ಂದರೆ, ಎಲ್ಲ ವಸ್ತುಗಳ ಅನಿತ್ಯತೆಯ ಸ್ವಾಭಾವದ ಮೇಲೆ ತರ ಎಲ್ಲ ವಸ್ತುಗಳ ಸಾಧ್ಯತೆ ನಿಂತಿದೆ!"

"ಗುರುದೇವಾ, ಈ ಚಲನಾಶೀಲತೆ ಶಾಶ್ವತವಾಗಿ ಲುಗಡೆಗೊಂಡಿದ್ದರೆ ಏನಾಗುತ್ತಿತ್ತು?"

"ಎಲೈ ಗೆಳೆಯಾ, ಎಲ್ಲ ಸಂಯುಕ್ತ ವಸ್ತುಗಳು ರಂತರ ಬದಲಾವಣೆಗೆ ಒಳಗಾಗದೆ ಹೋಗಿ, ಶಾಶ್ವತ ುತ್ತು ಅಪರಿವರ್ತನಶೀಲವಾಗಿ ಹಾಗೂ ಜಡವಾಗಿ ಟ್ಟಿದ್ದಿದ್ದರೆ, ಒಂದು ಬಗೆಯಿಂದ ಇನ್ನೊಂದು ಬಗೆಗೆ ೀವನ ವಿಕಾಸ ಮತ್ತು ಜೀವಿಗಳ ಬೆಳವಣಿಗೆ ಆಗದೆ ಟ್ಟನೆ ನಿಂತುಬಿಡುತ್ತಿತ್ತು.

ಇಲ್ಲಿ ನಂಬುವುದಕ್ಕೆ, ಬೀಗುವುದಕ್ಕೆ, ಆಡಂಬರ ಪಡುವುದಕ್ಕೆ ಅಥವಾ ಮತ್ತೊಂದರ ಮೇಲೆ ಆರೋಪ ಮಾಡಲಿಕ್ಕೆ ಎಡೆ ಇಲ್ಲ. ಅಸ್ಪದವಿಲ್ಲ. ಎಲ್ಲಿ ಯಾವುದೇ ಮಾಯಾ, ಮಂತ್ರ, ಅತೀಂದ್ರಿಯ ಶಕ್ತಿ, ಪವಾಡ ಅಥವಾ ದೇವರೆಂಬ ಮಧ್ಯವರ್ತಿ ಅಥವಾ ಪ್ರಥಮ ವ್ಯಕ್ತಿ ಇರಲು ಸಾಧ್ಯವಿಲ್ಲ. "ಎಲ್ಲವೂ ತನಗೆ ತಾನೇ" ಎಲ್ಲವೂ ಕಾರಣ ತಾವಾದಕ್ಕೆ ಒಳಗಾಗಿದೆ. ಇಲ್ಲಿ ಯಾವುದೂ ಮಹಾನ್ ಅಲ್ಲ. ಕ್ಷುಲ್ಲಕವಲ್ಲ. ಯಾವುದೂ ಶಾಶ್ವತವಲ್ಲ. ಅಶಾಶ್ವತವಲ್ಲ. ಮುಂಜಾನೆ ಮುಡಿದ ಹೂವು ಸಂಜೆಗೆ ಬಾಡುತ್ತದೆ. ನಾಳೆಗೆ ಸಾಯುತ್ತದೆ. ನಾಡಿದ್ದು ಆ ಜಾಗ ತೆರವಾಗುತ್ತದೆ. ತೆರವಾದ ಆ ಜಾಗದಲ್ಲಿ ಮತ್ತೆ ಇಂದು ಹೊಸ ಹೂವು ಮೂಡುತ್ತದೆ.

"ಗುರುದೇವಾ, ಜೀವಿಗಳು ಶಾಶ್ವತವಾಗಿದ್ದರೆ ಅಥವಾ ಬದಲಾವಣೆಯಾಗದೇ ಒಂದೇ ಸ್ಥಿತಿಯಲ್ಲಿ ನಿರಂತರವಾಗಿ ಮುಂದುವರಿದಿದ್ದರೆ ಏನಾಗುತ್ತಿತ್ತು?"

"ಎಲೈ ಗೆಳೆಯಾ, ಪ್ರಕೃತಿ ಮತ್ತು ಮಾನವ ಜನಾಂಗದ ಪ್ರಗತಿಯೇ ಮೃತ ಸ್ಥಿತಿಗೆ ತಲುಪುತ್ತಿತ್ತು! ಆದ್ದರಿಂದ ನಾನು ಬೋಧಿಸುವ ಶೂನ್ಯವನ್ನು "ತೆರವಿಕೆ" ಅಂದರೆ "ತಾತ್ಕಾಲಿಕ ಪ್ರಕ್ರಿಯೆ" ಎಂದು ಅರ್ಥ ಮಾಡಿ ಕೊಂಡಾಗ "ಅಗಲ" ಮತ್ತು "ಉದ್ದ" ಇಲ್ಲದ ಬಿಂದುವಿ ನಂತೆ ಸತ್ವಯುತವಾಗುತ್ತದೆ. ಇಲ್ಲವೆಂದರೆ ವೈದಿಕರ ಶೂನ್ಯ ವಾದವಾಗಿ ಅಗಾಧ ಕ್ಲಿಷ್ಟತೆ ಮತ್ತು ಅರ್ಥಹೀನತೆಗೆ ಗುರಿ ಯಾಗುತ್ತದೆ".

"ಗುರುದೇವಾ, ಇದು ಏನನ್ನು ದೃಡಿಕರಿಸುತ್ತದೆ ಮತ್ತು ಪುನರುಚ್ಚರಿಸುತ್ತದೆ?"

"ಎಲೈ ಗೆಳೆಯಾ, ಇಲ್ಲಿ ನಂಬುವುದಕ್ಕೆ, ಬೀಗುವು ದಕ್ಕೆ, ಆಡಂಬರ ಪಡುವುದಕ್ಕೆ ಅಥವಾ ಮತ್ತೊಂದರ ಮೇಲೆ ಆರೋಪ ಮಾಡಲಿಕ್ಕೆ ಎಡೆ ಇಲ್ಲ. ಅಸ್ಪದವಿಲ್ಲ. ಎಲ್ಲಿ ಯಾವುದೇ ಮಾಯಾ, ಮಂತ್ರ, ಅತೀಂದ್ರಿಯ ಶಕ್ತಿ, ಪವಾಡ ಅಥವಾ ದೇವರೆಂಬ ಮಧ್ಯವರ್ತಿ ಅಥವಾ ಪ್ರಥಮ ವ್ಯಕ್ತಿ ಇರಲು ಸಾಧ್ಯವಿಲ್ಲ. "ಎಲ್ಲವೂ ತನಗೆ ತಾನೇ" ಎಲ್ಲವೂ ಕಾರಣತಾವಾದಕ್ಕೆ ಒಳಗಾಗಿದೆ. ಇಲ್ಲಿ ಯಾವುದೂ ಮಹಾನ್ ಅಲ್ಲ. ಕ್ಷುಲ್ಲಕವಲ್ಲ. ಯಾವುದೂ ಶಾಶ್ವತವಲ್ಲ. ಅಶಾಶ್ವತವಲ್ಲ. ಮುಂಜಾನೆ ಮುಡಿದ ಹೂವು ಸಂಜೆಗೆ ಬಾಡುತ್ತದೆ. ನಾಳೆಗೆ ಸಾಯುತ್ತದೆ. ನಾಡಿದ್ದು ಆ ಜಾಗ ತೆರವಾಗುತ್ತದೆ. ತೆರವಾದ ಆ ಜಾಗದಲ್ಲಿ ಮತ್ತೆ ಇಂದು ಹೊಸ ಹೂವು ಮೂಡುತ್ತದೆ.

ಇದೇ ಪ್ರಕೃತಿ! ಇದೇ ಚಲನಶೀಲತೆ, ಪರಿವರ್ತನೆ. ಬದಲಾವಣೆ ಅಥವಾ ಪ್ರಗತಿ, ಇಲ್ಲವೆ ಕಾಲಚಕ್ರ! ನಾವು ಅರ್ಥ ಮಾಡಿಕೊಳ್ಳಬೇಕಾದದ್ದು ಇದನ್ನೇ ಇಷ್ಟನ್ನೆ, ಇಷ್ಟನ್ನೇ! ಆದ್ದರಿಂದ ನಾವು ಯಾವುದಕ್ಕೂ ಅಂಟಿಕೊಳ್ಳ ಬಾರದು. ನಿಲ್ಲಬಾರದು. ನೆಲೆಯಾಗಬಾರದು. ಮನೆಯ ಕಟ್ಟಿ, ಗೋಡೆ ಕಟ್ಟಿ, ಬೇಲಿ ಕಟ್ಟಿ, ಕುಬ್ಜರಾಗಬಾರದು. ಅನಿತ್ಯತೆಯ ಹಿಂದಿರುವ ಜ್ಞಾನ ವನ್ನು ಪಡೆಯಬೇಕು. ಆಗಲೇ ನಾವು ಆಸೆಯನ್ನು ನೀಗಿ ಕೊಳ್ಳುವುದು ದುಃಖ ವನ್ನು ನೀಗಿಕೊಳ್ಳುವುದು. ಸ್ವಾರ್ಥವನ್ನು ನೀಗಿಕೊಳ್ಳುವುದು, ಮೋಹವನ್ನು ನೀಗಿಕೊಳ್ಳುವುದು ನಿರ್ಮೋಹಿಯಾಗು ವುದು! ಪರಿಶುದ್ಧನು, ಪರಿಪೂರ್ಣನೂ ಆಗಿ ನಿಬ್ಬಾಣವನ್ನು ಹೊಂದುವುದು ಇದನ್ನೆ ನಾನು "ನಿಸ್ಸಂಗತ್ವ" ಎಂದದ್ದು ಎಂದ ಬುದ್ಧ. ತನ್ನ ಗುರುವಿನ ಉಪದೇಶದಿಂದ ಹೊಸ ಜಗತ್ತೊಂದು ಆ ಭಿಕ್ಷುವಿನ ಕಣ್ ಎದುರು ತೆರೆದು ಕೊಂಡಂತಾಯಿತು. ಸಂತೋಷ ಮತ್ತು ಅಪಾರ ಕೃತಜ್ಞತೆ ಯಿಂದ ಬುದ್ಧನನ್ನು ಉದ್ದೇಶಿಸಿದ ಆ ಭಿಕ್ಷುವು;

"ಹೌದು ಗುರುದೇವಾ, ನೀನು ನಿಜಕ್ಕೂ ಜ್ಞಾನ ಭಂಡಾರವೇ ಸರಿ...! ನಿನ್ನ ವ್ಯಕ್ತಿತ್ವಕ್ಕೆ ಆ ಸಮುದ್ರವೇ ಸರಿಸಾಟಿ...!! ನೀನು ಮನುಕುಲದ ನಿಷ್ಕಲ್ಮಶ ಹೃದಯ ಸಿಂಹಾಸನಗಳ ದೊರೆಯೇ ಸರಿ....!!!" ಎನ್ನುತ್ತಾ ವಂದಿಸಿದ □

ಅಪ್ರತಿಮ ಸಂಘಟಕ

(೩೩ ನೇ ಪುಟದಿಂದ)

'ವತನಿ ಭೂಮಿಯನ್ನು ವಾಪಸ್ಸು ಮಾಡುವುದಿಲ್ಲ' ಂಬ ಗೊತ್ತುವಳಿಯನ್ನು ಸಭೆ ಪಾಸು ಮಾಡಿತು. ೂತ್ತುವಳಿಯ ಪ್ರತಿ ಹಾಗೂ ಮನವಿಯನ್ನು ಆಗಿನ ಬೆಳ ವಿ ಜಿಲ್ಲೆಯ ಕಲೆಕ್ಟರ್‌ಗೆ ನೀಡಬೇಕೆಂದೂ ಸಭೆ ರ್ಧರಿಸಿತು. ಈ ಜವಾಬ್ದಾರಿಯನ್ನು ದೇವರಾಯ ಹಿಸಿಕೊಂಡು.

ಬೆಳಗಾವಿ ಕಲೆಕ್ಟರ್‌ಗೆ ದೇವರಾಯನ ಬಗ್ಗೆ ಪ್ರೀತಿ ತ್ತು. ದೇವರಾಯ ದಲಿತನಾಗಿ ಹುಟ್ಟಿದ್ದರೂ ಆತನ ಂಗ್ಲಿಷ್ ಪಾಂಡಿತ್ಯ, ಶಿಷ್ಟಾಚಾರ ಪಾಲಿಸುವ ರೀತಿ-ನೀತಿ ಳ ಬಗ್ಗೆ ಅವರಿಗೆ ಮೆಚ್ಚುಗೆ ಇತ್ತು. ದೇವರಾಯ ಕೊಟ್ಟ ನವಿಯನ್ನು ಕಲೆಕ್ಟರ್ ಕೂಡಲೇ ಗವ್ಹರ್ನರ್ ಜನರಲ್ಲರಿಗೆ ಳಿಸಿಕೊಟ್ಟರು.

೨೨-೯-೧೯೪೫ ರಲ್ಲಿ ದೇವರಾಯ ಮಹಾರ್ ತನದಾರ್ ಪರಿಷತ್ತನ್ನು ಆಯೋಜಿಸಿದ. ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು ಬ್ಯಾರಿಸ್ಟರ್ ಎಸ್.ಎನ್. ಮಾನೆ. ವತನಿ ಭೂಮಿ ಸಮಸ್ಯೆಯ ಭವಿಷ್ಯವಿನ್ನೂ ನಿರ್ಧಾರವಾಗಿರಲಿಲ್ಲ. ಸಭೆ ಮತ್ತೆ ಗೊತ್ತುವಳಿಯೊಂದನ್ನು ಪಾಸು ಮಾಡಿ ಕಲೆಕ್ಟರ್‌ರಿಗೆ ಕಳಿಸಿ ಕೊಟ್ಟಿತು.

'ದೇವರಾಯ, ನೀನೊಂದು ಕೆಲಸ ಮಾಡು. ಈ ಗೊತ್ತುವಳಿ, ಅರ್ಜಿ ಇರಲಿ; ಹೊಸದಾಗಿ 'ನಮಗೆಲ್ಲ ಸಾಗುವಳಿಗಾಗಿ ಭೂಮಿಬೇಕು' ಎಂದು ಅರ್ಜಿ ಕೊಡು. ನಿನ್ನ ಜನರೆಲ್ಲರ ಸಹಿ ಹಾಕಿಸು' ನಾನು ಸಾಧ್ಯವಾದಷ್ಟು ಸಹಾಯ ಮಾಡುವೆ' ಎಂದುರು ಕಲೆಕ್ಟರ್.

ದೇವರಾಯ ಸಹಕಾರಿ ತತ್ವದ ಸೊಸೈಟಿಯನ್ನು ಆರಂಭಿಸಿದ. ಅದರಲ್ಲಿ ದಲಿತರನ್ನೆಲ್ಲ ಸದಸ್ಯರನ್ನಾಗಿ ಮಾಡಿ ಕೊಂಡು. ಈ ಎಲ್ಲ ಜನರ ಸಹಿ ಹಾಕಿದ ಅರ್ಜಿ ಹಿಡಿದು ಕಲೆಕ್ಟರ್‌ನ ಕಡೆಗೆ ಬಂದ. ಅರ್ಜಿ ನೋಡಿ ಕಲೆಕ್ಟರ್ ಸಂತೋಷದಿಂದ ಐನಾಪೂರ ಮತ್ತು ಅಥಣಿ ಭಾಗಗಳಲ್ಲಿಯ ದಲಿತರಿಗಾಗಿ ೪೦೦ ಎಕರೆ ಸಾಗುವಳಿ ಭೂಮಿಯನ್ನು ಮಂಜೂರು ಮಾಡಿದರು. ಇದನ್ನು 'ಸರ್ಕಾರಿ ಪಡಬಿದ್ದ ಭೂಮಿಯ ಪರಭಾರೆ' ಯನ್ವಯ ರೈತರಿಗೆ ನೀಡುತ್ತಿರುವುದಾಗಿ ಕಲೆಕ್ಟರ್ ತಮ್ಮ ಆದೇಶದಲ್ಲಿ ಹೇಳಿದರು.

'ವತನಿ ಭೂಮಿ ಸ್ವಾಧೀನದ ಸರ್ಕಾರದ ಆಜ್ಞೆಗೆ ಅಭೂತಪೂರ್ವ ವಿರೋಧವಾಗಿದ್ದರಿಂದ ಸರ್ಕಾರ ಆಜ್ಞೆಯನ್ನು ವಾಪಸ್ಸು ಪಡೆಯಿತು. ದಲಿತರ ಭೂಮಿ ದಲಿತರಿಗೆ ಉಳಿದವು.

'ನಾವೆಲ್ಲ ಒಕ್ಕಟ್ಟಾಗಿ ಹೋರಡಿದ್ದರಿಂದಲೇ ಈ ಭೂಮಿಗಳು ನಮಗೇ ಉಳಿದವು; ಇಲ್ಲದಿದ್ದರೆ ಇವುಗಳೆಲ್ಲ ಸವರ್ಣಿಯರಿಗೆ ಹೋಗಿ ಬಿಡುತ್ತಿದ್ದವು' ಎಂದ ದೇವರಾಯ.

'ಅಲ್ಲ ನಮ್ಮನ್ನು ಮುಟ್ಟಿಸಿಕೊಳ್ಳದಿರುವ ಈ ಜನ, ಇಲ್ಲಯವರೆಗೆ ನಾವು ಮೆಟ್ಟಿದ್ದ ಭೂಮಿಯನ್ನು ಹೇಗೆ ಮುಟ್ಟುತ್ತಿದ್ದರು?' ಎಂದು ಸಂಶಯ ವ್ಯಕ್ತಪಡಿಸಿದ ಧೊಂಡ್ಯಾ. ಆತನಿಗೆ ೭೦ ವರ್ಷ ವಯಸ್ಸು.

'ಅದೇನು ಕಷ್ಟವಲ್ಲ ಕಾಕಾ, ಒಂದಿಷ್ಟು ಗೋಮೂತ್ರ ಸಿಂಪಡಿಸುತ್ತಿದ್ದರು 'ಶುದ್ಧ ಆತು' ಅಂತ್ಹೇಳುತ್ತಿದ್ದರು.' ಎಂದ ದೇವರಾಯ. □

'SAMVADA' Kannada Monthly, FEBRUARY 2006 RNI-KAR KAN/2002/9246 CPMG/KA/BGW-706/2006-0
Office of Posting: RAJAJINAGAR HO, Date of Posting: 27-28 of Every Month

ರಾಷ್ಟ್ರಪಿತನ ಸ್ಮರಣೆಯೇ....
..ನಮ್ಮ ಧನ್ಯತೆಗೆ ಪ್ರೇರಣೆ.

ನಮ್ಮ
ತ್ಯಾಗ,
ಪರಿಶ್ರಮ,
ಪ್ರಾಮಾಣಿಕತೆ
ಸತ್ಯ,
ಸಹಿಷ್ಣುತೆಗಳೊಂದಿಗೆ
ವಿಶ್ವಮಾನವ ಗಾಂಧೀಜಿಗೆ
ನಾವು ನಮಿಸೋಣ.

ಮೇಲಿನ ಅಮೂಲ್ಯ ಕೊಡುಗೆಗಳೇ ವಿಶ್ವಭ್ರಾತೃತ್ವಕ್ಕೆ ನಾಂದಿಯಾಗಲಿ

ಕರ್ನಾಟಕ ವಾರ್ತೆ
Karnataka Information